ಮಂಗಳೂರು
ಶುಕ್ರವಾರ, 27 ಫೆಬ್ರವರಿ 2026
ಸಂಪುಟ 47, ಸಂಚಿಕೆ 330 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!
• ಪುಟ 9

ಮಂಗಳೂರು
ಶುಕ್ರವಾರ, 27 ಫೆಬ್ರವರಿ 2026
ಸಂಪುಟ 47, ಸಂಚಿಕೆ 330 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital




# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ




ಇಂದು ಭಾರತದ ವಾಯು ಶಕ್ತಿ ದರ್ಶನ | ೦೭
ಕಂಟೆಂಟ್ ಕ್ರಿಯೇಟರ್‌ಗಳಿಗೆ ಹಣ ಸಿಗಲಿ | ೦೭
ಭಾರತದ ಸೆಮಿಫೈನಲ್ ಹಾದಿ ಸುಗಮ | ೧೧


## ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆರ್ದ್ರ

## ದಿನದ ಮಾತು

ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆನುಡಿ ಎರಡನು ಪರಿಪೂರ್ಣ ತುಂಬಿ.
▲ ಷಣ್ಮುಖ ಸ್ವಾಮಿ

### ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

ಲೇಖನ
• ರಾಜೇಶ್ ಪದ್ಮಾರ್

• ಪುಟ ೬

## ಕಿರುಸುದ್ದಿ

### ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

**• ಕಾಬೂಲ್/ಇಸ್ಲಾಮಾಬಾದ್:** ಇತ್ತೀಚೆಗಷ್ಟೇ ಪಾಕಿಸ್ತಾನ ನಡೆಸಿದ ವಾಯುದಾಳಿಗಳಿಗೆ ಪ್ರತಿಯಾಗಿ ಆಫ್ಘಾನ್ ತಾಲಿಬಾನ್ ಪಡೆಗಳು ಗಡಿಭಾಗದಲ್ಲಿ ತೀವ್ರ ಪ್ರತಿದಾಳಿ ಆರಂಭಿಸಿರುವುದರಿಂದ ಖೈಬರ್ ಪಖ್ತೂಂಖ್ವಾದಲ್ಲಿನ ಡ್ಯುರಂಡ್ ಗಡಿ ಪ್ರದೇಶ ಮತ್ತೊಮ್ಮೆ ಉದ್ವಿಗ್ನಗೊಂಡಿದೆ. ವಿವಾದಿತ ಡ್ಯುರಂಡ್ ರೇಖೆಯುದ್ದಕ್ಕೂ ಎರಡೂ ಪಾಳಯಗಳ ನಡುವೆ ಭಾರೀ ಗುಂಡಿನ ಚಕಮಕಿ ನಡೆಯುತ್ತಿದೆ.ಆಫ್ಘಾನ್ ತಾಲಿಬಾನ್ ವಕ್ತಾರ ಜಬೀಉಲ್ಲಾ ಮುಜಾಹಿದ್ ಈ ಬಗ್ಗೆ ಮಾಹಿತಿ ನೀಡಿದ್ದು, ಪಾಕಿಸ್ತಾನ ಸೇನೆಯ ದಾಳಿಗಳಿಗೆ ಪ್ರತಿಯಾಗಿ ಸೇನಾ ನೆಲೆಗಳು ಹಾಗೂ ತಪಾಸಣಾ ಚೌಕಿಗಳ ವಿರುದ್ಧ ವ್ಯಾಪಕ ದಾಳಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ. ಜಖಾ ಖೇಲ್ ಮಾರುಕಟ್ಟೆ ಸಮೀಪದ ಮಾರುಸರ ಹಾಗೂ ಶಾಹ್‌ಕೋಟ್ ಸರ ಪ್ರದೇಶಗಳಲ್ಲಿ ಆಫ್ಘಾನ್ ತಾಲಿಬಾನ್ ಪಡೆಗಳು ವಾಯುಸೇನೆ ಮತ್ತು ಸೇನಾಪಡೆಗಳ ಸಹಾಯದಿಂದ ಸಮನ್ವಿತ ದಾಳಿ ನಡೆಸಿವೆ. ಈ ದಾಳಿಯಲ್ಲಿ ಪಾಕಿಸ್ತಾನಕ್ಕೆ ಭಾರೀ ಹಾನಿಯಾಗಿದ್ದು, ಕನಿಷ್ಠ ಒಂಬತ್ತು ಪಾಕಿಸ್ತಾನಿ ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ➡ಪುಟ ೪

### ಶಾಲೆಗೂ ಬಂತು ಬಾಂಬ್ ಬೆದರಿಕೆ

**• ಮಂಗಳೂರು:** ನ್ಯಾಯಾಲಯ, ವಿಮಾನ ನಿಲ್ದಾಣ ಬಳಿಕ ಇದೀಗ ಮಂಗಳೂರಿನಲ್ಲಿ ಶಾಲೆಗೆ ಬಾಂಬ್ ಬೆದರಿಕೆ ಬಂದಿದೆ. ನಗರದ ಬಿಜೈ ಬಳಿಯ ಲೂರ್ಡ್ಸ್ ಸ್ಕೂಲ್‌ಗೆ ಬುಧವಾರ ರಾತ್ರಿ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ. ರಾತ್ರಿ 9.30ರ ಸುಮಾರಿಗೆ ಆರ್ನ ಅಶ್ವಿನ್ ಶೇಖರ್ ಎಂಬ ಹೆಸರಿನ ಇ-ಮೇಲ್‌ನಿಂದ ಬಾಂಬ್ ಬೆದರಿಕೆ ಕರೆ ಬಂದಿದ್ದು 9.30 ಗಂಟೆಗೆ ಸ್ಫೋಟಿಸುವುದಾಗಿ ಸಂದೇಶ ರವಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸರು ತೀವ್ರ ಶೋಧ ಕಾರ್ಯ ನಡೆಸಿದ್ದರು.

ತಮಿಳುನಾಡು ಮೂಲದ ಹೆಸರಿನಿಂದ ಈ ಇ-ಮೇಲ್‌ಗಳು ಬಂದಿದ್ದು, ಕದ್ರಿ ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ರಾಜ್ಯದಲ್ಲಿ ಕಳೆದ ವಾರ ಧಾರವಾಡ ಹಾಗೂ ಮಂಗಳೂರು ನ್ಯಾಯಾಲಯ ಸೇರಿದಂತೆ ಹಲವು ಕಡೆ ಇಂತಹ ಇಮೇಲ್ ಮೂಲಕ ಬೆದರಿಕೆ ಕರೆಗಳು ಬಂದಿತ್ತು. ಈ ಹಿಂದೆ ಮಂಗಳೂರು ವಿಮಾನ ನಿಲ್ದಾಣಕ್ಕೂ ಇದೇ ರೀತಿ ಇ ಮೇಲ್ ಮೂಲಕ ಬೆದರಿಕೆ ಹಾಕಲಾಗಿತ್ತು. ಲೂರ್ಡ್ಸ್ ಸ್ಕೂಲ್‌ಗೆ ಶ್ವಾನದಳ ಆಗಮಿಸಿ ಪರಿಶೀಲನೆ ನಡೆಸಲಾಗಿದೆ. ಆದರೆ ಯಾವುದೇ ಸಂಶಯಾಸ್ಪದ ವಸ್ತುಗಳು ಕಂಡು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದೆ.

### ವಿಮಾನ ಟಿಕೆಟ್ ಮರು ಪಾವತಿ ನಿಯಮ ಪರಿಷ್ಕರಣೆ

• ಪುಟ ೭

# ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!



- ಕೇರಳ ಸ್ಟೋರಿ 2 ಸಂದರ್ಭದಲ್ಲೇ ಹೊಸ ಚರ್ಚೆ ಆರಂಭ
- ಕ್ರೈಸ್ತ, ಮುಸ್ಲಿಂಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮತಾಂತರ
- ಕೇರಳ ಗೆಜೆಟ್ ದಾಖಲೆ ಮುಂದಿಟ್ಟು ಹೊಸ ವಾದ ಮಂಡನೆ
- ದಲಿತ ಕ್ರೈಸ್ತ, ದಲಿತ ಮುಸ್ಲಿಂರಿಂದ ಹಿಂದು ಧರ್ಮಕ್ಕೆ ಮತಾಂತರ ವಾದ
- ಇದು ಮತಾಂತರಕ್ಕಿಂತ ವಿಭಿನ್ನ, ಸ್ವಧರ್ಮಕ್ಕೆ ವಾಪಸ್

**• ತಿರುವನಂತಪುರ:** ಕೇರಳದಲ್ಲಿನ ಲವ್ ಜಿಹಾದ್ ಆರೋಪಗಳು ಮತ್ತು ದಿ ಕೇರಳ ಸ್ಟೋರಿ 2 ಚಿತ್ರ ಬಿಡುಗಡೆಯಾಗುವ ಹೊತ್ತಲ್ಲೇ, ಮತಾಂತರ ಕುರಿತಂತೆ ಹೊಸ ವಾದಗಳು ಸೃಷ್ಟಿಯಾಗಿದ್ದು, ಲವ್ ಜಿಹಾದ್ ಕುರಿತ ಆರೋಪಗಳೇ ತಪ್ಪು, ಹಿಂದುಗಳಾಗಿ ಮತಾಂತರವಾದವರೆ ಹೆಚ್ಚು ಎಂಬ ನರೇಟಿವ್ ಸೃಷ್ಟಿಸುವ ಪ್ರಯತ್ನ ಆರಂಭವಾಗಿದೆ.

ಕೇರಳ ಮೂಲದ ಆಂಗ್ಲ ವೆಬ್‌ಸೈಟ್‌ವೊಂದು, ಕೇರಳ ಗೆಜೆಟ್ ದಾಖಲೆಗಳನ್ನು ಮುಂದಿಟ್ಟುಕೊಂಡು, ಮತಾಂತರದ ಹೊಸ ವಾದ ಶುರು ಮಾಡಿದೆ. 10 ಸಾವಿರ ಪುಟಕ್ಕೂ ಹೆಚ್ಚು ಅಂಶಗಳಿರುವ ಗೆಜೆಟ್ ದಾಖಲೆ ಪರಿಶೀಲಿಸಿದರೆ, ಕ್ರೈಸ್ತ ಮತ್ತು ಮುಸ್ಲಿಮ್‌ಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮಂದಿ ಮತಾಂತರಗೊಂಡಿದ್ದಾರೆ ಎಂದು ಇದು ವಾದ ಇರಿಸಿದೆ. ಅಂದರೆ, ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರು, ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಯೋಜನ ಪಡೆಯುವ ಸಲುವಾಗಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂಬುದು ಈ ವೆಬ್‌ಸೈಟ್‌ನವರ ವಾದ.

ಆದರೆ, ಇದು ಮತಾಂತರವೋ ಅಥವಾ ಘರ್‌ವಾಪ್ಸಿಯೋ ಎಂಬುದನ್ನು ಸಾಬೀತು ಮಾಡುವಲ್ಲಿ ಈ ವೆಬ್‌ಸೈಟ್ ವಿಫಲವಾಗಿದೆ. ಇದರ ಮೂಲಗಳನ್ನು ಕೆದಕಿದರೆ, ಇವರೆಲ್ಲರೂ ಈ ಹಿಂದೆ ಹಿಂದು ಧರ್ಮದಲ್ಲೇ ಇದ್ದು, ಉತ್ತಮ ಮತ್ತು ಜಾತಿರಹಿತ ಜೀವನಕ್ಕಾಗಿ ಕ್ರೈಸ್ತ ಮತ್ತು ಮುಸ್ಲಿಂ ಮತಕ್ಕೆ ಮತಾಂತರಗೊಂಡಿದ್ದವರು. ಆದರೆ, ಇಂದಿಗೂ ಅಂಥ ಯಾವುದೇ ಜಾತಿರಹಿತ ಸಮಾಜ ನಿರ್ಮಾಣವಾಗುವಲ್ಲಿ ವಿಫಲ ಮತ್ತು ಎಸ್‌ಸಿ ಮೀಸಲಾತಿಯನ್ನು ಪಡೆಯುವ ಉದ್ದೇಶದಿಂದ ಹಿಂದು ಧರ್ಮಕ್ಕೆ ಮರಳಿದ್ದಾರೆ. ➡ಪುಟ ೪

## ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

**• ತಿರುವನಂತಪುರಂ:** ದಿ ಕೇರಳ ಸ್ಟೋರಿ 2: ಗೋಸ್ ಬಿಯಾಂಡ್ ಚಿತ್ರದ ಬಿಡುಗಡೆಗೆ




ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ. ಶನಿವಾರ ಈ ಸಿನಿಮಾ ಬಿಡುಗಡೆಯಾಗಬೇಕಿತ್ತು. ಚಲನಚಿತ್ರಕ್ಕೆ ಪ್ರಮಾಣೀಕರಣವನ್ನು ನೀಡುವಾಗ ಸೆನ್ಸಾರ್ ಮಂಡಳಿಯು ಸರಿಯಾಗಿ ಯೋಚಿಸಿಲ್ಲ ಎಂದು ಮೇಲ್ನೋಟಕ್ಕೆ ತೋರುತ್ತದೆ ಎಂದು ನ್ಯಾಯಾಲಯವು ಗಮನಿಸಿದೆ. ➡ಪುಟ ೪

## ಖಾಲಿ ಇರುವ ನೇರ ನೇಮಕ ಹುದ್ದೆಗಳ ಭರ್ತಿಗೆ ತಿಂಗಳಲ್ಲಿ ಪ್ರಕ್ರಿಯೆ

# ನಿರುದ್ಯೋಗಿಗಳಿಗೆ ಸಿಹಿ



- ನೇಮಕಾತಿ ನಡೆಯುವ ಹುದ್ದೆಗಳು 56,432
- ಆರ್ಥಿಕ ಇಲಾಖೆ ಅನುಮತಿಸಬೇಕಾದ ಹುದ್ದೆಗಳು 24,300
- 371 (ಜೆ) ವಿಧಿಯ ಪ್ರಕಾರ ಅನುಮತಿಸಬೇಕಾದ ಹುದ್ದೆಗಳು 32,132

**• ಬೆಂಗಳೂರು:** ರಾಜ್ಯದಲ್ಲಿ ಒಟ್ಟು ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳಲ್ಲಿ 56,432 ಹುದ್ದೆಗಳನ್ನು ಶೇ.50 ಮೀಸಲಾತಿ ಆಧಾರದಲ್ಲಿ ಮುಂದಿನ 30 ದಿನಗಳಲ್ಲಿ ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭಿಸಲು ಸಚಿವ ಸಂಪುಟ ಮಹತ್ವದ ನಿರ್ಣಯ ಕೈಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ ಪಂಗಡದ ಮೀಸಲು ಪ್ರಮಾಣವನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಿರುವುದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರ ಹಿನ್ನೆಲೆಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ಮಾಡಲಾಯಿತು. ಹಲವು ಪ್ರಕರಣಗಳಲ್ಲಿ ಮೀಸಲು ಪ್ರಮಾಣ ಹೆಚ್ಚಿಸಿರುವುದಕ್ಕೆ ಕಳೆದ ನವೆಂಬರ್ 19ರಂದು ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ನ್ಯಾಯಾಲಯವು 2022ರ ಕಾಯ್ದೆಗೆ ತಡೆ ನೀಡಿದ್ದರಿಂದ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮಗಳಿಗೆ ವಿವರಿಸಿದರು.

**ಎಸ್ಸಿ-ಎಸ್ಟಿಗೆ ಶೇ.6 ಕಾಯ್ದಿರಿಸಲು ನಿರ್ಧಾರ:** ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರಿಸಬೇಕಾಗಿರುವುದರಿಂದ 2022ರ ಡಿಸೆಂಬರ್ 28ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ ಹೊಸ ನೇಮಕ ಅಧಿಸೂಚನೆ ಹೊರಡಿಸಲಾಗುತ್ತದೆ. ➡ಪುಟ ೪

### ಒಳಮೀಸಲಾತಿ ಜಾರಿ: ರಾಜ್ಯಪಾಲರ ಅಂಕಿತ

**• ಬೆಂಗಳೂರು:** ಒಳಮೀಸಲಾತಿ (ಪರಿಶಿಷ್ಟ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025ಕ್ಕೆ ಸ್ಪಷ್ಟೀಕರಣ ಕೇಳಿ ಎರಡು ಬಾರಿ ವಾಪಸ್ ಕಳಿಸಿದ್ದ ರಾಜ್ಯಪಾಲರು ಕೊನೆಗೂ ಸಹಿ ಹಾಕಿದ್ದು, ಬಹುದಿನಗಳಿಂದ ಕಾಯ್ದಿರಿಸಿದ್ದ ವಿಧೇಯಕಕ್ಕೆ ಅಂಗೀಕಾರ ದೊರೆತಿದೆ. ಸುಪ್ರೀಂಕೋರ್ಟ್ ಆದೇಶದಂತೆ ಒಳಮೀಸಲಾತಿ ಕಲ್ಪಿಸಲು ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರವಾಗಿದ್ದ ಮಸೂದೆಯನ್ನು ರಾಜ್ಯಪಾಲರ ಸಹಿಗಾಗಿ ಕಳುಹಿಸಿತ್ತು. ಸರ್ಕಾರದ ಈ ಮಸೂದೆಗೆ ಸಹಿ ಹಾಕದೇ ತಡೆಹಿಡಿದಿದ್ದರಿಂದ ಸರ್ಕಾರ, ರಾಜ್ಯಪಾಲರ ನಡುವೆ ತಿಕ್ಕಾಟಕ್ಕೆ ಕಾರಣವಾಗಿತ್ತು. ➡ಪುಟ ೪

> ಎಸ್‌ಸಿ ಮೀಸಲಾತಿಯನ್ನು ಶೇ. 15ರಿಂದ ಶೇ.17ಕ್ಕೆ ಮತ್ತು ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಜಾಸ್ತಿ ಮಾಡುವುದನ್ನು ಗಮನದಲ್ಲಿಟ್ಟುಕೊಂಡು, ಹೊಸ ನೇಮಕಾತಿ ಮಾಡಲಾಗುತ್ತದೆ. ಒಳಮೀಸಲಾತಿಯನ್ನು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗುತ್ತದೆ.
> ■ ಎಚ್.ಕೆ. ಪಾಟೀಲ್, ಕಾನೂನು ಸಚಿವ

## ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸ ಫಲಪ್ರದ

# ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

**ಕ್ಷಿಪಣಿ, ಡ್ರೋನ್, ಅತ್ಯಾಧುನಿಕ ರಕ್ಷಣಾ ಉತ್ಪಾದನೆಗೆ ಬೆಂಬಲ**

**• ಜೆರುಸಲೆಮ್:** ಪ್ರಧಾನಿ ನರೇಂದ್ರ ಮೋದಿ ಮತ್ತು ಇಸ್ರೇಲ್ ನಾಯಕರು ಗುರುವಾರ ರಕ್ಷಣಾ ಸಹಯೋಗ ಸೇರಿದಂತೆ 17 ಒಪ್ಪಂದ ಮತ್ತು ಒಡಂಬಡಿಕೆ ಪತ್ರಗಳಿಗೆ(ಎಂಒಯು) ಸಹಿ ಹಾಕಿದರು. ಪ್ರಧಾನಿ ಮೋದಿಯವರ ಎರಡು ದಿನಗಳ ಇಸ್ರೇಲ್ ಪ್ರವಾಸ ಐತಿಹಾಸಿಕ ಕ್ಷಣಗಳಿಂದ ಕೂಡಿದ್ದು, ಹಲವು ಒಪ್ಪಂದಗಳಿಗೆ ಸಹಿ ಮಾಡುವ ಮೂಲಕ ಫಲಪ್ರದವಾಗಿದೆ.

ಪ್ರಧಾನಿ ಮೋದಿ ಮತ್ತು ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಉಪಸ್ಥಿತಿಯಲ್ಲಿ ರಕ್ಷಣಾ ಸಹಯೋಗ, ಕೃತಕ ಬುದ್ಧಿಮತ್ತೆ(ಎಐ), ಕೃಷಿ, ಸೈಬರ್ ಸುರಕ್ಷತೆ, ಫೈನ್‌ಟೆಕ್, ಕಾರ್ಮಿಕ, ಶಿಕ್ಷಣ, ಮೀನುಗಾರಿಕೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಸ್ಪರ ವಿವಿಧ ಲಾಭದಾಯಕ ಒಪ್ಪಂದಗಳಿಗೆ ಉಭಯ ದೇಶಗಳೂ ಸಹಿ ಹಾಕಿದವು. ಯುಪಿಐ, ಕೃಷಿ ಸಂಶೋಧನೆ, ಇಸ್ರೇಲ್ ವಾಣಿಜ್ಯ, ಸೇವಾ, ಉತ್ಪಾದನಾ , ಹೋಟೆಲ್ ಉದ್ಯಮ ವಲಯದಲ್ಲಿ ಭಾರತೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಹಲವು ಒಪ್ಪಂದಗಳು ಉಭಯ ರಾಷ್ಟ್ರಗಳು ಸಹಿ ಹಾಕಿವೆ. ➡ಪುಟ ೪



### ಭಯೋತ್ಪಾದನೆಗೆ ಜಗತ್ತಲ್ಲಿಲ್ಲ ಜಾಗ

ಭಯೋತ್ಪಾದನೆಗೆ ಜಗತ್ತಲ್ಲಿ ಜಾಗ ಇಲ್ಲ ಎಂಬುದು ಭಾರತ-ಇಸ್ರೇಲ್‌ಗಳ ಸಮಾನ ನಿಲುವು. ಭಯೋತ್ಪಾದನೆ ಮತ್ತು ಇದರ ಬೆಂಬಲಿಗರನ್ನು ಮಟ್ಟ ಹಾಕುವಲ್ಲಿ ಉಭಯ ರಾಷ್ಟ್ರಗಳು ಹೆಗಲಿಗೆ ಹೆಗಲು ನೀಡಿ ಹೋರಾಡಲಿವೆ. ಭಯೋತ್ಪಾದನೆಯನ್ನು ಯಾವುದೇ ಸ್ವರೂಪ, ಯಾವುದೇ ಅಭಿವ್ಯಕ್ತಿಯಲ್ಲೂ ಒಪ್ಪಿಕೊಳ್ಳೋ ಪ್ರಶ್ನೆಯೇ ಇಲ್ಲವೆಂದು ಪ್ರಧಾನಿ ಮೋದಿ ಸಾರಿದ್ದಾರೆ.

## ಬೆಂಗಳೂರು ವಿ.ವಿ.ಯಲ್ಲಿ ಆಡಳಿತದ ನಿರ್ಲಕ್ಷ್ಯ

# ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

▸ ಚಂದನ್ ಲಕ್ಕೂರು

**• ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2024ರಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪೂರೈಸಿ ಹೊರಬಂದ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಈಗ ಅತಂತ್ರವಾಗಿದೆ. ಕೋರ್ಸ್ ಮುಗಿದು ಒಂದೂವರೆ ವರ್ಷ ಕಳೆದರೂ ಅಸಲಿ ಅಂಕಪಟ್ಟಿ ನೀಡದ ವಿವಿ ಧೋರಣೆ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ.

ದಿಗಂತ ವಿಶೇಷ


ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಎಡವಟ್ಟುಗಳು ಈಗ ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಅಡ್ಡಗಾಲಾಗಿವೆ. ಕಳೆದ 2 ವರ್ಷಗಳಿಂದ ಸ್ನಾತಕೋತ್ತರ ಪದವಿ ಮುಗಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಇನ್ನೂ ಅಸಲಿ ಅಂಕಪಟ್ಟಿ ಕೈಸೇರಿಲ್ಲ. ಸಾವಿರಾರು ವಿದ್ಯಾರ್ಥಿಗಳು ಅಂಕಪಟ್ಟಿ ಇಲ್ಲದೆ, ಕತ್ತಲಲ್ಲಿ ತಡಕಾಡುತ್ತಿದ್ದಾರೆ. ಡಿಜಿಟಲ್ ಇಂಡಿಯಾ ಕಾಲದಲ್ಲೂ ಕಾಗದದ ಅಂಕಪಟ್ಟಿ ಹೊರತುಪಡಿಸಿಯೂ, ಡಿಜಿ ಲಾಕರ್‌ನಲ್ಲೂ ಅಂಕಪಟ್ಟಿ ಲಭ್ಯವಿಲ್ಲದಿರುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುಳುವಾಗಿದೆ.ಸ್ನಾತಕೋತ್ತರ ಪದವಿ ಅಂತಿಮ ವರ್ಷದಲ್ಲಿ ಪರೀಕ್ಷೆ ಹಣದ ಜತೆಗೆ ಅಂಕಪಟ್ಟಿ ನೀಡುತ್ತೇವೆಂದು ಹೆಚ್ಚಿನ ಹಣ ಕಟ್ಟಿಸಿಕೊಳ್ಳಲಾಗುತ್ತದೆ. ➡ಪುಟ ೪




- ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಅಂಕಪಟ್ಟಿ ಇಲ್ಲದೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ
- ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವಾಗ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗದೆ ಕೈತಪ್ಪುತ್ತಿದೆ ಉದ್ಯೋಗಾವಕಾಶ
- ವಿದೇಶಕ್ಕೆ ಹೋಗ ಬಯಸುವ ವಿದ್ಯಾರ್ಥಿಗಳ ಅಡ್ಮಿಷನ್ ಪ್ರಕ್ರಿಯೆ ಅರ್ಧಕ್ಕೆ ನಿಲ್ಲುತ್ತಿದೆ

## ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಕ್ಕೆ ನಿಷೇಧ

**• ಹೊಸದಿಲ್ಲಿ:** ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ(ಎನ್‌ಸಿಇಆರ್‌ಟಿ) 8ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ




ನ್ಯಾಯಾಂಗದ ಭ್ರಷ್ಟಾಚಾರದ ಕುರಿತು ಅವಮಾನಕಾರಿ ವಿಷಯವಿದೆ ಎಂದು ಹೇಳಿ, ಅದರ ಮುಂದಿನ ಮುದ್ರಣ, ಮರುಮುದ್ರಣ ಹಾಗೂ ಡಿಜಿಟಲ್ ಪ್ರಸಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಸಂಪೂರ್ಣ ನಿಷೇಧ ಹೇರಿದೆ. ಗುಂಡು ಹಾರಿಸಲಾಗಿದೆ, ನ್ಯಾಯಾಂಗ ಸಂಸ್ಥೆ ರಕ್ತಸ್ರಾವಗೊಳ್ಳುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ಕಟುವಾಗಿ ಹೇಳಿದೆ. ➡ಪುಟ ೪

**ಕ್ರಮ ಕೈಗೊಳ್ಳಲು ಮೋದಿ ನಿರ್ದೇಶನ** • ಪುಟ ೪

## ನುಸುಳುಕೋರರನ್ನು ಓಡಿಸುವುದು ಖಚಿತ

**• ಅರಾರಿಯಾ:** ಮುಂಬರುವ ಪಶ್ಚಿಮಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸುವ ವಿಶ್ವಾಸ ವ್ಯಕ್ತಪಡಿಸಿರುವ ಕೇಂದ್ರ ಗೃಹ ಸಚಿವ



ಅಮಿತ್ ಶಾ, ಅಧಿಕಾರಕ್ಕೆ ಬಂದ ಕೂಡಲೇ ಪ್ರತಿ ಒಳನುಸುಳುಕೋರರನ್ನು ರಾಜ್ಯದಿಂದ ಹೊರದಬ್ಬುತ್ತೇವೆ ಎಂದಿದ್ದಾರೆ.


ಬಿಹಾರದ ಅರಾರಿಯಾ ಜಿಲ್ಲೆಯಲ್ಲಿ ಮಾತನಾಡಿರುವ ಶಾ, ರಾಷ್ಟ್ರೀಯ ಭದ್ರತೆಗೆ ಕೇವಲ ಬೆದರಿಕೆಯಷ್ಟೇ ಅಲ್ಲ, ಜನರ ಕಲ್ಯಾಣ ಪ್ರಯೋಜನಗಳನ್ನು ಸಹ ಪಡೆಯುವ ಪ್ರತಿಯೊಬ್ಬ ನುಸುಳುಕೋರರನ್ನು ದೇಶದಿಂದ ಹೊರಹಾಕುವುದು ಬಿಜೆಪಿ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದರು. ದೊಡ್ಡ ಪ್ರಮಾಣದಲ್ಲಿ ಒಳನುಸುಳುವಿಕೆ ಗಡಿ ಪ್ರದೇಶಗಳಲ್ಲಿ ಅತಿಕ್ರಮಣಗಳಿಗೆ ಕಾರಣವಾಗುತ್ತದೆ. ➡ಪುಟ ೪





### ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ

**• ಹೊಸದಿಲ್ಲಿ:** ರಸ್ತೆ ಸುರಕ್ಷತೆ ಸುಧಾರಿಸುವ ಮತ್ತು ಸಾವುಗಳನ್ನು ಕಡಿಮೆ ಮಾಡುವ ಗುರಿ ಹೊಂದಿರುವ ಗ್ರೇಡ್




ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆಯನ್ನು ಪರಿಚಯಿಸಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ರಾಜಧಾನಿಯಲ್ಲಿ ರಸ್ತೆ ಸುರಕ್ಷತೆ ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ರಸ್ತೆ ಅಪಘಾತಗಳಲ್ಲಿ 1.8 ಲಕ್ಷ ಮಂದಿ ಮೃತರಾಗಿದ್ದಾರೆ. ➡ಪುಟ ೪





ಬೂಕನಕೆರೆಯ ಮಡಿಲ ಮಗುವಾಗಿ
ಶಿಕಾರಿಪುರದ ಮನೆಯ ಮಗನಾಗಿ
ಬಡವರ ದನಿಯಾಗಿ, ರೈತರಿಗೆ ಹೆಗಲಾಗಿ
ಸ್ವಯಂ ಸೇವಕನಾಗಿ, ಸಂಘಟನಾ ಶಿಲ್ಪಿಯಾಗಿ

# ನೀವಿಟ್ಟ ಹೆಜ್ಜೆಗಳು ಸಾರ್ಥಕ ಜೀವನದ ಅರಳಿದ ಕಮಲಗಳು....



ನೀವೆಂದರೆ ಶಿಸ್ತು-ಸಂಯಮ,
ನೀವೆಂದರೆ ಪರಿಶ್ರಮ-ಶ್ರದ್ಧೆ
ನೀವೆಂದರೆ ಹೋರಾಟ-ಛಲ
ನೀವೆಂದರೆ ತ್ಯಾಗ-ಸಮರ್ಪಣೆ
ನೀವೆಂದರೆ ಮಾತೃ ಮಮತೆ
ನೀವೆಂದರೆ ಆದರ್ಶ ನಮಗೆ
ನಿಮ್ಮ ಜನ್ಮದಿನವೆಂದರೆ
ಜನಪರ ದಿನ, ರೈತಪರ ದಿನ
ಶುಭಾಶಯಗಳ ಸಮರ್ಪಣೆ ನಿಮಗೆ
ನಿಮ್ಮ ಪ್ರೀತಿ, ಆಶೀರ್ವಾದಗಳು "ಶ್ರೀರಕ್ಷೆ" ನಮಗೆ



ಶ್ರೀ ಬಿ.ವೈ.ರಾಘವೇಂದ್ರ
ಸಂಸದರು ಶಿವಮೊಗ್ಗ

**ಜನಪ್ರಿಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಬಿಜೆಪಿ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಸನ್ಮಾನ್ಯ**



ಶ್ರೀ ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ
ಶಿಕಾರಿಪುರ ಶಾಸಕರು

# ಶ್ರೀ ಬಿ.ಎಸ್.ಯಡಿಯೂರಪ್ಪ

ಅವರಿಗೆ

# ಜನ್ಮದಿನದ ಶುಭಾಶಯಗಳು

## ಶುಭ ಕೋರುವವರು

## ಯಡಿಯೂರಪ್ಪನವರ ಅಭಿಮಾನಿಗಳ ಬಳಗ

# ಇಸ್ರೇಲ್ ಜತೆ ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

ಪುಟ ೨➜ **ರಕ್ಷಣಾ ಸಹಯೋಗಕ್ಕಾಗಿ ಸಹಿ:** ರಕ್ಷಣಾ ಉತ್ಪಾದನೆಯಿಂದ ಆರಂಭಿಸಿ ಗುಪ್ತಚರ ಮಾಹಿತಿ ಹಂಚಿಕೆ, ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ಮತ್ತು ಆತ್ಯಾಧುನಿಕ ಮಿಲಿಟರಿ ತಂತ್ರಜ್ಞಾನಗಳಿಗಾಗಿ ಭಾರತ-ಇಸ್ರೇಲ್ ರಕ್ಷಣಾ ಒಪ್ಪಂದಗಳಿಗೆ ಸಹಿ ಹಾಕಿವೆ. ಇವುಗಳಲ್ಲಿ ದೀರ್ಘವ್ಯಾಪ್ತಿಯ ನಿಖರ ದಾಳಿ ಸಾಮರ್ಥ್ಯವುಳ್ಳ ಕ್ಷಿಪಣಿ, ಡ್ರೋನ್ ಮತ್ತು ಆತ್ಯಾಧುನಿಕ ಶಸ್ತ್ರಾಸ್ತ್ರಗಳ ಮೇಲೆ ಪ್ರಾಮುಖ್ಯತೆ ನೀಡಲಾಗಿದೆ.



**ಯುಪಿಐಗಾಗಿ ಇಸ್ರೇಲ್ ಸಹಿ:** ಭಾರತದ ಏಕೀಕೃತ ಪಾವತಿ ಇಂಟರ್‌ಫೇಸ್(ಯುಪಿಐ) ಪಾವತಿ ವ್ಯವಸ್ಥೆಯನ್ನು ಗಡಿಯಾಚೆಗೂ ಅಳವಡಿಸಲು, ಯುಪಿಐ ಮೂಲಕ ಪಾವತಿಗಳನ್ನು ಮಾಡುವ ಉದ್ದೇಶದಿಂದ ಇಸ್ರೇಲ್‌ನ ಮಸಾ ಭಾರತದ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದೊಂದಿಗೆ ಯುಪಿಐ ಸೇವೆಗಳು ಇಸ್ರೇಲ್‌ನಲ್ಲೂ ಲಭ್ಯವಾಗಲಿದೆ.

**ಕೃಷಿ ಕ್ಷೇತ್ರಕ್ಕೆ ತಾಂತ್ರಿಕ ಬಲ:** ನಿಖರವಾದ ಬೇಸಾಯ, ಉಪಗ್ರಹ ಆಧಾರಿತ ನೀರಾವರಿ ವ್ಯವಸ್ಥೆ, ಆತ್ಯಾಧುನಿಕ ಯಂತ್ರೋಪಕರಣ, ಸಮಗ್ರ ಕೀಟನಾಶ ನಿರ್ವಹಣೆ, ಬಿತ್ತನೆ ವಿನಿಮಯ, ಕೊಯ್ಲಿನ ನಂತರದ ಪರಿಹಾರಗಳು ಸೇರಿದಂತೆ ಆತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಉತ್ತೇಜನ ನೀಡಿದ್ದು, ಈ ಹಿನ್ನೆಲೆಯಿಂದ ಕೃಷಿ ಕ್ಷೇತ್ರದಲ್ಲಿನ ನಾವೀನ್ಯತೆಗಾಗಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಭಾರತ-ಇಸ್ರೇಲ್ ಕೃಷಿ ನಾವೀನ್ಯತೆ ಕೇಂದ್ರ (ಐಐಎನ್‌ಸಿಎ) ಒಪ್ಪಂದಕ್ಕೆ ಸಹಿ ಹಾಕಿವೆ.

**ಶಾಂತಿ, ಸ್ಥಿರತೆ, ರಕ್ಷಣೆ:** ಮಧ್ಯಪ್ರಾಚ್ಯದಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಪಾಡುವುದು ಭಾರತದ ಭದ್ರತಾ ಹಿತಾಸಕ್ತಿ ಹಿಂದಿನ ಆಶಯವಾಗಿದೆ. ಭಾರತವು ಗಾಜಾ ಶಾಂತಿ ಉಪಕ್ರಮಗಳಿಗೆ ತುಂಬು ಬೆಂಬಲ ನೀಡಲಿದೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭಾರತದ ನಿಲುವು ಸ್ಪಷ್ಟ. ಅದೇನೆಂದರೆ ಮಾನವ ಸಮುದಾಯ ಯಾವ ಕಾರಣಕ್ಕೂ ಸಂಘರ್ಷ, ಹಿಂಸಾಚಾರಗಳಿಗೆ ಬಲಿಯಾಗಕೂಡದು. ಗಾಜಾ ಶಾಂತಿ ಯೋಜನೆ ಮುಖೇನ ಶಾಂತಿಯ ಮಾರ್ಗವನ್ನು ಸೃಜಿಸಲಾಗಿದೆ. ಈ ಪ್ರಯತ್ನಗಳನ್ನು ಭಾರತ ಸಂಪೂರ್ಣ ಬೆಂಬಲಿಸುವುದು. ಭವಿಷ್ಯದಲ್ಲೂ ಎಲ್ಲಾ ರಾಷ್ಟ್ರಗಳ ಜತೆ ನಾವು ಮಾತುಕತೆ, ಸಹಕಾರವನ್ನು ಮುಂದುವರೆಸುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

**ಕಾಲಾತೀತ ಬಾಂಧವ್ಯ:** ನಮ್ಮ ಬಾಂಧವ್ಯವು ಗಹನ ವಿಶ್ವಾಸ, ಪರಸ್ಪರ ಹಂಚಿಕೊಂಡಿರುವ ಪ್ರಜಾತಾಂತ್ರಿಕ ಮೌಲ್ಯಗಳು ಮತ್ತು ಮಾನವ ಸಂವೇದನಾಶೀಲತೆ ಎಂಬ ಭದ್ರ ಬುನಾದಿಯನ್ನು ಆಧರಿಸಿದ್ದಾಗಿದೆ. ಪ್ರತೀ ಕಾಲ ಪರೀಕ್ಷೆಗೂ ಅತೀತವಾದ್ದು ನಮ್ಮ ಸ್ನೇಹಬಾಂಧವ್ಯ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

**ಅಧ್ಯಕ್ಷ ಇಸಾಕ್ ಜತೆ ಫಲಪ್ರದ ಮಾತುಕತೆ:** ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಸ್ರೇಲ್ ಅಧ್ಯಕ್ಷ ಇಸಾಕ್ ಹರ್ಜೋಗ್ ಗುರುವಾರ ವ್ಯಾಪಕ ಸುತ್ತಿನ ತೀರಾ ಫಲದಾಯಕ ಮಾತುಕತೆ ನಡೆಸಿದರು. ಶಿಕ್ಷಣ, ಸ್ಟಾರ್ಟ್ ಅಪ್‌ಗಳು, ಆವಿಷ್ಕಾರ, ತಂತ್ರಜ್ಞಾನ ಮತ್ತು ಸಂಪರ್ಕ ರಂಗಗಳಲ್ಲಿ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಹಲವು ಅವಕಾಶಗಳನ್ನು ಉಭಯ ನಾಯಕರು ಮಾತುಕತೆ ವೇಳೆ ಕಂಡುಕೊಂಡರು.

**ಓಕ್ ಸಸಿ ನೆಟ್ಟ ಹರ್ಜೋಗ್, ಪ್ರಧಾನಿ ಮೋದಿ:** ಮೋದಿಯವರು ಹರ್ಜೋಗ್ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿಯಾದರು. ಅಲ್ಲಿ ಉಭಯ ನಾಯಕರು ಸ್ನೇಹ, ಬೆಳವಣಿಗೆ ಮತ್ತು ಉಭಯ ರಾಷ್ಟ್ರಗಳ ನಡುವೆ ಪರಸ್ಪರ ಹಂಚಿಕೆಯ ಭವಿಷ್ಯ ನಿರ್ಮಾಣದ ದ್ಯೋತಕವಾಗಿ ಓಕ್ ಸಸಿಯೊಂದನ್ನು ಉದ್ಯಾನದಲ್ಲಿ ನೆಟ್ಟರು ಎಂದು ಅಧ್ಯಕ್ಷರ ಪತ್ರಿಕಾ ಹೇಳಿಕೆ ತಿಳಿಸಿದೆ. ನಮ್ಮೊಳಗೆ ಬಲು ವ್ಯಾಪಕ ಮತ್ತು ಉಪಯುಕ್ತ ಮಾತುಕತೆ ನಡೆಯಿತೆಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತಾನು ಇಸ್ರೇಲ್‌ಗೆ ಬಂದಿಳಿದ ಕ್ಷಣದಿಂದ ನೀಡಲಾದ ತೀರಾ ಆತ್ಮೀಯ ಮತ್ತು ವೈಭವೋಪೇತ ಆದರಕ್ಕೆ ಪ್ರಧಾನಿ ಮೋದಿ ಹರ್ಜೋಗ್ ಅವರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಭಾರತ ಮತ್ತು ಭಾರತೀಯರ ಬಗ್ಗೆ ಇಸ್ರೇಲ್ ಜನರಿಗಿರುವ ಆತ್ಮೀಯತೆ ಹಾಗೂ ಪ್ರೀತಿಯನ್ನು ಇದು ಸಾಕ್ಷೀಕರಿಸಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

# ಮುಖ್ಯಮಂತ್ರಿಗೆ ಹಣಕಾಸು ವರದಿ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚನೆಯಾಗಿ, ಐದು ಪ್ರತ್ಯೇಕ ಪಾಲಿಕೆಯಾದ ನಂತರ ತಮ್ಮ ಮೊದಲ ಬಜೆಟ್ ಮಂಡಿಸಲು ಐದು ಪಾಲಿಕೆಗಳು ಸಜ್ಜಾಗಿರುವ ಬೆನ್ನಲ್ಲೆ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗ ಐದು ಪಾಲಿಕೆಗಳಿಗೆ ಭೇಟಿ ನೀಡಿ, ಪಾಲಿಕೆಯ ಆರ್ಥಿಕ ಅಗತ್ಯತೆಗಳು, ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಸುಧಾರಣೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿತ್ತು.ಪ್ರಗತಿ ಪರಿಶೀಲನೆ ಸಭೆಯ ಸವಿವರವಾದ ವರದಿಯನ್ನು ಹೊಸದಾಗಿ ರಚನೆಯಾದ ಜಿಬಿಎಗೆ ಅನುಗುಣವಾಗಿ ಸಿದ್ಧಪಡಿಸಿ 5ನೇ ರಾಜ್ಯ ಹಣಕಾಸು ಆಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ವರದಿ ಸಲ್ಲಿಸಿದೆ.

ಐದು ಪಾಲಿಕೆಗಳಿಂದ 8,370 ಕೋಟಿ ರೂ.ಗಳ ನೆರವಿಗೆ ಆಯೋಗ ಪ್ರಸ್ತಾವನೆ ಸ್ವೀಕರಿಸಿದೆ.ಅದನ್ನು ಅಗತ್ಯ ಮಾಹಿತಿಗನುಗುಣವಾಗಿ ಸಿದ್ಧಪಡಿಸಿ,ಜಿಬಿಎ ಮತ್ತು ನಗರ ಪಾಲಿಕೆಗಳಿಗೆ ಅಗತ್ಯ ಅನುದಾನ ಹಂಚಿಕೆಯನ್ನು ಮಾಡುವಂತೆ ಆಯೋಗ ಶಿಫಾರಸು ಮಾಡಿದೆ. ಆಯೋಗದ ಶಿಫಾರಸುಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪಾಲಿಕೆಗಳಿಗೆ ಅನುದಾನ ಬಿಡುಗಡೆ ಮಾಡಲಿದೆ.

ಐದು ನಗರ ಪಾಲಿಕೆಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗಕ್ಕೆ ತಮ್ಮ ಪ್ರಸ್ತಾವನೆಯನ್ನು ಸಲ್ಲಿಸಿದ್ದವು, ಕೇಂದ್ರ ಪಾಲಿಕೆ 2,047 ಕೋಟಿ ರೂ., ಪೂರ್ವ ಪಾಲಿಕೆ 1,685 ಕೋಟಿ ರೂ., ಪಶ್ಚಿಮ ಪಾಲಿಕೆ 1,753 ಕೋಟಿ ರೂ.,ಉತ್ತರ ಪಾಲಿಕೆ 1,210 ಕೋಟಿ ರೂ., ದಕ್ಷಿಣ ಪಾಲಿಕೆ 1,675 ಕೋಟಿ ರೂ. ಒಟ್ಟು 8,370 ಕೋಟಿ ರೂ. ಅನುದಾನ ಬೇಡಿಕೆಯನ್ನು ಸಲ್ಲಿಸಿದ್ದವು ಹಣಕಾಸು ಆಯೋಗ ಲಭ್ಯವಾದ ಸಲಹೆಗಳ ಆಧಾರದಲ್ಲಿ ಶಿಫಾರಸುಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಲಿದೆ ಎಂದು ಕಾದು ನೋಡಬೇಕಿದೆ.

**ಬೆಸ್ಕಾಂಗೆ ಸೂಚನೆ:** ಬೀದಿ ದೀಪಗಳು, ಉದ್ಯಾನವನ, ಗ್ರಂಥಾಲಯಗಳು, ಸಭಾಂಗಣಗಳು, ಶಾಲೆಗಳು ಹಾಗೂ ಪಾಲಿಕೆಗೆ ಸಂಬಂಧಿಸಿದ ಇತರ ಸ್ಥಳಗಳಲ್ಲಿನ ವಿದ್ಯುತ್ ಪೂರೈಕೆಯ ಬಿಲ್‌ಗಳನ್ನು ಪಾಲಿಕೆಗೆ ತ್ರೈಮಾಸಿಕವಾಗಿ ಸಲ್ಲಿಸುತ್ತಿರುವುದರಿಂದ ಬಿಲ್‌ಗಳ ಮೇಲಿನ ಬಡ್ಡಿದರ ಪಾಲಿಕೆಗಳಿಗೆ ಹೊರೆಯಾಗುತ್ತಿದೆ. ಆದ್ದರಿಂದ ಬೆಸ್ಕಾಂ ವತಿಯಿಂದ ಪ್ರತಿ ತಿಂಗಳು ವಿದ್ಯುತ್ ಬಿಲ್‌ಗಳನ್ನು ನಗರ ಪಾಲಿಕೆಗೆ ಕಡ್ಡಾಯವಾಗಿ ನೀಡಿ, ಸಮನ್ವಯದೊಂದಿಗೆ ಬಡ್ಡಿ ದರಗಳನ್ನು ನಿಯಂತ್ರಿಸಲು ಕ್ರಮ ವಹಿಸುವಂತೆ ರಾಜ್ಯ ಹಣಕಾಸು ಆಯೋಗದ ಪ್ರಮುಖ ಶಿಫಾರಸು ನೀಡಿದೆ.

## ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

ದೇವ ಭಕ್ತಿಯೊಂದಿಗೆ ದೇಶ ಭಕ್ತಿಯೂ ಜಾಗೃತವಾಗಲಿ – ಮಾಣಿಲ ಶ್ರೀಗಳು

**– ಒಂದೆಡೆ ಭರ್ಜರಿಯಾಗಿ ದೇವರ ಪೂಜೆಯನ್ನು ಮಾಡುವುದು, ಇನ್ನೊಂದೆಡೆ ದೇಶವಿರೋಧಿ ಕೃತ್ಯದಲ್ಲಿ ತೊಡಗುವುದೆಂದರೆ ಸಂಬಳ ಕೊಡುವ ಧಣಿಗೆ ಎದುರಿನಿಂದ ನಮಸ್ಕರಿಸುತ್ತಾ ಹಿಂಬದಿಯಿಂದ ದ್ರೋಹ ಬಗೆವ ನೌಕರನಂತೆ!**

## ದಿನ ಭವಿಷ್ಯ

**ಮೇಷ** ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

**ವೃಷಭ** ಹೆಚ್ಚು ಹೊಣೆ– ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಆಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

**ಮಿಥುನ** ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

**ಕಟಕ** ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

**ಸಿಂಹ** ವೃತ್ತಿಯ ಒತ್ತಡ ಹೆಚ್ಚು, ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

**ಕನ್ಯಾ** ಬಾಕಿ ಇದ್ದ ಕೆಲಸ ಮುಗಿಸಲು ಸಫಲ. ಆಪ್ತರ ಜತೆ ಮುನಿಸು ಸಂಭವ. ಸಮಾಧಾನದಿಂದ ವ್ಯವಹರಿಸಿ. ಮುನಿಸು ತಣಿಸಿ. ಖರ್ಚು ಹೆಚ್ಚಳ.

**ತುಲಾ** ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

**ವೃಶ್ಚಿಕ** ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

**ಧನು** ಸ್ವ-ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

**ಮಕರ** ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

**ಕುಂಭ** ಕೌಟುಂಬಿಕ ಹೊಣೆ ಹೆಚ್ಚಳ. ಒಬ್ಬರ ವರ್ತನೆ ನಿಮಗೆ ಅಸಹನೀಯ ಎನ್ನಿಸೀತು. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆಯ ಒಳ್ಳೆಯದು.

**ಮೀನ** ನಿರೀಕ್ಷಿತ ಉದ್ದೇಶ ಪೂರ್ತಿಯಾಗದು. ಆರೋಗ್ಯ ಸಮಸ್ಯೆ. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಅದನ್ನು ಕಡೆಗಣಿಸದಿರಿ.

**ರಾಹುಕಾಲ: 10.30-12.00**
**ಗುಳಿಕಕಾಲ: 7.30-9.00**

ಅದೃಷ್ಟ ಸಂಖ್ಯೆ : 4,7,,1,6

## ಗ್ಯಾಸ್ ಚೇಂಬರ್ ಆಗದಂತೆ ಕ್ರಮ: ಸಚಿವ ಈಶ್ವರ ಬಿ. ಖಂಡ್ರೆ

# ಶೀಘ್ರ ಶಾಸಕರೊಂದಿಗೆ ಸಭೆ

**ಬೆಂಗಳೂರು:** ರಾಷ್ಟ್ರ ರಾಜಧಾನಿ ದಿಲ್ಲಿಯಂತೆ ಬೆಂಗಳೂರು ಸಹ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ಕ್ರಮ ವಹಿಸಲು ಶೀಘ್ರವೇ ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಕೋರಿಕೆಯ ಮೇರೆಗೆ ಅವರೊಂದಿಗೆ ಗುರುವಾರ ಉನ್ನತಾಧಿಕಾರಿಗಳ ಸಭೆ ನಡೆಸಿದ ಸಚಿವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದೆ. ಇದರ ನಿಯಂತ್ರಣಕ್ಕೆ ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳ ಸಹಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಸುರೇಶ್ ಕುಮಾರ್ ವಿಷಯ ಪ್ರಸ್ತಾಪಿಸಿ, ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ಧೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ವೈದ್ಯರು ಬೆಂಗಳೂರು ಹೊರ ವಲಯಕ್ಕೆ ಹೋಗುವಂತೆ ಸಲಹೆ ನೀಡುತ್ತಿದ್ದಾರೆ. ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

**ಸ್ಥಳೀಯ ಸಂಸ್ಥೆಗೆ ನೋಟಿಸ್ ನೀಡಲು ಸೂಚನೆ:** ಇದಕ್ಕೆ ಸ್ಪಂದಿಸಿದ ಪರಿಸರ ಸಚಿವರು, ಈಗಾಗಲೇ ಬೆಂಗಳೂರಿನ 11 ಸ್ಥಳಗಳಲ್ಲಿ ಸ್ಥಾಪಿತ ಮತ್ತು 13 ಸಂಚಾರಿ ಘಟಕಗಳ ಮೂಲಕ ವಾಯು ಗುಣಮಟ್ಟ ಸೂಚ್ಯಂಕದ ಮೌಲ್ಯಮಾಪನ ಮಾಡಲಾಗುತ್ತಿದೆ. ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100 ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯಲ್ಲಿ ನಿಯಂತ್ರಿಸಲು ಸೂಚಿಸಿ. ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ ಎಂದು ಸೂಚನೆ ನೀಡಿದರು.

**ಉಪ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ:** ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅವರ ಅಧ್ಯಕ್ಷತೆಯಲ್ಲೇ ಬೆಂಗಳೂರು ನಗರದ ಎಲ್ಲ ಜನಪ್ರತಿನಿಧಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಬೆಂಗಳೂರಿನಲ್ಲಿ ವಿಪರೀತವಾಗಿದ್ದು, ಇದರ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆಗಳು ಹಾಗೂ ಇನ್ನಿತರ ಇಲಾಖೆಗಳ ಸಹಯೋಗದಲ್ಲಿ ಜಾಗೃತ ದಳ ರಚಿಸಿ ಕ್ರಮ ವಹಿಸುವಂತೆ ಸೂಚಿಸಿದರು. ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಪಾಲ್ಗೊಂಡಿದ್ದರು.

### ತಿಂಗಳೊಳಗೆ ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಎಷ್ಟು ತ್ಯಾಜ್ಯ ಶುದ್ಧೀಕರಣ ಘಟಕಗಳಿವೆ. ಅವುಗಳ ಪೈಕಿ ಎಷ್ಟು ಕಾರ್ಯನಿರ್ವಹಿಸುತ್ತಿವೆ. ಅವುಗಳ ಸ್ಥಾಪಿತ ಸಾಮರ್ಥ್ಯ ಎಷ್ಟು ಮತ್ತು ಪ್ರಸ್ತುತ ಎಷ್ಟು ಎಂ.ಎಲ್.ಡಿ. ದ್ರವ ತ್ಯಾಜ್ಯ ಸಂಸ್ಕರಣೆ ಆಗುತ್ತಿದೆ. ಎಷ್ಟು ಎಂ.ಎಲ್.ಡಿ. ನೀರು ಸಂಸ್ಕರಣೆ ಆಗದೆ ಜಲ ಮೂಲ ಸೇರುತ್ತಿದೆ ಎಂಬ ಬಗ್ಗೆ ಪರಿಸರ ಇಲಾಖೆಯಿಂದ ಖುದ್ದು ಪರಿಶೀಲನೆ ನಡೆಸಿ 1 ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಚಿವ ಖಂಡ್ರೆ ತಿಳಿಸಿದರು.



# ದಾವಣಗೆರೆ – ಚಿತ್ರದುರ್ಗ ರೈಲು ಮಾರ್ಗ ಶೀಘ್ರ

**ಚಿತ್ರದುರ್ಗ:** ದಾವಣಗೆರೆ-ಚಿತ್ರದುರ್ಗ ನಡುವಿನ ನೇರ ರೈಲ್ವೇ ಮಾರ್ಗ ಕಾಮಗಾರಿ 2027ರ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರ ಜೊತೆಗೆ 2027ರ ಡಿಸೆಂಬರ್ ಅಂತ್ಯದ ವೇಳೆಗೆ ದಾವಣಗೆರೆ – ಚಿತ್ರದುರ್ಗ – ತುಮಕೂರು, ರಾಯದುರ್ಗ – ತುಮಕೂರು, ಗದಗ-ವಾಡಿ ಸೇರಿದಂತೆ ಹಲವು ರೈಲ್ವೆ ಮಾರ್ಗಗಳನ್ನು ಪೂರ್ಣಗೊಳಿಸಿ ಜನರ ಸೇವೆಗೆ ಅನುವು ಮಾಡಿಕೊಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.



ಚಿತ್ರದುರ್ಗ ತಾಲೂಕಿನ ಭರಮಸಾಗರ ಹೋಬಳಿಯ ಹಂಪನೂರು ಗ್ರಾಮದ ಬಳಿ ಗುರುವಾರ ನೂತನ ರೈಲ್ವೆ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿದ ಬಳಿಕ ಕೇಂದ್ರ ಸಚಿವ ವಿ. ಸೋಮಣ್ಣ ಮಾಧ್ಯಮದವರೊಂದಿಗೆ ಮಾತನಾಡಿದರು.

ಜಿಲ್ಲೆಯಲ್ಲಿ ಈ ನೂತನ ರೈಲ್ವೆ ಯೋಜನೆಯ ಭೌತಿಕ ಕಾಮಗಾರಿ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಇಲ್ಲಿಯವರೆಗೆ ಜಿಲ್ಲೆಯಲ್ಲಿ ಕೇವಲ 8-9ರಷ್ಟು ಮಾತ್ರ ಕೆಲಸವಾಗಿದೆ. 2027ರ ಜನವರಿ ವೇಳೆಗೆ ಭರಮಸಾಗರ ವರೆಗಿನ ಹಾಗೂ ಜೂನ್ ವೇಳೆಗೆ ಚಿತ್ರದುರ್ಗದವರೆಗಿನ ರೈಲ್ವೆ ಮಾರ್ಗದ ಕಾಮಗಾರಿ ಪೂರ್ಣಗೊಳಿಸಿ, ರೈಲು ಸಂಚಾರಕ್ಕೆ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ತುಮಕೂರು-ದಾವಣಗೆರೆ ನೇರ ರೈಲ್ವೆ ಮಾರ್ಗ ಯೋಜನೆ ಈ ಭಾಗದ ಜನರ ಬಹುಕಾಲದ ಕನಸು, ಈ ಮಹತ್ವಾಕಾಂಕ್ಷೆಯ ಯೋಜನೆಯಿಂದ ದಾವಣಗೆರೆ ಮತ್ತು ಬೆಂಗಳೂರು ನಡುವಿನ ಪ್ರಯಾಣದ ದೂರ ಸುಮಾರು 80 ಕಿಲೋಮೀಟರ್‌ಗಳಷ್ಟು ಕಡಿಮೆಯಾಗಲಿದೆ. ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಈ ಭಾಗದ ಜನರ ದಶಕಗಳ ಬೇಡಿಕೆಯಾಗಿದ್ದ ಈ ಯೋಜನೆಗೆ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ಹೇಳಿದರು.

# ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

ಪುಟ ೨➜ ಇದರ ಜತೆಗೆ ಕಾನ್ವೋಕೇಶನ್ ಸರ್ಟಿಫಿಕೆಟ್‌ಗೆ ಪ್ರತ್ಯೇಕ ಹಣ ಕಟ್ಟಿಸಿಕೊಂಡಿದ್ದಾರೆ. ಆದರೂ, ಅಂಕಪಟ್ಟಿಗಳನ್ನು ನೀಡದೆ ಇರುವುದು ನಮ್ಮ ನೌಕರಿಗೆ ಹಾಗೂ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ ಎಂದು ನೊಂದ ವಿದ್ಯಾರ್ಥಿಗಳು ಅಳಲುತೊಡಿಕೊಂಡಿದ್ದಾರೆ.

**ಡಿಜಿ ಲಾಕರ್‌ನಲ್ಲೂ ಪ್ರಕಟವಾಗದ ಅಂಕಪಟ್ಟಿ:** ಸರ್ಕಾರವು ಅಂಕಪಟ್ಟಿಗಳನ್ನು ಡಿಜಿಟಲ್ ರೂಪದಲ್ಲಿ ಶೇಖರಿಸಲು ಡಿಜಿ ಲಾಕರ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಆದರೆ, ವಿಶ್ವವಿದ್ಯಾಲಯಗಳು ದತ್ತಾಂಶವನ್ನು ಸರಿಯಾಗಿ ಅಪ್‌ಲೋಡ್ ಮಾಡದ ಕಾರಣ, ವಿದ್ಯಾರ್ಥಿಗಳು ಡಿಜಿ ಲಾಕರ್‌ನಲ್ಲಿ ಹುಡುಕಿದರೂ ನೋ ರೆಕಾರ್ಡ್ ಫೌಂಡ್ ಎಂಬ ಸಂದೇಶ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗಿದೆ.

### 2 ವರ್ಷ ಕಳೆದರೂ ಸಿಗದ ಅಂಕಪಟ್ಟಿ

ಅಂಕಪಟ್ಟಿ ಇಲ್ಲದಿರುವಿಕೆಯ ದೊಡ್ಡ ಹೊಡೆತ ಬಿದ್ದಿರುವುದು ಉನ್ನತ ವ್ಯಾಸಂಗ ಮಾಡುವವರಿಗೆ. ಸಾಮಾನ್ಯವಾಗಿ ಕೋರ್ಸ್ ಮುಗಿದ 3 ರಿಂದ 6 ತಿಂಗಳೊಳಗೆ ಅಂಕಪಟ್ಟಿ ವಿತರಣೆಯಾಗಬೇಕು. ಆದರೆ, ಬೆಂಗಳೂರು ವಿ.ವಿ.ಯಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಅಂಕಪಟ್ಟಿ ವಿತರಣೆಯಾಗಿಲ್ಲ. ಇದರಿಂದಾಗಿ ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವವರಿಗೆ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ವಿದೇಶಿ ವ್ಯಾಸಂಗಕ್ಕೆ ಹೋಗ ಬಯಸುವವರಿಗೆ ವೀಸಾ ಮತ್ತು ಅಡ್ಮಿಷನ್ ಪ್ರಕ್ರಿಯೆ ಸ್ಥಗಿತಗೊಳ್ಳುತ್ತಿದೆ. ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿವೆ. ಆದರೆ, ಅರ್ಜಿ ಸಲ್ಲಿಸಲು ಸ್ನಾತಕೋತ್ತರ ಪದವಿಯ ಅಂಕಪಟ್ಟಿ ಕಡ್ಡಾಯವಾಗಿದೆ.

**ಉನ್ನತ ವ್ಯಾಸಂಗಕ್ಕೆ ಅಥವಾ ತುರ್ತು ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮುದ್ರಿಸಿ ನೀಡುತ್ತಿದ್ದೇವೆ. ಡಿಜಿ ಲಾಕರ್‌ನಲ್ಲಿ ತಕ್ಷಣ ದತ್ತಾಂಶ ಅಪ್‌ಡೇಟ್ ಮಾಡಲು ಸಂಬಂಧಪಟ್ಟವರಿಗೆ ಸೂಚಿಸುತ್ತೇನೆ.**

■ ಡಾ. ಜಯಕರ ಎಸ್.ಎಂ., ಬೆಂಗಳೂರು ವಿ.ವಿ ಕುಲಪತಿ

**ನನ್ನ ಬಳಿ ತಾತ್ಕಾಲಿಕ ಅಂಕಪಟ್ಟಿ ಮಾತ್ರ ಇದೆ, ಆದರೆ ಹಲವು ಕಡೆ ಮೂಲ ಅಂಕಪಟ್ಟಿಯೇ ಬೇಕು ಎನ್ನುತ್ತಿದ್ದಾರೆ. ಕೇಳಿದರೆ ಡಿಜಿ ಲಾಕರ್ ನೋಡಿ ಎನ್ನುತ್ತಾರೆ, ಅಲ್ಲಿ ದತ್ತಾಂಶವೇ ಇಲ್ಲ. ಹಾಗಾದರೆ ನಾವು ಕಟ್ಟಿದ ಹೆಚ್ಚಿನ ಹಣ ಎಲ್ಲಿಗೆ ಹೋಯಿತು?**

■ ಹೆಸರು ಹೇಳಲು ಇಚ್ಛಿಸದ ವಿದ್ಯಾರ್ಥಿ

# ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

ಪುಟ ೨➜ **ತಪಾಸಣಾ ಚೌಕಿಗಳು ವಶ:** ಗಡಿಭಾಗದ ಮೊಹ್ಮಂದ್, ಚಿತ್ರಾಲ್ ಹಾಗೂ ಕುರ್ರಮ್ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಭಾರೀ ಗುಂಡಿನ ದಾಳಿ ಮುಂದುವರಿದಿದೆ. ನಂಗರ್‌ಹಾರ್‌ನ ಗೋಷ್ಟಾ ಪ್ರದೇಶದಲ್ಲಿನ ಮೂರು ಪಾಕಿಸ್ತಾನಿ ಚೌಕಿಗಳು ಮತ್ತು ಕುನಾರ್‌ನ ಎರಡು ಚೌಕಿಗಳು ಆಫ್ಘನ್ ಪಡೆಗಳು ವಶಕ್ಕೆ ಪಡೆದಿವೆ. ಶೋರ್ಕೋರ್ ಗಡಿಭಾಗದಲ್ಲಿಯೂ ತೀವ್ರ ಚಕಮಕಿ ನಡೆದಿದೆ. ಈ ವಾರದ ಆರಂಭದಲ್ಲಿ ಪಾಕಿಸ್ತಾನ ಭದ್ರತಾ ಪಡೆಗಳು ಡ್ಯುರಂಡ್ ರೇಖೆಯಲ್ಲಿರುವ ತಾಲಿಬಾನ್ ತಪಾಸಣಾ ಚೌಕಿಗಳ ಮೇಲೆ ಭಾರೀ ದಾಳಿ ನಡೆಸಿದ್ದವು. ಆಗ ಆಫ್ಘನ್‌ನ 28 ಯೋಧರು ಸಾವನ್ನಪ್ಪಿದ್ದರು.

# ನುಸುಳುಕೋರರನ್ನು ಓಡಿಸುವುದು ಖಚಿತ: ಕೇಂದ್ರ ಸಚಿವ ಅಮಿತ್ ಶಾ

ಪುಟ ೨➜ ಇವುಗಳನ್ನು ನಾಶಪಡಿಸಲು ನಾವು ಬದ್ಧರಾಗಿದ್ದೇವೆ. ಒಳನುಸುಳುವಿಕೆಯು ಜನಸಂಖ್ಯಾ ಬದಲಾವಣೆಯ ಬೆದರಿಕೆಯನ್ನೂ ಒಡ್ಡುತ್ತದೆ. ಇದು ಒಂದು ಪ್ರದೇಶದ ಸಂಸ್ಕೃ ತಿ ಮತ್ತು ಭೌಗೋಳಿಕತೆಯನ್ನೂ ಹಾಳುಮಾಡುತ್ತದೆ ಎಂದು ಶಾ ಹೇಳಿದರು. ಅತ್ಯಂತ ದುರ್ಬಲ ಪ್ರದೇಶಗಳನ್ನು ಗುರುತಿಸುವ ಮೂಲಕ ಜನಸಂಖ್ಯಾ ಬದಲಾವಣೆಯನ್ನು ಅಧ್ಯಯನ ಮಾಡಲು ಮತ್ತು ರದ್ದುಗೊಳಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ಕೇಂದ್ರದಲ್ಲಿನ ನರೇಂದ್ರ ಮೋದಿ ಸರ್ಕಾರವು ನಿರ್ಧರಿಸಿದೆ ಎಂದು ಹೇಳಿದರು. ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಜನಸಂಖ್ಯಾ ಬದಲಾವಣೆಯಿಂದ ಹೆಚ್ಚು ಬಾಧಿತವಾಗಿವೆ. ಪಶ್ಚಿಮ ಬಂಗಾಳದಲ್ಲಿ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತದೆ ಎಂಬ ವಿಶ್ವಾಸ ನಮಗಿದೆ ಎಂದು ಶಾ ಪ್ರತಿಪಾದಿಸಿದರು.



# ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!

ಪುಟ ೨➜ ಹೀಗಾಗಿ ಇದನ್ನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದಾರೆ ಎಂಬುದಕ್ಕಿಂತ ಘರ್‌ವಾಪ್ಸಿಯಾಗಿದ್ದಾರೆ ಎಂದು ಕರೆಯುವುದು ಸೂಕ್ತವಾಗುತ್ತದೆ.

**ಗೆಜೆಟ್ ಹೇಳುವುದೇನು?:** ಕಾನೂನಿನ ಪ್ರಕಾರ ಪ್ರತಿಯೊಂದು ಧಾರ್ಮಿಕ ಮತಾಂತರವನ್ನು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸುವುದು ಕಡ್ಡಾಯ. ಈ ಅಧಿಕೃತ ದಾಖಲೆಗಳ ಪರಿ ಶೀಲನೆಯ ಪ್ರಕಾರ, 2024ರಲ್ಲಿ ಕೇರಳದಲ್ಲಿ ಒಟ್ಟು 365 ಮಂದಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಇವರಲ್ಲಿ 262 ಮಂದಿ ದಲಿತ ಕ್ರೈಸ್ತರು ಮತ್ತು ಮುಸ್ಲಿಮರು. ಪರಿಶಿಷ್ಟ ಜಾತಿ ಹುದ್ದೆ ಸಿಗುವ ಭರವಸೆ ಹಲವರ ಮತಾಂತರ ನಿರ್ಧಾರದಲ್ಲಿ ಪ್ರಮುಖ ಕಾರಣವಾಗಿದ್ದುದಾಗಿ ವಿಶ್ಲೇಷಣೆ ಸೂಚಿಸುತ್ತದೆ. ಇದೇ ಅವಧಿಯಲ್ಲಿ ಇಸ್ಲಾಂಗೆ ಮತಾಂತರಗೊಂಡವರ ಸಂಖ್ಯೆ 343 ಆಗಿದ್ದರೆ, ಕ್ರೈಸ್ತ ಧರ್ಮಕ್ಕೆ ಸೇರಿದ್ದವರು 255 ಮಂದಿ. ಈ ವೆಬ್‌ಸೈಟ್ ಪ್ರಕಾರ, ಮತಾಂತರಗಳ ಬಗ್ಗೆ ಹರಿದಾಡುತ್ತಿರುವ ಜನಪ್ರಿಯ ಕಥನಗಳಿಗೆ ವಿರುದ್ಧವಾಗಿ, ಹಿಂದು ಧರ್ಮವೇ ಪ್ರಮುಖ ಲಾಭದಾಯಕವಾಗಿ ಹೊರಹೊಮ್ಮಿದೆಯಂತೆ.

ಲವ್ ಜಿಹಾದ್ ಆರೋಪಗಳ ಬೆಳಕಿನಲ್ಲಿ ಗಮನ ಸೆಳೆಯುವ ಅಂಕಿ-ಅಂಶವೆಂದರೆ, 2024ರಲ್ಲಿ ಕೇವಲ 67 ಮಂದಿ ಕ್ರೈಸ್ತರು ಇಸ್ಲಾಂಗೆ ಮತಾಂತರಗೊಂಡಿದ್ದಾರೆ. ಇವರಲ್ಲಿ 42 ಮಂದಿ ಮಹಿಳೆಯರು. ಅದೇ ವೇಳೆ 234 ಮಂದಿ ಹಿಂದುಗಳು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದು, ಇವರಲ್ಲಿ 130 ಮಂದಿ ಮಹಿಳೆಯರು. ಜತೆಗೆ 21 ಮಂದಿ ಕ್ರೈಸ್ತರು ಇದೇ ಮತದ ಇತರೆ ಪಂಥದತ್ತ ಹೋಗಿದ್ದಾರೆ. ಇವರಲ್ಲಿ 13 ಮಂದಿ ಮಹಿಳೆಯರಿದ್ದಾರೆ. ಆದರೆ, ಇಲ್ಲಿ ಹಲವಾರು ಗೊಂದಲ ಸೃಷ್ಟಿಸಿದ್ದಾರೆ. ಹಿಂದು ಧರ್ಮದಿಂದ ಮತ್ತೊಂದು ಮತಕ್ಕೆ ಹೋಗಿ ಮತ್ತೆ ವಾಪಸ್ ಬರುವುದಕ್ಕೆ ಮತಾಂತರ ಅನ್ನಲಾಗುವುದಿಲ್ಲ. ಇದನ್ನು ಘರ್ ವಾಪ್ಸಿ ಎನ್ನಲಾಗುತ್ತದೆ. ಇನ್ನೊಂದು ಸಂಗತಿ ಎಂದರೆ ಒಂದು ಧರ್ಮ ದಲ್ಲೇ ಇತರೆ ಪಂಥಗಳತ್ತ ವಾಲಿದರೆ ಅದನ್ನೂ ಮತಾಂತರ ಅನ್ನ ಲಾಗುವುದಿಲ್ಲ. ಈ ಎರಡೂ ಸಂಗತಿಗಳ ವಿಚಾರದಲ್ಲಿ ವೆಬ್‌ಸೈಟ್ ನರೇಟೀವ್ ಸೃಷ್ಟಿ ಮಾಡುವಲ್ಲಿ ಸೋತಿದೆ.

### ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

ಪುಟ ೨➜ ಚಿತ್ರಕ್ಕೆ ನೀಡಲಾದ ಸೆನ್ಸಾರ್ ಪ್ರಮಾಣಪತ್ರವನ್ನು ಪ್ರಶ್ನಿಸಿ ಮತ್ತು ಅದರ ಬಿಡುಗಡೆಯನ್ನು ಅಮಾನತುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ನ್ಯಾಯಾಲಯವು ಆಲಿಸಿದ ನಂತರ ಮಧ್ಯಂತರ ಆದೇಶ ಬಂದಿದೆ.

# ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ: ನಿತಿನ್ ಗಡ್ಕರಿ

ಪುಟ ೨➜ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಕೆ, ಅತಿಯಾದ ವೇಗ ಮತ್ತು ಕುಡಿದು ವಾಹನ ಚಲಾಯಿಸುವುದೇ ಅಪಘಾತಕ್ಕೆ ಮುಖ್ಯ ಕಾರಣಗಳು. ಹೀಗಾಗಿ, ಪದೇ ಪದೇ ಸಂಚಾರಿ ನಿಯಮ ಉಲ್ಲಂಘಿಸಿದರೆ ಪರವಾನಿಗೆ ರದ್ದುಗೊಳಿಸುವುದು ಸೇರಿದಂತೆ ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಪ್ರಸ್ತಾವಿತ ವ್ಯವಸ್ಥೆಯಲ್ಲಿ, ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡದ ಅಂಕಗಳನ್ನು ಕಡಿತಗೊಳಿಸಲಾಗುತ್ತದೆ. ಮಿತಿಮೀರಿದ ಉಲ್ಲಂಘನೆಗಳನ್ನು ದಾಖಲಿಸಿದರೆ ಪರವಾನಿಗೆ ಅಮಾನತು ಅಥವಾ ರದ್ದಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ದಂಡವನ್ನು ಹೆಚ್ಚಿಸಲಾಗಿದ್ದರೂ, ಜಾರಿಗೊಳಿಸುವ ಸವಾಲು ಇನ್ನೂ ಉಳಿದಿವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಸಾರ್ವಜನಿಕ ಸಹಾಯವನ್ನು ಉತ್ತೇಜಿಸಲು ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆ ನೀಡುವ ಪಿಎಂ ರಾಹತ್ ಯೋಜನೆಯನ್ನು ಗಡ್ಕರಿ ಉಲ್ಲೇಖಿಸಿದರು. ಸುಸ್ಥಿರ ಕಡಲ ಕಾರ್ಯಾಚರಣೆಗಳನ್ನು ಉತ್ತೇಜಿಸಲು ವಿಒ ಚಿದಂಬರನಾರ್ ಬಂದರಿನಲ್ಲಿ 40 ಹಸಿರು ಹೈಡ್ರೋಜನ್ ಚಾಲಿತ ಟ್ರಕ್‌ಗಳನ್ನು ನಿಯೋಜಿಸಲಿದೆ ಎಂದು ಅವರು ತಿಳಿಸಿದ್ದಾರೆ.

# ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಕ್ಕೆ ನಿಷೇಧ

ಪುಟ ೨➜ ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠ, ಪ್ರಸ್ತುತ ಪ್ರಸರಣದಲ್ಲಿರುವ ಎಲ್ಲಾ ಮುದ್ರಿತ ಹಾಗೂ ಡಿಜಿಟಲ್ ಪ್ರತಿಗಳನ್ನು ತಕ್ಷಣ ವಶಪಡಿಸಿಕೊಂಡು ಸಾರ್ವಜನಿಕ ಪ್ರವೇಶದಿಂದ ತೆಗೆದುಹಾಕುವಂತೆ ಆದೇಶಿಸಿದೆ.

Exploring Society: India and Beyond (Vol II) ಎಂಬ ಪುಸ್ತಕದಲ್ಲಿ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳಾಗಿ ಭ್ರಷ್ಟಾಚಾರ, ಪ್ರಕರಣಗಳ ಬಾಕಿ ಹಾಗೂ ನ್ಯಾಯಾಧೀಶರ ಕೊರತೆ ಉಲ್ಲೇಖಿಸಲಾಗಿದೆ. ಇದನ್ನು ಗಂಭೀರ ಷಡ್ಯಂತ್ರ ಮತ್ತು ನ್ಯಾಯಾಂಗದ ಗೌರವ ಹಾನಿಗೆ ಉದ್ದೇಶಿತ ಕ್ರಮವೆಂದು ಪೀಠ ಅಭಿಪ್ರಾಯಪಟ್ಟಿದೆ. ಎನ್‌ಸಿಇಆರ್‌ಟಿ ನಿರ್ದೇಶಕ ಮತ್ತು ಶಾಲಾ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ.

**ವಿಷಾದ ವ್ಯಕ್ತಪಡಿಸಿದ ಪ್ರಧಾನ್:** ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಈ ವಿಷಯದ ಬಗ್ಗೆ ವಿಷಾದ ವ್ಯಕ್ತಪಡಿಸಿ, ನ್ಯಾಯಾಂಗದ ಬಗ್ಗೆ ಸರ್ಕಾರಕ್ಕೆ ಪೂರ್ಣ ಗೌರವವಿದೆ ಎಂದರು. ವಿಚಾರಣೆ ನಡೆಸಿ ಹೊಣೆಗಾರಿಕೆಯನ್ನು ನಿಗದಿಪಡಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ವಿಷಯ ತಿಳಿದ ಕೂಡಲೇ ಪುಸ್ತಕ ವಿತರಣೆ ನಿಲ್ಲಿಸಲಾಗಿದೆ ಎಂದರು. ಅಪೆಕ್ಸ್ ಕೋರ್ಟ್ ಹೇಳುವಂತೆ, ನ್ಯಾಯಾಂಗವನ್ನು ಟೀಕಿಸುವ ಹಕ್ಕನ್ನು ಹತ್ತಿಕ್ಕುವುದು ಉದ್ದೇಶವಲ್ಲ; ಆದರೆ ಸಂಸ್ಥೆಯ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಹಾನಿ ಉಂಟುಮಾಡುವ ಕ್ರಮ ಕ್ರಿಮಿನಲ್ ಅವಮಾನ, 1971ರ ಕಲಂ 2(ಸಿ) ವ್ಯಾಪ್ತಿಗೆ ಬರಬಹುದು. ಕೇಂದ್ರ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕ್ಷಮೆಯಾಚಿಸಿ, ಸಂಬಂಧಿತ ಅಧ್ಯಾಯವನ್ನು ಹೊಸ ತಂಡ ಮರುಪರಿಶೀಲನೆ ಮಾಡಲಿದೆ ಎಂದು ತಿಳಿಸಿದ್ದಾರೆ. ವಿಚಾರಣೆಯನ್ನು ಮಾ.11ಕ್ಕೆ ಮುಂದೂಡಲಾಗಿದೆ.

### ಕ್ರಮ ಕೈಗೊಳ್ಳಲು ಮೋದಿ ನಿರ್ದೇಶನ

**ಹೊಸದಿಲ್ಲಿ:** ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಕುರಿತಂತೆ ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯ ಪುಸ್ತಕದಲ್ಲಿದ್ದ ಅಧ್ಯಾಯದ ಕುರಿತು ಉಂಟಾದ ವಿವಾದ ಹಿನ್ನೆಲೆ, ಸಂಬಂಧಿಸಿದವರನ್ನು ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿಯವರು ಶಿಕ್ಷಣ ಸಚಿವಾಲಯಕ್ಕೆ ನಿರ್ದೇಶನ ನೀಡಿರುವುದಾಗಿ ತಿಳಿದುಬಂದಿದೆ. ಅಲ್ಲದೇ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮೋದಿಯವರು ಅಸಮಾಧಾನ ವ್ಯಕ್ತಪಡಿಸಿದ್ದಾಗಿ ಮೂಲಗಳು ತಿಳಿಸಿವೆ. ಪ್ರಧಾನಿ ಮೋದಿಯವರು ಇಸ್ರೇಲ್‌ನ ಅಧಿಕೃತ ಪ್ರವಾಸದಲ್ಲಿರುವ ವೇಳೆ, ಈ ಘಟನೆಗೆ ಕಾರಣರಾದವರ ಕ್ರಮ ಕೈಗೊಳ್ಳಲು ಶಿಕ್ಷಣ ಸಚಿವಾಲಯಕ್ಕೆ ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ. ಇದರ ನಡುವೆ, ನ್ಯಾಯಾಂಗ ಭ್ರಷ್ಟಾಚಾರ ಕುರಿತ ಅಧ್ಯಾಯವನ್ನು ಸೇರಿಸುವ ವಿಚಾರದಲ್ಲಿ ನಡೆದ ನಿರ್ಧಾರ ದೋಷಕ್ಕೆ ಕಾರಣವಾದ ಪಠ್ಯ ಪುಸ್ತಕ ತಯಾರಿಕೆ ಪ್ರಕ್ರಿಯೆಯನ್ನು ಎನ್‌ಸಿಇಆರ್‌ಟಿ ಪರಿಶೀಲಿಸುತ್ತಿದೆ, ಇದಕ್ಕೆ ಜವಾಬ್ದಾರರಾದವರನ್ನು ಗುರುತಿಸಲಿದೆ. ಮುಂದಿನ ದಿನಗಳಲ್ಲಿ ಇಂತಹ ಅಸಮಂಜಸ ಘಟನೆಗಳು ಮರುಕಳುಹಿಸದಂತೆ ನೋಡಿಕೊಳ್ಳಲಾಗುವುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

# ನಿರುದ್ಯೋಗಿಗಳಿಗೆ ಸಿಹಿ

ಪುಟ ೨➜ ಈ ಅಧಿಸೂಚನೆಯನ್ನು ಶೇ. 50ರ ಮೀಸಲಿನಂತೆ ಮಾಡಲಾಗುತ್ತದೆ. ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಆಯಾ ಇಲಾಖೆಗಳ ಮುಂದಿನ ಅಧಿಸೂಚನೆಯಲ್ಲಿ ಶೇ.6ರಷ್ಟು (ಪ.ಜಾತಿಗೆ ಶೇ.2 ಮತ್ತು ಪ.ಪಂ.ಗೆ ಶೇ. 4) ಕಾಯ್ದಿರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಸಚಿವರು ತಿಳಿಸಿದರು.

### ಒಳಮೀಸಲಾತಿ ಜಾರಿ: ರಾಜ್ಯಪಾಲರ ಅಂಕಿತ

ಪುಟ ೨➜ ಮೀಸಲಾತಿ ವಿಚಾರದಲ್ಲಿ ಒಳ ಪಂಗಡಗಳ ನಡುವೆ ಗೊಂದಲ ಏರ್ಪಟ್ಟಿದ್ದರಿಂದ ವಿಧೇಯಕಕ್ಕೆ ಸಹಿ ಹಾಕದೆ ಕಾಯ್ದಿರಿಸಲಾಗಿತ್ತು. ಈಗ ಒಳಮೀಸಲಾತಿ ವಿಧೇಯಕಕ್ಕೆ ರಾಜ್ಯಪಾಲರು ಸಹಿ ಹಾಕಿದ್ದರಿಂದ ಖಾಲಿ ಹುದ್ದೆಗಳ ನೇಮಕಾತಿ ಭರ್ತಿಗೆ ಅನುಕೂಲವಾಗಲಿದ್ದು, ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ್ದ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿಯ ಭರವಸೆ ಸಿಕ್ಕಿದೆ. ಸಚಿವ ಸಂಪುಟ ಹಿನ್ನೆಲೆಯಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಚಿವರ ಸಭೆ ನಡೆಯಿತು. ಸಭೆಯಲ್ಲಿ ರಾಜ್ಯದಲ್ಲಿ ಬಾಕಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ಒಳಮೀಸಲಾತಿ ಜಾರಿ ಕುರಿತು ಗಂಭೀರ ಚರ್ಚೆ ನಡೆಸಲಾಯಿತು.

### ರಾಜ್ಯಪಾಲರ ಭೇಟಿ ಮಾಡಿದ ಸಚಿವರ ನಿಯೋಗ

ಒಳಮೀಸಲಾತಿ ವಿಧೇಯಕಕ್ಕೆ ಕೂಡಲೇ ಅಂಕಿತ ಹಾಕುವಂತೆ ಕೋರಲು ಸಚಿವರ ನೀಯೋಗ ರಾಜ್ಯಪಾಲರನ್ನು ಭೇಟಿ ಮಾಡಿದೆ. ಸಿಎಂ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧಾರವಾದಂತೆ ಪರಿಶಿಷ್ಟ ಜಾತಿ ಸಮಯದಾಯದ ಸಚಿವರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಖಾಲಿ ಹುದ್ದೆ ನೇಮಕಾತಿಗೆ ತೊಂದರೆಯಾಗುತ್ತಿದೆ. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಪ್ರತಿಭಟನೆ ನಡೆಸಿರುವ ಬಗ್ಗೆಯೂ ಪ್ರಸ್ತಾಪಿಸಿ ಒಳಮೀಸಲಾತಿ ವಿಧೇಯಕಕ್ಕೆ ಸಹಿ ಹಾಕುವಂತೆ ಮಾನವಿ ಮಾಡಿತ್ತು. ಇದರ ಬೆನ್ನಲ್ಲೇ ರಾಜ್ಯಪಾಲರು, ಪರಿಶಿಷ್ಟ ಜಾತಿಗಳ (ಉಪ ವರ್ಗೀಕರಣ) ವಿಧೇಯಕಕ್ಕೆ-2025 ಸಹಿ ಹಾಕಿದ್ದಾರೆ.

### ಹಳೇ ಸೂತ್ರದ ಅನ್ವಯ ನೇಮಕಾತಿ

ಹಲವು ಸವಾಲುಗಳ ನಡುವೆ ರಾಜ್ಯ ಸರ್ಕಾರ, ಮೀಸಲಾತಿ ಮಿತಿ ಶೇ.50 ಮೀರದಂತೆ ಒಳಮೀಸಲಾತಿಯೊಂದಿಗೆ ವಿವಿಧ ಇಲಾಖೆಗಳ 56,432 ಸಾವಿರ ಖಾಲಿ ಹುದ್ದೆ ನೇಮಕಕ್ಕೆ ತೀರ್ಮಾನಿಸಿದ್ದು, ನೇಮಕಾತಿಗಾಗಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲು ಮುಂದಾಗಿದೆ. 15% ಎಸ್ಸಿ ಮೀಸಲಾತಿಗೆ ಒಳಮೀಸಲು ನೀಡಿ ನೇಮಕಾತಿಗೆ ತೀರ್ಮಾನಿಸಿದೆ. ಆದರೆ, ಎಸ್ಸಿ ಒಳ ಮೀಸಲಾತಿ ಶೇ.17 ಇಟ್ಟು ತಕ್ಷಣ ನೇಮಕಾತಿ ಅಸಾಧ್ಯ. ಶೇ.17 ಎಸ್ಸಿ ಮೀಸಲಾತಿ ಜಾರಿಗೆ ಕಾನೂನು ಹೋರಾಟಕ್ಕೆ ಸರ್ಕಾರ ಮುಂದಾಗಬೇಕು. ರಾಜ್ಯಪಾಲರು ಒಳ ಮೀಸಲಾತಿ ಮಸೂದೆಗೆ ಒಪ್ಪಿಗೆ ಕೊಟ್ಟಿದ್ದರೂ ಕಾನೂನು ಸಂಘರ್ಷ ಮುಂದುವರಿಸಬೇಕಿದೆ. ಹೀಗಾಗಿ ಹಳೇ ಸೂತ್ರದ ಅನ್ವಯ ಅಂದರೆ ಶೇ.15 ಎಸ್ಸಿ, ಶೆ.3% ಎಸ್ಟಿ ಮೀಸಲಾತಿಯೋಂದಿಗೆ ನೇಮಕಾತಿಗೆ ತೀರ್ಮಾನಿಸಲಾಗಿದೆ.

### ಗೃಹ ಇಲಾಖೆ ಅಭಿಪ್ರಾಯ ಪಡೆಯಲು ಸಂಪುಟ ನಿರ್ಣಯ

ಕರ್ನಾಟಕ ಮರ್ಯಾದಾ ಹತ್ಯಾ ತಡೆಗಟ್ಟುವಿಕೆ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕ 2026 ಹಾಗೂ ಕರ್ನಾಟಕ ರೋಹಿತ್ ವೇಮುಲಾ (ಹೊರಗಿಡುವಿಕೆ ಅಥವಾ ಅನ್ಯಾಯ ತಡೆಗಟ್ಟುವಿಕೆ) ಶಿಕ್ಷಣ ಮತ್ತು ಘನತೆಯ ಹಕ್ಕು) ವಿಧೇಯಕ 2026 ಈ ಎರಡೂ ವಿಧೇಯಕಗಳಿಗೆ ಸಂಬಂಧಿಸಿ ಗೃಹ ಇಲಾಖೆಯ ಅಭಿಪ್ರಾಯ ಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಉಭಯ ವಿಧೇಯಕಗಳನ್ನು ಮುಂದಿನ ಸಚಿವ ಸಂಪುಟ ಸಭೆಗೆ ಮುಂದೂಡಲಾಗಿದೆಂದು ಎಚ್.ಕೆ. ಪಾಟೀಲ್ ತಿಳಿಸಿದರು.

# ಪಂಕಾ ಮಸೀದಿ ಶಾಶ್ವತ ಸೀಲ್‌ಡೌನ್‌ಗೆ ಒತ್ತಾಯ

**ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯ ಮೇಲೆ ಪಂಕಾ ಮಸೀದಿಯಿಂದ ತೂರಿ ಬಂದ ಕಲ್ಲು, ಚಪ್ಪಲಿ ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಸೀದಿಯ ಮುಖ್ಯಸ್ಥರು, ಘಟನೆ ನಡೆಯುವ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರನ್ನು ಬಂಧನ ಮಾಡಿ ಪ್ರಕರಣ ದಾಖಲಿಸಬೇಕು. ಪಂಕಾ ಮಸೀದಿಯನ್ನು ತಕ್ಷಣವೇ ಬಂದ್ ಮಾಡಬೇಕು. ಹದಿನೈದು ದಿನದಲ್ಲಿ ಈ ಬೇಡಿಕೆಗಳನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಈಡೇರಿಸಬೇಕು ಹಿಂದೂ ಸಂರಕ್ಷಣಾ ಸಮಿತಿ ಯಿಂದ ಗಡವು ನೀಡಿದೆ.



ಜಿಲ್ಲಾ ಆಡಳಿತ ಭವನ ಎದುರು ಬೃಹತ್ ಪ್ರತಿಭಟನೆ ನಡೆಸಿದ ಹಿಂದೂ ರಕ್ಷಣಾ ಸಮಿತಿಯವರು ಪಂಕಾ ಮಸೀದಿಯನ್ನು ಬಂದ್ ಮಾಡಬೇಕು. ಮತಾಂಧರನ್ನು ಬಂಧಿಸಿ ಪ್ರಕರಣ ದಾಖಲಿಸಬೇಕು ಎಂದು ಘೋಷಣೆಗಳನ್ನು ಕೂಗಿದರು. ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿ ಸಂಗಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂ ಸಮಾಜದ ಮುಖಂಡ ರಾಜು ನಾಯ್ಕರ ಮಾತನಾಡಿ, ಬೈಕ್‌ಗಳ ಮೇಲೆ ಹೋಗುವಾಗ ಹೆಲ್ಮೆಟ್ ಇಲ್ಲದಿದ್ದರೆ, ಸೀಟ್ ಬೆಲ್ಟ್ ಹಾಕದಿದ್ದರೆ ಕ್ಯಾಮೆರಾ ಮೂಲಕ ದಂಡ ಹಾಕುವ ಪೊಲೀಸರು ಈಗ ಕಲ್ಲು, ಚಪ್ಪಲಿಯನ್ನು ಶಿವಾಜಿ ಮೆರವಣಿಗೆ ಮೇಲೆ ಎಸೆದಿದ್ದರು ಹಾಗೂ ಎಸ್ಪಿಯವರ ತಲೆಗೆ ಕಲ್ಲು ಬಿದ್ದರೂ ಏಕೆ ಕ್ರಮ ಕೈಗೊಳ್ಳುತ್ತಿಲ್ಲ. ಹಿಂದುಗಳ ಹೋರಾಟ ಮಾಡುತ್ತಾರೆಂದರೆ ಅಲ್ಲಲ್ಲಿ ಬ್ಯಾರಿಕೇಡ್ ಹಾಕಿ ಹಿಂದೂಗಳನ್ನು ಪ್ರತಿಭಟನೆಯಲ್ಲಿ ಭಾಗ ವಹಿಸದಂತೆ ತಡೆದರೆ ಇಲ್ಲಿಗೆ ಮುಗಿಯುವುದಿಲ್ಲ ಇನ್ನೂ ಪ್ರತಿಭಟನೆಯ ಸ್ಥಳ, ದಿನಾಂಕ ಹೇಳದೇ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅರಣ್ಯ ಸಿದ್ದೇಶ್ವರ ಜಾತ್ರೆ



ಚಿಕ್ಕೋಡಿ ತಾಲೂಕಿನ ಕೇರೂರ ಗ್ರಾಮದಲ್ಲಿ ಅರಣ್ಯಸಿದ್ದೇಶ್ವರ ಹಾಗೂ ಮಲಕಾರಿಸಿದ್ದೇಶ್ವರ ಜಾತ್ರೆ ಗುರುವಾರ ಸಂಪನ್ನಗೊಂಡಿತು. 30-40 ಟನ್‌ಗೂ ಹೆಚ್ಚು ಭಂಡಾರ ತೂರಿದ್ದರಿಂದ ಕೇರೂರ ಗ್ರಾಮದಾದ್ಯಂತ ಎಲ್ಲಿ ನೋಡಿದರೂ ಹಳದಿಮಯವಾಗಿರುವುದು ಕಂಡುಬಂತು.

# ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧಿಸಲು ಚಿಂತನೆ: ಮಧು

**ಬೆಂಗಳೂರು:** ಮಕ್ಕಳ ಹಿತದೃಷ್ಟಿಯಿಂದ 16 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸುವ ಕುರಿತು ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು, ಈ ನಿಟ್ಟಿನಲ್ಲಿ ಮಕ್ಕಳು, ಪೋಷಕರು ಮತ್ತು ತಜ್ಞರ ಅಭಿಪ್ರಾಯ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿನ ವ್ಯವಸ್ಥೆಯಲ್ಲಿ ಮಗು ಅಳುತ್ತಿದೆ ಅಥವಾ ಮಗುವಿನ ಬೇಸರ ತಗ್ಗಿಸಲು ಪೋಷಕರೇ ಮೊಬೈಲ್ ಕೊಡುತ್ತಾರೆ. ಸಮಸ್ಯೆಯ ಮೂಲ ಇರುವುದೇ ಅಲ್ಲಿ. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಿಂದ ಮಕ್ಕಳು ದಾರಿ ತಪ್ಪುತ್ತಿದ್ದಾರೆ ಎಂಬುದು ಕೇವಲ ನಮ್ಮ ರಾಜ್ಯದ್ದಲ್ಲ. ಇಡೀ ದೇಶದ ಸಮಸ್ಯೆಯಾಗಿದೆ ಎಂದು ತಿಳಿಸಿದರು.

> ಸರ್ಕಾರದಿಂದ ಮೊಬೈಲ್ ಬಿಡಿ ಪುಸ್ತಕ ಹಿಡಿ ಆಂದೋಲನ

ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಆಂದೋಲನದ ಬಗ್ಗೆ ಮುಖ್ಯಮಂತ್ರಿಗಳು ಈಗಾಗಲೇ ಎರಡ್ಮೂರು ಬಾರಿ ಎಚ್ಚರಿಸಿದ್ದಾರೆ. ಇದನ್ನು ಕೇವಲ ತರಗತಿಗಳಿಗೆ ಸೀಮಿತಗೊಳಿಸದೆ, ಒಂದು ಜವಾಬ್ದಾರಿಯುತ ತೀರ್ಮಾನವಾಗಿ ಜಾರಿಗೆ ತರಬೇಕಿದೆ. ಈ ಕುರಿತು ವಿಸ್ತೃತ ಚರ್ಚೆಯ ಅಗತ್ಯವಿದೆ ಎಂದು ಹೇಳಿದರು. ಮಕ್ಕಳ ಅಭಿಪ್ರಾಯವನ್ನು ಹೇಗೆ ಪಡೆಯಲಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಯಾವುದೇ ತೀರ್ಮಾನ ತೆಗೆದುಕೊಂಡರೂ, ಅದು ಮಕ್ಕಳ ಹಿತದೃಷ್ಟಿ ಯಿಂದಲೇ ಇರುತ್ತದೆ. ಕೇವಲ ಮಕ್ಕಳಷ್ಟೇ ಅಲ್ಲ, ಶಿಕ್ಷಕರು ಮತ್ತು ಪೋಷಕರ ಜತೆಗೂ ಚರ್ಚೆ ಮಾಡಬೇಕಿದೆ. ಸದ್ಯಕ್ಕೆ ಈ ವಿಚಾರ ಚರ್ಚೆಯ ಹಂತದಲ್ಲಿದ್ದು, ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಶೀಘ್ರವೇ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

## ಕಿರುಸುದ್ದಿ

### ಅಭಿವೃದ್ಧಿ ಕೆಲಸಗಳಿಗೆ ಅವಕಾಶ ಕಲ್ಪಿಸಲಿ

**ಶಿವಮೊಗ್ಗ:** ಕಾಂಗ್ರೆಸ್ ಹೈಕಮಾಂಡ್ ಬದುಕಿದ್ದರೆ ರಾಜ್ಯದಲ್ಲಿ ಅಧಿಕಾರಕ್ಕಾಗಿ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಿ ಅಭಿವೃದ್ಧಿ ಕೆಲಸಗಳಿಗೆ ಅವಕಾಶ ಕಲ್ಪಿಸಲಿ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಧಿಕಾರಕ್ಕಾಗಿ ಕಾಂಗ್ರೆಸ್ ನಾಯಕರ ನಡುವೆ ನಡೆಯುತ್ತಿರುವ ಪೈಪೋಟಿ ನೋಡಿದರೆ ಹೈಕಮಾಂಡ್ ಜೀವಂತವಾಗಿಲ್ಲ ಎಂಬುದು ಗೊತ್ತಾಗುತ್ತದೆ. ಒಳ್ಳೆಯ ಆಡಳಿತ ನೀಡಲೆಂದು ಜನ 136 ಸ್ಥಾನಗಳನ್ನು ನೀಡಿದ್ದು, ಅದೇ ಜನ ಈಗ ಕಾಂಗ್ರೆಸ್‌ಗೆ ಯಕಾದ್ರೂ ಓಟ್ ಹಾಕಿದ್ದೇವೆಯೋ ಎಂದು ಬೈಯುತ್ತಿದ್ದಾರೆ ಎಂದರು. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ನಡೆಯುತ್ತಿದ್ದ ಕಚ್ಚಾಟ ಬೇರೆ ಸಚಿವರಲ್ಲಿಯೂ ಆಸೆ ಹುಟ್ಟಿಸಿದೆ. ಹೀಗಾಗಿ ಗೃಹಸಚಿವ ಡಾ.ಜಿ. ಪರಮೇಶ್ವರ್, ಹಾಗೂ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕೂಡ ಸಿಎಂ ಆಗುವ ಇಂಗಿತ ವ್ಯಕ್ತಪಡಿಸುತ್ತಾ ಬೆಂಬಲಿಗ ಮೂಲಕ ಹೇಳಿಕೆ ಕೊಡಿಸುತ್ತಿದ್ದಾರೆ. ಇನ್ನೊಂದು ಕಡೆ 25 ಜನ ಅಹಿಂದ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು. ಪರಿಪ್ರಸಾದ್‌ಗೆ ಗೃಹಸಚಿವ ಸ್ಥಾನ ನೀಡಬೇಕೆಂಬ ಒತ್ತಾಯ ಕೇಳಿ ಬರುತ್ತಿದೆ ಎಂದರು. ಸಿಎಂ ಆಕಾಂಕ್ಷಿಗಳು ವಿಧಾನಸೌಧದ ಮುಂದೆ ಧರಣಿ ಕುಳಿತರೆ ಆಗ ಹೈಕಮಾಂಡ್ ಎಚ್ಚರವಾಗಬಹುದು. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬಹುದು. ಒಳಜಗಳದ ವಿಚಾರದಲ್ಲಿ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೂ ಕಿಮ್ಮತ್ ಇಲ್ಲದಂತಾಗಿದೆ ಎಂದರು.

### ಬಿಜೆಪಿ ಪ್ರತಿಭಟನೆ ಯಾರ ವಿರುದ್ಧ?: ರಾಮಲಿಂಗಾರೆಡ್ಡಿ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಭರವಸೆ ನೀಡಿ, 40 ಲಕ್ಷ ಖಾಲಿ ಹುದ್ದೆಗಳ ಪೈಕಿ ಇಲ್ಲಿಯವರೆಗೆ ಕೇವಲ 7 ಲಕ್ಷ ಉದ್ಯೋಗ ನೀಡಲಾಗಿದೆ. ಹಾಗಾದರೆ ರಾಜ್ಯ ಬಿಜೆಪಿ ನಾಯಕರು ಪ್ರತಿಭಟನೆ ಮಾಡಬೇಕಾಗಿರುವುದು ಕೇಂದ್ರ ಸರ್ಕಾರದ ವಿರುದ್ಧವೇ ಅಥವಾ ರಾಜ್ಯ ಸರ್ಕಾರದ ವಿರುದ್ಧವೇ ಎನ್ನುವ ಗೊಂದಲದಲ್ಲಿ ಇದ್ದೀರಾ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ನಿಗಮ ಮಂಡಳಿಗಳಲ್ಲಿಯೇ 2 ಸಾವಿರ ನಿರ್ದೇಶಕರ ಹುದ್ದೆಗಳು ಖಾಲಿಯಿದ್ದು, ಆ ಖಾಲಿ ಹುದ್ದೆಗಳಿಗೆ ಬಿಜೆಪಿ ಕಾರ್ಯಕರ್ತರಿಗೆ ಹುದ್ದೆ ನೀಡಿಲ್ಲ, ಇನ್ನು ದೇಶದಲ್ಲಿರುವ ಇತರೆ ಬಿಜೆಪಿ ಕಾರ್ಯಕರ್ತರಿಗೆ ಇನ್ಯಾವ ನ್ಯಾಯ ಒದಗಿಸಲು ಸಾಧ್ಯ ಎಂದು ಹೇಳಿದರು. ಇನ್ನು ಆರ್ಥಿಕ ಇಲಾಖೆಯ 60 ಸಾವಿರ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಿದೆ. ಅವುಗಳು ಒಳ ಮೀಸಲಾತಿ ಸಮಸ್ಯೆಯಿಂದ ಬಾಕಿ ಆಗಿದ್ದು, ಆ ನಂತರ ನೇಮಕಾತಿ ಭರ್ತಿ ಆಗಲಿದೆ ಎಂದರು.



### ರಾಜ್ಯಮಟ್ಟದ ಯೋಜನಾ ಸಭೆ

**ಬೆಂಗಳೂರು:** ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026ರ ರಾಜ್ಯ ಮಟ್ಟದ ಯೋಜನಾ ಸಭೆ ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಗುರುವಾರ ನಡೆಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಉಪಸ್ಥಿತಿಯಲ್ಲಿ ಯೋಜನಾ ಸಭೆಯನ್ನು ಉದ್ಘಾಟಿಸಿದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್‌ದಾಸ್ ಅಗ್ರವಾಲ್, ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇದ್ದರು.

## ವಿದ್ಯಾರ್ಥಿಗಳಿಗೆ ಸಚಿವ ಮಧು ಬಂಗಾರಪ್ಪ ಕಿವಿಮಾತು

# ತಂತ್ರಜ್ಞಾನ ಅರಿವು ಅಗತ್ಯ

**ಬೆಂಗಳೂರು:** ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಇನ್ನೋವೇಟಿವ್ ಸಿಸ್ಟಮ್‌ಗಳ ಕಡೆಗೆ ಗಮನ ಹರಿಸಬೇಕು. ಜತೆಗೆ ನಿರಂತರ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಗುರುವಾರ ನಗರದ ಜವಾಹರಲಾಲ್ ನೆಹರು ತಾರಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಸರ್ ಸಿ.ವಿ. ರಾಮನ್ ಅವರ ರಾಮನ್ ಎಫೆಕ್ಟ್ ಸಂಶೋಧನೆಯ ಸ್ಮರಣಾರ್ಥ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯದ ಸರ್ಕಾರಿ ಶಾಲೆಗಳ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನದ ಅರಿವು ಮೂಡಿಸಲು ಶಾಲಾ ಶಿಕ್ಷಣ ಇಲಾಖೆಯು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯೊಂದಿಗೆ ಸದಾ ಕೈಜೋಡಿಸಲಿದೆ ಎಂದು ಭರವಸೆ ನೀಡಿದರು.

ಭಾರತದ ಸಂವಿಧಾನದ 51 (ಎಚ್) ವಿಧಿಯ ಆಶಯದಂತೆ ಪ್ರತಿಯೊಬ್ಬ ನಾಗರಿಕರಲ್ಲಿ, ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆಯನ್ನು ಬೆಳೆಸುವುದು ನಮ್ಮ ಮೂಲಭೂತ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ತಂತ್ರಜ್ಞಾನದತ್ತ ಸೆಳೆಯಲು ರಾಜ್ಯಾದ್ಯಂತ ನೆಹರು ಸ್ಟೀಮ್ ಲ್ಯಾಬ್ ಹಾಗೂ ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಸಹಯೋಗದೊಂದಿಗೆ, ಕಲ್ಯಾಣ ಕರ್ನಾಟಕ ಭಾಗದ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ನವೀನ ಮಾದರಿಯ ನೆಹರು ಸ್ಟೀಮ್ ಲ್ಯಾಬ್‌ಗಳನ್ನು ನಿರ್ಮಿಸಲಾಗುತ್ತಿದೆ ಎಂದರು. ಸಚಿವ ಪ್ರಿಯಾಂಕ್ ಖರ್ಗೆ, ಎ.ಎಸ್.ಕಿರಣ್ ಕುಮಾರ್, ಡಾ. ಮಂಜುಳಾ ಎನ್, ಸೇರಿದಂತೆ ಇತರರಿದ್ದರು.

### ಸಾಮಾಜಿಕ ಜಾಲತಾಣದ ಬಗ್ಗೆ ಎಚ್ಚರವಿರಲಿ

ಇಂದಿನ ಯುವ ಪೀಳಿಗೆ ಅತೀ ಹೆಚ್ಚು ಸಾಮಾಜಿಕ ಜಾಲತಾಣದ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು. ಸಾಮಾಜಿಕ ಜಾಲತಾಣಗಳು ನಮ್ಮನ್ನು ದಾರಿತಪ್ಪಿಸದಂತೆ ನೋಡಿಕೊಳ್ಳಬೇಕು ಮತ್ತು ಅಲ್ಲಿ ಸಿಗುವ ಮಾಹಿತಿ ಸತ್ಯವೇ ಅಥವಾ ಸುಳ್ಳೇ ಎಂಬುದು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಬೇಕು ಎಂದು ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

> ವಿದ್ಯಾರ್ಥಿಗಳ ಮೊಬೈಲ್ ಬಳಕೆ ಕಡಿಮೆ ಮಾಡಬೇಕು. ಓದು ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ತಮಗೆ ದೊರೆತಿರುವಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಹೊಸ ಅನ್ವೇಷಣೆಗಳ ಮಾಡಲು ಮುಂದಾಗಬೇಕು.
> ■ **ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

# ಗಣಿ ಗುತ್ತಿಗೆದಾರರಿಂದ ರಾಜಧನ ವಸೂಲಿ ನಿಲ್ಲಿಸಿ

**ಬೆಂಗಳೂರು:** ಸರ್ಕಾರಕ್ಕೆ ಈಗಾಗಲೇ ರಾಜಧನ ಸಂಪೂರ್ಣವಾಗಿ ಸಂದಾಯವಾಗಿರುವ ಸಂದರ್ಭದಲ್ಲಿ ಮತ್ತೆ ಗಣಿ ಗುತ್ತಿಗೆದಾರರಿಂದ ರಾಜಧನ ವಸೂಲಿ ಮಾಡಲು ಮುಂದಾಗಿರುವುದು ಅನ್ಯಾಯಕರ ಹಾಗೂ ಕಾನೂನು ಬಾಹಿರ ಕ್ರಮವಾಗಿದ್ದು, ಇದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಡಿ.ಸಿದ್ದರಾಜು ಮಾತನಾಡಿ, ಕಾಮಗಾರಿ ನಿರ್ವಹಣಾ ಇಲಾಖೆಗಳಲ್ಲಿ ರಾಜಧನವನ್ನು ಈಗಾಗಲೇ ಪಾವತಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಲಾಗಿರುವುದರಿಂದ, ಅದೇ ರಾಜಧನವನ್ನು ಮತ್ತೆ ಗಣಿ ಗುತ್ತಿಗೆದಾರರಿಂದ ವಸೂಲಿ ಮಾಡಲು ಮುಂದಾಗಿರುವುದು ಸರಿಯಲ್ಲ. ಸರ್ಕಾರಕ್ಕೆ ಸಲ್ಲಿಸಬೇಕಾದ ರಾಜಧನ ಪೂರ್ಣವಾಗಿ ಸಂದಾಯವಾಗಿರುವ ಹಿನ್ನೆಲೆಯಲ್ಲಿ ಯಾವುದೇ ರೀತಿಯ ದ್ವಿತೀಯ ವಸೂಲಿ ನಡೆಯಬಾರದು ಎಂದು ಆಗ್ರಹಿಸಿದರು.

ಕೆಎಂಎಂಸಿಆರ್–1994 ನಿಯಮಗಳು ಪ್ರಸ್ತುತ ಕಾನೂನುಬದ್ಧ ಗಣಿಗಾರಿಕೆ ಚಟುವಟಿಕೆಗಳಿಗೆ ಪೂರಕವಾಗಿಲ್ಲ. ಆದ್ದರಿಂದ ಸಮಗ್ರ ಹಾಗೂ ಸಮರ್ಪಕ ತಿದ್ದುಪಡಿ ಮಾಡುವುದು ಅನಿವಾರ್ಯವಾಗಿದೆ. ಸರ್ಕಾರ ಕ್ಯಾಬಿನೆಟ್ ಉಪಸಮಿತಿಯ ತೀರ್ಮಾನದಂತೆ ಒಟಿಎಸ್ ಹೆಸರಿನಲ್ಲಿ ಮಾಲೀಕರ ಮೇಲೆ ಕೋಟ್ಯಾಂತರ ರೂಪಾಯಿ ದಂಡ ವಿಧಿಸಿರುವುದನ್ನು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ತೀವ್ರವಾಗಿ ಖಂಡಿಸುತ್ತದೆ ಎಂದು ಎಚ್ಚರಿಸಿದರು.

# ಪಿಯು ಪ್ರಶ್ನೆಪತ್ರಿಕೆ ಮಾರಾಟ ಸುಳ್ಳು

**ಬೆಂಗಳೂರು:** ಸಾಮಾಜಿಕ ಜಾಲತಾಣಗಳಲ್ಲಿ ದ್ವಿತೀಯ ಪಿಯು ಪ್ರಶ್ನೆಪತ್ರಿಕೆ ಮಾರಾಟವಾಗುತ್ತಿದೆ ಎಂಬುದರ ಸಂಬಂಧ ಯಾವುದೇ ಪೂರಕ ದಾಖಲೆಗಳು ಲಭ್ಯವಿಲ್ಲ. ಇದು ಸುಳ್ಳು ಸುದ್ದಿ ಎಂದು ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.

ಇದು ವಿದ್ಯಾರ್ಥಿಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ದಾರಿ ತಪ್ಪಿಸುವ ಹುನ್ನಾರದ ಭಾಗವಾಗಿದ್ದು, ಈ ರೀತಿಯ ಸುಳ್ಳು ಸುದ್ದಿಯನ್ನು ಹರಡುವವರನ್ನು ಗುರುತಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮಂಡಳಿಯ ಜಾಲತಾಣ kseab.karnataka.gov.inನಲ್ಲಿ ಮಕ್ಕಳ ಪರೀಕ್ಷೆ ಸಿದ್ಧತೆಗೆ ವಿದ್ಯಾರ್ಥಿಗಳ ಅಂಕಣದಲ್ಲಿ ಈಗಾಗಲೇ ಒದಗಿಸಲಾಗಿದೆ.

# ಡಿಜಿಟಲ್ ರೂಪದಲ್ಲಿ ದೂರದರ್ಶನ

**ಶಿವಮೊಗ್ಗ:** ಆಕಾಶವಾಣಿ ಮತ್ತು ದೂರದರ್ಶನ ಸೇವೆಯನ್ನು ಡಿಜಿಟಲ್ ರೂಪದಲ್ಲಿಯೂ ನೀಡಲು ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ರಾಜ್ಯ ಖಾತೆ ಸಚಿವ ಡಾ.ಎಲ್. ಮುರುಗನ್ ತಿಳಿಸಿದರು.

ನಗರದ ಸಹ್ಯಾದ್ರಿ ಕಾಲೇಜು ಎದುರಿನ ದೂರದರ್ಶನ ಪ್ರಸರಣ ಕೇಂದ್ರದ ಆವರಣದಲ್ಲಿ ಗುರುವಾರ ಭದ್ರಾವತಿ ಆಕಾಶವಾಣಿ ಕೇಂದ್ರದ 10 ಕೆವಿ ಎಫ್‌ಎಂ ಟ್ರಾನ್ಸ್‌ಮಿಟರ್ ವಿಸ್ತರಣಾ ಸೇವೆ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಆಕಾಶವಾಣಿ ಯಾವಾಗಲೂ ಸತ್ಯ ಮತ್ತು ಶುದ್ಧ ಸುದ್ದಿಗಳನ್ನು ನೀಡುತ್ತಾ ಬಂದಿದೆ. ಬ್ರೇಕಿಂಗ್ ಸುದ್ದಿಗಳ ಹಿಂದೆ ಬೀಳದೇಯೂ ಕೆಲಸ ಮಾಡುತ್ತಿದೆ.



2500 ಕೋಟಿ ಕಳೆದ ವರ್ಷ ಮೂಲ ಸೌಕರ್ಯಕ್ಕಾಗಿ ವೆಚ್ಚ ಮಾಡಲಾಗಿದೆ. ದಿನೇ ದಿನೇ ತಂತ್ರಜ್ಞಾನ ಬದಲಾಗುತ್ತಿದೆ. ಡಿಜಿಟಲ್ ತಂತ್ರಜ್ಞಾನಕ್ಕೆ ತಕ್ಕಂತೆ ಆಕಾಶವಾಣಿ ಮತ್ತು ದೂರದರ್ಶನದಲ್ಲಿಯೂ ಬದ ಲಾವಣೆಗಳು ಆಗುತ್ತಿವೆ ಎಂದರು.

ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಯ ಅಭಿವೃದ್ಧಿ ಪ್ರಧಾನಿ ನರೇಂದ್ರ ಮೋದಿ ಅವರ ಕನಸು. ಆದಕ್ಕಾಗಿ ಸರ್ಕಾರ ಕೆಲಸ ಮಾಡುತ್ತಿದೆ. ಆಕಾಶವಾಣಿ ರಾಷ್ಟ್ರದ ಧ್ವನಿ ಆಗಿದೆ. ಮಾಹಿತಿ ನೀಡುವ ಜೊತೆಗೆ ಜನರನ್ನು ಬೆಸೆಯುತ್ತದೆ. ಈಗ ಎಲ್ಲರೂ ಕ್ರಿಯೇಟಿವ್ ಆಗಿದ್ದಾರೆ.

ಆಕಾಶ ವಾಣಿ ಕೂಡ ಇದಕ್ಕೆ ಹೊರತಾಗಿಲ್ಲ. 15,000 ಶಾಲೆಗಳಲ್ಲಿ ಕ್ರಿಯೇಟಿವ್ ಪ್ರಯೋಗಾಲಯ ಆರಂಭ ಮಾಡುವ ಘೋಷಣೆ ಬಜೆಟ್‌ನಲ್ಲಿ ಆಗಿದೆ ಎಂದರು. ಶಿವಮೊಗ್ಗ ಶಾಸಕ ಎಸ್.ಎನ್. ಚನ್ನಬಸಪ್ಪ, ಡಾ. ಧನಂಜಯ ಸರ್ಜಿ, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಜಿಲ್ಲಾ ರಕ್ಷಣಾಧಿಕಾರಿ ಬಿ. ನಿಖಿಲ್, ಭದ್ರಾವತಿ ಆಕಾಶವಾಣಿ ಕೇಂದ್ರದ ನಿರ್ದೇಶಕ ಎಸ್.ಆರ್. ಭಟ್, ಆಕಾಶವಾಣಿ ದಕ್ಷಿಣ ವಲಯ ಅವರ ನಿರ್ದೇಶಕಿ ಗೀತಾ ರಾಣಿ ಇನ್ನಿತರರು ಇದ್ದರು.

### ಎಫ್‌ಎಂ ಕೇಂದ್ರ ವಿಸ್ತರಣೆ

ರಾಜ್ಯದಲ್ಲಿ ಅನೇಕ ಕಡೆ ಆಕಾಶವಾಣಿ ಕೇಂದ್ರ ಇದೆ. ಅವು ಎರಡು ರಾಜ್ಯಗಳಿಗೆ ಪ್ರಸಾರ ಆಗುತ್ತದೆ. ಭದ್ರಾವತಿ ಆಕಾಶವಾಣಿ ಕೇಂದ್ರ ಸಂಪೂರ್ಣ ಕನ್ನಡಿಗರಿಗೆ ಮಾತ್ರ ಕೇಳಿಸುತ್ತದೆ. 1987ರಲ್ಲಿ ಭದ್ರಾವತಿಯಲ್ಲಿ ಸ್ವಂತ ಸ್ಟುಡಿಯೋ ಆಗಿತ್ತು. 1994ರಲ್ಲಿ ಒಂದು ಕಿಲೋ ವ್ಯಾಟ್ ಎಫ್‌ಎಂ ಆರಂಭ ಮಾಡಿದ್ದರು. ಅದು ಇಲ್ಲಿಯೇ ಕೇಳಿಸುತ್ತಿರಲಿಲ್ಲ. ಯಡಿಯೂರಪ್ಪ ಅವರು ಸಂಸದರಾಗಿದ್ದಾಗ ಎಫ್‌ಎಂ ಕೇಂದ್ರದ ವಿಸ್ತರಣೆಗೆ ಮನವಿ ಸಲ್ಲಿಸಿದ್ದರು. ಅದೀಗ ಸಾಕಾರಗೊಂಡಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

# ಮುತ್ಯಾ ವಿರುದ್ಧ ಪೋಕ್ಸೋ ದೂರು

**ಯಾದಗಿರಿ:** ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ ಹಿನ್ನೆಲೆಯಲ್ಲಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲ ರೋಜಾದ (ಚಾಂಗ್ ದೇವ್) ಯಮ ನೂರಪ್ಪ ದೇವಸ್ಥಾನದ ಪೀಠಾಧಿಪತಿ ಸ್ವಯಂ ದೇವ ಮಾನವ ಮಲ್ಲಿಕಾರ್ಜುನ ಮುತ್ಯಾನ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಲಾಗಿದೆ.



ಮಲ್ಲಿಕಾರ್ಜುನ ಮುತ್ಯಾ ಮಠಕ್ಕೆ ಬರುವ ಭಕ್ತರ ಅಂತರಂಗದ ವಿಷಯಗಳನ್ನು ಹೇಳುತ್ತಾರೆ. ಇದರಿಂದ ಭಕ್ತರ ಸಮಸ್ಯೆಗಳು ದೂರವಾಗಿಸುತ್ತಾರೆ ಎಂಬ ನಂಬಿಕೆ ಇದೆ. ಹೀಗಾಗಿ ಮುತ್ಯಾ ಹೋದಲೆಲ್ಲ ಭಕ್ತರು ಮುಗಿಬೀಳುತ್ತಾರೆ. ಮಾತ್ರವಲ್ಲ ಕರ್ನಾಟಕ ಸೇರಿ ನೆರೆಯ ತೆಲಂಗಾಣ, ಮಹಾರಾಷ್ಟ್ರ ರಾಜ್ಯದಲ್ಲಿ ಇವರ ಭಕ್ತರಿದ್ದಾರೆ ಆದರೆ, ಕಳೆದ ಕೆಲ ದಿನಗಳ ಹಿಂದೆ ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ್ದ ವಿಡಿಯೋ ಬಗ್ಗೆ ಎಲ್ಲೆಡೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಅಪ್ರಾಪ್ತ ಬಾಲಕಿ ಪೋಷಕರು ಮಲ್ಲಿಕಾರ್ಜುನ ಮುತ್ಯಾ ಬೆಂಬಲಕ್ಕೆ ನಿಂತಿದ್ದಾರೆ. ಬಾಲಕಿ ಬರ್ತಡೇ ಇರೋದ್ರಿಂದ ನಾವು ಅಪ್ಪಾಜಿ ಮಠಕ್ಕೆ ಹೋಗಿದ್ದೇವು. ನಮ್ಮ ಕುಟುಂಬವೂ ಮಲ್ಲಿಕಾರ್ಜುನ ಮುತ್ಯಾ ಅವರ ಭಕ್ತರಾಗಿದ್ದೇವೆಂದು ತಿಳಿಸಿದ್ದಾರೆ.

# ಸಮಾಜದ ಒಳಿತಿಗೆ ಸಂಕಲ್ಪ ಇರಲಿ

**ಬೆಂಗಳೂರು:** ನಮ್ಮ ನಾಡಿನ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರವು ಕೇವಲ ಲಾಭದ ಉದ್ದೇಶ ಹೊಂದಿರದೆ, ಸಮಾಜದ ಒಳಿತನ್ನು ಸಾಧಿಸುವ ದೃಢ ಸಂಕಲ್ಪ ಹೊಂದಿರಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಖಾಸಗಿ ಹೊಟೇಲ್‌ನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ 50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ನೂತನ ಲೋಗೋ ಅನಾವರಣಗೊಳಿಸಿ ಮಾತನಾಡಿದ ಅವರು, ಬಿಸಿಐಸಿಯ ಲಾಂಛನವು ಮೈಸೂರು ರಾಜಮನೆತನದ ಅಧಿಕೃತ ಚಿಹ್ನೆಯಾದ ಗಂಡಭೇರುಂಡದಿಂದ ಸ್ಫೂರ್ತಿ ಪಡೆದಿದೆ. ಗಂಡಭೇರುಂಡವು ಕೇವಲ ಒಂದು ಪಕ್ಷಿಯಲ್ಲ ಅದು ಅಸಾಧಾರಣ ಶಕ್ತಿಯ ಸಂಕೇತ. ವಿಷ್ಣು ಪುರಾಣದ ಕಥೆಯಂತೆ, ಇದು ಲೋಕಕಲ್ಯಾಣಕ್ಕಾಗಿ ಉದ್ಭವಿಸಿದ ಶಕ್ತಿ. ಒಂದು ಮುಖದಿಂದ ಒಳಿತನ್ನು, ಇನ್ನೊಂದು ಮುಖದಿಂದ ಕೆಡುಕನ್ನು ಸಮಾನವಾಗಿ ಎದುರಿಸುವ ಅದರ ಗುಣವು ನಮ್ಮ ಉದ್ಯಮ ಲೋಕಕ್ಕೆ ಮಾದರಿಯಾಗಲಿ ಎಂದು ತಿಳಿಸಿದರು.

ಪರಂಪರೆಯ ಮುಂದುವರಿಕೆ

ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್. ಎಂ. ವಿಶ್ವೇಶ್ವರಯ್ಯ ಅವರು ಹಾಕಿಕೊಟ್ಟ ಕೈಗಾರಿಕಾ ಕ್ರಾಂತಿಯ ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ. ರಾಜ್ಯದ ಆರ್ಥಿಕ ಪ್ರಗತಿಗೆ ಅಂದು ಮೈಸೂರು ವಾಣಿಜ್ಯ ಮಂಡಳಿ ಯಾವ ರೀತಿ ಶ್ರಮಿಸಿತ್ತೋ, ಇಂದು ಬಿಸಿಐಸಿ ಕೂಡ ಅದೇ ಹಾದಿಯಲ್ಲಿ ಸಾಗುತ್ತಿದೆ. ಇದು ಕೇವಲ ಒಂದು ಸಂಘಟನೆಯಲ್ಲ, ಬದಲಾಗಿ ಸರ್ಕಾರದ ನೀತಿಗಳನ್ನು ರೂಪಿಸುವಲ್ಲಿ ಮತ್ತು ಉದ್ಯಮಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುವಲ್ಲಿ ಪ್ರಮುಖ ಕೊಂಡಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಸಿಐಸಿ ಅಧ್ಯಕ್ಷ ಪ್ರಶಾಂತ್ ಗೋಖಲೆ, ಸಿ.ಎ. ರವಿ, ದೇವನಂದ್, ಆರ್. ಶ್ರೀನಿವಾಸನ್, ಪಂಕಜಮ್ ಶ್ರೀದೇವಿ, ಪ್ರಶಾಂತ ರೆಡ್ಡಿ ಉಪಸ್ಥಿತರಿದ್ದರು.



### ವಿಕಸಿತ ಭಾರತದತ್ತ ಹೆಜ್ಜೆ

ಪ್ರಧಾನಮಂತ್ರಿಯವರ ವಿಕಸಿತ ಭಾರತದ ಕನಸನ್ನು ನನಸು ಮಾಡಲು ಕೈಗಾರಿಕಾ ಸಂಘಟನೆಗಳ ಪಾತ್ರ ದೊಡ್ಡದು. ನಮ್ಮ ದೇಶದ ಜನಸಂಖ್ಯಾ ಲಾಭವನ್ನು ಬಳಸಿಕೊಂಡು, ಸುಸ್ಥಿರ ಆರ್ಥಿಕತೆಯನ್ನು ಕಟ್ಟಬೇಕಿದೆ. ಉದ್ಯಮಗಳು ಕೇವಲ ವ್ಯಾಪಾರಕ್ಕೆ ಸೀಮಿತವಾಗದೆ, ಜನಸಾಮಾನ್ಯರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು, ಎಂದು ಯದುವೀರ್ ಕರೆ ನೀಡಿದರು.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರ ಆಯ್ಕೆ ಪ್ರಕ್ರಿಯೆಯಲ್ಲಿ ಉಂಟಾದ ಗೊಂದಲ

# ನೇಮಕಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳಲ್ಲಿ ಆತಂಕ

ನಂದಿನಿ ಎನ್.

**ಬೆಂಗಳೂರು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಆಯ್ಕೆ ಪ್ರಕ್ರಿಯೆಯಲ್ಲಿ ಉಂಟಾದ ಗೊಂದಲವು ನೇಮ ಕಾತಿಗಾಗಿ ಕಾಯುತ್ತಿರುವ ಅಭ್ಯರ್ಥಿಗಳಲ್ಲಿ ಆತಂಕವನ್ನು ಸೃಷ್ಟಿಸಿದೆ.

ಅಂತಿಮ ಮೆರಿಟ್ ಪಟ್ಟಿ ಬಿಡುಗಡೆ ಮಾಡುವ ಸಂದರ್ಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ (ಡಿಸಿಇ) ಮೆರಿಟ್‌ಗೆ ಆಗತ್ಯವಾದ ಪ್ರಾಮುಖ್ಯತೆ ನೀಡದೇ ಹೈದರಬಾದ್ ಕರ್ನಾಟಕ (ಎಚ್‌ಕೆ) ಹಾಗೂ ಹೈದರಾಬಾದ್-ಕರ್ನಾಟಕವಲ್ಲದ (ನಾನ್ ಎಚ್‌ಕೆ) ಎಂದು ಎರಡು ಪ್ರತ್ಯೇಕ ಪಟ್ಟಿಗಳನ್ನು ಪ್ರಕಟಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಮಾರ್ಗಸೂಚಿಗಳ ಪ್ರಕಾರ, ಒಂದೇ ನೇಮಕಾತಿ ಅಧಿಸೂಚನೆ, ಒಂದೇ ಪರೀಕ್ಷೆ ಮತ್ತು ಒಂದೇ ಆಯ್ಕೆ ಪ್ರಕ್ರಿಯೆ ಇದ್ದಲ್ಲಿ, ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಥವಾ ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸೇರಿದವರಾಗಿದ್ದರೂ, ಸಾಮಾನ್ಯ ಮೆರಿಟ್ ಅಡಿಯಲ್ಲಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ.

ಆದಾಗ್ಯೂ, ಈ ನಿಯಮವನ್ನು ಕಡೆಗಣಿಸಿ ಕಾಲೇಜು ಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಿರುವುದರಿಂದ ಹೈದರಾಬಾದ್-ಕರ್ನಾಟಕ ಪ್ರದೇಶದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಾಗಿ ಆರೋಪಿಸಲಾಗಿದೆ. ಈ ಕುರಿತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೂಡ ಮೆರಿಟ್ ಆಧಾರಿತ ಏಕೀಕೃತ ಪಟ್ಟಿಯನ್ನು ಸಿದ್ಧಪಡಿಸುವುದರ ಅಗತ್ಯವನ್ನು ಒತ್ತಿ ಹೇಳಿರುವುದು ಗಮನಾರ್ಹವಾಗಿದೆ.

2 ಪ್ರತ್ಯೇಕ ಪಟ್ಟಿಗಳ ಬಿಡುಗಡೆಯ ಪರಿಣಾಮವಾಗಿ, ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸೇರಿದ ಹಾಗೂ ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಸಾಮಾನ್ಯ ಮೆರಿಟ್‌ನಲ್ಲಿ ಪರಿಗಣನೆಯಾಗದೆ, ತಮ್ಮ ನ್ಯಾಯಸಮ್ಮತ ಅವಕಾಶವನ್ನು ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ.

**ಆದೇಶದಲ್ಲಿಯೂ ಎರಡು ಪ್ರತ್ಯೇಕ ಪಟ್ಟಿ ಬಿಡುಗಡೆ:** 2025 ರ ಜೂ.3 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿದ ಆದೇಶದಲ್ಲಿಯೂ ಅಭ್ಯರ್ಥಿಗಳ ಏಕೀಕೃತ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ಸ್ಪಷ್ಟವಾಗಿ ಸೂಚನೆ ನೀಡಲಾಗಿದೆ. ಆದರೆ, ಈ ಮಾರ್ಗಸೂಚಿಗಳನ್ನು ಅನುಸರಿಸದೇ ಕಾಲೇಜು ಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಿರುವುದು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

2022ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್–1 ಪ್ರಾಂಶುಪಾಲರ ಖಾಲಿ ಹುದ್ದೆಗಳ ನೇರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಸೂಚನೆ ಹೊರಡಿಸಿತ್ತು. ಹಲವು ಕಾರಣಗಳಿಂದ ಈ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿತ್ತು.

ಇತ್ತೀಚೆಗೆ ಪ್ರಕ್ರಿಯೆಗೆ ವೇಗ ಸಿಕ್ಕಿದ್ದು ಅಭ್ಯರ್ಥಿಗಳಲ್ಲಿ ಆಶಾಭಾವನೆ ಮೂಡಿಸಿತ್ತು. ಆದರೆ, ಅಂತಿಮ ಪಟ್ಟಿಯ ಗೊಂದಲವು ಅವರ ಸಂತಸವನ್ನು ಕಮರಿಸಿದೆ.

### ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯ



ಹೆಚ್ಚುವರಿಯಾಗಿ ಎಚ್‌ಕೆ ಪ್ರದೇಶಕ್ಕೆ ಜಾಹೀರಾತು ಮಾಡಲಾದ 45 ಹುದ್ದೆಗಳಲ್ಲಿ ಕೇವಲ 36 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇನ್ನೂ 9 ಹುದ್ದೆಗಳು ಖಾಲಿ ಉಳಿದಿವೆ. ಸರ್ಕಾರವು ಈ ಉಳಿದ 9 ಹುದ್ದೆಗಳನ್ನೂ ಭರ್ತಿ ಮಾಡಿದಲ್ಲಿ, ಉಳಿದ ಅರ್ಹ ಅಭ್ಯರ್ಥಿಗಳಿಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುವ ಅವಕಾಶ ಲಭಿಸಲಿದೆ. ಕಾಲೇಜು ಶಿಕ್ಷಣ ಇಲಾಖೆ ಬಿಡುಗಡೆ ಮಾಡಿದ ಎರಡು ಆಯ್ಕೆ ಪಟ್ಟಿಗಳಿಂದ ನಮ್ಮಂತಹ ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಈ ನೇಮಕಾತಿಗಾಗಿ ನಾವು ಹಲವು ವರ್ಷಗಳಿಂದ ಕಾಯುತ್ತಿದ್ದೇವೆ. ಈಗ ಸಾಮಾನ್ಯ ಮೆರಿಟ್ ಪಟ್ಟಿಯಲ್ಲಿ ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳನ್ನು ಪರಿಗಣಿಸದೇ ಇರುವುದು ನಮಗೆ ಅನ್ಯಾಯವಾಗಿದೆ ಎಂದು ನೊಂದ ಅಭ್ಯರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

# ಉಳ್ಳವರು ಗ್ಯಾರಂಟಿ ತ್ಯಾಗ ಮಾಡಲಿ

> ಮಾಧ್ಯಮಗಳು ಯಾವುದನ್ನೂ ಸಹ ತಿರುಚುವುದು ಬೇಡ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಸಿರಿವಂತರು ಗ್ಯಾರಂಟಿ ಯೋಜನೆಗಳನ್ನು ಬಿಟ್ಟು ಕೊಡುವುದರಲ್ಲಿ ತಪ್ಪೇನಿದೆ. ಸರ್ಕಾರಿ ನೌಕರರು, ದೊಡ್ಡ, ದೊಡ್ಡ ಐಟಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತಾ ಇರುವವರು – ಹೀಗೆ ಬಹಳ ಜನ ನಮಗೆ ಗ್ಯಾರಂಟಿ ಯೋಜನೆಗಳು ಬೇಡ ಎಂದಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.



ಗುರುವಾರ ವಿಧಾನಸೌಧದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸಿರಿವಂತರು ಗ್ಯಾರಂಟಿ ಯೋಜನೆಗಳ ಫಲಾನುಭವದಿಂದ ಹೊರಬರಲಿ ಎಂದು ಒಂದಷ್ಟು ಸಚಿವರು ಹೇಳುತ್ತಿದ್ದಾರೆ.

ಒಂದಷ್ಟು ಸಿರಿವಂತರು ನಮಗೆ ಅವಶ್ಯಕತೆ ಇಲ್ಲ ಎಂದಿದ್ದಾರೆ. 200 ಯೂನಿಟ್ ಉಚಿತ ವಿದ್ಯುತ್ ಬಗ್ಗೆಯೂ ಹೇಳಿದ್ದಾರೆ. ಅದಕ್ಕೆ ನಾವು ಆ ಬಗ್ಗೆ ವಿಮರ್ಶೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಮಾಧ್ಯಮಗಳು ಯಾವುದನ್ನೂ ಸಹ ತಿರುಚುವುದು ಬೇಡ. ಯಾವ ಕಾರಣಕ್ಕೂ ಯಾವ ಗ್ಯಾರಂಟಿಗಳೂ ನಿಲ್ಲುವುದಿಲ್ಲ. ಎಷ್ಟೇ ಕಷ್ಟ ಇದ್ದರೂ ಸಹ ಗ್ಯಾರಂಟಿಗಳನ್ನು ಕೊಡುತ್ತಿದ್ದೇವೆ. ಗ್ಯಾರಂಟಿಯಿಂದ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎನ್ನುವ ಸುಳ್ಳಿನ ಬಗ್ಗೆಯೂ ಸ್ಪಷ್ಟನೆ ನೀಡಿದ್ದೇನೆ. ಈ ಬಜೆಟ್‌ನಲ್ಲಿ ಒಳ್ಳೊಳ್ಳೆ ಅಭಿವೃದ್ಧಿ ಕೆಲಸಗಳನ್ನು ನಮ್ಮ ಸರ್ಕಾರ ಘೋಷಣೆ ಮಾಡುತ್ತದೆ ಎಂದು ಹೇಳಿದರು.

ಕೇಂದ್ರ ಬಿಜೆಪಿ ಸರ್ಕಾರ ರಾಜ್ಯಕ್ಕೆ ಯಾವುದೇ ರೀತಿಯಲ್ಲೂ ಸಹಾಯ ಮಾಡುತ್ತಿಲ್ಲ ಆದರೂ ನಾವು ಗ್ಯಾರಂಟಿ ಯೋಜನೆಗಳನ್ನು ನೀಡಿ ನಿಭಾಯಿಸುತ್ತಿದ್ದೇವೆ. ಸರ್ಕಾರವೂ ಸಹ ಅತ್ಯುತ್ತಮವಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿದೆ. 21 ಕೋಟಿಯಷ್ಟು ಹಣ ಮೃತಪಟ್ಟಿರುವ ಮಹಿಳೆಯರ ಖಾತೆಗೆ ಹೋಗಿದೆ. ಇದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ ಎಂದು ಹೇಳಿದರು.

## ಸಂಪಾದಕೀಯ

# ತಪ್ಪಿತಸ್ಥರ ವಿರುದ್ಧ ಕ್ರಮ ಆಗಲಿ

ಶಿಕ್ಷಣ ವ್ಯವಸ್ಥೆ ಒಂದು ರಾಷ್ಟ್ರದ ಮನಸ್ಸನ್ನು ರೂಪಿಸುವ ಮಹತ್ತರ ಸಾಧನವಾಗಿದೆ. ಆದ್ದರಿಂದ ಪಠ್ಯಪುಸ್ತಕಗಳಲ್ಲಿ ಒಳಗೊಳ್ಳುವ ಪ್ರತಿಯೊಂದು ವಾಕ್ಯವೂ ಪರಿಶೀಲಿತ, ಸಮತೋಲನಯುತ ಹಾಗೂ ಜವಾಬ್ದಾರಿಯುತವಾಗಿರಬೇಕು. 8ನೇ ತರಗತಿಯ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕದ ಸುತ್ತ ಉದ್ಭವಿಸಿದ ವಿವಾದ ಇದೇ ಮೂಲಭೂತ ಪ್ರಶ್ನೆಯನ್ನು ಮತ್ತೆ ಮುಂದಿರಿಸಿದೆ. ನ್ಯಾಯಾಂಗದಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು ಅಗತ್ಯವೇ ಸರಿ. ಆದರೆ ಆದು ವಾಸ್ತವಾಧಾರಿತ, ಸಂದರ್ಭಸೂಕ್ಷ್ಮ ಮತ್ತು ಸಂವೇದನಾಶೀಲವಾಗಿರಬೇಕು.

ಪ್ರಶ್ನೆ ಕೇವಲ ಒಂದು ಅಧ್ಯಾಯದ ಬಗ್ಗೆ ಅಲ್ಲ. ಪ್ರಶ್ನೆ ಶಿಕ್ಷಣದ ದಿಕ್ಕಿನ ಬಗ್ಗೆ. ಯುವ ಮನಸ್ಸುಗಳಿಗೆ ಯಾವ ರೀತಿಯ ಸಂದೇಶವನ್ನು ನೀಡುತ್ತಿದ್ದೇವೆ? ಸಂಸ್ಥೆಗಳ ಮೇಲೆ ನಂಬಿಕೆಯನ್ನು ಬಲಪಡಿಸುವುದೇ, ಅಥವಾ ಸಂಶಯದ ಬೀಜ ಬಿತ್ತುವುದೇ? ವಿಮರ್ಶಾತ್ಮಕ ಚಿಂತನೆ ಬೆಳೆಸುವುದು ಶಿಕ್ಷಣದ ಉದ್ದೇಶ. ಆದರೆ ಅದನ್ನು ನಿರ್ದಿಷ್ಟ ದೃಷ್ಟಿಕೋನದ ಮೂಲಕ ಒತ್ತಾಯಿಸುವುದು ಸೂಕ್ತವಲ್ಲ. ವಾಸ್ತವಗಳ ಸಮತೋಲನ, ವಿವರಣೆಗಳ ನಿಖರತೆ ಮತ್ತು ಪದಪ್ರಯೋಗದ ಜಾಣ್ಮೆ ಇಲ್ಲಿ ನಿರ್ಣಾಯಕ.




ಈ ವಿವಾದವು ಮತ್ತೊಂದು ಗಂಭೀರ ಅಂಶವನ್ನೂ ಬಹಿರಂಗಪಡಿಸಿದೆ ಪಠ್ಯ ವಿಷಯದ ಮೇಲ್ವಿಚಾರಣೆ. ಪರಿಶೀಲನಾ ವ್ಯವಸ್ಥೆಗಳು ಎಷ್ಟು ಕಟ್ಟುನಿಟ್ಟಾಗಿವೆ? ವಿಷಯ ರಚನೆ, ಸಂಪಾದನೆ, ಅಂತಿಮ ಅನುಮೋದನೆ ಪ್ರತಿಯೊಂದು ಹಂತವೂ ದೋಷರಹಿತವಾಗಿರಬೇಕಾದರೆ ಸಂಸ್ಥಾತ್ಮಕ ಜವಾಬ್ದಾರಿ ಸ್ಪಷ್ಟವಾಗಬೇಕು. ಶಿಕ್ಷಣದ ವೇದಿಕೆಯಲ್ಲಿ ಅನಿರೀಕ್ಷಿತ ತಪ್ಪುಗಳಿಗೆ ಅವಕಾಶ ಇರಬಾರದು.

ಶಾಲಾ ಪಠ್ಯಪುಸ್ತಕಗಳು ಕೇವಲ ಜ್ಞಾನ ನೀಡುವ ಸಾಧನಗಳಲ್ಲ; ಅವು ಮೌಲ್ಯಗಳ ಬೀಜ ಬಿತ್ತುವ ನೆಲ. ಆದ್ದರಿಂದ ಶಿಕ್ಷಣ ನೀತಿ ರೂಪಿಸುವವರಿಂದ ಹಿಡಿದು ವಿಷಯ ತಯಾರಕರವರೆಗೆ ಎಲ್ಲರೂ ಹೆಚ್ಚಿನ ಜವಾಬ್ದಾರಿಯನ್ನು ಅರಿತು ನಡೆಬೇಕು. ಯುವಜನರ ಮನಸ್ಸು ರಾಷ್ಟ್ರದ ಭವಿಷ್ಯ. ಆ ಭವಿಷ್ಯವನ್ನು ಗೊಂದಲದಿಂದಲ್ಲ, ಸ್ಪಷ್ಟತೆ ಮತ್ತು ಸಮತೋಲನದಿಂದ ರೂಪಿಸುವುದು ಸಮಯದ ಅವಶ್ಯಕತೆ.

ಆದರೆ, ಎನ್‌ಸಿಇಆರ್‌ಟಿ ರೂಪಿಸಿದ ಈ ಪಠ್ಯಪುಸ್ತಕದಲ್ಲಿ ಹೇಗೆ ಅಷ್ಟು ದೊಡ್ಡ ವಿಚಾರ ಬಂದಿತು ಎಂಬುದೇ ಈಗಿನ ಪ್ರಶ್ನೆ. ಈಗಾಗಲೇ ಕಳೆದ ಕೇಂದ್ರ ಸಂಪುಟ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಅತೀವ ಬೇಸರ ವ್ಯಕ್ತಪಡಿಸಿರುವ ಬಗ್ಗೆಯೂ ತಿಳಿದುಬಂದಿದೆ. ಆಗ ಸ್ವತಃ ಮೋದಿ ಅವರೇ, ಇಂಥ ವಿಚಾರಗಳಲ್ಲಿ ಹೇಗೆ ನಿರ್ಲಕ್ಷ್ಯ ವಹಿಸಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನೂ ಎತ್ತಿದ್ದಾರೆ. ಜತೆಗೆ, ಇದರಲ್ಲಿ ಲೋಪ ಮಾಡಿರುವ ಎನ್‌ಸಿಇಆರ್‌ಟಿ ಅಧಿಕಾರಿಗಳನ್ನು ಹೊಣೆ ಮಾಡುವಂತೆಯೂ ಖಡಕ್ ಆಗಿಯೇ ಸೂಚಿಸಿದ್ದಾರೆ. ಈಗಾಗಲೇ, ಬುಧವಾರವೇ ಸುಪ್ರೀಂಕೋರ್ಟ್ ಈ ಬಗ್ಗೆ ತೀರಾ ಖಾರವಾಗಿಯೇ ಪ್ರಶ್ನಿಸಿದ್ದು, ಪುಸ್ತಕವನ್ನೇ ನಿಷೇಧಿಸಿದೆ. ಭಾರತದಂಥ ಪ್ರಜಾಪ್ರಭುತ್ವದಲ್ಲಿ ಸದ್ಯ ಜನ ಅತೀವವಾಗಿ ನಂಬಿಕೊಂಡಿರುವುದು ನ್ಯಾಯಾಂಗ ವ್ಯವಸ್ಥೆಯನ್ನೇ. ಹೀಗಾಗಿ ಯಾವುದೇ ಕಾರಣಕ್ಕೂ ಜನರಲ್ಲಿ ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಂಶಯ ಮೂಡಿಸುವಂಥ ಕೆಲಸ ಮಾಡಬಾರದು. ಇಂಥ ವಿಚಾರಗಳಲ್ಲಿ ಸೂಕ್ಷ್ಮತೆ ಬೇಕಾಗಿದೆ.

# ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

▸ ರಾಜೇಶ್ ಪದ್ಮಾರ್

ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣದ ಧ್ಯೇಯೋದ್ದೇಶಗಳೊಂದಿಗೆ ಶಿಕ್ಷಣ, ಸಾಹಿತ್ಯ, ಸೇವೆ, ಆರೋಗ್ಯ ಮುಂತಾದ ಬಹುಮುಖೀ ಚಟುವಟಿಕೆಗಳಲ್ಲಿ ನಿರತವಾಗಿರುವ ರಾಜ್ಯದ ವಿಶಿಷ್ಟ ಸಾಮಾಜಿಕ ಸೇವಾ ಸಂಸ್ಥೆಯಾದ ರಾಷ್ಟ್ರೋತ್ಥಾನ ಪರಿಷತ್ ಇದೀಗ ಸೇವೆ-ಸಮಾಜಕಾರ್ಯದ 60 ಸಾರ್ಥಕ ಸಂವತ್ಸರಗಳನ್ನು ಪೂರೈಸುತ್ತಿದೆ.

1965ರ ಫೆಬ್ರವರಿಯಲ್ಲಿ ಬೆಂಗಳೂರಿನ ಸೌತ್‌ಎಂಡ್ ರಸ್ತೆಯ ಬಾಡಿಗೆ ಕಟ್ಟಡವೊಂದರಲ್ಲಿ ಸೇವಾಸಂಸ್ಥೆಯ ರೂಪದಲ್ಲಿ ಕಾರ್ಯಾರಂಭ ಮಾಡಿದ ರಾಷ್ಟ್ರೋತ್ಥಾನಕ್ಕೆ ಇದೀಗ 60 ವರ್ಷಗಳನ್ನು ಪೂರೈಸಿದೆ. ಇಂದು ರಾಜ್ಯದೆಲ್ಲೆಡೆ ಸಮಾಜದ ವಿವಿಧ ವಲಯಗಳಲ್ಲಿ ಕಾರ್ಯಪ್ರವೃತ್ತವಾಗಿದ್ದು ಸಮಾಜ ಪರಿವರ್ತನೆಗೆ ಮಹತ್ವದ ಕೊಡುಗೆ ನೀಡುತ್ತಿದೆ. ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ 'ರಾಷ್ಟ್ರೋತ್ಥಾನ ಪರಿಷತ್'ಗೆ ಬೀಜವನ್ನು ಬಿತ್ತಿದವರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕದ ಜ್ಯೇಷ್ಠ ಪ್ರಚಾರಕರಾಗಿದ್ದ ಸ್ವ. ಯಾದವರಾವ್ ಜೋಷಿ, ಹೊ.ವೆ. ಶೇಷಾದ್ರಿ, ನಂ. ಮಾಧವರಾವ್, ಎಂ. ಗೋವಿಂದರಾವ್, ಅರಕಲಿ ನಾರಾಯಣ್ ಮುಂತಾದವರು. ಮೈ.ಚ. ಜಯದೇವ್‌ಅವರು ಸಂಸ್ಥೆಯ ಪ್ರಾರಂಭದಿಂದ ಹಿಡಿದು ತಮ್ಮ ಜೀವಿತ ಕಾಲದವರೆಗೆ ಸಂಸ್ಥೆಯ ದಿಕ್ಕು-ದೆಸೆಗಳನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರವಹಿಸಿದರು.

### ದೃಷ್ಟಿ-ಧ್ಯೇಯ

"ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ ಎಂದು ಕಾಯುತ್ತಾ ಕೂರದೇ ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಬೇಕು"ಎಂದು ಆರೆಸ್ಸೆಸ್ ಜ್ಯೇಷ್ಠ ಪ್ರಚಾರಕರಾಗಿದ್ದ ಯಾದವರಾವ್‌ಜೋಷಿಯವರು ಹೇಳುತ್ತಿದ್ದರು. ಅದರಂತೆ ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ ಚರೈವೇತಿ-ಚರೈವೇತಿ ಎಂದು ದೃಢವಾದ ಹೆಜ್ಜೆಗಳನ್ನಿಡುತ್ತಾ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ – ಎನ್ನುತ್ತಾರೆ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಹೆಗ್ಡೆ.

ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಜಾಗೃತಿ, ಸೇವಾ ಚಟುವಟಿಕೆಗಳ ಮೂಲಕ ರಾಷ್ಟ್ರೋತ್ಥಾನ ಪರಿಷತ್ ಕಾರ್ಯೋನ್ಮುಖವಾಗಿದೆ. ರಾಷ್ಟ್ರೋತ್ಥಾನ ಪರಿಷತ್‌ನ ಸೇವಾ ಚಟುವಟಿಕೆಗಳು ರಾಜ್ಯದ ಲಕ್ಷಾಂತರ ಮಂದಿಗೆ ತಲುಪಿದೆ. ಮಾನವ ಸೇವೆಯನ್ನುಆದರ ಅತ್ಯುತ್ತಮ ಅರ್ಥದಲ್ಲಿ ಮಾಡುವುದು ಹಾಗೂ ಭಾರತೀಯ ಚಿಂತನೆಗಳ ಆಧಾರದ ಮೇಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪುನರುತ್ಥಾನ, ಗ್ರಾಮೀಣಾಭಿವೃದ್ಧಿಯ ಮೂಲಕ ಸಮರಸಸಮಾಜ ನಿರ್ಮಾಣ-ಇದರದೃಷ್ಟಿ-ಧ್ಯೇಯ.

### ಕಾರ್ಯಚಟುವಟಿಕೆಗಳು

**ಸೇವಾವಸತಿ:** ಶಿಕ್ಷಣ, ಆರೋಗ್ಯ, ಸ್ವಾವಲಂಬನೆ, ಸಂಸ್ಕಾರ ಈ ನಾಲ್ಕು ಆಯಾಮಗಳಲ್ಲಿ ಸೇವಾವಸತಿ (ಸೇವಾಬಸ್ತಿ/ಸ್ಲಂ)ಗಳಲ್ಲಿ ಸೇವಾ ಚಟುವಟಿಕೆಗಳು ನಡೆಯುತ್ತಿವೆ. 1989ರಲ್ಲಿ ಸ್ಲಂಗಳಲ್ಲಿ ಅನೌಪಚಾರಿಕ ಶಿಕ್ಷಣ ನೀಡುವ ಉದ್ದೇಶದಿಂದ ಸೇವಾ ವಸತಿ ಪ್ರಕಲ್ಪವು ಪ್ರಾರಂಭಗೊಂಡಿತು. ನಿರಂತರ ಸೇವಾ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು-ಮಹಿಳೆಯರು, ಯುವಕ-ಯುವತಿಯರಿಗೆ ಈ ಯೋಜನೆ ಅಪಾರ ಪ್ರಮಾಣದಲ್ಲಿ ನೆರವಾಗಿದ್ದು, ಸಾವಿರಾರು ಕುಟುಂಬಗಳ ಸರ್ವತೋಮುಖ ಪ್ರಗತಿಗೆ ಕಾರಣವಾಗಿದೆ. ಪ್ರಸ್ತುತ ಬೆಂಗಳೂರಿನ 210 ಸ್ಲಂ(ಸೇವಾವಸತಿ)ಗಳಲ್ಲಿ ವ್ಯಾಸಂಗಕೇಂದ್ರ, ಶಿಶುಮಂದಿರ, ಬಾಲಗೋಕುಲ, ಅನೌಪಚಾರಿಕ ಶಿಕ್ಷಣ ಕೇಂದ್ರ, ಜೋಳಿಗೆ ಪುಸ್ತಕಾಲಯ, ಸ್ವ-ಸಹಾಯ ಸಂಘ ಇತ್ಯಾದಿ ಆಯಾಮಗಳಲ್ಲಿ 685 ವಿವಿಧ ಸೇವಾಚಟುವಟಿಕೆಗಳು ನಡೆಯುತ್ತಿವೆ.

### ರಾಷ್ಟ್ರೋತ್ಥಾನ ರಕ್ತಕೇಂದ್ರ

1993ರ ಮೇ 30ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ರಕ್ತ ಕೇಂದ್ರವು ಅಹರ್ನಿಶಿಯಾಗಿ 24X7 ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತ್ಯುತ್ತಮ ರಕ್ತನಿಧಿ ಎಂಬ ಪ್ರಮಾಣ ಪತ್ರವನ್ನು ಪಡೆದಿದೆ. ವಿವಿಧ ಸಂಘ-ಸಂಸ್ಥೆಗಳ ನೆರವಿನೊಂದಿಗೆ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಾ, ರಕ್ತದ ತುರ್ತು ಅಗತ್ಯವಿರುವವರಿಗೆ ಸಮಯಕ್ಕೆ ಸರಿಯಾಗಿ ಗುಣಮಟ್ಟದ ರಕ್ತ ಪೂರೈಸುವ ದೃಷ್ಟಿಯಿಂದ ಕಾರ್ಯಪ್ರವೃತ್ತವಾಗಿದೆ. ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ಈವರೆಗೆ 4 ಲಕ್ಷ ಮಂದಿ ಪ್ರಯೋಜನ ಪಡೆದಿದ್ದಾರೆ. 6,000ಕ್ಕೂ ಅಧಿಕ ರಕ್ತದಾನ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಿ 11 ಲಕ್ಷ ಮಂದಿ ರಕ್ತದಾನಿಗಳಿಂದ 5 ಲಕ್ಷ ಯೂನಿಟ್ ರಕ್ತ ಸಂಗ್ರಹಿಸಿದೆ.

### ರಾಷ್ಟ್ರೋತ್ಥಾನ ಆಸ್ಪತ್ರೆ

2022 ಡಿಸೆಂಬರ್‌ನಲ್ಲಿ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ವೃತ್ತಿಪರ ಗುಣಮಟ್ಟದ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ'ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸಿದೆ. ಆಸ್ಪತ್ರೆಯು ಒಂದೇ ಸೂರಿನಡಿ ಆಧುನಿಕ ವೈದ್ಯಪದ್ಧತಿ(ಅಲೋಪತಿ), ಆಯುರ್ವೇದ, ಹೋಮಿಯೋಪತಿ, ಯೋಗ, ನ್ಯಾಚುರೋಪತಿ ಮೊದಲಾದ ಚಿಕಿತ್ಸಾ ಸೌಲಭ್ಯಗಳನ್ನು ಒಳಗೊಂಡಿರುವ ಒಂದು 'ಸಮಗ್ರ ಚಿಕಿತ್ಸೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ'ಯಾಗಿ ಸೇವೆ ಸಲ್ಲಿಸಲಿದೆ.



### ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

1972ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಆರೋಗ್ಯಪೂರ್ಣ ಜೀವನ ಶೈಲಿಯ ಮೂಲಕ ಸ್ವಸ್ಥ ಸಮಾಜ ನಿರ್ಮಾಣದ ಆಶಯದೊಂದಿಗೆ ಹತ್ತಾರು ಕಡೆಗಳಲ್ಲಿ ಯೋಗ ಕೇಂದ್ರಗಳನ್ನು ಹೊಂದಿದೆ. ಅಂತರಾಷ್ಟ್ರೀಯ ಯೋಗ ದಿನಾಚರಣೆ, ಆನ್ ಲೈನ್ ಯೋಗ ತರಗತಿಗಳು, ಉಪನ್ಯಾಸ ಸರಣಿ ಕಾರ್ಯಕ್ರಮಗಳು, ಫಿಟ್ನೆಸ್ ಸೆಂಟರ್, ನೃತ್ಯ-ಸಂಗೀತ ಕೇಂದ್ರ, ಕರಾಟೆ ತರಗತಿಗಳು, ಅಂಗಮರ್ದನ ಚಿಕಿತ್ಸೆ, ಉಗಿಸ್ನಾನ ಚಿಕಿತ್ಸಾ ಕೇಂದ್ರ ಸೇರಿದಂತೆ ಅನೇಕ ಪೂರಕ ಚಟುವಟಿಕೆಗಳು ನಡೆಯುತ್ತಿವೆ.

### ರಾಷ್ಟ್ರೋತ್ಥಾನ ಗೋಶಾಲೆ

ಭಾರತೀಯ ದೇಸಿ ಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಉದ್ದೇಶದೊಂದಿಗೆ ದೊಡ್ಡಬಳ್ಳಾಪುರದ ಸಮೀಪದ ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವಸೃಷ್ಟಿ'ಯಲ್ಲಿ ರಾಷ್ಟ್ರೋತ್ಥಾನ ಗೋಶಾಲೆ ಕಾರ್ಯನಿರ್ವಹಿಸುತ್ತಿದೆ. ಗಿರ್, ಸಾಹಿವಾಲ್, ಒಂಗೋಲ್, ಅಮೃತಮಹಲ್, ಮಲೆನಾಡುಗಿಡ್ಡ ಸೇರಿದಂತೆ 700ಕ್ಕೂ ಹೆಚ್ಚು ಗೋವುಗಳಿಗೆ ಆಶ್ರಯತಾಣವಾಗಿದೆ. ಗೋಶಾಲೆ ಪರಿಸರದಲ್ಲಿ ಕಾಡನ್ನು ಬೆಳೆಸುವ 'ವೃಂದಾವನ', 'ಸಸಿನೆಡು' ಯೋಜನೆಗಳ ಮೂಲಕ ಗಿಡ ನೆಟ್ಟು ಅರಣ್ಯಾಭಿವೃದ್ಧಿ ಮಾಡುವ ಯೋಜನೆ 2018ರಿಂದ ಪ್ರಾರಂಭವಾಗಿದ್ದು ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

### ರಾಷ್ಟ್ರೋತ್ಥಾನದ ಶೈಕ್ಷಣಿಕ ಸಂಸ್ಥೆಗಳು

1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಶೈಕ್ಷಣಿಕ ಚಟುವಟಿಕೆಗಳು ಇಂದು20 ಶಿಶುಮಂದಿರಗಳು, 9 ರಾಜ್ಯ ಪಠ್ಯಕ್ರಮ ಶಾಲೆಗಳು ಹಾಗೂ 17 ಕೇಂದ್ರ ಪಠ್ಯಕ್ರಮ(ಸಿಬಿಎಸ್‌ಸಿ) ಶಾಲೆಗಳು, 3 ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡುತ್ತಿದೆ. ಪ್ರಸ್ತುತ 25,000 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಪಿ.ಯು ಶಿಕ್ಷಣದೊಂದಿಗೆ ಐಐಟಿ ಸೇರಿದಂತೆ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ತರಬೇತಿ ನೀಡುವ ಉದ್ದೇಶದಿಂದ ಬಾಲಕರಿಗಾಗಿ 'ತಪಸ್' ಹಾಗೂ ಬಾಲಕೀಯರಿಗಾಗಿ 'ಸಾಧನಾ' ಎಂಬ ವಿಶಿಷ್ಟ ಶೈಕ್ಷಣಿಕ ಯೋಜನೆಗಳನ್ನು ನಡೆಸಲಾಗುತ್ತಿದೆ. ತಪಸ್‌ನ ವಿದ್ಯಾರ್ಥಿಗಳಿಗೆ ಐಐಟಿ-ಜೆಇಇ ಪರೀಕ್ಷೆ ತರಬೇತಿ ಹಾಗೂ 'ಸಾಧನಾ'ದ ವಿದ್ಯಾರ್ಥಿಗಳಿಗೆ ನೀಟ್/ಸಿಇಟಿ ತರಬೇತಿ ನೀಡಲಾಗುತ್ತಿದೆ. ಈವರೆಗೆ 525 ಮಂದಿ ಹುಡುಗರು ಹಾಗೂ 495 ಮಂದಿ ಹುಡುಗಿಯರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

### ರಾಷ್ಟ್ರೋತ್ಥಾನ ಸಾಹಿತ್ಯ

1965ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟಣೆಗಳ ಪ್ರಮುಖ ಉದ್ದೇಶ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವುದು, ಸಾಮಾಜಿಕ ಚಿಂತನ ಪ್ರಧಾನವಾದ ಗ್ರಂಥಗಳನ್ನು ಪ್ರಕಟಿಸುವುದು. ಹಾಗೆಯೇ ಮೂಲ ಕನ್ನಡ ಕೃತಿಗಳ ಜೊತೆಗೆ ಇತರ ಭಾಷೆಗಳಿಂದಲೂ ಉತ್ತಮರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದದ ಮೂಲಕ ತರುವುದು. ಈ ದಿಶೆಯಲ್ಲಿ ಇದುವರೆಗೆ ಪ್ರಕಟವಾದ ಒಟ್ಟು ಪುಸ್ತಕಗಳ ಸಂಖ್ಯೆ320ಕ್ಕೂ ಹೆಚ್ಚು. 'ಭಾರತ-ಭಾರತಿ ಪುಸ್ತಕ ಸಂಪದ'ದ ಮೂಲಕ 610ಕನ್ನಡ ಹಾಗೂ 225 ಇಂಗ್ಲೀಷ್ ಪುಸ್ತಕಗಳು ಪ್ರಕಟವಾಗಿದೆ.

### ಗೀತಾ ಭಾರತಿ

1982ರಲ್ಲಿ ಪ್ರಾರಂಭಗೊಂಡ 'ಗೀತಾಭಾರತಿ' ಯೋಜನೆಯ ಮೂಲಕ ನೂರಾರು ಹಾಡುಗಳು ಧ್ವನಿಮುದ್ರಿಕೆಗಳ ಮೂಲಕ ಲಕ್ಷಾಂತರ ಕೇಳುಗರಿಗೆ ತಲುಪಿದೆ.

### ರಾಷ್ಟ್ರೋತ್ಥಾನ ಮುದ್ರಣಾಲಯ

1967ರ ಮೇ 29ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಮುದ್ರಣಾಲಯವು ಅತ್ಯುತ್ತಮ ಮುದ್ರಣ ತಂತ್ರಜ್ಞಾನ ಹೊಂದಿದ್ದು, ಇಂದು ರಾಜ್ಯದ ಅತ್ಯುತ್ತಮ ಮುದ್ರಣಾಲಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

### ಉತ್ಥಾನ

1965ರ ವಿಜಯದಶಮಿಯಂದು ಪ್ರಾರಂಭಗೊಂಡ ಉತ್ಥಾನ ಮಾಸಪತ್ರಿಕೆಯು ತನ್ನದೇ ಆದ ಓದುಗರ ಬಳಗವನ್ನು ಹೊಂದಿದ್ದು, ರಾಜ್ಯದ ಸದಭಿರುಚಿಯ ವಿಶಿಷ್ಟ ಮಾಸಪತ್ರಿಕೆ ಎಂಬ ಮನ್ನಣೆಗೆ ಪಾತ್ರವಾಗಿದೆ.

### ಕೋವಿಡ್ ಸೇವಾ ಚಟುವಟಿಕೆಗಳು

ಕೋವಿಡ್ ಸಂಕಷ್ಟದ ಸಂದರ್ಭದಲ್ಲಿರಾಷ್ಟ್ರೋತ್ಥಾನ ಪರಿಷತ್ ಕಡೆಯಿಂದ ವಿವಿಧ ಪ್ರಕಾರದ ಸೇವಾ ಚಟುವಟಿಕೆಗಳು ನಡೆಯಿತು.

### ರಾಷ್ಟ್ರೋತ್ಥಾನ ಬಳಗ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನ ಮನಸ್ಕರು ಸೇರಿ ಸಮಗ್ರ ಸಮಾಜ ಪರಿವರ್ತನೆಗಾಗಿ ಶ್ರಮಿಸಲು ರೂಪಿಸಿರುವ ವೇದಿಕೆ, ರಾಷ್ಟ್ರೋತ್ಥಾನ ಬಳಗ. ವಿವಿಧಜಿಲ್ಲೆ ಹಾಗೂ ತಾಲೂಕುಗಳಲ್ಲಿ ರಾಷ್ಟ್ರೋತ್ಥಾನ ಬಳಗ ಘಟಕಗಳು ಸಕ್ರಿಯವಾಗಿದೆ. ಪ್ರಶಿಕ್ಷಣ ಭಾರತಿ ಎಂಬ ಪ್ರಕಲ್ಪದ ಮೂಲಕ ರಾಜ್ಯದೆಲ್ಲೆಡೆಯ ನೂರಾರು ಶಿಕ್ಷಕರಿಗೆ ತರಬೇತಿ ಮಾರ್ಗದರ್ಶನ ಮಾಡುತ್ತಿದೆ. ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಕಚೇರಿ ಇರುವ ಬೆಂಗಳೂರಿನ ಕೇಶವಶಿಲ್ಪ ಕಟ್ಟಡಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. 1942ರಲ್ಲಿ ಸ್ವಾತಂತ್ರ್ಯವೀರ ಸಾವರ್ಕರ್‌ರವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಇದೇ ಕಟ್ಟಡದಲ್ಲಿ ತಂಗಿದ್ದರು. ಸಮಾಜ ಪರಿವರ್ತನೆಯ 60 ವಸಂತಗಳನ್ನು ಪೂರೈಸಿರುವ ರಾಷ್ಟ್ರೋತ್ಥಾನ ಪರಿಷತ್‌ಗೆ ಶುಭವನ್ನು ಹಾರೈಸುತ್ತಾ ತನ್ನ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣ ಮಾಡುವಗುರಿಯನ್ನು ಸೇರಲೆಂದು ಆಶಿಸೋಣ.

ಸಂಪರ್ಕಕ್ಕಾಗಿ: www.rashtrotthana.org

## ಭಗವಂತನಿರುವ ತಾಣ

ವದನಾನಿ ಪ್ರಸನ್ನಾನಿ ಸ್ನಿಗ್ಧಾನ್ಯಕ್ಷೀಣಿ ಯತ್ರ ಚ ।
ಪ್ರೀಯಂತೇ ಬಾಂಧವಾ ಯತ್ರ ತತ್ರೈವ ರಮತೇ ಹರಿಃ ॥
ವಾರಾಂಗನಾ ಚಾಪ್ರಿಯವಾದೀನೀ ಚ
ನ ತೇ ಚ ಕರ್ಮಾಣಿ ಸಮಾರಂಭತೇ ॥

ಮುಖದಲ್ಲಿ ಸಂತಸ, ಕಣ್ಣಿನಲ್ಲಿ ಸ್ನೇಹ, ಸಂತಸ ಪಡುವ ಬಾಂಧವರು ಇರುವಲ್ಲಿ ಶ್ರೀಮನ್ನಾರಾಯಣನೂ ಇರುತ್ತಾನೆ – ಎಂಬುದು ಶ್ಲೋಕಾರ್ಥ.




ಭಗವಂತ ಎಲ್ಲೆಡೆ ಇದ್ದಾನೆ. ಅವನಿಲ್ಲದ ತಾಣವಿಲ್ಲ. ಅಣುರೇಣು ತೃಣಕಾಷ್ಠಗಳಲ್ಲೂ ಭಗವಂತನಿದ್ದಾನೆ. ಅವನಿಲ್ಲದೇ ಅಥವಾ ಅವನ ಪ್ರೇರಣೆಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡದು. ಇದನ್ನೇ 'ತೇನ ವಿನಾ ತೃಣಮಪಿ ನ ಚಲತಿ' ಎಂಬ ಸೂಕ್ತಿ ಪ್ರತಿನಿಧಿಸುತ್ತದೆ. ಎಲ್ಲೆಡೆಯಲ್ಲೂ ದೇವರಿದ್ದರೆ ಗುಡಿಗೆ ಹೋಗಿ ನಮಸ್ಕರಿಸುವುದೇಕೆ? ಎಂಬ ಪ್ರಶ್ನೆ ಮೂಡಬಹುದು. ಎಲ್ಲೆಂದರಲ್ಲಿ ದೇವರಿಗೆ ಕೈಮುಗಿಯು ವುದು, ನಮಸ್ಕರಿಸುವುದು ಸಾಧುವಲ್ಲ; ಸಾಧ್ಯವೂ ಅಲ್ಲ. ನಮ್ಮೆಲ್ಲ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕೆ ಕೃತಜ್ಞತೆಯನ್ನು ನಿವೇದಿಸಿಕೊಳ್ಳುವುದಕ್ಕೆ ದೇವಸ್ಥಾನದಂತಹ ಪ್ರಶಸ್ತ ಸ್ಥಳ ಬೇಕಾಗುತ್ತದೆ. ಪವಿತ್ರ ಸ್ಥಳ ಇರಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ದೇವಸ್ಥಾನದ ಪರಿಕಲ್ಪನೆ ಬಂದಿರುವುದು.

ಎಲ್ಲ ಕಡೆಗಳಲ್ಲೂ ದೇವರಿರುವುದು ಸತ್ಯವಾದರೂ, ಎಲ್ಲರಲ್ಲಿಯೂ ಪರಮಾತ್ಮ ನೆಲೆಸಿರುವುದು ಸತ್ಯವಾದರೂ ವಿಶೇಷವಾಗಿ ಎಲ್ಲಿದ್ದಾನೆ ಎಂಬುದನ್ನು ಪ್ರಕೃತ ಸುಭಾಷಿತ ವಿವರಿಸುತ್ತದೆ.

ಯಾರ ಮುಖದಲ್ಲಿ ಪ್ರಸನ್ನತೆಯಿದೆಯೋ, ಯಾರು ಎಲ್ಲರನ್ನೂ ಪ್ರೀತಿಯಿಂದ ಕರೆದು ಉಪಚರಿಸುತ್ತಾರೋ, ಪ್ರೀತಿ, ಸೌಹಾರ್ದ ಹಾಗೂ ನಗುಮೊಗದಿಂದ ಸತ್ಕರಿಸುತ್ತಾರೋ ಅಲ್ಲಿ ಶ್ರೀಮನ್ನಾರಾಯಣ ಯಾವಾಗಲೂ ನೆಲೆಸಿರುತ್ತಾನೆ.

ಯಾರ ಕಣ್ಣಲ್ಲಿ ನಿರ್ವ್ಯಾಜವಾದ ಸ್ನೇಹ ಕಾಣಿಸುತ್ತದೆಯೋ ಅಲ್ಲಿ ಭಗವಂತ ಬಂದು ನೆಲೆ ನಿಲ್ಲುತ್ತಾನೆ. ಜಗತ್ತಿನಲ್ಲಿ, ಜೀವನದಲ್ಲಿ ಸ್ನೇಹಕ್ಕಿಂತ ಹಿರಿದಾದುದಿಲ್ಲ. ಸ್ನೇಹಪೂರ್ಣ ದೃಷ್ಟಿಯೇ ನಮ್ಮನ್ನು ತೊಂದರೆಯಿಂದ ದೂರ ಮಾಡುತ್ತದೆ. ಸಂತಸವನ್ನೀಯುತ್ತದೆ. 'ಸ್ನೇಹೇ ಚ ಬಂಧುಃ ನ ಕದಾಪಿ ದೂರಃ' ಅಂದರೆ ಸ್ನೇಹವಿದ್ದರೆ ಸ್ನೇಹಿತರು ದೂರವಿದ್ದರೂ ದೂರವಲ್ಲ ಎಂಬುದು ಕಥನದ ಆಶಯವಾದರೆ ಸ್ನೇಹ, ಭಕ್ತಿ ಮತ್ತು ತನ್ನತನವಿರುವಲ್ಲಿ ಗುಣಗಳಿರುತ್ತವೆ ಎಂಬುದನ್ನು ಸ್ನೇಹೋ ಭಕ್ತಿಃ ಸ್ವತಾಚೈವ ಯತ್ರ ಸ್ಯುಃ ತತ್ರ ವೈ ಗುಣಾ ಎಂಬ ಸೂಕ್ತಿಯು ತಿಳಿಸುತ್ತದೆ. ಕಣ್ಣಂಚಿನ ಸ್ನೇಹದಲ್ಲಿ ಎಲ್ಲ ಒಳಿತೂ ಸಾಂದ್ರವಾಗಿರುತ್ತದೆ. ದೇವರು ಇಲ್ಲಲ್ಲದೇ ಇನ್ನೆಲ್ಲಿ ನೆಲೆನಿಂತಾನು?

ಇವುಗಳ ಜತೆಗೆ ಸಂತಸ ಪಡುವ ಬಂಧು ಬಾಂಧವರು ಇದ್ದರಂತೂ ಬೇರೇನೂ ಹೇಳಬೇಕಿಲ್ಲ. ಅದು ಯಾವಾಗಲೂ ಭಗವಂತನು ನೆಲೆಸುವ ತಾಣವಾಗುತ್ತದೆ.

ಈ ಕಾರಣಕ್ಕಾಗಿಯೇ ಮನುಷ್ಯನು ಸದ್ಗುಣಗಳ ಗಣಿಯಾಗಬೇಕು. ಯಾವಾಗಲೂ ಸಂತಸದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು. ಎಲ್ಲರನ್ನೂ ಸ್ನೇಹದಿಂದ ಕಾಣುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಉದಾರ ಚಿಂತನೆಯನ್ನು ಬೆಳೆಸಿಕೊಂಡು ಎಲ್ಲರೂ ತನ್ನ ಬಾಂಧವರು ಎಂಬ ಮಾನಸಿಕತೆಯನ್ನೂ ಬೆಳೆಸಿಕೊಳ್ಳಬೇಕು.

# ಎಐಗೆ ನೈತಿಕ ಚೌಕಟ್ಟು: ಭಾರತದ ಹೆಜ್ಜೆ

▸ ರಾಮ್ ಮಾಧವ್

ಕೆಲವೊಮ್ಮೆ ಒಂದು ದಶಕದಲ್ಲಿ ಆಗುವಂತಹುದು ಒಂದೇ ವಾರದಲ್ಲಿ ಸಂಭವಿಸುತ್ತದೆ ಎಂಬುದಾಗಿ ಲೆನಿನ್ ಹಿಂದೊಮ್ಮೆ ಹೇಳಿದ್ದ. ಕ್ರಾಂತಿಕಾರಿ ಬದಲಾವಣೆಗಳು ಕ್ಷಿಪ್ರವಾಗಿ ಹಾಗೂ ಅತ್ಯಂತ ವೇಗವಾಗಿ ಉಂಟಾಗುತ್ತವೆ. ಇತ್ತೀಚಿನ ಜಾಗತಿಕ ಕೃತಕ ಬುದ್ಧಿಮತ್ತೆ (AI) ಸಮ್ಮೇಳನದಲ್ಲಿ ಪ್ರಧಾನಿ ಮೋದಿಯವರು ಕೂಡಾ "ಜಗತ್ತಿನಲ್ಲಿ ಈಗ AI ಅತ್ಯಂತ ವೇಗದ ಬದಲಾವಣೆಗಳನ್ನು ತರುತ್ತಿದೆ" ಎಂದು ನುಡಿದರು. ಮಾನವ ಇತಿಹಾಸದಲ್ಲಿ ಇದೊಂದು ಮಹತ್ವದ ತಿರುವು ಎಂದು ಹೇಳಿದ ಅವರು ನಾಗರಿಕತೆಯ ಗತಿಯನ್ನೇ ಬದಲಿಸಿಬಿಡಬಲ್ಲ ಸಾಮರ್ಥ್ಯ AI ಹೊಂದಿರುವುದಾಗಿ ನುಡಿದರು. ಆದರೆ ಭವಿಷ್ಯದ ಪೀಳಿಗೆಗೆ ನಾವು ಎಂತಹ ಸ್ವರೂಪದ AIಯನ್ನು ನೀಡಬೇಕು ಎಂಬ ಕುರಿತಂತೆ ಆಲೋಚಿಸಬೇಕಾಗಿದೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು. AI ಯಂತ್ರ ಕೇಂದ್ರಿತ ಆಗುವ ಬದಲಿಗೆ ಅದನ್ನು ಮಾನವಕೇಂದ್ರಿತವನ್ನಾಗಿ ಮಾಡುವುದು ಹೇಗೆ? ಅದು ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಮಾಡುವುದು ಹೇಗೆ ಎಂಬ ಕುರಿತು ಚಿಂತಿಸುವುದೆ AI ಸಮ್ಮೇಳನದ ಉದ್ದೇಶವಾಗಿತ್ತೆಂದು ಅವರು ತಿಳಿಸಿದರು.

ಇವು ಅತ್ಯಂತ ಮಹತ್ವದ ಪ್ರಶ್ನೆಗಳು. AI ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ನಿಶ್ಚಿತವಾಗಿದೆ. ಆದರೆ ನಮ್ಮ ಅಸ್ತಿತ್ವವನ್ನು ಭಂಗಿಸದ ರೀತಿಯಲ್ಲಿ ಅದನ್ನು ರೂಪಿಸಬೇಕಾಗಿದೆ. ಜತೆಗೇ ಅದು ಪ್ರಜಾತಾಂತ್ರಿಕ ಸ್ವರೂಪದಲ್ಲೂ ಇರಬೇಕಾಗಿದೆ.ಯಾವುದೇ ಪರಿಣತ ಟ್ರೈನರ್ ಅಥವಾ ಒಂದು ತಂಡವು AI ಅಲ್ಗಾರಿಥಮ್‌ನ್ನು ರಚಿಸಬಲ್ಲುದು ಹಾಗೂ ಅದಕ್ಕೆ ಪೂರಕವಾಗಿ ಉತ್ಪನ್ನಗಳನ್ನು ಅಥವಾ ಅಪ್ಲಿಕೇಶನ್‌ಗಳನ್ನು ರಚಿಸಬಲ್ಲುದು. ಇವು ನಮ್ಮ ಖಾಸಗಿ ಹಿತಾಸಕ್ತಿಗಳನ್ನು ಮತ್ತು ಸಾಮಾಜಿಕ ಸಂಬಂಧಗಳನ್ನು ಪ್ರಭಾವಿಸಬಲ್ಲುದು. ಮನುಷ್ಯನ ಸಾಮರ್ಥ್ಯವನ್ನು ಅನೂಹ್ಯ ಮಟ್ಟಕ್ಕೆ ಏರಿಸಬಲ್ಲುದು. ನಮ್ಮ ಕಾರ್ಯಗಳನ್ನು ಅತ್ಯಂತ ಪರಿಪೂರ್ಣವಾಗಿ ಮತ್ತು ಅತ್ಯಂತ ವೇಗವಾಗಿ ಮಾಡಬಲ್ಲುದು.

315000 ವರ್ಷಗಳ ಹಿಂದೆ ಆಫ್ರಿಕಾದಲ್ಲಿ ತನ್ನ ಪಯಣವನ್ನು ಆರಂಭಿಸಿದ ಹೋಮೋ ಸೇಪಿಯನ್ಸ್ ಮುಂದಿನ ದಿನಗಳಲ್ಲಿ ಹೊಸ ಬಗೆಯ ಸಂತತಿಯೊಂದರ ಅಂದರೆ ಮೆಟಾಹ್ಯೂಮನ್‌ಗಳ ಹುಟ್ಟಿಗೆ ಸಾಕ್ಷಿಯಾಗಲಿದೆ. AI ಮತ್ತು ಜೆನೆಟಿಕ್ ಮಿಲನದಿಂದ ಆವಿಷ್ಕರಿಸಲ್ಪಡುವ ಸೂಪರ್ ಹ್ಯೂಮನ್‌ಗಳು ಮುಂದಿನ ಭವಿಷ್ಯದಲ್ಲಿ ಮನುಷ್ಯನ ಪಾಲಿಗೆ ಮಾರಕವಾಗಿ ಪರಿಣಮಿಸಬಹುದು ಎಂಬುದಾಗಿ ಕೆಲವು ಪರಿಣತರು ಎಚ್ಚರಿಕೆ ನೀಡುತ್ತಿದ್ದಾರೆ. 2023ರಲ್ಲಿ 350ಕ್ಕೂ ಅಧಿಕ AI ಪರಿಣತರು ಮತ್ತು ಎಕ್ಸಿಕ್ಯೂಟಿವ್‌ಗಳು ಸಭೆ ಸೇರಿ ನಿಯಂತ್ರಣವಿಲ್ಲದ AI ಅಪಾಯಕಾರಿಯಾಗುವುದರ ಕುರಿತಂತೆ ಸರಕಾರಗಳು ಎಚ್ಚರಿಕೆ ವಹಿಸಬೇಕೆಂದು ಹೇಳುವ ಹೇಳಿಕೆಯೊಂದಕ್ಕೆ ಸಹಿ ಹಾಕಿದ್ದರು. ಭವಿಷ್ಯದ ಮನುಷ್ಯ AI ಯಿಂದ ಅಪಾಯ ಎದುರಿಸಲಿದ್ದಾನೆ ಎಂಬುದು ಅವರ ಎಚ್ಚರಿಕೆಯಾಗಿದೆ. ಈ ರೀತಿ ಸಹಿ ಹಾಕಿದವರಲ್ಲಿ 'ಓಪನ್ AI' ಮುಖ್ಯಸ್ಥ ಕೂಡಾ ಸೇರಿದ್ದರು.

AI ಯ ನೂತನ ಯುಗವು ಸಮಾಜವನ್ನು 'ತಂತ್ರಜ್ಞಾನ ಹೊಂದಿದವರು' ಮತ್ತು 'ತಂತ್ರಜ್ಞಾನ ರಹಿತರು' ಎಂಬ ವಿಭಜನೆಗೂ ಕಾರಣವಾದೀತು. ಕಂಪೆನಿಗಳ ಕೆಲಸಗಳನ್ನು AI ತಂತ್ರಜ್ಞಾನಕ್ಕೆ ಒಪ್ಪಿಸುವ ಮೂಲಕ ಉದ್ಯಮಗಳಲ್ಲಿ ಅರ್ಧಕ್ಕೂ ಹೆಚ್ಚು ಉದ್ಯೋಗ ಕಡಿತವಾದೀತು. ಸೆಕ್ರೆಟರಿಗಳು, ಸಹಾಯಕರು, ಕಾಲ್ ಸೆಂಟರ್ ಉದ್ಯೋಗಿಗಳು ಮುಂತಾದ ಕಡಿಮೆ ಪರಿಣತ ಉದ್ಯೋಗಗಳನ್ನೆಲ್ಲಾ AI ಸ್ಥಳಾಂತರಿಸಬಹುದು. 2023ರಿಂದ 2028ರ ಅವಧಿಯಲ್ಲಿ ಶೇ. 44ರಷ್ಟು ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬುದಾಗಿ ಅಂದಾಜಿಸಲಾಗಿದೆ. ಇವರಲ್ಲಿ ಬಹುತೇಕವಾಗಿ ಕೆಲಸ ಕಳೆದುಕೊಳ್ಳುವವರು ಮಹಿಳೆಯರು.

ಸೃಷ್ಟಿಶೀಲ(ಜನರೇಟಿವ್) AI ಯಿಂದ ಉಂಟಾಗುವ ಇನ್ನು ಕೆಲವು ಅಪಾಯಗಳೆಂದರೆ ಮಾಹಿತಿ ರಹಸ್ಯ ಸೋರಿಕೆ, ಡೀಪ್ ಫೇಕ್‌ಗಳ ಪ್ರಸರಣ ಮತ್ತು ಸುಳ್ಳು ಸುದ್ದಿಗಳ ಪ್ರಸಾರ. ಇವೆಲ್ಲ ಸತ್ಯ ಯಾವುದು, ಸುಳ್ಳು ಯಾವುದು ಎಂಬುದರ ನಡುವಿನ ವ್ಯತ್ಯಾಸ ತಿಳಿಯಲಾಗದಷ್ಟು ಸೂಕ್ಷ್ಮವಾಗಿದೆ. ಅತ್ಯಂತ ದೊಡ್ಡ ಸವಾಲು ಒದಗಿ ಬರುವುದು ಎಐ ನಿಯಂತ್ರಿತ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾ ವ್ಯವಸ್ಥೆಯಿಂದ. ಸ್ವತಂತ್ರ ಶಸ್ತ್ರಾಸ್ತ್ರ ವ್ಯವಸ್ಥೆಯು ಅತ್ಯಂತ ಮಾರಕವಾದುದಷ್ಟೇ ಅಲ್ಲದೆ ಅದು ಸೈನಿಕರು ಮತ್ತು ನಾಗರಿಕರ ನಡುವಿನ ವ್ಯತ್ಯಾಸವನ್ನು ತಿಳಿಯಲಾರದ್ದರಿಂದ ನಾಗರಿಕರ ನಾಶಕ್ಕೂ ಕಾರಣವಾಗಲಿದೆ. ಇಂತಹ AI ನಿಯಂತ್ರಿತ ಶಸ್ತ್ರಾಸ್ತ್ರಗಳು ಕೆಟ್ಟ ಜನರ ಕೈಗೆ ಸಿಕ್ಕಿದರೆ ಅದರ ಪರಿಣಾಮವನ್ನು ಊಹಿಸಲಸಾಧ್ಯ.

ನಾವೀಗ ನಕಲಿ ವ್ಯಕ್ತಿಗಳಿಂದ ಸುತ್ತುವರಿಯಲ್ಪಟ್ಟಿದ್ದೇವೆ. ಕೆಲವೊಮ್ಮೆ ನಮಗೆ ಅದು ತಿಳಿದಿರುತ್ತದೆ, ಕೆಲವೊಮ್ಮೆ ತಿಳಿದಿರುವುದಿಲ್ಲ ಎಂಬುದಾಗಿ ಪತ್ರಕರ್ತರೊಬ್ಬರು ಎಚ್ಚರಿಸಿದ್ದರು. ವೆಬ್‌ಸೈಟ್‌ಗಳಲ್ಲಿ ಗ್ರಾಹಕ ಸೇವೆ ಒದಗಿಸುವವರು, ವಿಡಿಯೋ ಗೇಮ್‌ಗಳಲ್ಲಿ ನಮ್ಮೊಂದಿಗೆ ಆಡುವವರು, ನಮ್ಮ ಸಾಮಾಜಿಕ ಮಾಧ್ಯಮಗಳ ಉಸ್ತುವಾರಿ ನಡೆಸುವವರು, ನಮ್ಮ ಶೇರು ಮಾರುಕಟ್ಟೆಯನ್ನು ನಿರ್ವಹಣೆ ಮಾಡುವವರು ಎಲ್ಲರೂ ನಿಜವಾದ ವ್ಯಕ್ತಿಗಳಲ್ಲ. ಅವರೆಲ್ಲ ವರ್ಚುವಲ್ ವ್ಯಕ್ತಿಗಳು. ಚಾಟ್ ಜಿಪಿಟಿ ಎಂಬ AI ಮೂಲಕ ನಕಲಿ ವ್ಯಕ್ತಿಗಳು ಪ್ರಬಂಧ ಬರೆಯಬಲ್ಲರು. ಪತ್ರಗಳನ್ನು ಬರೆಯಬಲ್ಲರು ಹಾಗೂ ನಮಗೆ ವರದಿ ಮಾಡಬಲ್ಲರು. ಇಂತಹ ನಕಲಿ ವ್ಯಕ್ತಿಗಳ ಕಾರ್ಯಾಚರಣೆ ಆರಂಭವಷ್ಟೇ ಎಂದು ಪರಿಣತರು ಹೇಳುತ್ತಾರೆ. ಭವಿಷ್ಯವು ಕೇವಲ AI ಯಲ್ಲ. ಅದಕ್ಕಿಂತಲೂ ಎಜಿಐ (ಸೃಷ್ಟಿಶೀಲ ಕೃತಕ ಬುದ್ಧಿಮತ್ತೆ) ಮಿಗಿಲಾದುದು. ಕಾರ್ಯವೆಸಗುವುದರಲ್ಲಿ ಸಾಮಾನ್ಯ ಮನುಷ್ಯನಿಗಿಂತ ಬಹಳಷ್ಟು ಪಾಲು ಶ್ರೇಷ್ಠವಾದುದು. ಎಜಿಐ ಮನುಷ್ಯನ ಹಸ್ತಕ್ಷೇಪವಿಲ್ಲದೆ ಕೋಡ್ ಮತ್ತು ಅಲ್ಗಾರಿಥಮ್‌ಗಳನ್ನು ತಾನೇ ಬರೆಯಬಲ್ಲುದು. ಕಂಪ್ಯೂಟಿಂಗ್ ತಂತ್ರಜ್ಞಾನದಲ್ಲೆ ಅದು ತನ್ನನ್ನು ತಾನೇ ಅಭಿವೃದ್ಧಿಪಡಿಸಿಕೊಳ್ಳಬಲ್ಲುದು. ಮುಂದೊಂದು ದಿನ ಮನುಷ್ಯನ ಬುದ್ಧಿಮತ್ತೆಯನ್ನು ಮೀರಿದ AI ರಚನೆಗಳು ಹುಟ್ಟಿಕೊಂಡರೆ ಅಚ್ಚರಿಪಡಬೇಕಾಗಿಲ್ಲ. ಅವು ಮನುಷ್ಯನ ನಿಯಂತ್ರಣವನ್ನೂ ಮೀರಿ ಕಾರ್ಯಾಚರಿಸಬಲ್ಲವು.

ಇವೆಲ್ಲವೂ ಕೆಲವಾರು ಚರ್ಚೆಗೆ ಗ್ರಾಸ ಒದಗಿಸಿವೆ. ಟೆಕ್ ಕಂಪೆನಿಗಳು ಕೆಟ್ಟ ಕೃತಕ ಬದ್ಧಿಮತ್ತೆಯ ಉಪಕರಣಗಳನ್ನು ಹೊರಗೆ ಬಿಡಬಹುದು ಹಾಗೂ ಇದು ಇಡೀ ಜಗತ್ತಿಗೇ ದೊಡ್ಡ ಹಾನಿ ಎಸಗಬಹುದು ಎಂಬುದಾಗಿ ಅಮೆರಿಕದ ಸಂಸತ್ ಸದಸ್ಯರೊಬ್ಬರು 2023ರಲ್ಲಿ ಎಚ್ಚರಿಸಿದ್ದರು. ಮೈಕ್ರೋಸಾಫ್ಟ್‌ನ ಬಿಂಗ್ ಸರ್ಚ್ ಇಂಜಿನ್‌ನಲ್ಲಿ ಅಳವಡಿಸಿದ ಚಾಟ್ ಜಿಪಿಟಿಯ ಸ್ವರೂಪವೊಂದು ತನ್ನನ್ನು ಪ್ರಶ್ನಿಸಿದ ಪತ್ರಕರ್ತನೊಡನೆ ತಾನು ಮನುಷ್ಯನ ನಿಯಂತ್ರಣ ಮೀರಿ ಪರಮಾಣು ಕೋಡ್‌ಗಳನ್ನು ಕದಿಯಲು ಉತ್ಸುಕವಾಗಿರುವುದಾಗಿ ಹೇಳಿತ್ತು.

ಯಾವುದಾದರೂ ಪ್ರಮುಖ ತಂತ್ರಜ್ಞಾನವು ದೊಡ್ಡ ಬದಲಾವಣೆಗೆ ಕಾರಣವಾದಾಗಲೆಲ್ಲಾ ಅದಕ್ಕೆ ಬಲವಾದ ಸೈದ್ಧಾಂತಿಕ ಮತ್ತು ನೈತಿಕ ಚೌಕಟ್ಟುಗಳನ್ನು ಹೇರುವ ವಾದಗಳೂ ಹುಟ್ಟಿಕೊಳ್ಳುತ್ತವೆ. ಕೈಗಾರಿಕಾ ಕ್ರಾಂತಿ ನಡೆದಾಗ ಕಾರ್ಲ್‌ಮಾರ್ಕ್ಸ್ ಉದಿಸಿದ್ದ. ಪರಮಾಣು ಬಾಂಬ್‌ಗಳ ಅಪಾಯವು ಎದುರಾದಾಗ ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದ ಹುಟ್ಟಿಕೊಂಡಿತು. ಆದರೆ AI ಯನ್ನು ಸೃಷ್ಟಿಸಬಲ್ಲ ವ್ಯಕ್ತಿಗಳ ಸಂಖ್ಯೆಯು ಹೆಚ್ಚುತ್ತಿರುವಂತೆಯೇ ಅದರ ಪ್ರತಿಕೂಲ ಪರಿಣಾಮ ತಡೆಯಲು ಯೋಚಿಸುವಂತಹ ವ್ಯಕ್ತಿಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದು ಅಪಾಯಕಾರಿ ಎಂದು ಕಿಸಿಂಜರ್ ಕೊರಗಿದ್ದ.

ಕುತೂಹಲದ ಸಂಗತಿಯೆಂದರೆ AIಗೆ ಮೊದಲ ತಾತ್ವಿಕ ನಿಯಂತ್ರಣದ ಪ್ರಯತ್ನ ವ್ಯಾಟಿಕನ್‌ನಿಂದ ಮೂಡಿಬಂತು. ವ್ಯಾಟಿಕನ್ ಹಲವಾರು ಜಾಗತಿಕ AI ಮುಖಂಡರನ್ನು 2020ರಲ್ಲಿ ತನ್ನಲ್ಲಿಗೆ ಆಹ್ವಾನಿಸಿ, ಕೃತಕ ಬುದ್ಧಿಮತ್ತೆಗೆ ನೈತಿಕ ಚೌಕಟ್ಟೊಂದನ್ನು ರೂಪಿಸುವಂತೆ ಕೇಳಿಕೊಂಡಿತು.

ಐನ್‌ಸ್ಟೈನ್ ನಂತರದ ಖ್ಯಾತ ವಿಜ್ಞಾನಿ ಎಂದೇ ಪರಿಗಣಿಸಲ್ಪಟ್ಟಿರುವ ಸ್ಟೀಫನ್ ಹಾಕಿಂಗ್ ತಮ್ಮ ಮರಣಾನಂತರದ ಪ್ರಕಟವಾದ ಪುಸ್ತಕದಲ್ಲಿ "AIಯ ಅಲ್ಪಾವಧಿ ಪರಿಣಾಮವು ಅದನ್ನು ಯಾರು ನಿಯಂತ್ರಿಸುತ್ತಾರೆ ಎಂಬುದರಲ್ಲಿದೆ. ಆದರೆ ಅದರ ದೀರ್ಘಾವಧಿ ಪರಿಣಾಮವು ಅದನ್ನು ಮನುಷ್ಯರಿಂದ ನಿಯಂತ್ರಿಸಲು ಸಾಧ್ಯವೆ ಎಂಬುದರಲ್ಲಿದೆ" ಎಂದು ಬರೆದಿದ್ದರು. ಇಂತಹ ಸಾಧ್ಯತೆಯನ್ನು ನಿರಾಕರಿಸುವುದು ಮನುಕುಲದ ಅತ್ಯಂತ ದೊಡ್ಡ ಹಾಗೂ ಕೆಟ್ಟ ಪ್ರಮಾದವಾಗಬಹುದು ಎಂದೂ ಅವರು ಎಚ್ಚರಿಸಿದ್ದರು. " AI ಬಗ್ಗೆ ನಾವೇಕೆ ಚಿಂತೆ ಮಾಡಬೇಕು. ಅಗತ್ಯ ಬಿದ್ದಾಗ ಅದರ ವಿದ್ಯುತ್ ಸಂಪರ್ಕದ ಪ್ಲಗ್ ಕಿತ್ತರಾಯಿತು" ಎಂದು ಸಿನಿಕನೊಬ್ಬ ಪ್ರತಿಕ್ರಿಯಿಸಿದ್ದ. ಅದಕ್ಕೆ ಹಾಕಿಂಗ್ ಉತ್ತರಿಸಿದ್ದರು "ಜನರು ಸುಪರ್ ಕಂಪ್ಯೂಟರ್ ಒಂದರೊಡನೆ ದೇವರಿದ್ದಾನೆಯೆ ಎಂದು ಪ್ರಶ್ನಿಸಿದರು. 'ಈಗ ಇದ್ದಾನೆ' ಎಂದು ಉತ್ತರಿಸಿದ ಆ ಸುಪರ್ ಕಂಪ್ಯೂಟರ್ ವಿದ್ಯುತ್ ಸಂಪರ್ಕ ಕಡಿಯದ ರೀತಿಯಲ್ಲಿ ತನ್ನ ಪ್ಲಗ್‌ನ್ನು ಸುಟ್ಟುಕೊಂಡಿತು" ಎಂದು ಉತ್ತರಿಸಿದ್ದರು. ಈ ಹಿನ್ನೆಲೆಯಲ್ಲಿ ಭಾರತವು 'ಸರ್ವ ಜನ ಹಿತಾಯ, ಜರ್ವ ಜನ ಸುಖಾಯ' ಧ್ಯೇಯವಾಕ್ಯದಡಿ ಕೃತಕ ಬುದ್ಧಿಮತ್ತೆ ಸಮ್ಮೇಳನವನ್ನು ಆಯೋಜಿಸಿದ್ದು ಸೂಕ್ತ ಹಾಗೂ ಸಮಯೋಚಿತ ಹೆಜ್ಜೆಯಾಗಿದೆ. ಎಐಯನ್ನು ಪ್ರಜಾತಾಂತ್ರಿಕಗೊಳಿಸುವತ್ತ ಭಾರತವು ಜಗತ್ತನ್ನು ಪ್ರೇರೇಪಿಸಿದೆ.

# ಲೂಟ್ಯೆನ್ಸ್ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು?

▸ ವೀರ್ ಸಾಂಘ್ವಿ

ರಾಷ್ಟ್ರಪತಿ ಭವನದ ಹೊರಗೆ ಅದನ್ನು ನಿರ್ಮಿಸಿದ ಲೂಟ್ಯೆನ್ಸ್‌ನ ಶಿರದ ಪುತ್ಥಳಿ ಇತ್ತೆಂಬುದು ನಿಮಗೆ ಗೊತ್ತಿತ್ತೆ? ನನಗಂತೂ ಗೊತ್ತಿರಲಿಲ್ಲ.

ಲೂಟ್ಯೆನ್ಸ್ ಎಂಬಾತ ಬ್ರಿಟಿಷ್ ವೈಸರಾಯ್‌ಗಾಗಿ ಈ ಭವನವನ್ನು ಅರಮನೆಯ ರೀತಿ ರೂಪಿಸಿದ್ದ ಹಾಗೂ ಅದನ್ನು 1931ರಲ್ಲಿ ಉದ್ಘಾಟಿಸಲಾಗಿತ್ತು ಎಂಬುದು ನನಗೆ ಗೊತ್ತಿತ್ತು. ಉದ್ಘಾಟನಾ ಸಮಾರಂಭಕ್ಕೆ ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರು ಹಾಜರಾಗಿರಲಿಲ್ಲ. ಜವಾಹರಲಾಲ್ ನೆಹರೂ ಅಂತೂ "ಈ ಭವನವು ಅತ್ಯಂತ ಕೊಳಕು ಮತ್ತು ನಿರುಪಯೋಗಿ ವೆಚ್ಚ" ಎಂದು ಬಣ್ಣಿಸಿದ್ದರು.

ಆದರೆ ಅದನ್ನು ನಿರ್ಮಿಸಿದವನ ಪುತ್ಥಳಿಯನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ ಎಂಬುದು ತಿಳಿದೇ ಇರಲಿಲ್ಲ. ಬಹುಶಃ ಹೆಚ್ಚಿನ ಭಾರತೀಯರಿಗೂ ಅದರ ಬಗ್ಗೆ ಅರಿವಿಲ್ಲ. ಆತನ ಪುತ್ಥಳಿಯನ್ನು ಮೊನ್ನೆ ತೆಗೆದು ಹಾಕಿ, ರಾಜಾಜಿಯವರ ಪುತ್ಥಳಿಯನ್ನು ಅಲ್ಲಿ ಸ್ಥಾಪಿಸಲಾಯಿತು ಎಂಬ ಸುದ್ದಿ ಓದಿದ ಬಳಿಕವೇ ಇದು ತಿಳಿದುಬಂದುದು.

ಲೂಟ್ಯೆನ್ಸ್ ಬಗ್ಗೆ ಬ್ರಿಟಿಷರಿಗೆ ಹೆಚ್ಚು ತಿಳಿದಿದೆಯೆ ಹೊರತು ಭಾರತೀಯರಿಗೆ ಅಲ್ಲ. ಹೆಚ್ಚಿನ ಭಾರತೀಯರಿಗೆ ಈ ಹೆಸರನ್ನು ಉಚ್ಚರಿಸುವ ರೀತಿಯೂ ತಿಳಿದಿಲ್ಲ. (ಅದನ್ನು ಲೂಟ್ಯೆನ್ಸ್ ಎನ್ನುವುದಕ್ಕಿಂತ ಲುಚೆನ್ಸ್ ಎಂದು ಹೆಚ್ಚಿನವರು ಉಚ್ಚರಿಸುತ್ತಾರೆ) ಭಾರತದಲ್ಲಿ ಆತನ ಹೆಸರನ್ನು ಉಲ್ಲೇಖಿಸುವುದಿದ್ದರೆ ಅದನ್ನು 'ಹೊಸದಿಲ್ಲಿ'ಗೆ ತಳುಕು ಹಾಕುತ್ತಾರೆ. ಪ್ರಧಾನಿ ಮತ್ತು ಸಂಪುಟ ಸದಸ್ಯರು ವಾಸಿಸುತ್ತಿದ್ದ ನಿವಾಸಗಳನ್ನು ನಿರ್ಮಿಸಿದವರು ಅವರು. 'ಲೂಟ್ಯೆನ್ಸ್ ಗಣ್ಯರು' ಎಂಬುದಾಗಿ ಈ ಕಟ್ಟಡಗಳಲ್ಲಿ ವಾಸಿಸುವ ವ್ಯಕ್ತಿಗಳನ್ನು ಉಲ್ಲೇಖಿಸಿಯೂ ಹೇಳುವುದಿದೆ. ಅದು ವ್ಯಂಗ್ಯವಾಗಿ. ಭಾರತದಲ್ಲಿದ್ದುಕೊಂಡೂ ಇಂಗ್ಲಿಷ್ ಸಂಸ್ಕೃತಿಯನ್ನು ಪ್ರತಿಪಾದಿಸುವವರನ್ನು ಮತ್ತು ಕೇವಲ ಇಂಗ್ಲಿಷ್ ಮಾತನಾಡುವವರನ್ನು ಈ ರೀತಿ ಸಂಬೋಧಿಸಲಾಗುತ್ತದೆ.

ಆದ್ದರಿಂದ ಬಹುತೇಕ ಭಾರತೀಯರಿಗೆ ರಾಷ್ಟ್ರಪತಿ ಭವನದ ಹೊರಗೆ ಲೂಟ್ಯೆನ್ಸ್‌ನ ಪುತ್ಥಳಿ ಇತ್ತೇ ಇಲ್ಲವೇ ಎಂಬುದು ಮುಖ್ಯ ವಿಷಯವಲ್ಲ. ಹಾಗಾಗಿ ಅದನ್ನು ತೆಗೆದುದು ಕೂಡಾ ಮಹತ್ವದ ಸುದ್ದಿಯಲ್ಲ. ಆ ಜಾಗದಲ್ಲಿ ದೇಶದ ಮೊದಲ ಗವರ್ನರ್ ಜನರಲ್ ಸಿ. ರಾಜಾಗೋಪಾಲಾಚಾರಿ ಅವರ ಪುತ್ಥಳಿ ಸ್ಥಾಪಿಸಿದ್ದು ಒಳ್ಳೆ ಕಾರ್ಯವೇ. ಆದರೆ ಅದರ ಕುರಿತಂತೆಯೂ ಕೆಲವರು ವಿವಾದ ಎಬ್ಬಿಸುತ್ತಿರುವುದು ಮಾತ್ರ ಸಮರ್ಥನೀಯವಲ್ಲ.

ಲೂಟ್ಯೆನ್ಸ್ ಪುತ್ಥಳಿ ತೆಗೆದುದನ್ನು ವಿರೋಧಿಸುವ ಈ



ಮಂದಿ "ಹಾಗಿದ್ದರೆ ಬ್ರಿಟಿಷ್ ರಾಜ್ ಅನ್ನು ಪ್ರತಿನಿಧಿಸುವ ಎಲ್ಲಾ ಕುರುಹುಗಳನ್ನು ತೆಗೆಯಬಾರದೇಕೆ" ಎಂಬ ವಾದ ಮುಂದಿಡುತ್ತಾರೆ. ವೈಸರಾಯ್‌ಗಳು, ಜನರಲ್‌ಗಳು ಮತ್ತು ಗವರ್ನರ್‌ಗಳು ಭಾರತವನ್ನು ಶೋಷಿಸಿದ್ದು ನಿಜವಾದರೂ ಲೂಟ್ಯೆನ್ಸ್ ಕೇವಲ ಒಬ್ಬ ಕಟ್ಟಡ ನಿರ್ಮಾಣಗಾರ. ಆತನು ಭಾರತೀಯರಿಗೆ ಯಾವುದೇ ಅನ್ಯಾಯ ಎಸಗಿಲ್ಲ. ಆತನ ಪುತ್ಥಳಿ ತೆಗೆಯುವ ಅಗತ್ಯವೇನಿತ್ತು ಎಂದೂ ಅವರು ಪ್ರಶ್ನಿಸುತ್ತಾರೆ.

ಅಂದರೆ ಈ ವಾದದ ಪ್ರಕಾರ ಯಾರು ಭವ್ಯಕಟ್ಟಡ ನಿರ್ಮಿಸುತ್ತಾನೋ ಆತನ ಪುತ್ಥಳಿಯನ್ನು ನಿರ್ಮಿಸುವುದು ಅಗತ್ಯ ಎಂಬಂತಾಗುತ್ತದೆ. ಇದೊಂದು ವಿಚಿತ್ರ ವಾದ. ಹಾಗಿದ್ದರೆ ದಿಲ್ಲಿ ಸರಕಾರದ ಹೊಸ ಭವನದ ಹೊರಗೆ ಬಿಮಲ್ ಪಟೇಲ್ ಪುತ್ಥಳಿಯನ್ನು ಸ್ಥಾಪಿಸಬೇಕೆ? ರಾಷ್ಟ್ರಪತಿ ಭವನವು ಅತ್ಯಂತ ಸುಂದರ ಕಟ್ಟಡವಾಗಿರಬಹುದು. ಅದನ್ನಾರೂ ನಿರಾಕರಿಸಲಾರರು. ಲೂಟ್ಯೆನ್ಸ್‌ಗೆ ಕುಶಲತೆಯ ಶ್ರೇಯಸ್ಸನ್ನು ಯಾರೂ ನಿರಾಕರಿಸುವುದಿಲ್ಲ. ಆದರೆ ಆದಕ್ಕೆ ಪುತ್ಥಳಿ ಯಾಕೆ ಬೇಕು? ಬೇಕೆಂದಾದರೆ ಇಂತಹ ಭವನದಲ್ಲಿ ವಾಸಿಸಿದ ಹೆಸರಾಂತ ಐತಿಹಾಸಿಕ ವ್ಯಕ್ತಿಗಳ ಪುತ್ಥಳಿ ಇಡುವುದು ಸೂಕ್ತವಲ್ಲವೆ?

'ಬ್ರಿಟಿಷರ ಮತ್ತು ಮೊಘಲರ ಕುರುಹುಗಳನ್ನೆಲ್ಲಾ ಅಳಿಸುವುದಾದರೆ ತಾಜ್‌ಮಹಲನ್ನು ಉಳಿಸಿಕೊಳ್ಳುವುದೇಕೆ? ಅದನ್ನೂ ಕೆಡವಬಹುದಲ್ಲವೆ' ಎಂದು ಯಾರೋ ವ್ಯಂಗ್ಯವಾಗಿ ಪ್ರಶ್ನಿಸಿದರು.ಇದೊಂದು ಮೂರ್ಖ ವಾದ. ಮೊಘಲರದು ಭಾರತದಲ್ಲಿ ಹುಟ್ಟಿ ಬೆಳೆದ ಸಾಮ್ರಾಜ್ಯ. ಅವರು ಬ್ರಿಟಿಷ್ ವಸಾಹತುಶಾಹಿಗಳಂತಲ್ಲ. ಬ್ರಿಟಿಷರು ಇಲ್ಲಿನ ಸಂಪತ್ತನ್ನೆಲ್ಲಾ ಕೊಂಡೊಯ್ದು ಬ್ರಿಟನ್‌ನಲ್ಲಿ ತಮ್ಮ ಸಾಮ್ರಾಜ್ಯ ಬೆಳೆಸಿದವರು. ಅವರು ತಮ್ಮನ್ನು ತಾವು ಭಾರತೀಯರೆಂದು ಎಂದೂ ಭಾವಿಸಿಕೊಳ್ಳಲಿಲ್ಲ. ಒಂದು ರೀತಿಯಲ್ಲಿ ಲೂಟ್ಯೆನ್ಸ್‌ನ ಅಭಿಮಾನಿಗಳು ತಮ್ಮ ವಾದವನ್ನು ಅತಿರೇಕಕ್ಕೆ ಕೊಂಡೊಯ್ಯುತ್ತಿದ್ದಾರೆ.

ತಾಜ್‌ಮಹಲನ್ನು ಕಟ್ಟಿಸಿದ್ದು ಶಾ ಜಹಾನ್ ಎಂದು ಗೊತ್ತು. ಆದರೆ ಅದನ್ನು ನಿರ್ಮಿಸಿದ ಆರ್ಕಿಟೆಕ್ಟ್ ಯಾರು? ಆತನ ಹೆಸರು ಯಾರಿಗೂ ಗೊತ್ತಿಲ್ಲ. ತಾಜ್‌ಮಹಲ್ ಕಟ್ಟಿದ ವಾಸ್ತುಶಿಲ್ಪಿ ಯಾರೆಂದು ಗೊತ್ತಿಲ್ಲದ ಮೇಲೆ ಹಾಗೂ ಆ ಕುರಿತಂತೆ ನಾವು ತಲೆಕೆಡಿಸಿಕೊಳ್ಳದಿರುವಾಗ ಬ್ರಿಟಿಷ್ ವೈಸರಾಯ್‌ಗಾಗಿ ಭವನವೊಂದನ್ನು ಕಟ್ಟಿದ ಬ್ರಿಟಿಷ್ ಆರ್ಕಿಟೆಕ್ಟ್‌ನ ಕುರಿತಂತೆ ತಲೆಕೆಡಿಸಿಕೊಳ್ಳುವುದೇಕೆ?

ಲೂಟ್ಯೆನ್ಸ್‌ನ ಪ್ರತಿಮೆ ಉಳಿಯುವುದೇ ಅಥವಾ ಅಳಿದುಹೋಗುವುದೆ ಎಂಬುದು ಇಲ್ಲಿ ಮುಖ್ಯ ವಿಷಯವಲ್ಲ. ಆದರೆ ತನ್ನ ವೈಸರಾಯ್‌ಗೆ ಸೇವೆ ಸಲ್ಲಿಲೆಂದು ಭವನ ಕಟ್ಟಿದ ಆರ್ಕಿಟೆಕ್ಟ್‌ನ್ನು ಸ್ವತಂತ್ರ ಭಾರತವು ಎಂದೆಂದೂ ನೆನಪಿಸಿಕೊಳ್ಳುತ್ತಲೇ ಇರಬೇಕೆಂದು ವಾದಿಸುವ ಬ್ರಿಟಿಷರನ್ನು ಕಂಡಾಗ ಅಸಹನೆಯಾಗುತ್ತದೆ. ಲೂಟ್ಯೆನ್ಸ್ ಪ್ರತಿಮೆಯನ್ನು ತೆಗೆದುಹಾಕಿದ ಕುರಿತಂತೆ ಇಂಗ್ಲೆಂಡ್‌ನಲ್ಲಿ ಹಲವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ನೋಡುವಾಗ ಹಿಟ್ಲರ್‌ನನ್ನು ಈಗಲೂ ಹೊಗಳುವ ಜರ್ಮನ್ನರ ವರ್ತನೆ ನೆನಪಿಗೆ ಬರುತ್ತದೆ. ಇದು ನೋಡುವಾಗ ಅನ್ನಿಸುವುದೆಂದರೆ, ಲೂಟ್ಯೆನ್ಸ್ ಪ್ರತಿಮೆಯನ್ನು 1947ರಲ್ಲೇ ಕಿತ್ತು ಬಿಸಾಕಬೇಕಿತ್ತು ಎಂಬುದಾಗಿ!

### ಆತ್ಮ ಸಾಕ್ಷಾತ್ಕಾರಕ್ಕೆ ಗೀತೆ ಪೂರಕ: ರಾಷ್ಟ್ರಪತಿ ಮುರ್ಮು

# ಆಧ್ಯಾತ್ಮಿಕ ಜೀವನಕ್ಕೆ ಭಗವದ್ಗೀತೆ ಪ್ರೇರಣೆ

**ಜಮ್ಶೆಡ್‌ಪುರ :** ಇಂದಿನ ಯುವಶಕ್ತಿಗೆ ಹೊಸ ದಿಕ್ಕು ತೋರಿ ,ಬದುಕಿಗೊಂದು ನವ ಆಯಾಮ ನೀಡುವಲ್ಲಿ ಪವಿತ್ರ ಭಗವದ್ಗೀತೆಯಲ್ಲಿನ ಆಧ್ಯಾತ್ಮಿಕ ಸಂದೇಶಗಳು ಪ್ರೇರಣಾದಾಯಿ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟಿದ್ದಾರೆ.

ಕಡ್ಮಾದಲ್ಲಿ ಶ್ರೀ ಜಗನ್ನಾಥ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ದಾನದತ್ತಿ ಕೇಂದ್ರ ಟ್ರಸ್ಟ್ ಸಂಕೀರ್ಣಕ್ಕೆ ಭೂಮಿಪೂಜೆ ನೆರವೇರಿಸಿದ ಬಳಿಕ ,ಜಾರ್ಖಂಡ್‌ನ ಜಮ್ಶೆಡ್‌ಪುರದಲ್ಲಿ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದ ಮುರ್ಮು

ಪೊಡವಿಗೊಡೆಯನು ಭಗವದ್ಗೀತೆಯಲ್ಲಿ ನೀಡಿರುವ ಸಂದೇಶಗಳು ಆತ್ಮ ಸಾಕ್ಷಾತ್ಕಾರಕ್ಕೆ ಪೂರಕವೆಂದು ವಿಶ್ಲೇಷಿಸಿದರು. ಪ್ರಸ್ತಾವಿತ ಟ್ರಸ್ಟ್ ಆಧ್ಯಾತ್ಮಿಕ ಅಧ್ಯಯನ ಮತ್ತು ಕೋಮು ಸೌಹಾರ್ದ ಕೇಂದ್ರವಾಗಿ ಮೂಡಿಬರಲಿದೆ. ಹೆಣ್ಣು ಮಕ್ಕಳ ಸಹಿತ ಬಡ ಮಕ್ಕಳಿಗೆ ತನ್ನ ಹಾಸ್ಟೆಲ್‌ನಲ್ಲಿ ಶಿಕ್ಷಣಾವಕಾಶ ಕಲ್ಪಿಸಲಿದೆ.

ಪ್ರಸ್ತಾವಿತ ಆಧ್ಯಾತ್ಮಿಕ ಕೇಂದ್ರದ ಆಯೋಜಕರ ಪ್ರಯತ್ನಗಳಿಗೆ ಪ್ರಶಂಸೆ ವ್ಯಕ್ತಪಡಿಸಿದ ರಾಷ್ಟ್ರಪತಿ ಮುರ್ಮು, ಭಗವದ್ಗೀತೆಯ ಸಂದೇಶಗಳನ್ನು ಯುವಶಕ್ತಿ ತಮ್ಮ ಬದುಕಲ್ಲಿ ಅಳವಡಿಸಲು ಕೇಂದ್ರವು ನೆರವಾಗಲಿದೆ, ಮತ್ತವರ ಚಾರಿತ್ರ್ಯವನ್ನು ಪರಿಶುದ್ಧಗೊಳಿಸಲು ಪ್ರೇರಣೆಯಾಗಲಿದೆ. ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ಪ್ರೀತಿ ಹಾಗೂ ಎಲ್ಲಾ ಜೀವಿಗಳು ಹಾಗೂ ಸಸ್ಯಗಳ ಬಗ್ಗೆ ದಯೆ ತೋರುವುದಕ್ಕೆ ಮಹತ್ತ್ವದ ಪ್ರಾಧಾನ್ಯತೆ ನೀಡಲಾಗಿದೆ ಎಂದು ಹೇಳಿದರು.

**ಮಹಾಪ್ರಭು ಜಗನ್ನಾಥ ಇಡೀ ಜಗದೊಡೆಯ:** ಮಹಾಪ್ರಭು ಜಗನ್ನಾಥನು ಇಡೀ ವಿಶ್ವದೊಡೆಯ. ಅವನು ಯಾವುದೇ ತಾರತಮ್ಯರಹಿತವಾಗಿ ಇಡೀ ಮಾನವ ಜನಾಂಗವನ್ನು ಪೊರೆವ ಕರುಣಾಮಯಿ. ಭಗವಾನ್ ಜಗನ್ನಾಥನು ಜಾತಿ ಮತಪಂಥಗಳ ಭೇದರಹಿತನು ಅಥವಾ ಅಸ್ಪೃಶ್ಯತೆರಹಿತನು. ಜಗನ್ನಾಥನು ಜಗತ್ ಕೇ ನಾಥ್ ಎಂದು ಆರಾಧಿಸಲ್ಪಡೋದು ಇದೇ ಹಿನ್ನೆಲೆಯಿಂದ ಎಂದು ರಾಷ್ಟ್ರಪತಿಗಳು ಕೊಂಡಾಡಿದರು. ಜಾರ್ಖಂಡ್ ರಾಜ್ಯಪಾಲಳಾಗಿದ್ದಾಗ ರಾಜ್ಯವು ಸಾಮಾಜಿಕ



ಸೌಹಾರ್ದತೆಗೆ ಹೆಸರಾಗಿತ್ತು ಮತ್ತು ಆದಿವಾಸಿ ಪರಂಪರೆಗಳ ಸಂರಕ್ಷಿಸಿತ್ತು ಎಂದು ನೆನಪುಗಳ ಮೆಲುಕು ಹಾಕಿದ ರಾಷ್ಟ್ರಪತಿ ಮುರ್ಮು, ಭಗವಾನ್ ಜಗನ್ನಾಥನ ಕುರಿತು ವಿಶ್ವಾದ್ಯಂತ ದಿನೇ ದಿನೇ ಬೆಳೆಯುತ್ತಿರುವ ಪ್ರೀತಿ, ನಂಬುಗೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

**500 ಜಗನ್ನಾಥ ದೇಗುಲಗಳು:** ದೇಶಾದ್ಯಂತ ಇದುವರೆಗೆ 500ಕ್ಕೂ ಅಧಿಕ ಜಗನ್ನಾಥ ದೇಗುಲಗಳ ನಿರ್ಮಿಸಲಾಗಿದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಮಾಹಿತಿ ನೀಡಿದರು.

**100ಕೋಟಿ ವೆಚ್ಚದಲ್ಲಿ ಆಧ್ಯಾತ್ಮಿಕ ಕೇಂದ್ರ ರಚನೆ:** ಹೊಸ ಆಧ್ಯಾತ್ಮಿಕ ಕೇಂದ್ರವು 12ನೇ ಶತಮಾನದ ಪುರಿ ದೇವಾಲಯವನ್ನು ಪ್ರತಿಬಿಂಬಿಸಲಿದೆ. ಖರ್ಕಾಯಿ ನದಿಗೆ ಸಮೀಪ ಸುಮಾರು 2.5ಎಕರೆಗೂ ಅಧಿಕ ಜಾಗದಲ್ಲಿ ಸುಮಾರು 100ಕೋಟಿ ವೆಚ್ಚದಲ್ಲಿ ಕೇಂದ್ರವು ತಲೆ ಎತ್ತಲಿದೆ ಎಂದು ಮಾಹಿತಿ ನೀಡಿದ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಎಸ್.ಕೆ.ಬೆಹೆರಾ, ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಸ್ತುತ ಕೇಂದ್ರವು ಉತ್ತೇಜಕವಾಗಲಿದೆ ಮತ್ತು ಯುವ ಪೀಳಿಗೆಯ ಸನ್ನಡತೆ ಸಹಿತ ವ್ಯಕ್ತಿತ್ವ ನಿರ್ಮಾಣ ಮತ್ತು ನೈತಿಕತೆ ಅಭಿವೃದ್ಧಿ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂದು ಹೇಳಿದರು.



# ಭಾರತ -ಕೆನಡಾ ಸಂಬಂಧಕ್ಕೆ ಗ್ರೀನ್ ಸಿಗ್ನಲ್?



ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಶುಕ್ರವಾರದಿಂದ ನಾಲ್ಕು ದಿನಗಳವರೆಗೆ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಮೂಲಕ ಹದಗೆಟ್ಟಿರುವ ಉಭಯ ದೇಶಗಳ ನಡುವಿನ ಸಂಬಂಧ ಸರಿಯಾಗಿ ಹೊಸ ಚೈತನ್ಯ ತುಂಬುವ ಸಾಧ್ಯತೆ ಇದೆ. ಇದರ ಜತೆಗೆ ಕಾರ್ನಿ ಭಾರತ ಭೇಟಿಗೆ ಮುಂಚಿತವಾಗಿ ನಿಜ್ಜರ್ ಹತ್ಯೆಯಲ್ಲಿ ''ಭಾರತೀಯ ಹಸ್ತಕ್ಷೇಪ''ದ ಆರೋಪದ ಬಗ್ಗೆ ಕೆನಡಾ ತನ್ನ ನಿಲುವುಗಳಲ್ಲಿ ಗಮನಾರ್ಹ ಬದಲಾವಣೆ ಮಾಡಿಕೊಂಡಿದೆ. ಇದು ಕಳೆದ ಒಂದು ವರ್ಷದಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಸರಿಪಡಿಸಿಕೊಳ್ಳುವ ಒಂದು ಧನಾತ್ಮಕ ಪ್ರಯತ್ನ ಎಂದು ವಿಶ್ಲೇಷಿಸಲಾಗುತ್ತಿದೆ.

**ಇಂದಿನಿಂದ ಕೆನಡಾ ಪ್ರಧಾನಿ ಕಾರ್ನಿ ಭಾರತ ಭೇಟಿ**

**ಸುದ್ದಿ ಸಮಗ್ರ**

### ಭಾರತ- ಕೆನಡಾ ಸಂಬಂಧದಲ್ಲಿ ಏರುಪೇರು

- ನಿಜ್ಜರ್ ಹತ್ಯೆಯಲ್ಲಿ ಭಾರತದ ಹಸ್ತಕ್ಷೇಪ ಆರೋಪದ ಬಗ್ಗೆ ಕೆನಡಾ ತನ್ನ ನಿಲುವನ್ನು ಮೃದುಗೊಳಿಸಿದೆ.
- ನಿಜ್ಜರ್ ಹತ್ಯೆಗೆ ಭಾರತವನ್ನು ನೇರವಾಗಿ ದೂಷಿಸಲಾಗಿತ್ತು, ಭಾರತವು ಆರೋಪಗಳನ್ನು ನಿರಾಕರಿಸಿತು.
- 2024ರಿಂದ ಹದಗೆಟ್ಟಿದ್ದ ರಾಜತಾಂತ್ರಿಕ ಸಂಬಂಧ. ಕಾರ್ನಿ ಅವಧಿಯಲ್ಲಿ ಬದಲಾವಣೆಯ ಗಾಳಿ
- ಉಭಯ ದೇಶಗಳ ನಡುವಿನ ವ್ಯಾಪಾರ ವಾರ್ಷಿಕವಾಗಿ 21 ಶತಕೋಟಿ ಡಾಲರ್ ಮೀರಿದೆ.
- ದೀರ್ಘಕಾಲದಿಂದ ಬಾಕಿ ಇರುವ ವ್ಯಾಪಾರ ಒಪ್ಪಂದದ ಮಾತುಕತೆಗಳ ಪುನರಾರಂಭ ಸಾಧ್ಯತೆ

### ಕಾರ್ನಿ ಕಾಲದ ಬದಲಾವಣೆ

ಕೆನಡಾದಲ್ಲಿ ಬಳಿಕ ಆಯೋಗದ ವರದಿ ಈ ಹತ್ಯೆಯಲ್ಲಿ ವಿದೇಶಿ ರಾಜ್ಯದೊಂದಿಗೆ ಯಾವುದೇ ನಿರ್ಣಾಯಕ ಸಂಪರ್ಕವನ್ನು ಸಾಬೀತುಪಡಿಸಲಾಗಿಲ್ಲ ಎಂದು ಹೇಳಿದೆ. ಪ್ರಸ್ತುತ ಕಾರ್ನಿ ಭೇಟಿಗೆ ಮುಂಚಿತವಾಗಿ, ಕೆನಡಾದ ಅಧಿಕಾರಿಗಳು ಭಾರತದೊಂದಿಗೆ ದೃಢವಾದ ರಾಜತಾಂತ್ರಿಕ ಸಂಬಂಧಕ್ಕೆ ಒತ್ತು ನೀಡಿದ್ದಾರೆ. ಯಾವುದೇ ಆಪಾದನೆಗಳಂತಹ ಸನ್ನಿವೇಶಗಳು ಮುಂದುವರಿಯುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಾರ್ಚ್ 2025 ರಲ್ಲಿ ಕಾರ್ನಿ ಅಧಿಕಾರ ವಹಿಸಿಕೊಂಡಾಗಿನಿಂದ ಸಂಬಂಧಗಳಲ್ಲಿನ ಸುಧಾರಣೆ ಗೋಚರಿಸುತ್ತಿದೆ. ರಾಯಭಾರಿಗಳನ್ನು ಮತ್ತೆ ಕರೆಸಿಕೊಳ್ಳಲಾಗಿದ್ದು, ಉನ್ನತ ಮಟ್ಟದ ಭೇಟಿಗಳು ಪುನರಾರಂಭಗೊಂಡಿವೆ.

### ಹಿಂದಿನ ಆರೋಪಗಳಿಂದ ಬದಲಾವಣೆ?

2024ರಲ್ಲಿ, ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ನೇತೃತ್ವದ ಕೆನಡಾ ಸರ್ಕಾರ, ಬ್ರಿಟಿಷ್ ಕೊಲಂಬಿಯಾದಲ್ಲಿ 2023ರಲ್ಲಿ ನಡೆದ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೂ ಭಾರತಕ್ಕೂ ಸಂಬಂಧ ಕಲ್ಪಿಸುವ ವಿಶ್ವಾಸಾರ್ಹ ಆರೋಪಗಳು ಇವೆ ಎಂದು ಹೇಳಿಕೊಂಡಿತ್ತು. ಭಾರತ ಈ ಆರೋಪಗಳನ್ನು ಆಧಾರರಹಿತವೆಂದು ಬಲವಾಗಿ ನಿರಾಕರಿಸಿತ್ತು. ಈ ಹೇಳಿಕೆಗಳಿಂದ ಎರಡೂ ದೇಶಗಳು ರಾಯಭಾರ ಕಚೇರಿಯ ಅಧಿಕಾರಿಗಳನ್ನು ಹೊರಹಾಕಿದ್ದವು, ಇದು ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿತ್ತು. ಕೆನಡಾದ ಗುಪ್ತಚರ ಸಂಸ್ಥೆ, ಈ ಪ್ರಕರಣವನ್ನು ಗಂಭೀರ ಉದ್ವಿಗ್ನತೆ ಎಂದು ಕರೆದು, ''ವಿದೇಶಿ ಹಸ್ತಕ್ಷೇಪ''ದ ಬಗ್ಗೆ ಎಚ್ಚರಿಕೆ ನೀಡಿತ್ತು.

### ವ್ಯಾಪಾರ ಮತ್ತು ತಂತ್ರಜ್ಞಾನದ ಮೇಲೆ ಗಮನ

ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ನಿಗದಿಯಾಗಿರುವ ಕಾರ್ನಿ ಅವರ ಭಾರತ ಪ್ರವಾಸ, ಅವರ ಇಂಡೋ-ಪೆಸಿಫಿಕ್ ಪ್ರವಾಸದ ಕೇಂದ್ರಬಿಂದು ಎನಿಸಿದೆ. ಇದರಲ್ಲಿ ಆಸ್ಟ್ರೇಲಿಯಾ ಮತ್ತು ಜಪಾನ್ ಸಹ ಸೇರಿವೆ. ಭಾರತ ಭೇಟಿ ಮುಂಬೈನಲ್ಲಿ ಪ್ರಾರಂಭವಾಗಿ ನಂತರ ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಲಾಗುತ್ತದೆ.

### ಹಲವು ಒಪ್ಪಂದಗಳ ಬಗ್ಗೆ ಚರ್ಚೆ

ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಪ್ರಾಯೋಗಿಕ ವಿದೇಶಾಂಗ ನೀತಿಯ ಬದಲಾವಣೆಯ ಭಾಗವಾಗಿ ಈ ಭೇಟಿ ನಡೆಯುತ್ತಿದೆ. ವ್ಯಾಪಾರ, ಇಂಧನ, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಸಂಶೋಧನಾ ಸಹಯೋಗ, ಪ್ರತಿಭೆಗಳಿಗೆ ಅವಕಾಶ ಮತ್ತು ರಕ್ಷಣಾ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಯುವ ನಿರೀಕ್ಷೆಯಿದೆ.

### ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ?

ಕೆನಡಾ-ಭಾರತ ಸಿಇಒ ವೇದಿಕೆಯ ಪುನರುಜ್ಜೀವನ, ಮತ್ತು ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರದ ನಾಯಕರೊಂದಿಗಿನ ಸಭೆಗಳು ಬದಲಾವಣೆಗಳನ್ನು ಸೂಚಿಸಿವೆ. 2010ರಲ್ಲಿ ಪ್ರಾರಂಭವಾದರೂ, ಪದೇಪದೆ ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಮಾತುಕತೆಗಳು ಈಗ ಪುನರಾರಂಭಗೊಂಡಿವೆ. ಮುಂಬರುವ ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಗಮನಾರ್ಹವಾಗಿ ಹೆಚ್ಚಿಸುವ ಗುರಿಯನ್ನು ಎರಡೂ ದೇಶಗಳು ಹೊಂದಿವೆ.

### ಆರೋಪಗಳು ಹಿನ್ನೆಲೆಗೆ?

ಹಿಂದಿನ ಆರೋಪಗಳಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳು ಮುಂದುವರಿಯುತ್ತಿದ್ದರೂ, ಎರಡೂ ಸರ್ಕಾರಗಳು ವಿಶಾಲ ಕಾರ್ಯತಂತ್ರ ಮತ್ತು ಆರ್ಥಿಕ ಹಿತಾಸಕ್ತಿಗಳು ಹಿಂದೆ ಸರಿಯುವುದನ್ನು ತಡೆಯಲು ನಿರ್ಧರಿಸಿದಂತೆ ತೋರುತ್ತಿದೆ. ಕಾರ್ನಿ ಭೇಟಿ, ಬಿಗಡಾಯಿಸಿರುವ ರಾಜತಾಂತ್ರಿಕ ಸಂಬಂಧ ಸುಸ್ಥಿರ ಪಾಲುದಾರಿಕೆಗೆ ಮರಳುವ ಸಾಧ್ಯತೆಯಿದೆ. ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇದರ ಅಗತ್ಯವೂ ಇದೆ.

### ಭದ್ರತಾ ಸಹಕಾರ ಮತ್ತು ವಲಸಿಗರೆಡೆ ಗಮನ

ಕೆನಡಾದಲ್ಲಿ ಸುಮಾರು 2.8 ಮಿಲಿಯನ್ ಭಾರತೀಯ ಮೂಲದವರಿದ್ದಾರೆ ಮತ್ತು ಭಾರತದ ಹೊರಗಿನ ಅತಿದೊಡ್ಡ ಸಿಖ್ ಸಮುದಾಯ ಅದಾಗಿದೆ. ನಿಜ್ಜರ್ ಪ್ರಕರಣದಿಂದ ವಲಸಿಗರ ಸೂಕ್ಷ್ಮ ಭಾವನೆಗಳಿಗೆ ಧಕ್ಕೆಯಾಗಿತ್ತು. ಇದನ್ನು ಸರಿಪಡಿಸುವ ಜತೆಗೆ, ಅಂತಾರಾಷ್ಟ್ರೀಯ ಅಪರಾಧ, ಉಗ್ರವಾದ, ಸೈಬರ್ ಅಪರಾಧ ಮತ್ತು ಅಕ್ರಮ ವಲಸೆ-ವಂಚನೆಯಂತಹ ಸಮಸ್ಯೆಗಳನ್ನು ಪರಿಹರಿಸಲು ಭದ್ರತಾ ಸಹಕಾರವನ್ನು ಬಲಪಡಿಸಲಾಗುತ್ತಿದೆ ಎಂದು ಎರಡೂ ದೇಶಗಳ ಅಧಿಕಾರಿಗಳು ಸೂಚಿಸಿದ್ದಾರೆ. ಉಭಯ ದೇಶಗಳ ಹಿರಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರು ಇತ್ತೀಚೆಗೆ ವ್ಯಾಪಕ ಚರ್ಚೆ ನಡೆಸಿದ್ದಾರೆ.

### ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಸೂಚನೆ

# ಕಂಟೆಂಟ್ ಕ್ರಿಯೇಟರ್ಸ್‌ಗೆ ಹಣ ಸಿಗಲಿ

**ಹೊಸದಿಲ್ಲಿ:** ಡಿಜಿಟಲ್ ವೇದಿಕೆಗಳು ಆನ್‌ಲೈನ್ ಕಂಟೆಂಟ್‌ಗಳ ಜವಾಬ್ದಾರಿ ಹೊರಬೇಕು. ಕಂಟೆಂಟ್ ಸೃಜಿಸುವವರು ಹಾಗೂ ಹೊಸ ಸಂಸ್ಥೆಗಳಿಗೆ ನ್ಯಾಯೋಚಿತವಾಗಿ ಆದಾಯ ಹಂಚಿಕೆ ಮಾಡಬೇಕು. ಕಂಟೆಂಟ್ ಸೃಷ್ಟಿಸಿದವರಿಗೆ ನ್ಯಾಯವಾದ ಮೊತ್ತ ನಿರಾಕರಿಸಿದಲ್ಲಿ ಆವಿಷ್ಕಾರಗಳಿಗೆ ಹೊಡೆತ ಬೀಳಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಎಚ್ಚರಿಸಿದ್ದಾರೆ.

ಎಐ ಸೃಷ್ಟಿಸುವ ಕಂಟೆಂಟ್ ಅಥವಾ ಹುರುಳಿನ ಬಳಕೆಯನ್ನು ನಿಯಂತ್ರಿಸಬೇಕು. ಯಾವ ವ್ಯಕ್ತಿಯ ಮುಖ, ಧ್ವನಿ ಅಥವಾ ವ್ಯಕ್ತಿತ್ವ ಬಳಸಿಕೊಂಡು ಕಂಟೆಂಟ್ ರಚಿಸಲಾಗುವುದೋ, ಆ ವ್ಯಕ್ತಿಯ ಸಮ್ಮತಿ ವಿನಾ ಕಂಟೆಂಟ್ ಸೃಜಿಸಕೂಡದು ಎಂದು ಸಚಿವರು ಎಚ್ಚರಿಸಿದ್ದಾರೆ. ದಿಲ್ಲಿಯಲ್ಲಿ ಡಿಜಿಟಲ್ ಸುದ್ದಿ ಪ್ರಕಾಶಕರ ಸಮಾವೇಶ ಉದ್ದೇಶಿಸಿ ಸಚಿವರು ಈ ರೀತಿ ಎಚ್ಚರಿಕೆ ನೀಡಿದರು.

ತಾವು ಆತಿಥೇಯ ವಹಿಸಿದ ಕಂಟೆಂಟ್‌ಗಳ ಹೊಣೆಯನ್ನು ಸಂಬಂಧಿತ ಡಿಜಿಟಲ್ ವೇದಿಕೆಗಳೇ ವಹಿಸಬೇಕು. ಮಕ್ಕಳ ಸಹಿತ ಎಲ್ಲಾ ನಾಗರಿಕರ ಡಿಜಿಟಲ್ ಸುರಕ್ಷೆ ಕೂಡ ಡಿಜಿಟಲ್ ಪ್ಲಾಟ್‌ಫಾರಂಗಳ ಜವಾಬ್ದಾರಿಯಾಗಿದೆ. ಡಿಜಿಟಲ್ ವೇದಿಕೆಗಳಿಂದು (intermediaries)ಶಕ್ತಿಶಾಲಿ ಮಾಧ್ಯಮ ಕೇಂದ್ರಗಳಾಗಿ ಪರಿವರ್ತಿತವಾಗಿವೆ ಎಂದು ಗಮನ ಸೆಳೆದ ಸಚಿವ ವೈಷ್ಣವ್, ಬೌದ್ಧಿಕ ಆಸ್ತಿಗಳನ್ನು ಗೌರವಿಸಬೇಕು ಮತ್ತು ಅವುಗಳಿಗೆ ನ್ಯಾಯೋಚಿತ ಪರಿಹಾರವೀಯಬೇಕು. ಯಾಕೆಂದರೆ ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿ ಸಮಾಜದ ಪ್ರಗತಿಯು ಬೌದ್ಧಿಕ ಆಸ್ತಿಗಳನ್ನು ಅವಲಂಬಿಸಿದೆ. ಡಿಜಿಟಲ್ ವೇದಿಕೆಗಳು ಬರೇ ಸುದ್ದಿಸಂಸ್ಥೆಗಳಿಗೆ ಮಾತ್ರವಲ್ಲ, ಕುಗ್ರಾಮಗಳಲ್ಲಿನ ಸ್ವತಂತ್ರ ಕ್ರಿಯೇಟರ್‌ಗಳು, ಪ್ರಭಾವ ಸೃಜಿಸಬಲ್ಲವರು, ಪ್ರೊಫೆಸರ್‌ಗಳು ಮತ್ತು ಸಂಶೋಧಕರಿಗೂ ಸೂಕ್ತ ಪರಿಹಾರ ನೀಡಬೇಕು. ಹಾಗಾಗಿ ಈ ನಿಟ್ಟಿನಲ್ಲಿ ಎಲ್ಲಾ ಡಿಜಿಟಲ್ ವೇದಿಕೆಗಳು ತಮ್ಮ ನೀತಿಗಳ ಮರುವಿಮರ್ಶೆ ನಡೆಸಬೇಕು. ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳದಿದ್ದಲ್ಲಿ ಕಾನೂನು ರೀತ್ಯಾ ಹಾದಿಗಳಿವೆ ಎಂಬುದನ್ನು ಹಲವು ರಾಷ್ಟ್ರಗಳು ಈಗಾಗಲೆ ತೋರಿಸಿಕೊಟ್ಟಿವೆ ಎಂದು ಎಚ್ಚರಿಸಿದ್ದಾರೆ.

## ಕಿರುಸುದ್ದಿ

### ಎನ್‌ಕೌಂಟರ್: ಇಬ್ಬರು ನಕ್ಸಲರ ವಧೆ, ಶಸ್ತ್ರಾಸ್ತ್ರ ವಶ



**ಬಿಜಾಪುರ್:** ಚತ್ತೀಸಗಢದ ಬಿಜಾಪುರ್ ಜಿಲ್ಲೆಯಲ್ಲಿ ಗುರುವಾರ ಭದ್ರತಾ ಪಡೆಗಳ ಮತ್ತು ಮಾವೋವಾದಿಗಳ ನಡುವಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಬಲಿಯಾಗಿದ್ದಾರೆ. ಜಂಗ್ಲಾ ಪೊಲೀಸ್ ಠಾಣೆ ವ್ಯಾಪ್ತಿಯ ಇಂದ್ರಾವತಿ ನದಿ ಕಾಡುಗಳಲ್ಲಿ ಮಾವೋವಾದಿಗಳು ಇದ್ದಾರೆಂಬ ಗುಪ್ತಚರ ಮಾಹಿತಿ ಆಧಾರದಲ್ಲಿ ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆಯನ್ನು ನಡೆಸಿದ್ದಾರೆ. ಎನ್‌ಕೌಂಟರ್‌ಗೆ ಬಲಿಯಾದ ನಕ್ಸಲರಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ. ಎಸ್‌ಎಲ್‌ಆರ್ ರೈಫಲ್, ಇನ್ಸಾಸ್ ಅಸಾಲ್ಟ್ ರೈಫಲ್, 12-ಬೋರ್ ಗನ್, ಸ್ಫೋಟಕಗಳನ್ನು ಪೊಲೀಸರು ವಶಪಡಿಸಿದ್ದಾರೆ.

## ವಿಶ್ವಸಂಸ್ಥೆಯಲ್ಲಿ ಪಾಕ್‌ಗೆ ಭಾರತ ಛೀಮಾರಿ

**ವಿಶ್ವಸಂಸ್ಥೆ/ಜಿನೀವಾ:** ಜಮ್ಮು-ಕಾಶ್ಮೀರದ ಅಭಿವೃದ್ಧಿ ಬಜೆಟ್ ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಪಾಕಿಸ್ತಾನ ಇತ್ತೀಚೆಗೆ ಕೋರಿದ್ದ ಬೇಲ್ ಔಟ್ ಪ್ಯಾಕೇಜ್‌ಗಿಂತ ಎರಡು ಪಟ್ಟು ಹೆಚ್ಚು ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾರತ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ. ಕೌನ್ಸಿಲ್‌ನ 61ನೇ ಅಧಿವೇಶನದಲ್ಲಿ, ಪಾಕಿಸ್ತಾನ, ಕಾಶ್ಮೀರ ಸಮಸ್ಯೆಯನ್ನು ಎತ್ತಿದ ನಂತರ ಉತ್ತರಿಸುವ ಹಕ್ಕಿನಲ್ಲಿ ಜಿನೀವಾದಲ್ಲಿರುವ ಭಾರತದ ಶಾಶ್ವತ ರಾಯಭಾರ ಕಚೇರಿಯ ಮೊದಲ ಕಾರ್ಯದರ್ಶಿ ಅನುಪಮಾ ಸಿಂಗ್ ಈ ಹೇಳಿಕೆ ನೀಡಿದ್ದಾರೆ. ಜಮ್ಮು-ಕಾಶ್ಮೀರದ ಅಭಿವೃದ್ಧಿ ವೆಚ್ಚ ಪಾಕಿಸ್ತಾನ ಕೋರಿದ ಐಎಂಎಫ್ ಸಹಾಯವನ್ನು ಮೀರಿದೆ ಎಂದು ನಂಬಲಾಗದಂತಿದ್ದರೆ, ಪಾಕಿಸ್ತಾನ ಇನ್ನೂ ಕನಸಿನ ಲೋಕದಲ್ಲಿ ವಿಹರಿಸುತ್ತಿದೆ ಎಂದೇ ತಿಳಿಯಬೇಕಾಗುತ್ತದೆ. ಕಳೆದ ವರ್ಷ, ವಿಸ್ತೃತ ನಿಧಿ ಸೌಲಭ್ಯದಲ್ಲಿ ಸುಮಾರು 1 ಬಿಲಿಯನ್ ಯುಎಸ್ ಡಾಲರ್ ಅನ್ನು ಐಎಂಎಫ್ ಅನುಮೋದಿಸಿದ್ದು, ಒಟ್ಟು ವಿತರಣೆ ಸುಮಾರು 2.1 ಬಿಲಿಯನ್ ಯುಎಸ್ ಡಾಲರ್‌ಗೆ ಏರಿದೆ. ಕಣಿವೆ ರಾಜ್ಯದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ದಾಖಲಾದ ಅತ್ಯುತ್ತಮ ಮತದಾನ ಪ್ರಮಾಣ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ನಂಬಿಕೆ ತೋರಿಸಿದೆ ಮತ್ತು ಅದು ಭಯೋತ್ಪಾದನೆಗೆ ಸ್ಪಷ್ಟ ನಿರಾಕರಣೆಯೂ ಆಗಿದೆ ಎಂದು ಭಾರತ ಸಮರ್ಥಿಸಿಕೊಂಡಿದೆ. ಪಾಕಿಸ್ತಾನ ಮತ್ತು ಒಐಸಿ ಎತ್ತಿದ ಎಲ್ಲಾ ಆರೋಪಗಳನ್ನು ಭಾರತ ಸ್ಪಷ್ಟವಾಗಿ ನಿರಾಕರಿಸಿದೆ.

## ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಆರ್‌ಎಸ್‌ಎಸ್ ಬದ್ಧ

**ಲುಧಿಯಾನಾ:** ಬಲಿಷ್ಠ ರಾಷ್ಟ್ರ ನಿರ್ಮಾಣವೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮೂಲ ಸಂಕಲ್ಪವಾಗಿದ್ದು, ದೇಶದ ಪ್ರತಿಯೊಬ್ಬ ನಾಗರಿಕನನ್ನೂ ಅದರಲ್ಲಿ ಭಾಗಿಯಾಗಿಸುವುದು ಸಂಘದ ಧ್ಯೇಯ ಎಂದು ಸರಸಂಘಚಾಲಕ್ ಮೋಹನ್ ಭಾಗವತ್ ತಿಳಿಸಿದ್ದಾರೆ. ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಅಂಗವಾಗಿ ಪಂಜಾಬ್‌ಗೆ ಎರಡು ದಿನಗಳ ಭೇಟಿಗೆ ಆಗಮಿಸಿದ್ದ ಭಾಗವತ್ ಅವರು, ಜಾತಿ, ಮತ, ಭಾಷೆ ಅಥವಾ ಪಂಥ ಯಾವುದನ್ನೂ ಪರಿಗಣಿಸದೆ ಎಲ್ಲರನ್ನೂ ಒಳಗೊಂಡ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಂಘ ಬದ್ಧವಾಗಿದೆ ಎಂದು ಅವರು ಹೇಳಿದರು. ಎಲ್ಲರನ್ನು ಸಮಾನ ದೃಷ್ಟಿಯಿಂದಲೇ ಸಂಘ ಪರಿಗಣಿಸುತ್ತದೆ ಮತ್ತು ಸಮಾನವಾಗಿ ವರ್ತಿಸುತ್ತದೆ ಎಂದು ಭಾಗವತ್ ಒತ್ತಿ ಹೇಳಿದರು. ಸಂಘದ ಕುರಿತು ಟೀಕೆ ಮಾಡುವವರು ಮೊದಲು ಸಂಘವನ್ನು ಒಳಗಿನಿಂದ ಅರಿತುಕೊಳ್ಳಬೇಕು ಎಂದು ಅವರು ಪರೋಕ್ಷವಾಗಿ ಟೀಕಾಕಾರರಿಗೆ ಸಂದೇಶ ನೀಡಿದರು. ಸಂಘದ ಕಾರ್ಯಪದ್ಧತಿ ಹಾಗೂ ತತ್ವಗಳನ್ನು ತಿಳಿದುಕೊಂಡು, ಅಧ್ಯಯನ ಮಾಡಿದ ಬಳಿಕದ ಟೀಕೆಯನ್ನು ಸಂಘ ಸ್ವಾಗತಿಸುತ್ತದೆ. ಆದರೆ ಅಜ್ಞಾನಾಧಾರಿತ ಟೀಕೆ ಯಾರಿಗೂ ಉಪಯೋಗಕಾರಿಯಲ್ಲ ಎಂದು ಭಾಗವತ್ ಹೇಳಿದರು. ಇದೇ ವೇಳೆ, ಭಾಗವತ್ ಅವರು ಫೆ.27 ಹಾಗೂ 28ರಂದು ಹರ್ಯಾಣಕ್ಕೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಅಂಬಾಲಾ ಸಿಟಿ ಹಾಗೂ ಅಂಬಾಲಾ ಕ್ಯಾಂಟೋನ್ಮೆಂಟ್‌ನ ಪೊಲೀಸ್ ಲೈನ್ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 15ರಿಂದ 40 ವರ್ಷದೊಳಗಿನ ಸುಮಾರು 1,000 ಸ್ವಯಂಸೇವಕರು ಭಾಗವಹಿಸಲಿದ್ದಾರೆ. ಫೆ.28ರಂದು ಕುರುಕ್ಷೇತ್ರದ ಶ್ರೀಮದ್ ಭಗವದ್ಗೀತಾ ಸಭಾಂಗಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

## ಟಿಕೆಟ್ ಮರುಪಾವತಿ ನಿಯಮ ಪರಿಷ್ಕರಣೆ

**ಹೊಸದಿಲ್ಲಿ:** ಪ್ರಯಾಣಿಕರಿಗೆ ಹೆಚ್ಚಿನ ಆಯ್ಕೆಗಳು ಮತ್ತು ರಕ್ಷಣೆ ನೀಡಲು ವಿಮಾನಯಾನ ಟಿಕೆಟ್ ಮರುಪಾವತಿ ನಿಯಮಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ನವೀಕರಿಸಿದೆ. 48 ಗಂಟೆಗಳ ಲುಕ್-ಇನ್ ಅವಧಿಯನ್ನು ಪರಿಚಯಿಸಲಾಗಿದೆ. ಈ ಅವಧಿಯಲ್ಲಿ, ಪರಿಷ್ಕೃತ ವಿಮಾನಗಳಲ್ಲಿನ ಯಾವುದೇ ಶುಲ್ಕ ವ್ಯತ್ಯಾಸವನ್ನು ಹೊರತುಪಡಿಸಿ, ಹೆಚ್ಚುವರಿ ಶುಲ್ಕಗಳಿಲ್ಲದೆ ಟಿಕೆಟ್‌ಗಳನ್ನು ರದ್ದುಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು. 7 ದಿನಗಳಲ್ಲಿ ನಿರ್ಗಮಿಸುವ ದೇಶೀಯ ವಿಮಾನಗಳಿಗೆ ಅಥವಾ ಬುಕಿಂಗ್ ಮಾಡಿದ 15 ದಿನಗಳಲ್ಲಿ ನಿರ್ಗಮಿಸುವ ಅಂತಾರಾಷ್ಟ್ರೀಯ ವಿಮಾನಗಳಿಗೆ ಈ ಸೌಲಭ್ಯ ಲಭ್ಯವಿರುವುದಿಲ್ಲ. ವಿಮಾನಯಾನ ಸಂಸ್ಥೆಯ ಆ್ಯಪ್ ಮೂಲಕ ಬುಕಿಂಗ್ ಮಾಡಿದ 24 ಗಂಟೆಗಳ ಒಳಗೆ ದೋಷ ವರದಿಯಾದರೆ ಅದೇ ಪ್ರಯಾಣಿಕರ ಹೆಸರನ್ನು ಸರಿಪಡಿಸಲು ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ. ಟ್ರಾವೆಲ್ ಏಜೆಂಟ್‌ಗಳು ಅಥವಾ ಪೋರ್ಟಲ್‌ಗಳ ಮೂಲಕ ಖರೀದಿಸಿದ ಟಿಕೆಟ್‌ಗಳಿಗೆ, ವಿಮಾನಯಾನ ಸಂಸ್ಥೆಗಳು 14 ಕೆಲಸದ ದಿನಗಳಲ್ಲಿ ಮರುಪಾವತಿಯನ್ನು ಪ್ರಕ್ರಿಯೆಗೊಳಿಸಬೇಕು. ಅದೇ ಪಿಎನ್‌ಆರ್‌ನಲ್ಲಿ ಪ್ರಯಾಣಿಕರನ್ನು ಅಥವಾ ಕುಟುಂಬದ ಸದಸ್ಯರನ್ನು ಆಸ್ಪತ್ರೆಗೆ ದಾಖಲಿಸುವುದರಿಂದ, ರದ್ದಾದರೆ ಪೂರ್ಣ ಮರುಪಾವತಿ ಅಥವಾ ಕ್ರೆಡಿಟ್ ಶೆಲ್‌ಗೆ ಕಾರಣವಾಗಬಹುದು. ಇತರ ಸಂದರ್ಭಗಳಲ್ಲಿ, ಮರುಪಾವತಿಯನ್ನು ನೀಡುವ ಮೊದಲು ಅಧಿಕೃತ ಏರೋಸ್ಪೇಸ್ ಮೆಡಿಸಿನ್ ತಜ್ಞರಿಂದ ಫಿಟ್ನೆಸ್-ಟು-ಟ್ರಾವೆಲ್ ಪ್ರಮಾಣಪತ್ರದ ಅಗತ್ಯವಿದೆ. ನಾಗರಿಕ ವಿಮಾನಯಾನ ಅಗತ್ಯಗಳಿಗೆ ತಿದ್ದುಪಡಿಗಳು, ವಿಳಂಬ ಮರುಪಾವತಿಗಳ ಬಗ್ಗೆ ಹೆಚ್ಚುತ್ತಿರುವ ದೂರುಗಳಿಗೆ ಇದೊಂದು ಪರಿಹಾರ ಒದಗಿಸಬಹುದು.

## ಅಮೆರಿಕದ ವಾಣಿಜ್ಯ ಕಾರ್ಯದರ್ಶಿ, ಗೋಯಲ್ ಭೇಟಿ

**ಹೊಸದಿಲ್ಲಿ:** ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಧನಾತ್ಮಕ ಬೆಳವಣಿಗೆಯಂತೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ದಿಲ್ಲಿಯಲ್ಲಿ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಡಬ್ಲ್ಯು ಲುಟ್ನಿಕ್ ಅವರನ್ನು ಭೇಟಿಯಾದರು. ಇದು ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಒಪ್ಪಿಕೊಂಡ ನಂತರ ಅವರ ಮೊದಲ ಭೇಟಿಯಾಗಿದೆ. ಈ ವೇಳೆ ಅಮೆರಿಕ ರಾಯಭಾರಿ ಸರ್ಗೆ ಗೋರ್ ಕೂಡ ಉಪಸ್ಥಿತರಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾರೀ ಸುಂಕ ನೀತಿ ಬಗ್ಗೆ ಸುಪ್ರೀಂಕೋರ್ಟ್ ಕಾನೂನು ಬಾಹಿರ, ತುರ್ತು ಪರಿಸ್ಥಿತಿಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಹೇಳಿದ ಬಳಿಕ ವ್ಯಾಪಾರ ಒಪ್ಪಂದದ ಮಾತುಕತೆ ದಿನಾಂಕವನ್ನು ಮುಂದೂಡಲಾಗಿತ್ತು. ಭಾರತ ಮತ್ತು ಅಮೆರಿಕದ ಸಕಾರಾತ್ಮಕ ಹೇಳಿಕೆಗಳು ಈ ಭೇಟಿಯ ನಂತರ ಎರಡೂ ದೇಶಗಳು ದ್ವಿಪಕ್ಷೀಯ ವ್ಯಾಪಾರವನ್ನು ಮುಂದುವರಿಸಲು ಬದ್ಧವಾಗಿವೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

### ಪಾಕ್ ಗಡಿ ಸಮೀಪ ಪೋಖ್ರಾನ್‌ನಲ್ಲಿ ವಾಯುಪಡೆ ತಾಲೀಮು

# ಇಂದು ವಾಯು ಶಕ್ತಿಯ ದರ್ಶನ

**ಜೈಸಲ್ಮೇರ್:** ವಾಯು ರಕ್ಷಣಾ ಶಕ್ತಿಯನ್ನು ಪ್ರದರ್ಶಿಸುವ ವಾಯುಪಡೆಯ ತಾಲೀಮು ವಾಯು ಶಕ್ತಿ-2026, ರಾಜಸ್ಥಾನದ ಪೋಖ್ರಾನ್ ಉಡಾವಣಾ ಕೇಂದ್ರದಲ್ಲಿ ಶುಕ್ರವಾರ ಆರಂಭವಾಗಲಿದೆ. ಪಾಕಿಸ್ತಾನದ ಗಡಿಯಿಂದ 270 ಕಿ.ಮೀ. ದೂರದಲ್ಲಿರುವ ಪೋಖ್ರಾನ್‌ನಲ್ಲಿ ವಾಯು ಶಕ್ತಿ ನಡೆಯಲಿದೆ. ಶುಕ್ರವಾರದಿಂದ ಆರಂಭವಾಗುವ ಪ್ರದರ್ಶನ ಕಾರ್ಯಕ್ರಮಕ್ಕಾಗಿ ವಾಯುಪಡೆ ಅಭ್ಯಾಸ ನಡೆಸಿದೆ. ಪಾಕ್ ಗಡಿ ಸಮೀಪ ವಾಯುಪಡೆಯ ಹೈ-ಪ್ರೊಫೈಲ್ ಶಕ್ತಿ ಪ್ರದರ್ಶನ ನಡೆಸಲಿದೆ. ಪ್ರಮುಖ ಯುದ್ಧ ವಿಮಾನಗಳು, ಸೇನಾ ಸರಕು ವಿಮಾನಗಳು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಯ ಸಂಪೂರ್ಣ ಶಕ್ತಿ ಪ್ರದರ್ಶನ ನಡೆಯಲಿದೆ. ಶುಕ್ರವಾರ ನಡೆಯುವ ಕಾರ್ಯಕ್ರಮಕ್ಕಾಗಿ ವಾಯುಪಡೆ ಕಳೆದೊಂದು ವಾರದಿಂದ ಅಭ್ಯಾಸ ನಡೆಸುತ್ತಿದೆ. ಶನಿವಾರ ಮೀಸಲು ದಿನವನ್ನಾಗಿ ಇಡಲಾಗಿದೆ.

**ಯಾಕಾಗಿ ಶಕ್ತಿ ಪ್ರದರ್ಶನ?:** ಆಪರೇಷನ್ ಸಿಂದೂರ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಯುದ್ಧ ಸನ್ನದ್ಧತೆ ನಡೆಸುತ್ತಿದೆ. ಪಾಕಿಸ್ತಾನ, ಚೀನಾ ಗಡಿ ಪ್ರದೇಶಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ ಮಾಡುತ್ತಿದ್ದು, ಭವಿಷ್ಯದ ಸವಾಲುಗಳನ್ನು ಎದುರಿಸಲು ಸನ್ನದ್ಧಗೊಳ್ಳುತ್ತಿದೆ. ಭಾರತವನ್ನು ಕೆಣಕಲು ಬಂದರೆ ಶತ್ರು ಸಂಹಾರ ಶತಸಿದ್ಧವೆಂಬ ಸಂದೇಶ ನೀಡುವುದಲ್ಲದೆ, ಎಲ್ಲಾ ರೀತಿಯಲ್ಲೂ ಸೇನಾ ಸಾಮರ್ಥ್ಯ ಬಲವರ್ಧನೆ ಮಾಡುವುದರಲ್ಲಿ ಸರ್ಕಾರ ತೊಡಗಿದೆ.



- ವಾಯುಪಡೆ (ಐಎಎಫ್) ತ್ವರಿತ ಪ್ರತಿದಾಳಿ ಪ್ರದರ್ಶನ
- ಯುದ್ಧ ಭೂಮಿಯ ನೈಜ ಕಾರ್ಯಾಚರಣೆ ಪ್ರದರ್ಶನ
- ಹಲವು ವಿಭಾಗಗಳ ಯುದ್ಧ ಸನ್ನದ್ಧತೆ ಖಚಿತಪಡಿಸುವಿಕೆ
- ವಾಯುಪಡೆಯ ಶಸ್ತ್ರಾಸ್ತ್ರಗಳ ಉಡಾವಣೆ ಪ್ರದರ್ಶನ
- ಶಸ್ತ್ರಾಸ್ತ್ರಗಳ ನಿಖರತೆಯ ಪರೀಕ್ಷೆ
- ಯುದ್ಧ ವಿಮಾನಗಳು, ಶಸ್ತ್ರಾಸ್ತ್ರಗಳು ಮತ್ತು ಉಡಾವಣಾ ವ್ಯವಸ್ಥೆಗಳ ನಡುವಿನ ಏಕೀಕರಣದ ಪ್ರಯೋಗ

### ಯುದ್ಧ ವಿಮಾನಗಳು?

- ರಾಫೆಲ್
- ಸುಖೋಯ್ ಎಸ್‌ಯು-30ಎಂಕೆಐ
- ಮಿರೇಜ್-2000
- ಮಿಗ್-29
- ಜಾಗ್ವಾರ್
- ತೇಜಸ್ (ಭಾಗವಹಿಸುವುದು ಖಚಿತವಾಗಿಲ್ಲ)

### ಹೆಲಿಕಾಪ್ಟರ್, ಸರಕು ವಿಮಾನಗಳು?

- ಎಎಚ್-64 ಅಪಾಚೆ
- ಚಿನೂಕ್
- ಸಿ-130ಜೆ, ಸಿ-295, ಸಿ-17
- ಎಲ್‌ಸಿಎಚ್ ಪ್ರಚಂಡ್

### ವಾಯು ರಕ್ಷಣಾ ವ್ಯವಸ್ಥೆಗಳು?

- ಎಸ್-400 (ಸುದರ್ಶನ ಚಕ್ರ) ಕ್ಷಿಪಣಿ ವ್ಯವಸ್ಥೆ
- ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ

### ಅತ್ಯಧಿಕ ಇನ್‌ಸ್ಟಾ ಹಿಂಬಾಲಕರಿರುವ ವಿಶ್ವ ನಾಯಕ

# ಮೋದಿಗೆ 10 ಕೋಟಿ ಫಾಲೋವರ್ಸ್

**ಹೊಸದಿಲ್ಲಿ:** ದೇಶದೊಳಗೆ ಯಾರೇನೇ ಗುಲ್ಲು ಎಬ್ಬಿಸಿದರೂ ಜಾಗತಿಕ ಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ ಕಡಿಮೆಯಾಗಿಲ್ಲ. ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಮೋದಿ ಹಿಂಬಾಲಕರ ಸಂಖ್ಯೆ 10 ಕೋಟಿ (100 ದಶಲಕ್ಷ) ದಾಟಿದ್ದು, ಇನ್‌ಸ್ಟಾದಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವ ವಿಶ್ವ ನಾಯಕ ಮತ್ತು ರಾಜಕಾರಣಿ ಎಂಬ ಮೈಲಿಗಲ್ಲು ಬರೆದಿದ್ದಾರೆ.




ವಿಶ್ವದ ಅತ್ಯಧಿಕ ಇನ್‌ಸ್ಟಾ ಹಿಂಬಾಲಕರನ್ನು ಹೊಂದಿರುವ ಜನಪ್ರಿಯ ವ್ಯಕ್ತಿಗಳ ಯಾದಿಯಲ್ಲಿ ಮೋದಿ 37ನೇ ಸ್ಥಾನ ಸಂಪಾದಿಸಿದ್ದಾರೆ. ಭಾರತದ ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ 16ನೇ ಸ್ಥಾನದಲ್ಲಿದ್ದಾರೆ. ಕೊಹ್ಲಿ, ಅಗ್ರ-20ರೊಳಗೆ ಸ್ಥಾನ ಪಡೆದ ಏಕೈಕ ಭಾರತೀಯರಾಗಿದ್ದಾರೆ.

ಪ್ರಧಾನಿ ಮೋದಿಯವರು 2014ರಲ್ಲಿ ಇನ್‌ಸ್ಟಾಗ್ರಾಂ ಸೇರಿದ್ದರು. ಇತರ ಜಾಗತಿಕ ನಾಯಕರಿಗೆ ಹೋಲಿಸಿದರೆ ಮೋದಿಯವರು ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸಕ್ರಿಯವಾಗಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗಿಂತ ದುಪ್ಪಟ್ಟು ಹಿಂಬಾಲಕರನ್ನು ಮೋದಿ ಹೊಂದಿದ್ದಾರೆ. ನಂತರದಲ್ಲಿರುವ ಐವರು ನಾಯಕರ ಒಟ್ಟು ಹಿಂಬಾಲಕರ ಸಂಖ್ಯೆ, ಮೋದಿ ಹಿಂಬಾಲಕರ ಸಂಖ್ಯೆಗಿಂತ ಕಡಿಮೆಯಿದೆ. ದ್ವಿತೀಯ ಸ್ಥಾನ ಪಡೆದಿರುವ ಟ್ರಂಪ್ 4.32 ಕೋಟಿ (43.2 ದಶಲಕ್ಷ) ಇನ್‌ಸ್ಟಾ ಹಿಂಬಾಲಕರನ್ನು ಹೊಂದಿದ್ದಾರೆ.

ಭಾರತೀಯ ರಾಜಕಾರಣಿಗಳಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ (1.61 ಕೋಟಿ) ದ್ವಿತೀಯ ಸ್ಥಾನದಲ್ಲಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (1.26 ಕೋಟಿ) ತೃತೀಯ ಸ್ಥಾನದಲ್ಲಿದ್ದಾರೆ.

### ಇನ್‌ಸ್ಟಾ ಖಾತೆಗಳು

1. ಇನ್‌ಸ್ಟಾಗ್ರಾಂ - 69.8 ಕೋಟಿ
2. ಕ್ರಿಶ್ಚಿಯಾನೊ ರೊನಾಲ್ಡೊ - 67 ಕೋಟಿ
3. ಲಿಯೊನೆಲ್ ಮೆಸ್ಸಿ - 51.1 ಕೋಟಿ
4. ಸೆಲೆನಾ ಗೊಮೆಸ್ - 41.5 ಕೋಟಿ
5. ಕೈಲಿ ಜೆನ್ನರ್ - 39.1 ಕೋಟಿ
16. ವಿರಾಟ್ ಕೊಹ್ಲಿ - 27.4 ಕೋಟಿ
37. ನರೇಂದ್ರ ಮೋದಿ - 10 ಕೋಟಿ

## ಮೆಸ್ಕಾಂ ಬಿಲ್: ಶನಿವಾರ ರಜೆ ಇಲ್ಲ

**ಮಂಗಳೂರು:** ಗ್ರಾಹಕರಿಗೆ ವಿದ್ಯುತ್ ಬಿಲ್‌ಗಳನ್ನು ಪಾವತಿಸಲು ಅನುಕೂಲವಾಗುವಂತೆ ಸಾರ್ವತ್ರಿಕ ರಜಾ ದಿನವಾದ ಫೆ. 28 (ನಾಲ್ಕನೇ ಶನಿವಾರ) ರಂದು ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ಮೆಸ್ಕಾಂನ ಎಲ್ಲಾ ನಗದು ಕೌಂಟರ್‌ಗಳನ್ನು ತೆರೆದಿಡಲು ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಮೇಲ್ಕಾಣಿಸಿದ ದಿನದಂದು, ಗ್ರಾಹಕರು ಸೌಲಭ್ಯದ ಸದುಪಯೋಗಪಡಿಸಿಕೊಂಡು ವಿದ್ಯುತ್ ಬಿಲ್‌ಗಳನ್ನು ಪಾವತಿಸಿ ಸಹಕರಿಸುವಂತೆ ಮೆಸ್ಕಾಂ ತಿಳಿಸಿದೆ.

## ವಿದ್ಯಾರ್ಥಿಗೆ ಹಲ್ಲೆ

**ಮಂಗಳೂರು:** ಸಹಪಾಠಿ ವಿದ್ಯಾರ್ಥಿನಿ ಜೊತೆ ಮಾತನಾಡಿದ ಕಾರಣಕ್ಕೆ ವಿದ್ಯಾರ್ಥಿ ಮೇಲೆ ವ್ಯಕ್ತಿಗಳಿಬ್ಬರು ಹಲ್ಲೆ ನಡೆಸಿದ ಘಟನೆ ಮಂಗಳೂರಿನಲ್ಲಿ ಸಂಭವಿಸಿದೆ.

ನಗರದ ಬಾಬುಗುಡ್ಡೆ ಸಮೀಪ ಗ್ರಾಮಸಂಘ ಎಂಬಲ್ಲಿ ಈ ಘಟನೆ ನಡೆದ ಬಗ್ಗೆ ವೀಡಿಯೋ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಕುರಿತು ಮಂಗಳೂರು ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಗಿದೆ.

ಫೆಬ್ರವರಿ 23 ರಂದು ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಬ್ಬರು ಬಾಬುಗುಡ್ಡೆಯ ರೈಲ್ವೆ ಟ್ರ್ಯಾಕ್ ಸಮೀಪ ಮಾತನಾಡುತ್ತಾ ಇದ್ದಾಗ ಆರೋಪಿಗಳಾದ ಸ್ಟೀವನ್ ಮೊಂತೆರೋ ಹಾಗೂ ಆಲ್ವಿನ್ ಸೇರಿಕೊಂಡು ಜಾತಿನಿಂದನೆ ಮಾಡಿ ಹಲ್ಲೆಗೆ ಮುಂದಾದರು ಎಂದು ಆರೋಪಿಸಲಾಗಿದೆ.

'ಕಿಸ್ ಮಾಡಿದ ವೀಡಿಯೋ ನಮ್ಮಲ್ಲಿದೆ, ಅದನ್ನು ಫೇಸ್ ಬುಕ್ ನಲ್ಲಿ ಹರಿಯಬಿಟ್ಟು ಮಾನ ತೆಗೆಯುತ್ತೇವೆ' ಎಂದು ಬೆದರಿಸಿದ್ದಲ್ಲದೆ, ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿಗಳ ಬಳಿ ಧಾವಿಸಿದ ಈ ವ್ಯಕ್ತಿಗಳು ಹಲ್ಲೆ ನಡೆಸಿ ಕ್ಷಮಾಪಣೆಗೆ ಒತ್ತಾಯಿಸಿದ್ದಾರೆ. ಓರ್ವ ಆರೋಪಿ ಹಲ್ಲೆ ಮಾಡುತ್ತಿರುವಾಗ ಇನ್ನೋರ್ವ ಆರೋಪಿ ಇದನ್ನು ತನ್ನ ಮೊಬೈಲಲ್ಲಿ ಸೆರೆಹಿಡಿಯುತ್ತಿದ್ದುದು ವಿಡಿಯೋ ತುಣುಕಿನಲ್ಲಿ ಕಂಡುಬಂದಿದೆ. ಈ ಬಗ್ಗೆ ಆರೋಪಿಗಳಿಬ್ಬರ ವಿರುದ್ಧ ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವ್ಯಕ್ತಿಯ ಶವ ಪತ್ತೆ

**ಕುಂದಾಪುರ:** ಕುಂದಾಪುರದ ಶಾಸ್ತ್ರಿ ಪಾರ್ಕ್‌ನ ಬಳಿ ಇರುವ ಪೊಲೀಸ್ ಓಪಿ ಬಳಿ ಸುಮಾರು 45 ರಿಂದ 50 ವರ್ಷ ಪ್ರಾಯದ ಅಪರಿಚಿತ ಗಂಡಸಿನ ಮೃತ ಶರೀರ ಕಂಡುಬಂದಿದೆ. ಈ ವ್ಯಕ್ತಿಯು ಎಲ್ಲಿಂದಲೋ ಕೂಲಿ ಕೆಲಸಕ್ಕೆ ಬಂದಿರುವಂತೆ ಕಂಡು ಬಂದಿದ್ದು ಯಾವುದೋ ಅನಾರೋಗ್ಯದ ಕಾರಣದಿಂದ ಅಥವಾ ಹೃದಯ ಸಂಬಂಧಿ ಖಾಯಿಲೆಯಿಂದ ಮೃತಪಟ್ಟಿರಬಹುದಾಗಿ ಮೇಲ್ನೋಟಕ್ಕೆ ಕಂಡುಬಂದಿದೆ. ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





## ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

**ತಿರುವನಂತಪುರಂ:** ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-612) ಡ್ರಾ ಫೆಬ್ರವರಿ 26ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

**1st Prize Rs.1,00,00,000/- [1 Crore]**
**PU 650286 (MOOVATTUPUZHA)**

**Consolation Prize Rs.5,000/-**
PN 650286 PO 650286 PP 650286 PR 650286
PS 650286 PT 650286 PV 650286 PW 650286
PX 650286 PY 650286 PZ 650286

**2nd Prize Rs.30,00,000/- [30 Lakhs]**
**PT 617033 (ALAPPUZHA)**

**3rd Prize Rs.5,00,000/- [5 Lakhs]**
**PO 363606 (PALAKKAD)**

FOR THE TICKETS ENDING WITH THE FOLLOWING NUMBERS

**4th Prize Rs.5,000/-**
0504 1438 1829 2390 2658 3188 3297 3929 4679 4996 5221 5522 5696 6450 6639 8146 8704 9219 9331

**5th Prize Rs.2,000/-**
2302 3528 4092 4323 4639 6763

**6th Prize Rs.1,000/-**
1053 1413 1706 2346 2404 2452 2610 2942 2951 4069 4177 4787 4913 4938 6552 6974 7184 7553 7601 8023 8383 8388 9477 9810 9832

**7th Prize Rs.500/-**
0009 0145 0147 0258 0289 0429 0448 0523 0714 0744 0813 0824 0848 0855 0999 1019 1242 1297 1657 1692 1737 1876 1919 2114 2194 2248 2280 2370 2632 2699 2763 2843 2989 3322 3406 3678 3768 3773 3865 3973 4119 4238 4304 4375 4388 4451 4502 4792 4847 5228 5279 5622 5657 5762 5847 6299 6381 6524 6547 6760 7203 7288 7308 7381 7432 7589 7611 7688 7797 7872 7937 8463 8545 8656 8844 8971

**8th Prize Rs.200/-**
0050 0066 0218 0227 0228 0349 0407 0452 0515 0542 0636 0745 0986 1207 1298 1423 1602 1717 2009 2266 2293 2495 2695 2741 2827 2937 3026 3096 3179 3220 3266 3398 3850 3885 4108 4163 4235 4245 4315 4504 4583 4740 4855 5059 5109 5308 5464 5691 5714 5743 5893 6217 6337 6357 6390 6573 6574 6706 6787 6894 6993 6994 7084 7179 7299 7356 7505 7522 7607 7715 7841 7884 7960 8001 8078 8088 8568 8796 9130 9297 9504 9769 9949 9960

**9th Prize Rs.100/-**
0003 0014 0049 0088 0203 0244 0292 0294 0340 0352 0569 0638 0654 0702 0705 0809 0948 1107 1183 1233 1317 1371 1394 1501 1628 1638 1643 1691 1701 1719 1747 1770 1809 1853 1934 2325 2435 2688 2725 2747 2808 2842 2908 3361 3416 3493 3552 3570 3622 3652 3698 3734 3760 3772 3863 3943 4015 4062 4172 4233 4322 4379 4386 4450 4612 4689 4709 4801 4840 4867 4878 4995 5001 5054 5188 5190 5196 5253 5467 5592 5604 5641 5747 5768 5835 5867 5926 5927 5972 5985 6036 6067 6134 6175 6258 6270 6372 6437 6447 6576 6609 6884 6908 6935 7210 7322 7377 7417 7431 7514 7561 7662 7712 7718 7792 7824 8014 8045 8070 8089 8099 8132 8222 8512 8582 8596 8613 8672 8688 8707 8738 8795 8879 8885 8992 9104 9164 9249 9275 9309 9380 9435 9497 9534 9617 9654 9732 9740 9772 9827 9854 9873 9876 9883 9923 9996













### ಪುತ್ತೂರು ಮಾರುಕಟ್ಟೆ ಧಾರಣೆ

26-02-2026 ಅಡಿಕೆ ಧಾರಣೆ ಕೆ.ಜಿ.ಗೆ

| | | | |
|---|---|---|---|
| ಹೊಸ ಅಡಿಕೆ | 260 - 480 | ಹಳೆ ಕರಿಗೋಟು | 240 - 270 |
| ಚೋಲ್ ಅಡಿಕೆ | 505 - 535 | ಹಸಿ ಕೊಕ್ಕೋ | 80 - 110 |
| ಡಬಲ್ ಚೋಲ್ | 505 - 535 | ಒಣ ಕೊಕ್ಕೋ | 350 - 380 |
| ಹೊಸ ಪಠೋರ | 365 - 415 | **ಕಾಳುಮೆಣಸು ಧಾರಣೆ** | |
| ಹಳೆ ಪಠೋರ | 400 - 430 | ಕಾಳುಮೆಣಸು | 465 - 665 |
| ಹೊಸ ಉಳ್ಳಿ | 115 - 300 | **ರಬ್ಬರ್ ಧಾರಣೆ : ಗ್ರೇಡ್** | |
| ಹಳೆ ಉಳ್ಳಿ | 105 - 305 | ಆರ್‌ಎಸ್‌ಎಸ್ 1 | 217.00 |
| ಹೊಸ ಕೋಕಾ | 330 - 350 | ಆರ್‌ಎಸ್‌ಎಸ್ 2 | 197.00 |
| ಹಳೆ ಕೋಕಾ | 355 - 375 | ಸ್ಕ್ರಾಪ್ 1 | 138.00 |
| ಹೊಸ ಕರಿಗೋಟು | 240 - 270 | ಸ್ಕ್ರಾಪ್ 2 | 130.00 |

## ಕಿರುಸುದ್ದಿ

### ಮಾ.1: ಸಾಮೂಹಿಕ ವಿವಾಹ ನಿಶ್ಚಿತಾರ್ಥ

**ಬಂಟ್ವಾಳ:** ಪುಂಜಾಲಕಟ್ಟೆ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್‌ನ 42ನೇ ವರ್ಷಾಚರಣೆ ಪ್ರಯುಕ್ತ ಪುಂಜಾಲಕಟ್ಟೆ ಬಂಗ್ಲೆ ಮೈದಾನದಲ್ಲಿ ಮಾ.8ರಂದು ನಡೆಯಲಿರುವ 18ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭದ ಪ್ರಯುಕ್ತ ವಧು-ವರರ ನಿಶ್ಚಿತಾರ್ಥ ಕಾರ್ಯಕ್ರಮ ಮಾ.1ರಂದು ಪುಂಜಾಲಕಟ್ಟೆ ಬಂಗ್ಲೆ ಮೈದಾನದ ಒಳಾಂಗಣ ಕ್ರೀಡಾಂಗಣದ ಸಭಾಂಗಣದಲ್ಲಿ ಜರಗಲಿದೆ. ಈ ಬಾರಿ ಒಟ್ಟು 7 ಜೋಡಿಗಳಿಗೆ ವಿವಾಹ ನಡೆಯಲಿದ್ದು, ತುಳುನಾಡಿನ ಸಂಪ್ರದಾಯ ಪ್ರಕಾರ ನಿಶ್ಚಿತಾರ್ಥ ನಡೆಯಲಿದೆ. ಈ ಸಂದರ್ಭದಲ್ಲಿ ಭಾವೀ ವಧು-ವರರಿಗೆ ಮಂಗಳವಸ್ತ್ರವನ್ನು ವಿತರಿಸಲಾಗುವುದು. ಪುಂಜಾಲಕಟ್ಟೆ ಉದ್ಯಮಿ ಗಣೇಶ್ ಮೂಲ್ಯ ಅನಿಲಡೆ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶ್ರೀ ಕ್ಷೇತ್ರ ಕಾರಿಂಜದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ವೀರೇಂದ್ರ ಬಿ.ಅಮೀನ್ ಅವರು ಅಧ್ಯಕ್ಷತೆ ವಹಿಸುವರು. ಉದ್ಯಮಿ ಜಗನ್ನಾಥ ಶೆಟ್ಟಿ ಕೆದ್ದಳಿಕೆ ಅವರು ಮಂಗಳ ವಸ್ತ್ರ ವಿತರಿಸುವರು. ವಿವಿಧ ಕ್ಷೇತ್ರಗಳ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿರುವರು ಎಂದು ಕ್ಲಬ್ ಸ್ಥಾಪಕಾಧ್ಯಕ್ಷ ಎಂ.ತುಂಗಪ್ಪ ಬಂಗೇರ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಅಗ್ನಿಶಾಮಕ ದಳದ ಸಿಬ್ಬಂದಿ ಪಿ.ಎಂ. ಕಾರ್ತಿಕ್‌ಗೆ ಚಿನ್ನದ ಪದಕ



**ಮಂಗಳೂರು:** ನಗರದ ಪಾಂಡೇಶ್ವರ ಅಗ್ನಿಶಾಮಕ ದಳದ ಸಿಬ್ಬಂದಿ ಪಿ.ಎಂ. ಕಾರ್ತಿಕ್ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿ ಅವರ ಚಿನ್ನದ ಪದಕ ಲಭಿಸಿದೆ. ಮಂಗಳೂರು ಕುಂಪಲ ನಿವಾಸಿಯಾಗಿರುವ ಕಾರ್ತಿಕ್ ಅವರು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಹುದ್ದೆಗೆ 2008ರಲ್ಲಿ ಸೇರ್ಪಡೆಗೊಂಡು ಬುನಾದಿ ತರಬೇತಿಯನ್ನು ಬೆಂಗಳೂರಿನ ಆರ್.ಎ. ಮುಂಡ್ಕೂರು ತರಬೇತಿ ಕೇಂದ್ರದಲ್ಲಿ ಪಡೆದು ಮಡಿಕೇರಿ, ಗೋಣಿಕೊಪ್ಪ, ಉಡುಪಿ, ಬೆಳ್ತಂಗಡಿ ಅಗ್ನಿಶಾಮಕ ಠಾಣೆಯಲ್ಲಿ ಸೇವೆ ಸಲ್ಲಿಸಿ, ಪ್ರಸ್ತುತ ಪಾಂಡೇಶ್ವರ ಅಗ್ನಿಶಾಮಕ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವೆ ಗುರುತಿಸಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ 2025ನೇ ಸಾಲಿನ ಮುಖ್ಯಮಂತ್ರಿಯವರ ಚಿನ್ನದ ಪದಕ ನೀಡಿ ಗೌರವಿಸಿದೆ.

### ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಉಪರಾಷ್ಟ್ರಪತಿಯ ಪತ್ನಿ ಭೇಟಿ

**ಸುಬ್ರಹ್ಮಣ್ಯ:** ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರ ಪತ್ನಿ ಆರ್. ಸುಮತಿ ಗುರುವಾರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿದರು. ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಸೀತಾರಾಮ ಎಡಪಡಿತ್ತಾಯರು ಅವರಿಗೆ ಶಾಲು ಹೊದಿಸಿ ಮಹಾಪ್ರಸಾದ ನೀಡಿದರು. ನಂತರ ಪ್ರಸಾದ ಭೋಜನ ಸ್ವೀಕರಿಸಿದರು. ಆರ್. ಸುಮತಿ ಅವರನ್ನು ದೇವಳದ ಕಾರ್ಯ ನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ಸ್ವಾಗತಿಸಿದರು. ಈ ಸಂದರ್ಭ ಎಇಒ ಎಸ್.ಜೆ.ವೈ. ರಾಜ್, ಶಿಷ್ಟಾಚಾರ ಅಧಿಕಾರಿ ಜಯರಾಮ ರಾವ್, ಶಿಷ್ಟಾಚಾರ ವಿಭಾಗದ ಶ್ರೀಮಂತ ಜೋಳದಪ್ಪಗೆ, ನೇಮಿರಾಜ್, ಮಾಧವ ಗೌಡ ಉಪಸ್ಥಿತರಿದ್ದರು.

### ಮಹಿಳಾ ಪೊಲೀಸ್‌ನ ಕೈ ಬೆರಳು ಮುರಿದು ಪರಾರಿಯಾದ ಆರೋಪಿ ಸೆರೆ


**ಕಾಸರಗೋಡು:** ಬಂಧಿಸುವ ಯತ್ನದ ಮಧ್ಯೆ ಮಹಿಳಾ ಪೊಲೀಸ್‌ನ ಕೈ ಬೆರಳನ್ನು ಮುರಿದು ಪರಾರಿಯಾಗಲು ಯತ್ನಿಸಿದ ಆರೋಪಿ ಸೆರೆಯಾಗಿದ್ದಾನೆ. ಹೊಸಬೆಟ್ಟು ನಿವಾಸಿ ಮೊಯ್ದೀನ್ ಸಮಾನ್ (33)ನನ್ನು ಮಂಜೇಶ್ವರ ಠಾಣಾ ಪೊಲೀಸ್ ಇನ್‌ಸ್ಪೆಕ್ಟರ್ ಅಜಿತ್‌ಕುಮಾರ್ ನೇತೃತ್ವದ ತಂಡ ಗುರುವಾರ ಮುಂಜಾನೆ ಮಂಗಳೂರು ಕಲ್ಲಾಪು ತರಕಾರಿ ಮಾರುಕಟ್ಟೆಯಿಂದ ಸೆರೆ ಹಿಡಿದಿದೆ. ಜನವರಿ ತಿಂಗಳ 14ರಂದು ಮಧ್ಯಾಹ್ನ ಹೊಸಂಗಡಿಯಲ್ಲಿ ಯುವಕ ಮತ್ತು ಯುವತಿಯಲ್ಲಿ ಹಣಕ್ಕೆ ಬೇಡಿಕೆ ಇರಿಸಿದ ಪ್ರಕರಣ ನಡೆದಿತ್ತು. ಕೇಸಿನ ಆರೋಪಿಗಳಲ್ಲಿ ಕೆಲವರನ್ನು ಬಂಧಿಸಿದ್ದ ಪೊಲೀಸ್ ತಂಡ ಈತನನ್ನು ಬಂಧಿಸಲೆಂದು ಮಂಗಳೂರಿಗೆ ತೆರಳಿದಾಗ ಮಂಜೇಶ್ವರ ಪೊಲೀಸ್ ಠಾಣೆಯ ಮಹಿಳಾ ಸಿವಿಲ್ ಪೊಲೀಸ್ ಆಫೀಸರ್‌ರ ಕೈಯ ಬೆರಳನ್ನು ಮುರಿದು ಮೊಯ್ದೀನ್ ಸಮಾನ್ ಪರಾರಿಯಾಗಿದ್ದನೆಂದು ಪೊಲೀಸರು ತಿಳಿಸಿದ್ದಾರೆ.



ಕೇರಳದ ಅಕ್ಕುಳಂ - ಚೇಟುವಾ ಜಲಮಾರ್ಗದ ಮೊದಲ ಹಂತ, ಚೆಲಕೂರು ಪ್ರವಾಸೋದ್ಯಮ ಯೋಜನೆ ಮತ್ತು ಒಳನಾಡು ದೋಣಿ ವಿಹಾರ ಸಹಿತ ವಿವಿಧ ಯೋಜನೆಗಳ ಉದ್ಘಾಟನೆಯನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿರುವನಂತಪುರದಲ್ಲಿ ಗುರುವಾರ ನೆರವೇರಿಸಿದರು.

## ಇಂದು ರಾಜ್ಯಾದ್ಯಂತ ಬೆಳ್ಳಿತೆರೆ ಏರಲಿದೆ ಬಿರ್ದ್‌ದ ಕಂಬುಲ, ವೀರ ಕಂಬಳ ಚಿತ್ರ

**ಪುತ್ತೂರು:** ತುಳುನಾಡಿನ ಹೆಮ್ಮೆಯ ಕಂಬಳವನ್ನು ದೇಶ ವಿದೇಶಗಳಲ್ಲಿ ಪಸರಿಸುವ ಉದ್ದೇಶದಿಂದ ನಿರ್ಮಿಸಲಾದ ತುಳು ಭಾಷೆಯ 'ಬಿರ್ದ್‌ದ ಕಂಬುಲ', ಕನ್ನಡ ಭಾಷೆಯ 'ವೀರ ಕಂಬಳ' ಚಲನಚಿತ್ರ ಫೆ.27ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆಎಂದು ಚಿತ್ರದನಿರ್ಮಾಪಕ ಅರುಣ್ ರೈ ತೋಡಾರ್, ಚಿತ್ರದ ಕಾರ್ಯಕಾರಿ ನಿರ್ಮಾಪಕ ರಾಜೇಶ್ ಕುಡ್ಲ,ಹಾಗೂ ಚಿತ್ರದ ನಟ ಶಿವಧೂತ ಗುಳಿಗ ಮತ್ತು ಕಾಂತರ ಚಿತ್ರದ ಖ್ಯಾತಿಯ ಸ್ವರಾಜ್ ಶೆಟ್ಟಿ ಹೇಳಿದ್ದಾರೆ.



ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಂಬಳ ಎಂದಾಗ ಜಾತ್ರೆಯ ರೀತಿಯಲ್ಲಿ ನಡೆಯುತ್ತದೆ. ತುಳುನಾಡಿನ ಜನರು ಈ ಸಿನಿಮಾವನ್ನು ಗೆಲ್ಲಿಸಿ ಕೊಡುವಂತೆ ವಿನಂತಿಸಿದರು. ಚಿತ್ರದಲ್ಲಿ ಕಂಬಳ ಆರಂಭದಿಂದ ಹಿಡಿದು ಕಂಬಳ ನಿಂತು ಹೋದಾಗ ಅದರ ಹೋರಾಟದ ಚಿತ್ರಣ ಮತ್ತು ಕಂಬಳದ ಗೆಲುವು ಕುರಿತು ಸವಿಸ್ತಾರವಾಗಿ ಪ್ರೇಕ್ಷಕರ ಮನ ಮುಟ್ಟುವಂತೆ ಚಿತ್ರ ನಿರ್ಮಾಣ ಮಾಡಿದ್ದೇವೆ. ಕಂಬಳದ ಗುಣಪಾಲ ಕಡಂಬ, ರಾಜೇಶ ಶೆಟ್ಟಿ, ವಿಜಯ ಕುಮಾರ್ ಕೋಡಿಯಾಲ್‌ಬೈಲ್ ವಿಶೇಷ ಸಹಕಾರ ನೀಡಿದ್ದಾರೆ. ತುಳು ಚಿತ್ರರಂಗದಲ್ಲೇ ಅತೀ ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾದ ಚಿತ್ರವಿದು ಎಂದರು. ಚಿತ್ರದ ಇನ್ನೋರ್ವ ನಟ ಸುಂದರ ರೈ ಮಂದಾರ ಮಾತನಾಡಿ, ಸಿನಿಮಾ ಕ್ಷೇತ್ರಕ್ಕೆ ಈ ಚಿತ್ರವೊಂದು ದೊಡ್ಡ ಕೊಡುಗೆಯಾಗಿದೆ ಎಂದರು. ಚಿತ್ರದಲ್ಲಿ 5 ಹಾಡುಗಳಿವೆ, ಚಿತ್ರದಲ್ಲಿ ಆದಿತ್ಯ, ರಾಧಿಕಾ ಚೇತನ್, ನವೀನ್ ಡಿ. ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು, ಉಷಾ ಭಂಡಾರಿ, ವೀಣಾ ಪೊನ್ನಪ್ಪ, ಗೀತಾ ಸುರತ್ಕಲ್, ಸುಂದರ ರೈ ಮಂದಾರ, ಸ್ವರಾಜ್ ಶೆಟ್ಟಿ, ದಿವ್ಯ, ಶ್ರೀನಿವಾಸ ಗೌಡ, ಸುರೇಶ್ ಶೆಟ್ಟಿ, ಚೇತನ್ ರೈ ಮಾಣಿ, ಯುವ ಶೆಟ್ಟಿ, ಮೈಮ್ ರಮೇಶ್, ಪ್ರಕಾಶ್ ರೈ, ರವಿಶಂಕರ್, ಶೋಭರಾಜ್, ಸಂತೋಷ್ ಶೆಟ್ಟಿ ಅಭಿಯನಿಸಿದ್ದಾರೆ ಎಂದವರು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರ ನಟ ಸುಂದರ ರೈ ಮಂದಾರ, ಪುತ್ತೂರಿನ ಚಿತ್ರದ ಹಂಚಿಕೆದಾರ ಬಾಲಕೃಷ್ಣ ರೈ ಕುಕ್ಕಾಡಿ ಉಪಸ್ಥಿತರಿದ್ದರು.

ಲೋಕಾಯುಕ್ತದ ಬಾಕಿ ಪ್ರಕರಣಗಳ ವಿಚಾರಣೆ, ವಿಲೇವಾರಿ ಸಭೆ | ನ್ಯಾ. ಬಿ.ವೀರಪ್ಪ ಕಿವಿಮಾತು

# ಸುಳ್ಳು ದೂರುಗಳಿಗೆ ಕಾದಿದೆ ಶಿಕ್ಷೆ, ದಂಡ!

**ಉಡುಪಿ:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತಿ ದೊಡ್ಡ ಪಿಡುಗಾಗಿರುವ ಭ್ರಷ್ಟಾಚಾರವನ್ನು ಬುಡ ಸಮೇತ ನಿರ್ಮೂಲನೆ ಮಾಡಲು ಲೋಕಾಯುಕ್ತ ಸಂಸ್ಥೆ ಸದಾ ಬದ್ಧವಾಗಿದ್ದು, ಎಲ್ಲಾ ಅಧಿಕಾರಿಗಳು ಕರ್ತವ್ಯವೇ ದೇವರು ಎಂಬ ಸೇವಾ ಮನೋಭಾವದೊಂದಿಗೆ ಭ್ರಷ್ಟಾಚಾರವೆಂಬ ಭೂತವನ್ನು ನಿರ್ನಾಮ ಮಾಡಲು ಸಂಕಲ್ಪ ಮಾಡಬೇಕು ಎಂದು ರಾಜ್ಯ ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಹೇಳಿದರು.

'ರಜತಾದ್ರಿ' ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ದೇಶಕ್ಕೆಸ್ವಾತಂತ್ರ್ಯಬಂದು79ವರ್ಷಗಳುಕಳೆದಿದೆ. ಇತ್ತೀಚೆಗಷ್ಟೇ 77 ನೇ ಗಣರಾಜ್ಯೋತ್ಸವವನ್ನು ಆಚರಿಸಿ, ಸಂಭ್ರಮಿಸಿದ್ದೇವೆ. ಪ್ರಪಂಚದಲ್ಲಿಯೇ ನಮ್ಮ ಭಾರತ ದೇಶ 4 ನೇ ಅಗ್ರಗಣ್ಯ ಸ್ಥಾನದಲ್ಲಿದೆ. ಹೀಗಿದ್ದರೂ ಸಹ ದೇಶದ ನ್ಯಾಯದಾನ ವ್ಯವಸ್ಥೆ ಹಾಗೂ ಲೋಕಾಯುಕ್ತ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಆಗುತ್ತಿಲ್ಲ ಎಂದ ಅವರು, ನಮ್ಮ ಪೂರ್ವಜರು ದೀರ್ಘ ಹೋರಾಟ ಮಾಡಿ ಸ್ವಾತಂತ್ರ್ಯವನ್ನು ಒದಗಿಸಿ ಕೊಟ್ಟಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ಹಾಗೂ ಸಿಬ್ಬಂದಿಗಳು ಸಾರ್ವಜನಿಕರಿಗೆ ನಿಯ ಮಾನುಸಾರ ಸಕಾಲದಲ್ಲಿ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವುದರೊಂದಿಗೆ ಪದೇ ಪದೇ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಬೇಕು. ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿಯಂತ್ರಿಸಲು ಅಧಿಕಾರಿಗಳೊಂದಿಗೆ ಸಾರ್ವಜನಿಕರು ಕೂಡ ಬದಲಾಗಬೇಕಾದ ಅನಿವಾರ್ಯತೆ ಇದೆ ಎಂದ ಅವರು, ಚುನಾವಣಾ ಸಮಯದಲ್ಲಿ ಜನರು ಯಾವುದೇ ಆಮಿಷಗಳಿಗೆ ಒಳಗಾಗದೇ ಮತ ಚಲಾವಣೆ ಮಾಡಬೇಕು ಎಂದರು.



ಉಡುಪಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲೋಕಾಯುಕ್ತದಿಂದ ವಿಚಾರಣೆ

### ವಿಳಂಬ ಧೋರಣೆ ಸಲ್ಲ

ಜಿಲ್ಲೆಯ ನಿವೃತ್ತ ಯೋಧರಿಗೆ, ಹುತಾತ್ಮ ಯೋಧರ ಅವಲಂಬಿತರಿಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಅವಲಂಭಿತರಿಗೆ ದೊರೆಯಬೇಕಾದ ನಿವೇಶನ ನಿಗದಿತ ಸಮಯದಲ್ಲಿ ನೀಡದಿರುವ ಬಗ್ಗೆ ದೂರುಗಳನ್ನು ಪರಿಶೀಲಿಸಿ, ವಿಳಂಬವಿಲ್ಲದೇ ನಿಯಮಾನುಸಾರ ನಿವೇಶನ ನೀಡಬೇಕೆಂದು ಉಪ ವಿಭಾಗಾಧಿಕಾರಿಗಳಿಗೆ ನ್ಯಾಯಮೂರ್ತಿ ಬಿ.ವೀರಪ್ಪ ಸೂಚಿಸಿದರು.

ಈಗಾಗಲೇ ರಾಜ್ಯದ ಪ್ರತಿಯೊಂದೂ ಜಿಲ್ಲೆಗೂ ಭೇಟಿ ನೀಡಿ, ಅಲ್ಲಿರುವ ಲೋಕಾಯುಕ್ತ ಸಂಸ್ಥೆಗೆ ನೀಡಲಾಗಿರುವ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುತ್ತಿದ್ದು, ಈ ಜಿಲ್ಲೆಯ 150 ಬಾಕಿ ಪ್ರಕರಣಗಳನ್ನು ಇಂದು ವಿಚಾರಣೆ ನಡೆಸಲಾಗುತ್ತಿದೆ. ಸಾರ್ವಜನಿಕರು ಹಾಗೂ ಅಧಿಕಾರಿಗಳ ಸಹಕಾರದೊಂದಿಗೆ ಇವುಗಳನ್ನು ಪೂರ್ಣಗೊಳಿಸಲು ಸಹಕಾರ ನೀಡಬೇಕು. ಒಂದೊಮ್ಮೆಸುಳ್ಳುಪ್ರಕರಣಗಳನ್ನುಸಾರ್ವಜನಿಕರು ನೀಡಿದ್ದಲ್ಲಿ ಅಂತಹವರ ಮೇಲೆಯೂ ಸಹ ಪ್ರಕರಣ ದಾಖಲಿಸಿ, ಮೂರು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಅವಕಾಶವಿದೆ ಎಂದರು.

### ಪ್ರಕರಣ ಮುಕ್ತಾಯ

ಬಾಕಿ ಇರುವ ಪ್ರಕರಣಗಳ ವಿಲೇವಾರಿ ಸಭೆಯಲ್ಲಿ ಬನ್ನಂಜೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆಯ ಬಗ್ಗೆ, ರಾಜ್ಯ ಮಹಿಳಾ ನಿಲಯದಲ್ಲಿನ ಅನಾಥರಿಗೆ ಮೂಲಭೂತ ಸೌಕರ್ಯ ಮತ್ತು ಅವರು ತಯಾರಿಸುವ ಉತ್ಪನ್ನಗಳ ಬೆಲೆಯ ವ್ಯತ್ಯಯ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕಚೇರಿಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳು, ಚಿತ್ರಪಾಡಿ ಶಾಲೆಯ ಅಡುಗೆ ಕೋಣೆ ಹಾಗೂ ಶೌಚಾಲಯಗಳ ನ್ಯೂನ್ಯತೆಗಳು ಕಂಡು ಬಂದ ಹಿನ್ನೆಲೆ, ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡ ದೂರುಗಳ ವಿಚಾರಣೆ ನಡೆಸಿ, ಅವುಗಳಿಗೆ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಿರುವ ಬಗ್ಗೆ ಲೋಕಾಯುಕ್ತ ಅಧೀಕ್ಷಕರ ವರದಿಯನ್ನಾಧರಿಸಿ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮತ್ತು ಸತ್ರನ್ಯಾಯಾಧೀಶಕಿರಣ್‌ಗಂಗಣ್ಣನವರ್ ಮಾತನಾಡಿ, ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಧಿಕಾರಿಗಳು ಸಂಭವಿಸಬಹುದಾದ ಎಲ್ಲಾ ನ್ಯೂನ್ಯತೆಗಳನ್ನು ಮೀರಿ ಕಾರ್ಯತತ್ಪರತೆಯಲ್ಲಿ ಹೊಸ ದೃಷ್ಟಿಕೋನವನ್ನು ಅಳವಡಿಸಿಕೊಂಡು ಕೆಲಸ ನಿರ್ವಹಿಸಬೇಕು. ಲೋಕದ ಹಿತದೃಷ್ಟಿಯಲ್ಲಿ ತಮ್ಮ ಸೇವೆಯನ್ನು ಮುಡಿಪಾಗಿಟ್ಟು, ಮಾನ್ಯ ಲೋಕಾಯುಕ್ತ ನ್ಯಾಯಮೂರ್ತಿಗಳ ಮಾರ್ಗದರ್ಶನದಲ್ಲಿ ಯಶಸ್ಸು ಕಾಣಬೇಕು ಎಂದರು.

ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸ್ವಾಗತ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಉಪ ನಿಬಂಧಕರು ವಿಚಾರಣೆ - 1 ಅರವಿಂದ್ ಎನ್.ವಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಮಂಗಳೂರು ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಬಿ. ಪಿ. ದಿನೇಶ್ ಕುಮಾರ್ , ಡಿ.ಎಫ್.ಓ, ರುಥ್ರೇನ್ ಪಿ, ವೈಲ್ಡ್ ಲೈಫ್ ಡಿ.ಎಫ್.ಓ. ಶಿವರಾಮ್ ಎಂ. ಬಾಬು, ವಿವಿಧ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ರೋಶನ್ ಕುಮಾರ್ ಶೆಟ್ಟಿ ನಿರೂಪಿಸಿ, ಹಿರಿಯ ಸಿವಿಲ್ ನ್ಯಾಯಾಧೀಶ ಮನು ಪಟೇಲ್ ಬಿ.ವೈ. ವಂದಿಸಿದರು.

## ರಾಜ್ಯ ಮಟ್ಟದ ಬಿಲಿಯರ್ಡ್ಸ್, ಸ್ನೂಕರ್ ಚಾಂಪಿಯನ್‌ಶಿಪ್‌ಗೆ ಅದ್ದೂರಿ ಚಾಲನೆ

**ಮಂಗಳೂರು:** ಕೋಸ್ಮೋಪೊಲಿಟನ್ ಕ್ಲಬ್ ವತಿಯಿಂದ ಮಂಗಳೂರಿನ ಬಾವುಟ ಗುಡ್ಡೆಯಲ್ಲಿರುವ ಕೋಸ್ಮೋಪೊಲಿಟನ್ ಕ್ಲಬ್ ಒಳಾಂಗಣ ಕ್ರೀಡಾಂಗಣದಲ್ಲಿ ಮಾ.1ರವರೆಗೆ ನಡೆಯಲಿರುವ ರಾಜ್ಯ ಮಟ್ಟದ ಆಹ್ವಾನಿತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್‌ಶಿಪ್‌ಗೆ ಗುರುವಾರ ಚಾಲನೆ ನೀಡಲಾಯಿತು.

ಚಾಂಪಿಯನ್‌ಶಿಪ್ ಉದ್ಘಾಟಿಸಿ ಮಾತನಾಡಿದ ಕ್ಲಬ್ ಅಧ್ಯಕ್ಷ ಎ. ಸದಾನಂದ ಶೆಟ್ಟಿ, ಮಂಗಳೂರಿನ ಕೋಸ್ಮೋಪೊಲಿಟನ್ ಕ್ಲಬ್ ಕೇವಲ ಒಂದು ಕಟ್ಟಡವಲ್ಲ, ಇದು ಮಂಗಳೂರಿನ ಸಾಮಾಜಿಕ ಮತ್ತು ಕ್ರೀಡಾ ಇತಿಹಾಸದ ಜೀವಂತ ಸಾಕ್ಷಿ. 125 ವರ್ಷಗಳನ್ನು ಪೂರೈಸುವುದು ದೊಡ್ಡ ಸಾಧನೆ. ಈ ಬಾರಿ ಆಯೋಜಿಸಿರುವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಪಂದ್ಯಾವಳಿಯು ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಲಿ ಎಂದರು.

ಟೂರ್ನಮೆಂಟ್ ಚೇರ್ಮನ್ ರಾಜಗೋಪಾಲ್ ರೈ ಮಾತನಾಡಿ, ನಮ್ಮ ಕ್ಲಬ್ ಬ್ರಿಟಿಷರ ಕಾಲದಿಂದಲೂ ಬೆಳೆದು ಬಂದಿದ್ದು, ಇಲ್ಲಿನ ಬಿಲಿಯರ್ಡ್ಸ್ ಟೇಬಲ್‌ಗಳು ಕೂಡ ಶತಮಾನದ ಇತಿಹಾಸ ಹೊಂದಿವೆ. ಈ ಮಣ್ಣಿನಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಆಟಗಾರರು ಹೊರಹೊಮ್ಮಿದ್ದಾರೆ. ಈ ಬಾರಿ ರಾಜ್ಯದಾದ್ಯಂತ ಇರುವ ಪ್ರತಿಭಾವಂತ ಆಟಗಾರರನ್ನು ಆಹ್ವಾನಿಸಿ ಈ ಸಮರವನ್ನು ಆಯೋಜಿಸಿದ್ದೇವೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಹೆಸರಾಂತ 14 ಮಂದಿ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು.



ರಾಜ್ಯದ ನಂಬರ್ 1 ಆಟಗಾರ ಶಾನ್ ಡೇವಿಸ್ ಮಾತನಾಡಿ, ಇಂತಹ ಐತಿಹಾಸಿಕ ಕ್ಲಬ್‌ನಲ್ಲಿ ಆಟವಾಡುವುದು ನಮಗೆ ಸಿಕ್ಕ ಗೌರವ. ಸ್ನೂಕರ್‌ನಂತಹ ಕ್ರೀಡೆಗಳಿಗೆ ಪ್ರಾಯೋಜಕತ್ವದ ಕೊರತೆ ಇರುತ್ತದೆ, ಆದರೆ ಕಾಸ್ಮೊಪೊಲಿಟನ್ ಕ್ಲಬ್‌ನಂತಹ ಸಂಸ್ಥೆಗಳು 125ನೇ ವರ್ಷದ ಸಂಭ್ರಮದಲ್ಲಿ ಇಂತಹ ಪಂದ್ಯಾವಳಿ ಆಯೋಜಿಸುವ ಮೂಲಕ ಕ್ರೀಡಾಪಟುಗಳಿಗೆ ಆಸರೆಯಾಗಿವೆ ಎಂದರು.

ಕ್ಲಬ್ ಉಪಾಧ್ಯಕ್ಷ ಸುರೇಶ್ಚಂದ್ರ ಶೆಟ್ಟಿ, ಕಾರ್ಯದರ್ಶಿ ಎಂ.ಸಿ.ಶೆಟ್ಟಿ, ಕೋಶಾಧಿಕಾರಿ ದೇವಿಚರಣ್ ಶೆಟ್ಟಿ, ಕ್ರೀಡಾ ಕಾರ್ಯದರ್ಶಿ ಯೋಗೀಶ್ ಕುಮಾರ್, ಪದಾಧಿಕಾರಿಗಳಾದ ರಾಮರಾಜ್ ರೈ, ಮನೋಜ್, ಪ್ರದೀಪ್, ಪ್ರಸಾದ್ ರೈ ಕಲ್ಲಿಮಾರ್, ಪಿ.ವಿ.ಹೆಗ್ಡೆ, ಉದಯ ಶಂಕರ್ ರೈ ಮತ್ತಿತರರಿದ್ದರು.

ಈ ಚಾಂಪಿಯನ್ ಶಿಪ್ ಮಾ. 1ರವರೆಗೆ ನಡೆಯುತ್ತಿದ್ದು, ಬಿ. ಭಾಸ್ಕರ್, ಎಂ. ಯೋಗೀಶ್, ಬಿ.ಸಿ. ಕಾರ್ತಿಕ್ ಮತ್ತು ಕೀರ್ತಿ ಪಾಂಡ್ಯ ಸೇರಿದಂತೆ ದೇಶದ ಖ್ಯಾತನಾಮ 14 ಮಂದಿ ರಾಷ್ಟ್ರಮಟ್ಟದ ಕ್ರೀಡಾಪಟುಗಳು ಪಾಲ್ಗೊಳ್ಳುತ್ತಿದ್ದಾರೆ.

## ಶಾಸಕ ಕಾಮತ್ ಸಾಮಾಜಿಕ ಬದ್ಧತೆ: ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ಶ್ಲಾಘನೆ

**ಮಂಗಳೂರು:** ಕಳೆದ ಹಲವಾರು ದಶಕಗಳಿಂದ ನನೆಗುದಿಗೆ ಬಿದ್ದು ಸಾರ್ವಜನಿಕ ಹಿತಾಸಕ್ತಿ ಹಾಗೂ ಸಂಚಾರ ವ್ಯವಸ್ಥೆಯ ದೃಷ್ಟಿಯಲ್ಲಿ ಬಹಳ ಪ್ರಮುಖವಾಗಿದ್ದ ವಿಷಯವೊಂದನ್ನು ಸಂಧಾನದ ಮೂಲಕ ಬಗೆಹರಿಸಿ ತನ್ಮೂಲಕ ನಗರದ ಅಭಿವೃದ್ಧಿ ಹಾಗೂ ಸುಗಮ ಸಂಚಾರ ವ್ಯವಸ್ಥೆಗೆ ಪೂರಕ ವ್ಯವಸ್ಥೆಯನ್ನು ನಿರ್ಮಾಣ ಮಾಡಿ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಿದ ಶಾಸಕ ಡಿ. ವೇದವ್ಯಾಸ್ ಕಾಮತ್ ಅವರ ಕಾರ್ಯಕ್ಷಮತೆಗೆ ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ಶ್ಲಾಘನೆ ವ್ಯಕ್ತಪಡಿಸಿದೆ.

**20 ಕೋ.ರೂ. ಬೆಲೆಯ ಜಮೀನು**

ಕೇರಳ ಹಾಗೂ ಬೆಂಗಳೂರು ಕಡೆಯಿಂದ ಬರುವ ವಾಹನಗಳ ಜೊತೆಗೆ ಇತರ ವಾಹನಗಳೂ ಕೂಡಾ ಮಂಗಳೂರು ನಗರಕ್ಕೆ ಕಂಕನಾಡಿ ಬೈಪಾಸ್ ರಸ್ತೆಯ ಮೂಲಕ ಬರುತ್ತಿವೆ. ಈ ದಾರಿಯಲ್ಲಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಸಂಬಂಧಿಸಿದ ಜಮೀನು ರಸ್ತೆ ಅಗಲಗೊಳಿಸುವ ನಿಟ್ಟಿನಲ್ಲಿ ಅಗತ್ಯವಾಗಿದ್ದು, 20 ಕೋಟಿ ರೂ. ಬೆಲೆಬಾಳುವ ಈ ಜಮೀನನ್ನು ಶಾಸಕ ವೇದವ್ಯಾಸ ಕಾಮತ್ ಅವರು ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ಮಂಗಳೂರು ಮಹಾನಗರ ಪಾಲಿಕೆಯ ಆಡಳಿತ ಮಂಡಳಿಯೊಂದಿಗೆ ಮಾತುಕತೆ ನಡೆಸಿ ಸಂಧಾನದ ಮೂಲಕ ಎರಡೂ ಕಡೆಯವರಿಗೂ ಅನ್ಯಾಯವಾಗದಂತೆ ಸಮಾಧಾನಕರ ರೀತಿಯಲ್ಲಿ ಸಮಸ್ಯೆ ಪರಿಹರಿಸಿದ್ದಾರೆ. ಇದೀಗ ಸುಮಾರು 20 ಸೆಂಟ್ಸ್ ಜಾಗವನ್ನು ಆಸ್ಪತ್ರೆಯ ಆಡಳಿತ ಮಂಡಳಿಯವರು ನಗರಪಾಲಿಕೆಗೆ ಹಸ್ತಾಂತರಿಸುವಲ್ಲಿ ಶಾಸಕರ ನಡೆ ಹಾಗೂ ಕಾರ್ಯಕ್ಷಮತೆ ನಿಜಕ್ಕೂ ಶ್ಲಾಘನೀಯ ಎಂದು ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ಸ್ಥಾಪಕ ಫ್ರಾಂಕ್ಲಿನ್ ಮೊಂತೆರೊ ಶಾಸಕರನ್ನು ಅಭಿನಂದಿಸಿದ್ದಾರೆ.

ಈ ಸಂಧಾನದ ನಡಾವಳಿಯಲ್ಲಿ ಮಾರ್ಗದರ್ಶನ ಮಾಡಿದ ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ರೆ. ಡಾ. ಪೀಟರ್ ಪೌಲ್ ಸಲ್ಡಾನಾ, ಸಹಕರಿಸಿದ ಫಾದರ್ ಮುಲ್ಲರ್ ಆಸ್ಪತ್ರೆಯ ನಿರ್ದೇಶಕ ವಂ. ಫಾವುಸ್ತಿನ್ ಲೋಬೊ ಹಾಗೂ ನಗರಪಾಲಿಕೆಯ ಆಯುಕ್ತರನ್ನು ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆಯ ಪ್ರಮುಖರಾದ ಲ್ಯಾನಿ ಮರಿಜಾ ಪಿಂಟೊ, ವಕೀಲರಾದ ರ‍್ಹೀಟಾ ಮೋರಸ್, ರೇಶ್ಮಾ ಡಿಸೋಜ, ಪ್ರಮುಖರಾದ ಮ್ಯಾಕ್ಸಿಂ ಕ್ರಾಸ್ತಾ, ರೋಶನ್ ಡಿಸೋಜ, ನವೀನ್ ಫೆರ್ನಾಂಡಿಸ್, ಜೋನ್ಸಿ ರೇಗೊ, ಪ್ರಕಾಶ್ ಡಿಸೋಜ, ವಿಜಯ್ ಪಿಂಟೊ, ಪ್ರವೀಣ್ ಫೆರ್ನಾಂಡಿಸ್, ಮೆಲ್ವಿನ್ ಫೆರಾವೊ, ಫ್ರಾನ್ಸಿಸ್ ಪಿಂಟೊ, ರಿಚರ್ಡ್ ರೋಡ್ರಿಗಸ್ ಬಿಜೈ, ಜೂಲಿಯಟ್ ಡಿಕುನ್ಹ ಉರ್ವಸ್ಟೋರ್ ಮುಂತಾದವರು ಅಭಿನಂದಿಸಿದ್ದಾರೆ.

### ಆದಷ್ಟು ಶೀಘ್ರ ಸಂಧಾನ ನಡೆಸಲಿ

ಆಸ್ಪತ್ರೆಯ ಮುಂಭಾಗದಲ್ಲಿರುವ ಕೈಸ್ತ ಕನ್ಯಾ ಮಠಕ್ಕೆ ಸಂಬಂಧಿಸಿದ ಜಮೀನಿನ ಇದೇ ರೀತಿಯ ಇನ್ನೊಂದು ಸಮಸ್ಯೆಯಿದ್ದು ಇದನ್ನು ಕೂಡಾ ಶಾಸಕರು ಆದಷ್ಟು ಶ್ರೀಘ್ರದಲ್ಲಿ ಮಾತುಕತೆ ಸಂಧಾನ ನಡೆಸಿ ನಗರಪಾಲಿಕೆಗೆ ಹಸ್ತಾಂತರಿಸುವಲ್ಲಿ ಕಾರ್ಯತತ್ಪರರಾಗಬೇಕೆಂದು ರಾಷ್ಟ್ರೀಯವಾದಿ ಕ್ರೈಸ್ತರ ವೇದಿಕೆ ಮನವಿ ಮಾಡಿಕೊಂಡಿದೆ. ತನ್ಮೂಲಕ ಕಂಕನಾಡಿ ಭಾಗದಲ್ಲಿ ಆಗುವ ವಾಹನ ದಟ್ಟಣೆ ಹಾಗೂ ಸಂಚಾರದ ಅಡೆತಡೆಗೆ ಶಾಶ್ವತ ಪರಿಹಾರ ಲಭಿಸಲಿದೆ ಎಂದು ವೇದಿಕೆ ಹೇಳಿದೆ.

ಸೆ. 27: ಕೂಟ ಸಮುದಾಯದ ಸದಸ್ಯರನ್ನು ಒಂದೇ ವೇದಿಕೆಯಡಿಗೆ ತರಲು ಮಂಗಳೂರಿನಲ್ಲಿ ಕೇಂದ್ರ ಅಧಿವೇಶನ

## ಕೇಂದ್ರ ಸಮಿತಿಯಿಂದ ಸರ್ವ ಸಹಕಾರ: ಸತೀಶ್ ಹಂದೆ

**ಮಂಗಳೂರು:** ಕೂಟ ಸಮುದಾಯದ ಮಹತ್ವದ ಕೇಂದ್ರ ಅಧಿವೇಶನವು ಸೆ. 27ರಂದು ಮಂಗಳೂರು ನಗರದ ಸಂಘನಿಕೇತನದಲ್ಲಿ ನಡೆಯಲಿದ್ದು, ಇದರ ಕರಪತ್ರವನ್ನು ಭಾನುವಾರ ಪಾಂಡೇಶ್ವರದಲ್ಲಿರುವ ಕೂಟ ಸಭಾ ಭವನದಲ್ಲಿ ಬಿಡುಗಡೆಗೊಳಿಸಲಾಯಿತು.

**ಒಂದೇ ವೇದಿಕೆಯಡಿಗೆ ತರಲು ಸಿದ್ಧತೆ**

ವಿಶ್ವದ ನಾನಾ ಭಾಗಗಳಲ್ಲಿ ವಾಸಿಸುವ ಕೂಟ ಸಮುದಾಯದ ಸದಸ್ಯರನ್ನು ಒಂದೇ ವೇದಿಕೆಯಡಿಗೆ ತರಲು, ಪರಸ್ಪರ ಪರಿಚಯ ಮತ್ತು ವಿಚಾರ ವಿನಿಮಯದ ಮೂಲಕ ಸಾಂಘಿಕ ಬೆಳವಣಿಗೆ ಸಾಧಿಸುವ ಉದ್ದೇಶದಿಂದ ಈ ಅಧಿವೇಶನ ಆಯೋಜಿಸಲಾಗುತ್ತಿದೆ ಎಂದು ಕೇಂದ್ರ ಸಮಿತಿಯ ಅಧ್ಯಕ್ಷ ಸತೀಶ್ ಹಂದೆ ತಿಳಿಸಿದರು. ಮಂಗಳೂರು ಅಂಗ ಸಂಸ್ಥೆಯು ಈ ಬಾರಿ ಅಧಿವೇಶನದ ಜವಾಬ್ದಾರಿ ಹೊತ್ತು ಮುನ್ನಡೆಸುತ್ತಿರುವುದನ್ನು ಶ್ಲಾಘಿಸಿ, ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ಕೇಂದ್ರ ಸಮಿತಿ ನೀಡಲಿದೆ ಎಂದು ಅವರು ಭರವಸೆ ನೀಡಿದರು.



**ಹೊಸ ಅಧ್ಯಾಯ ಬರೆವ ದೃಢ ಸಂಕಲ್ಪ**

ಮಂಗಳೂರು ಅಂಗ ಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಮಾತನಾಡಿ, ಕೂಟ ಸಮಾಜದ ಇತಿಹಾಸ ಯಾತ್ರೆಯಲ್ಲಿ ಹೊಸ ಅಧ್ಯಾಯವನ್ನು ಬರೆಯುವ ದೃಢ ಸಂಕಲ್ಪದೊಂದಿಗೆ, ಪ್ರಥಮ ಬಾರಿಗೆ ಮಂಗಳೂರು ಘಟಕದ ನೇತೃತ್ವದಲ್ಲಿ ಕೇಂದ್ರ ಅಧಿವೇಶನವನ್ನು ಆಯೋಜಿಸುತ್ತಿದ್ದೇವೆ. ಇದು ಕೇವಲ ಒಂದು ಕಾರ್ಯಕ್ರಮವಲ್ಲ; ಸಂಘಟನೆಯ ಅಂತರಂಗ ಶಕ್ತಿ, ಏಕತಾ ಸ್ಫೂರ್ತಿ ಹಾಗೂ ಸಮಾಜಮುಖಿ ಬದ್ಧತೆಯನ್ನು ರಾಷ್ಟ್ರಮಟ್ಟದಲ್ಲಿ ಘೋಷಿಸುವ ಐತಿಹಾಸಿಕ ಹೆಜ್ಜೆಯಾಗಿದೆ ಎಂದರು. ಸಂಘಟನೆಯ ಮೂಲ ಮೌಲ್ಯಗಳು, ಸಾಧನೆಗಳ ಶಿಖರಗಳು ಮತ್ತು ಭವಿಷ್ಯದ ದಿಕ್ಕು ನಿರ್ದೇಶಗಳನ್ನು ದೇಶದಾದ್ಯಂತ ಪರಿಣಾಮಕಾರಿಯಾಗಿ ಸಾರಲು ಪ್ರತಿಯೊಬ್ಬ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ, ಹೃದಯಪೂರ್ವಕ ಸಹಕಾರ ಹಾಗೂ ಅಚಲ ಬೆಂಬಲ ಅತ್ಯಾವಶ್ಯಕವೆಂದು ಅವರು ಮನವಿ ಮಾಡಿದರು.

ಉದ್ಯಮಿ ರಘುನಾಥ ಸೋಮಯಾಜಿ ಮಾತನಾಡಿ, ಎಲ್ಲರನ್ನು ಒಂದೇ ವೇದಿಕೆಯಡಿಗೆ ತರಲು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಇದು ಮಾದರಿ ಅಧಿವೇಶನವಾಗಿ ಹೊರಹೊಮ್ಮಲಿದೆ. ಇದಕ್ಕಾಗಿ ಸಮುದಾಯದ ಸಮಗ್ರ ಸಹಕಾರ ಅಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉದ್ಯಮಿ ವಿಶ್ವೇಶ್ವರ ಬದವಿದೆ, ಕೇಂದ್ರ ಉಪಾಧ್ಯಕ್ಷ ನ್ಯಾಯವಾದಿ ಸದಾಶಿವ ಐತಾಳ್, ಕಾರ್ಯದರ್ಶಿ ಗೋಪಾಲಕೃಷ್ಣ ಮಯ್ಯ, ಉಪಾಧ್ಯಕ್ಷ ಪ್ರಭಾಕರ ಐತಾಳ್ ಹಾಗೂ ಸದಸ್ಯರಾದ ಚಂದ್ರಮೋಹನ್, ರಂಗನಾಥ ಐತಾಳ್, ಗಣೇಶ ಎಮ್ಮೆಕೆರೆ, ಪ್ರಸನ್ನ ಇರುವೈಲು, ಪ್ರವೀಣ್ ಮಯ್ಯ, ವ್ಯವಸ್ಥಾಪಕ ಶಿವರಾಮ ರಾವ್, ಮಹಿಳಾ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ವಿವಿಧ ಅಂಗ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಏ.4 ರಿಂದ 6 : ರಾಜ್ಯ ಮಟ್ಟದ ಶಿಕ್ಷಣ ಮತ್ತು ತಂತ್ರಜ್ಞಾನ ಮೇಳ

**ಮಂಗಳೂರು:** ರುಪ್ಸಾ ಮತ್ತು ಕುಪ್ಮಾ ಸಹಯೋಗದಲ್ಲಿ ಅಕಾಡೆಮಿಕ್ ಎಕ್ಸಲೆನ್ಸ್ ಮತ್ತು ಟೆಕ್ ಎಕ್ಸ್‌ಪೋ ರಾಜ್ಯ ಮಟ್ಟದ ಶಿಕ್ಷಣ ಮತ್ತು ತಂತ್ರಜ್ಞಾನ ಮೇಳ ಮೈಸೂರಿನ ಮಹಾರಾಜ ಮೈದಾನದಲ್ಲಿ ಏ.4 ರಿಂದ 6ರವರೆಗೆ ನಡೆಯಲಿದೆ.

ದಕ್ಷಿಣ ಕನ್ನಡ ಮತ್ತು ಮೈಸೂರು ಭಾಗದ ಶಿಕ್ಷಣ ಸಂಸ್ಥೆಗಳ ನಡುವೆ ಸಮನ್ವಯ, ಪರಸ್ಪರ ಸಹಕಾರ ಮತ್ತು ಮಾನವೀಯ ಶಿಕ್ಷಣ ಮೌಲ್ಯವನ್ನು ಬೆಳೆಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ವಿದ್ಯಾರ್ಥಿಗಳಿಗೆ ಎಐ, ರೋಬೋಟಿಕ್ಸ್, ಡಿಜಿಟಲ್ ಲರ್ನಿಂಗ್ ಮತ್ತು ಪ್ರಾಯೋಗಿಕ ಶಿಕ್ಷಣದ ಪ್ರದರ್ಶನದ ಮೂಲಕ ಹೊಸ ಕಲಿಕೆಯ ಅನುಭವವನ್ನು ನೀಡಲಿದೆ ಎಂದು ರುಪ್ಸಾದ ಡಾ. ಮಂಜುನಾಥ್ ರೇವಣ್ಕರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇಳದಲ್ಲಿ ಪೋಷಕರಿಗೆ ವಿವಿಧ ಶಾಲೆಗಳ ಅಕಾಡೆಮಿಕ್ ಗುಣಮಟ್ಟ, ಬೋಧನಾ ವಿಧಾನ, ಸೌಲಭ್ಯಗಳನ್ನು ತಿಳಿದುಕೊಳ್ಳುವ ಅವಕಾಶ ನೀಡಲಾಗುತ್ತದೆ. ದ.ಕ.ದಿಂದ ಮತ್ತು ಮೈಸೂರು ಭಾಗದಿಂದ 200ಕ್ಕೂ ಅಧಿಕ ಶಾಲಾ, ಕಾಲೇಜುಗಳು ತಮ್ಮ ಮಳಿಗೆಯನ್ನು ಇಡಲಿದ್ದಾರೆ. ಈ ಮೂಲಕ ಶಾಲೆಗಳಲ್ಲಿ ದಾಖಲಾತಿಯನ್ನು ಮಾಡುವ ಅವಕಾಶ ಕೂಡ ಇರಲಿದೆ ಎಂದರು.

ಕುಪ್ಮಾ ಸಂಸ್ಥೆಯ ವಿಶ್ವನಾಥ್ ಶೇಷಾಚಲ ಮಾತನಾಡಿ, ಇದೇ ಸಂದರ್ಭ 8 ವಿಭಾಗದಲ್ಲಿ ಶಾಲಾ, ಕಾಲೇಜುಗಳಿಗೆ ಎಕ್ಸಲೆನ್ಸ್ ಅವಾರ್ಡ್ ನೀಡಲಾಗುತ್ತದೆ ಎಂದು ತಿಳಿಸಿದರು.

ರುಪ್ಸಾದ ಮೈಸೂರು ಅಧ್ಯಕ್ಷ ನಂಜುಂಡಸ್ವಾಮಿ ಮತ್ತು ರುಪ್ಸಾದ ಸಂಘಟನಾ ಕಾರ್ಯದರ್ಶಿ ಮಂಜುನಾಥ್ ಉಪಸ್ಥಿತರಿದ್ದರು.

## ಕಿರುಸುದ್ದಿ

### ಮಾ. 6ರಂದು ಕಾವೂರು ಶ್ರೀ ಕ್ಷೇತ್ರದ ಪ್ರತಿಷ್ಠಾ ವರ್ಧಂತಿ

**ಮಂಗಳೂರು:** ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕಳೆದ ವರ್ಷ ಜರುಗಿದ ಶ್ರೀ ದೇವರ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ವರ್ಷಾಚರಣೆ ಹಿನ್ನೆಲೆಯಲ್ಲಿ ಪ್ರತಿಷ್ಠಾ ವರ್ಧಂತಿ ಕಾರ್ಯಕ್ರಮ ಮಾ. 6ರಂದು ನಡೆಯಲಿದೆ. ಮಾ.6ರಂದು ಕ್ಷೇತ್ರದಲ್ಲಿ ವಿಶೇಷವಾಗಿ ಶತರುದ್ರಾಭಿಷೇಕ ಸೇವೆ ಹಾಗೂ ಶ್ರೀ ರುದ್ರ ಯಾಗ ಸೇವೆ ನಡೆಯಲಿದೆ. ಶತರುದ್ರಾಭಿಷೇಕ ಮತ್ತು ರುದ್ರಯಾಗದಲ್ಲಿ ಸಹಭಾಗಿತ್ವ ವಹಿಸಲು ಭಕ್ತಾದಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಸೇವಾ ಚಟುವಟಿಕೆಯಲ್ಲಿ ಭಾಗವಹಿಸಲು ಇಚ್ಛಿಸುವ ಭಕ್ತರು ತಮ್ಮ ಹೆಸರನ್ನು



ಕ್ಷೇತ್ರದ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಸೇವೆ ಸಲ್ಲಿಸುವ ಭಕ್ತರು ಪ್ರತಿಷ್ಠಾ ವರ್ಧಂತಿಯಂದು ಬೆಳಿಗ್ಗೆ 9 ಗಂಟೆಗೆ ಸೇವಾ ಸಂಕಲ್ಪಕ್ಕಾಗಿ ಹಾಜರಿರಬೇಕು ಎಂದು ಕ್ಷೇತ್ರದ ಪ್ರಧಾನ ಅರ್ಚಕ ಕೆ. ಶ್ರೀನಿವಾಸ ಭಟ್ ತಿಳಿಸಿದ್ದಾರೆ. ಸೀಮೆಯ ಭಕ್ತರು ಹಾಗೂ ಕ್ಷೇತ್ರದ ಪರವೂರಿನ ಭಕ್ತರು ಸೇವೆಯಲ್ಲಿ ಭಾಗವಹಿಸಬೇಕು. ಅನ್ನಸಂತರ್ಪಣೆ ಮಧ್ಯಾಹ್ನ 1ರಿಂದ 2.30ರ ವರೆಗೆ ನಡೆಯಲಿದ್ದು, ಪೂಜೆಯ ಸಹಭಾಗಿತ್ವ ವಹಿಸಿದ ಭಕ್ತಾದಿಗಳಿಗೆ ಸೇವಾ ಪ್ರಸಾದ ವಿತರಣೆ ಮಾಡಲಾಗುವುದು ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

### ಜೆಇಇ ಮೈನ್ ಪರೀಕ್ಷೆ: ಸುಜಲ್ ಎಸ್. ತೋಳಾರ್ ಸಾಧನೆ

**ಹೆಮ್ಮಾಡಿ:** ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸುವ ರಾಷ್ಟ್ರ ಮಟ್ಟದ ಜೆಇಇ ಮೈನ್ಸ್ 2026ರ ಪ್ರಥಮ ಹಂತದ ಪರೀಕ್ಷೆಯಲ್ಲಿ ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿ ಸುಜನ್ ಎಸ್. ತೋಳಾರ್ 98.17ಪರ್ಸಂಟೈಲ್ ಅಂಕ ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಯ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ, ಬೋಧಕೇತರ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.



## ಇಂದು ಯಕ್ಷಗಾನ

**ಶ್ರೀ ಕಟೀಲು ಯಕ್ಷಗಾನ ಮೇಳ**

1. ಶ್ರೀ ದೇವಿ ಮಿತ್ರ ಮಂಡಳಿ, ಜತ್ತಬೆಟ್ಟು, ಜೋಗಟ್ಟೆ.
2. ಕಮಲಾಕ್ಷಿ ಶೀನ ಬಂಗೇರ, ಬಿಜೈ, ಕಾಪಿಕಾಡು – ಉರ್ವಸ್ಟೋರ್ ಶ್ರೀ ಮಹಾಗಣಪತಿ ದೇವಸ್ಥಾನ ವಠಾರ.
3. ಸೀತಾ ಏಕನಾಥ ಜೋಗಿ ಸ್ಮರಣಾರ್ಥ ಮಕ್ಕಳು, 'ಶ್ರೀ ದೇವಿ ಅನುಗ್ರಹ', ದೇರೆಬೈಲು, ಕೊಂಚಾಡಿ.
4. ಭುಜಂಗ ಆಚಾರ್ಯ, 'ಶ್ರೀ ದುರ್ಗಾ ಕೃಪಾ', ಪಂಚಾಯತ್ ಕಛೇರಿ ಬಳಿ, ಎರ್ಮಾಳ್ ತೆಂಕ.
5. ಪ್ರತೀಕ್ಷಾ ಅಮೀನ್, 'ನಿತ್ಯಾನಂದ ನಿವಾಸ', ತೊಂದಡ್ಪು, ಕಡಂದಲೆ, ಪಾಲಡ್ಕ.
6. ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಜ್ಯೋತಿಗುಡ್ಡೆ, ಮಾಣೂರು, ಕಳ್ಳಿಗೆ, ಬಂಟ್ವಾಳ (ತಾ).
7. ಪದ್ಮನಾಭ ಕುಂದರ್, 'ಶ್ರೀಪ', ಕೊಡೆತ್ತೂರು, ಮುಖ್ಯ ರಸ್ತೆ, ಕಿನ್ನಿಗೋಳಿ

**ಶ್ರೀ ಧರ್ಮಸ್ಥಳ ಮೇಳ**
ಹೊಸಂಗಡಿ ಕಪ್ಪೆಹೊಂಡದಲ್ಲಿ
ಶ್ರೀ ನಿತ್ಯಾನಂದ ಗಾಣಿಗ ಮತ್ತು ಕುಟುಂಬಸ್ಥರು, ಕಪ್ಪೆಹೊಂಡ

**ಶ್ರೀ ಸಾಲಿಗ್ರಾಮ ಮೇಳ**
ನಾಳೆ, ಆರ್ಡಿ ಕೆರ್ಜಾಡಿಯಲ್ಲಿ-ಸ್ವಪ್ನಮಂಟಪ

**ಶ್ರೀ ಪೆರ್ಡೂರು ಮೇಳ**
ಇಟಗಿಯಲ್ಲಿ- ಬ್ರಹ್ಮಕಪಾಲ, ವೀರ ಬರ್ಬರಿಕೆ

**ಶ್ರೀ ಹನುಮಗಿರಿ ಮೇಳ**
ಮಿಂಚಿಪದವಿನಲ್ಲಿ

**ಶ್ರೀ ಪಾವಂಜೆ ಮೇಳ**
ಪಂಚವರ್ಣ ನಾಗಬನ, ಪಡುಕೆರೆ, ಹೆಜಮಾಡಿಯಲ್ಲಿ
ಶ್ರೀ ದೇವಿ ಮಹಾತ್ಮೆ



ಮನಸೆಳೆಯುತ್ತಿದೆ ಸುಳ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಎನ್ನೆಸ್ಸೆಸ್ ವಿದ್ಯಾರ್ಥಿ ತಂಡದ ಕೈಚಳಕ

# ಮಂಡೆಕೋಲು ಶಾಲೆಗೆ ವರ್ಲಿ ಟಚ್!

ಮಿಥುನ್ ಕರ್ಲಪ್ಪಾಡಿ

ದಿಗಂತ ವಿಶೇಷ

**ಸುಳ್ಯ:** ಸುಳ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳ 'ಫ' (ಎಫ್‌ಎ) ತಂಡದ ಸದಸ್ಯರು ಗಡಿ ಗ್ರಾಮವಾದ ಮಂಡೆಕೋಲು ಸರಕಾರಿ ಪ್ರಾಥಮಿಕ ಶಾಲೆಗೆ ಮಹಾರಾಷ್ಟ್ರದ ಬುಡಕಟ್ಟು ಜನಾಂಗದ ರೇಖಾಚಿತ್ರವಾದ 'ವರ್ಲಿ ಚಿತ್ರ' ರಚಿಸುವ ಮೂಲಕ ಸರಕಾರಿ ಶಾಲೆಗೆ ಆಕರ್ಷಣೀಯ ರೂಪ ನೀಡಿದ್ದಾರೆ.

ಮಂಡೆಕೋಲು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಸುಳ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ವಿಶೇಷ ಶಿಬಿರ ಆಯೋಜಿಸಲಾಗಿತ್ತು. ಈ ಸಂದರ್ಭ ಶಿಬಿರದ ವಿವಿಧ ಚಟುವಟಿಕೆಗಳ ಜೊತೆಗೆ ಸುಮಾರು 11 ವಿದ್ಯಾರ್ಥಿಗಳನ್ನೊಳಗೊಂಡ 'ಫ' ಎಂಬ ತಂಡ ಶಾಲೆಯ ಗೋಡೆಯಲ್ಲಿ ವರ್ಲಿ ಚಿತ್ರಗಳನ್ನು ಬರೆಯಲು ನಿರ್ಧರಿಸಿದರು. 'ಫ' ತಂಡದ ವಿದ್ಯಾರ್ಥಿಗಳು 5 ದಿನಗಳಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೆ ವರ್ಲಿ ಚಿತ್ರ ರಚಿಸಲಾರಂಭಿಸಿದರು. ತಂಡ ಶಾಲೆಯ ಗೋಡೆಯಲ್ಲಿ ವಿವಿಧ ಬಗೆಯ ವರ್ಲಿ ಚಿತ್ರಗಳನ್ನು ಬರೆದಿದ್ದು ಇದರಲ್ಲಿ ನೃತ್ಯ ಪ್ರಕಾರ, ಜಾನಪದ, ಕೃಷಿ, ಜಾತ್ರೆ, ಶಾಲಾ ಚಟುವಟಿಕೆ, ಸ್ವಚ್ಛ ಪರಿಸರ ಕಲ್ಪನೆ, ಯೋಗಾಭ್ಯಾಸ ಜಾಗೃತಿ, ಸಾಂಸ್ಕೃತಿಕ ಚಟುವಟಿಕೆ, ಅಕ್ಷರ ದಾಸೋಹ ಸೇರಿದಂತೆ ಸುಮಾರು 20ರಷ್ಟು ವರ್ಲಿಚಿತ್ರಗಳನ್ನು ಗೋಡೆಯಲ್ಲಿ ಚಿತ್ರಿಸಲಾಗಿದೆ. ಈ ಮೂಲಕ ಶಾಲೆಗೆ ಹೊಸ ಆಕರ್ಷಕ ಮೆರಗನ್ನು ಮೂಡಿಸಿದ್ದಾರೆ.

ವಿಶೇಷವೆಂದರೆ, ಇಲ್ಲಿ ವರ್ಲಿ ಚಿತ್ರ ಬರೆದ ವಿದ್ಯಾರ್ಥಿಗಳು ಯಾವುದೇ ತರಬೇತಿ ಪಡೆದವರಲ್ಲ. ತಮ್ಮಲ್ಲಿದ್ದ ಚಿತ್ರಕಲೆಯ ಆಸಕ್ತಿಯಂತೆ, ವರ್ಲಿ ಚಿತ್ರ ಬಿಡಿಸಿದ 'ಫ' ತಂಡದ ವಿದ್ಯಾರ್ಥಿಗಳಾದ ಹಿತೇಶ್ ಕೆ.ಡಿ., ಹೇಮಂತ್ ಡಿ.ಎಸ್., ಸುಜಿಲ್ ಕುಮಾರ್, ಭರತ್ ದ್ರಾವಿಡ್ ಕೆ., ಧನುಷ್ ಕೆ., ದೀಕ್ಷಿತ್ ಕೆ., ಅಮೂಲ್ಯ ಎ.ಕೆ., ಚೈತನ್ ಬಿ., ಪವನ್ ಬಿ.ಕೆ., ಪ್ರಿಯಾ ಕೆ., ಶಿವರಾಮ ಮತ್ತಿತರರು ಚಿತ್ರ ಬರೆದಿದ್ದಾರೆ. ಅವರಿಗೆ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್ ಕಣೆಮರಡ್ಕ, ಶಿಬಿರಾಧಿಕಾರಿಗಳಾದ ಕಿಶೋರ್ ಕುಮಾರ್, ಡಾ. ಮೋನಿಷಾ ಕೆ., ಬಾಲಕೃಷ್ಣ ಪಿ.ಎಸ್., ರಾಮಕೃಷ್ಣ ಕೆ.ಎಸ್. ಹಾಗೂ ಶಾಲಾ ಶಿಕ್ಷಕರು ಸಹಕಾರ ನೀಡಿದ್ದಾರೆ. ಶಾಲಾ ವತಿಯಿಂದ ಪೈಂಟ್, ಬ್ರಷ್‌ಗಳನ್ನು ಒದಗಿಸಲಾಗಿತ್ತು.





### ಅವಿಸ್ಮರಣೀಯ ಕಾರ್ಯ

ಮಂಡೆಕೋಲು ಶಾಲೆಯ ಗೋಡೆಯಲ್ಲಿ ಸುಳ್ಯ ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ವರ್ಲಿ ಚಿತ್ರ ಬರೆದು ಹೊಸ ರೂಪು ನೀಡಿದ್ದಾರೆ. ಶಾಲಾ ವಿದ್ಯಾರ್ಥಿಗಳು ಇದರಿಂದ ಸಂತಸಗೊಂಡಿದ್ದು, ಶಾಲೆಯನ್ನು ಇನ್ನಷ್ಟು ಆಕರ್ಷಣೀಯವಾಗುವಂತೆ ಮಾಡಿದ್ದಾರೆ. ಗಡಿ ಗ್ರಾಮದ ಶಾಲೆಗಯಲ್ಲಿ ನಡೆದ ಎನ್ನೆಸ್ಸೆಸ್ ಶಿಬಿರಗಳ ಪೈಕಿ ಇದು ನೆನಪಿನಲ್ಲಿ ಉಳಿಯುವಂತಹ ಶಿಬಿರವಾಗಿದೆ.

■ ಸುರೇಶ್ ಕಣೆಮರಡ್ಕ, ಅಧ್ಯಕ್ಷರು, ಎಸ್‌ಡಿಎಂಸಿ ಮಂಡೆಕೋಲು ಶಾಲೆ

### ಶಾಲೆಗೆ ಹೊಸ ಮೆರುಗು

ಎನ್ನೆಸ್ಸೆಸ್ ಶಿಬಿರದಲ್ಲಿ ಶಾಲೆಗೆ ಆಕರ್ಷಕ ರೂಪು ನೀಡಲು ನಿರ್ಧರಿಸಲಾಯಿತು. ನಮ್ಮ ತಂಡ ಶಾಲಾ ಗೋಡೆಯಲ್ಲಿ ವರ್ಲಿ ಚಿತ್ರ ಬಿಡಿಸಿದ್ದೇವೆ. ಇದೀಗ ಶಾಲೆಗೆ ಹೊಸ ಮೆರಗು ಬಂದಂತಾಗಿದ್ದು ಅನೇಕರು ಇದಕ್ಕೆ ಸಹಕಾರ ನೀಡಿದ್ದಾರೆ. ನಮ್ಮ ಪ್ರತಿಭೆ ಹೊರ ತರಲು ಈ ಕ್ಯಾಂಪ್ ವೇದಿಕೆ ಸಿಕ್ಕಂತಾಗಿದೆ ಎಂದು ಹಿತೇಶ್ ಕೆ.ಡಿ. ಹೇಳುತ್ತಾರೆ.



▸ ಸ್ವಚ್ಛ ಪರಿಸರ ಕಲ್ಪನೆ, ಯೋಗಾಭ್ಯಾಸ ಜಾಗೃತಿ, ಸಾಂಸ್ಕೃತಿಕ ಚಟುವಟಿಕೆ, ಅಕ್ಷರ ದಾಸೋಹ ಸೇರಿದಂತೆ ಸುಮಾರು 20ರಷ್ಟು ವರ್ಲಿಚಿತ್ರಗಳನ್ನು ಗೋಡೆಯಲ್ಲಿ ಚಿತ್ರಿಸಲಾಗಿದೆ.

ಜೆಇಇ ಬಿ. ಆರ್ಕ್–ಬಿ. ಪ್ಲಾನಿಂಗ್ ಫಲಿತಾಂಶ ಪ್ರಕಟ

## ಕಾರ್ಕಳದ ಕ್ರಿಯೇಟಿವ್ ಕಾಲೇಜಿನ ನಾಗದೇವ್ ದೇಶಕ್ಕೆ ಪ್ರಥಮ ಸ್ಥಾನ



**ಕಾರ್ಕಳ:** ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್. ಟಿ. ಎ.) ವತಿಯಿಂದ ನಡೆಸಲಾದ ಜೆಇಇ ಬಿ.ಆರ್ಕ್ ಮತ್ತು ಬಿ.ಪ್ಲಾನಿಂಗ್‌ನ ಜನವರಿ ಆವೃತ್ತಿಯ ಫಲಿತಾಂಶ ಪ್ರಕಟಗೊಂಡಿದ್ದು ಕ್ರಿಯೇಟಿವ್ ಸಂಸ್ಥೆ ಅತ್ಯುತ್ತಮ ಫಲಿತಾಂಶವನ್ನು ಪಡೆದು ಮತ್ತೊಮ್ಮೆ ರಾಷ್ಟ್ರಮಟ್ಟದಲ್ಲಿ ತನ್ನನ್ನು ಗುರುತಿಸಿಕೊಂಡಿದೆ. ನಾಗದೇವ್ ಎಂ.ಜಿ. ಬಿ.ಪ್ಲಾನಿಂಗ್‌ನಲ್ಲಿ ಜನರಲ್ ಇಡಬ್ಲ್ಯುಎಸ್ ವಿಭಾಗದಲ್ಲಿ ದೇಶಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**ಬಿ. ಪ್ಲಾನಿಂಗ್ ಫಲಿತಾಂಶ**

ನಾಗದೇವ್ ಎಂ.ಜಿ.– 99.9762662, ಸುಕ್ಷಿತ್ ಗಿರೀಶ್ ಗೌಡ– 99.7769023, ಅಭಿರಾಮ್ ಭಟ್ ಜಿ.ಪಿ.– 98.3718612, ದಿಶಾಂತ್ ಎಂ. – 98.2152 181, ನಿಶಾಂತ್ ಹೊನ್ನಾವರ– 98.1107894, ಸಂವಿತ್ ಅಮಿತ್ ಗೋಕರ್ಣ– 98.1107894, ನಿನಾದ್ ರಾಜೇಶ್ ನಾಯ್ಕ್– 98.0490815 ಪರ್ಸಂಟೈಲನ್ನು ಪಡೆದುಕೊಂಡಿದ್ದಾರೆ. ಮಾತ್ರವಲ್ಲದೆ 95 ಪರ್ಸಂಟೈಲ್ ಗಿಂತ 16 ಮಂದಿ ವಿದ್ಯಾರ್ಥಿಗಳು, 90 ಪರ್ಸಂಟೈಲ್ ಗಿಂತ 24 ಮಂದಿ ವಿದ್ಯಾರ್ಥಿಗಳು ಫಲಿತಾಂಶವನ್ನು ಪಡೆದುಕೊಂಡಿದ್ದಾರೆ.

▸ ಒಟ್ಟು 95% ಪರ್ಸಂಟೈಲ್‌ಗಿಂತ 15 ಮಂದಿ ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ 34 ಮಂದಿ ವಿದ್ಯಾರ್ಥಿಗಳು ಫಲಿತಾಂಶವನ್ನು ಪಡೆದುಕೊಂಡಿದ್ದಾರೆ.

**ಬಿ. ಆರ್ಕ್ ಫಲಿತಾಂಶ ಪಟ್ಟಿ**

ನಾಗದೇವ್ ಎಂ.ಜಿ– 99.8371909, ಚೇತನ ಟಿ. ಪಿ.– 97. 6986711, ಶಮಿತ ನಾಯಕ್– 97. 4918595, ನಿಶಾಂತ್ ಹೊನ್ನಾವರ – 97. 4918595, ಅಮೃತ ಎಂ. ನಾಯ್ಕ್ – 97. 3686526, ಸುಕ್ಷಿತ್ ಗಿರೀಶ್ ಗೌಡ– 97. 2542462


ಒಟ್ಟು 95% ಪರ್ಸಂಟೈಲ್‌ಗಿಂತ 15 ಮಂದಿ ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ 34 ಮಂದಿ ವಿದ್ಯಾರ್ಥಿಗಳು ಫಲಿತಾಂಶವನ್ನು ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಕಾಲೇಜಿನ ಪರೀಕ್ಷಾ ಸಂಯೋಜಕರಾದ ಸುಮಂತ್ ದಾಮ್ಲೆ, ಉಪನ್ಯಾಸಕ ವರ್ಗದವರು, ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

ಸಿ.ಎಸ್. ಎಕ್ಸಿಕ್ಯೂಟಿವ್ ಪರೀಕ್ಷೆ ಫಲಿತಾಂಶ

## ಆಳ್ವಾಸ್ ವಿದ್ಯಾರ್ಥಿಗಳ ಅದ್ವಿತೀಯ ಸಾಧನೆ





**ಮೂಡುಬಿದಿರೆ:** 2025 ಡಿಸೆಂಬರ್‌ನಲ್ಲಿ ನಡೆದ ಸಿ.ಎಸ್. ಎಕ್ಸಿಕ್ಯೂಟಿವ್ ಪರೀಕ್ಷೆಯಲ್ಲಿ ಆಳ್ವಾಸ್‌ನ ಕಾಲೇಜಿನ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆಗೈದಿದ್ದಾರೆ.

ಬಿ.ಕಾಂ. ವಿದ್ಯಾರ್ಥಿಗಳಾದ ಪವಿತ್ರಾ ಪ್ರಭು (205), ಶರಶ್ಚಂದ್ರ ದೇವಾಜಿ (203) ಆದಿತಿ ಪ್ರಿಯಾ (201), ಯಶಸ್ ಆರ್.(201), ದೀಕ್ಷಾ (201) ಮತ್ತು ಮನ್ವಿತಾ (165) ಸಿ.ಎಸ್. ಎಕ್ಸಿಕ್ಯೂಟಿವ್ ಮೊಡ್ಯುಲ್–1 ರಲ್ಲಿ ಹಾಗೂ ಸುಚೇತಾ ಎಸ್. (151) ಮತ್ತು ಸಹನಾ ಪ್ರಭು (151) ಸಿ.ಎಸ್. ಎಕ್ಸಿಕ್ಯೂಟಿವ್ ಮೊಡ್ಯುಲ್–2 ರಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.

ಹಿರಿಯ ವಿದ್ಯಾರ್ಥಿನಿಯಾದ ಪ್ರೀತಿ ಎಸ್ ಗೋವೆಕರ್ (156) ಸಿ. ಎಸ್. ಪ್ರೊಫೆಶನಲ್ ಗ್ರೂಪ್–2 ವಿಭಾಗದಲ್ಲಿ ಮೊದಲ ಪ್ರಯತ್ನದಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿ ಕಂಪೆನಿ ಸೆಕ್ರೆಟರಿ ಆಗಿರುತ್ತಾರೆ.

ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಮತ್ತು ಪ್ರಾಂಶುಪಾಲ ಡಾ.ಕುರಿಯನ್ ಹಾಗೂ ಸಿ.ಎಸ್. ಸಂಯೋಜಕರು ಅಭಿನಂದಿಸಿದ್ದಾರೆ.

## ಗೂಗಲ್ ಡೆವಲಪರ್ ಕ್ಲಬ್ ಆನ್ ಕ್ಯಾಂಪಸ್ ಟೆಕ್‌ಸ್ಪ್ರಿಂಟ್ ವಿವೇಕಾನಂದ ಕಾಲೇಜಿಗೆ ಟಿಯರ್–1 ಸ್ಥಾನದ ಸಾಧನೆ

**ಪುತ್ತೂರು:** ನಗರದ ವಿವೇಕಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ (ಸ್ವಾಯತ್ತ) ಕಾಲೇಜಿನ ಬಿಸಿಎ ವಿಭಾಗವು ತಾಂತ್ರಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಗೈದಿದೆ. ಗೂಗಲ್ ಡೆವಲಪರ್ ಕ್ಲಬ್ ಆನ್ ಕ್ಯಾಂಪಸ್ (ಡಿಜಿಡಿಒಸಿ) ಟೆಕ್‌ಸ್ಪ್ರಿಂಟ್(ಗೂಗಲ್‌ಥಾನ್) ಸ್ಪರ್ಧೆಯಲ್ಲಿ ವಿವೇಕಾನಂದ ಕಾಲೇಜ್ ಟಿಯರ್–1 ಸ್ಥಾನವನ್ನು ಪಡೆದು ಅತ್ಯುತ್ತಮ ಸಾಧನೆ ದಾಖಲಿಸಿದೆ.

ಈ ಟೆಕ್‌ಸ್ಪ್ರಿಂಟ್‌ನಲ್ಲಿ ಭಾಗವಹಿಸಿದ ಶಿಕ್ಷಣ ಸಂಸ್ಥೆಗಳನ್ನು ಅವರ ತಾಂತ್ರಿಕ ನೈಪುಣ್ಯ, ನಾವೀನ್ಯತೆ, ತಂಡ ಕಾರ್ಯಕ್ಷಮತೆ ಹಾಗೂ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ ಟಿಯರ್–1, ಟಿಯರ್–2 ಮತ್ತು ಟಿಯರ್–3 ಎಂದು ವರ್ಗೀಕರಿಸಲಾಗುತ್ತದೆ. ಈ ಪೈಕಿ ಟಿಯರ್–1 ಸ್ಥಾನವು ಶ್ರೇಷ್ಠ ಪ್ರದರ್ಶನ ಮತ್ತು ಉನ್ನತ ಗುಣಮಟ್ಟವನ್ನು ಸೂಚಿಸುತ್ತದೆ.



ಈಗಾಗಲೇ ಪ್ರಕಟಿಸಲಾದ ಅಖಿಲ ಭಾರತ ಮಟ್ಟದ ಕ್ಲೌಡ್ ಕ್ಯಾಂಪೈನ್ 'ಕೋಹರ್ಟ್–1' ತಾಂತ್ರಿಕ ಚಟುವಟಿಕೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿರುವುದು ಗಮನಾರ್ಹವಾಗಿದೆ. ಈ ಎರಡೂ ಸಾಧನೆಗಳು ಕಾಲೇಜಿನ ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ, ಪ್ರಾಯೋಗಿಕ ಕಲಿಕೆ ಹಾಗೂ ನಾವೀನ್ಯತೆಯ ಮನೋಭಾವವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.

ಈ ಸಂಪೂರ್ಣ ತಾಂತ್ರಿಕ ಚಟುವಟಿಕೆಯ ವಿನ್ಯಾಸ ಮತ್ತು ಮಾರ್ಗದರ್ಶನವನ್ನು ಡಿಜಿಡಿಒಸಿ ತಂಡದ ಸಚಿನ್ ಉಪರ್ಣಾ ವಹಿಸಿದ್ದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರಕಾಶ್ ಕುಮಾರ್, ಡಿಜಿಡಿಒಸಿ ಸಂಯೋಜಕಿ ಹೇಮಾ ಸುಭಾಷಿಣಿ, ಹಾಗೂ ವಿಭಾಗದ ಎಲ್ಲಾ ಅಧ್ಯಾಪಕರ ಮಾರ್ಗದರ್ಶನ ಮಾಡಿದ್ದಾರೆ.

ಜಿಂಬಾಬ್ವೆ ವಿರುದ್ಧ ಭರ್ಜರಿ ಗೆಲುವು | ಸೆಮಿ ಆಸೆ ಜೀವಂತ | ಮಿಂಚಿದ ಬ್ಯಾಟಿಂಗ್ ಪಡೆ | ಭಾರತಕ್ಕೆ ಹಾದಿ ಮಾಡಿಕೊಟ್ಟ ಹರಿಣರು

# ವಿಂಡೀಸ್ ಪಂದ್ಯ ಗೆದ್ದರೆ ಸೆಮಿಫೈನಲ್‌ಗೆ ಭಾರತ

**ಚೆನ್ನೈ:** ತನ್ನ ಅಸಲು ಲಯಕ್ಕೆ ಮರಳಿದ ಭಾರತ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಜಿಂಬಾಬ್ವೆ ಮೇಲೆ 72 ರನ್‌ಗಳ ಜಯದೊಂದಿಗೆ ಸವಾರಿ ನಡೆಸಿತು. ತಾನ್ಯಾಕೆ ನಂಬರ್ 1 ತಂಡವೆಂದೂ, ಒಂದು ಪಂದ್ಯದ ಸೋಲಿನಿಂದ ಹೆಚ್ಚಿನ ಪರಿಣಾಮ ಬೀಳದು ಎಂದು ಸಾಬೀತು ಮಾಡಿ ಸೆಮಿ ರೇಸ್‌ನಲ್ಲಿ ಉಳಿಯಿತು.

ದ.ಆಫ್ರಿಕಾ ಪಡೆ ವಿಂಡೀಸ್ ಪಡೆಯನ್ನು ಸೋಲಿಸಿ ಭಾರತ ಹಾದಿ ಸುಗಮಗೊಳಿಸಿತು. ಮಿಕ್ಕಿರುವ ಕೆಲಸವನ್ನು ಮಾಡುವಲ್ಲಿ ಭಾರತ ನಿಸ್ಸಂಶಯವಾಗಿ ಯಶಸ್ವಿಯಾಯಿತು. ಲೀಲಾಜಾಲವಾದ ಬ್ಯಾಟಿಂಗ್, ಕರಾರುವಾಕ್ ಬೌಲಿಂಗ್ ಮಾಡಿದ ಭಾರತ ಗೆಲ್ಲಲೇಬೇಕಾದ ಒತ್ತಡದಲ್ಲಿದೆ ಎಂದು ಅನ್ನಿಸಲೇ ಇಲ್ಲ. ಗುರುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದು ಮೊದಲ ಇನ್ನಿಂಗ್ಸ್‌ನಲ್ಲಿ ದಾಖಲೆಯ 256 ರನ್ ಬಾರಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡಿತು. ಗುರಿ ಕಾಯ್ದುಕೊಳ್ಳುವಾಗ ಅಚ್ಚುಕಟ್ಟಾದ ಬೌಲಿಂಗ್‌ನೊಂದಿಗೆ 184 ರನ್‌ಗಳಿಗೆ ತಡೆಯೊಡ್ಡಿ ಜಿಂಬಾಬ್ವೆ ತಂಡವನ್ನು ಸೆಮಿ ರೇಸ್‌ನಿಂದ ಹೊರನೂಕಿತು.

ಬ್ಯಾಟಿಂಗ್‌ಗಿಳಿದ ಭಾರತದ ಆರೂ ಬ್ಯಾಟಿಗರು ಭೇಷ್ ಎನಿಸಿಕೊಂಡರು. ಲಯಕ್ಕೆ ಮರಳಿದ ಅಭಿಷೇಕ್ 55 ರನ್ ಗಳಿಸಿ ಉತ್ತಮ ಬ್ಯಾಟರ್ ಎನಿಸಿಕೊಂಡರು. ಪಾಂಡ್ಯ ಅಜೇಯ ಅರ್ಧಶತಕ ಬಾರಿಸಿದರು. ತಿಲಕ್ ವರ್ಮಾ ಬ್ಯಾಟಿಂಗ್ ವಿಶೇಷವಾಗಿತ್ತು. ಅಕ್ಷರ್ ಮತ್ತು ವರುಣ್ ಉತ್ತಮ ಬೌಲರ್ಸ್ ಎನಿಸಿದರು. ಈ ಗೆಲುವಿನೊಂದಿಗೆ ರನ್‌ರೇಟ್ ಕೂಡ ಹೆಚ್ಚು ಮಾಡಿಕೊಂಡಿರುವ ಭಾರತ ಸೆಮಿ ರೇಸ್‌ನಲ್ಲಿ ಭದ್ರವಾಗಿದ್ದು, ವಿಂಡೀಸ್ ವಿರುದ್ಧದ ಪಂದ್ಯ ನಿರ್ಣಾಯಕವಾಗಲಿದೆ.

**ಅಬ್ಬರದ ಆರಂಭ:** ಉತ್ತಮ ಬ್ಯಾಟಿಂಗ್ ಮಾಡುತ್ತಿಲ್ಲವೆಂಬ ಟೀಕೆಗಳಿಗೆ ಅಭಿಷೇಕ್ ಶರ್ಮ ತೆರೆ ಎಳೆದರು. 30 ಬಾಲ್ ಮಾತ್ರದಲ್ಲಿ 55 ರನ್ ಚಚ್ಚಿದರು. ರಿಂಕು ಬದಲಿಗೆ ಬ್ಯಾಟಿಂಗ್ ಗಿಳಿದ ಸಂಜು(24) ಅಬ್ಬರದ ಆರಂಭ ನೀಡಿ ಬುನಾದಿ ಹಾಕಿಕೊಟ್ಟರು. ಇಶಾನ್(38) ಮೂರನೇ ಕ್ರಮಾಂಕದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಪರದಾಡಿದ ಮಧ್ಯಮ ಕ್ರಮಾಂಕದ ಬ್ಯಾಟಿಗರು ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸೂರ್ಯ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

## ಬೆನೆಟ್ ಪರಾಕ್ರಮ

ಗುರಿ ಬೆನ್ನತ್ತುವಾಗ ಜಿಂಬಾಬ್ವೆ ಭಾರೀ ಹಿನ್ನಡೆ ಅನುಭವಿಸಿತು. ಮೊದಲಿನಿಂದಲೂ ವಿಕೆಟ್ ಕಳೆದುಕೊಳ್ಳದಿದ್ದರೂ ಭಾರತ ಬೌಲರ್‌ಗಳು ಅವರನ್ನು ಕಟ್ಟಿಹಾಕಿದರು. 44 ರನ್ ಗಳಿಸಿದಾಗ ಜಿಂಬಾಬ್ವೆಯ ಮೊದಲ ವಿಕೆಟ್ ಪತನಗೊಂಡಿತು. ಆದಾದ ಬಳಿಕ ಹಿನ್ನಡೆ ಅನುಭವಿಸಿದ ಜಿಂಬಾಬ್ವೆ ರನ್ ಗಳಿಸಲು ಹೆಚ್ಚಿನ ಪ್ರಯತ್ನ ಪಟ್ಟಿತು. ಆದಾಗ್ಯೂ ಬೇಗನೇ ವಿಕೆಟ್ ಕಳೆದುಕೊಳ್ಳಲೇ ಇಲ್ಲ. ಗೆಲ್ಲಲು ಬೇಕಾದ ದೊಡ್ಡ ಸ್ಕೋರ್ ಬಾರಿಸಲಾಗದಿದ್ದರೂ 20 ಓವರ್ ಸಂಪೂರ್ಣ ಬ್ಯಾಟಿಂಗ್ ಮಾಡಿ 154 ರನ್ ಗಳಿಸಿತು. ತಂಡದ ಪರ ಬೆನೆಟ್ ಭರ್ಜರಿ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ಭಾರತ ತಂಡವನ್ನು ದಂಡಿಸಿದ ಅವರು ವಿಕೆಟ್ ಬೀಳುತ್ತಿದ್ದರೂ ಹೋರಾಟ ನಿಲ್ಲಿಸಲಿಲ್ಲ. ಒಟ್ಟು 97 ರನ್‌ಗಳಿಸಿ ಅಜೇಯರಾಗಿ ಉಳಿದರು.



## ಪಾಂಡ್ಯ-ತಿಲಕ್ ಜುಗಲ್‌ಬಂದಿ

ಮಧ್ಯಮ ಕ್ರಮಾಂಕದಲ್ಲಿ ಪಾಂಡ್ಯ ಮತ್ತು ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತ ಸ್ಕೋರ್ ಹಿಗ್ಗಿಸಿದರು. ಬಾನೆತ್ತರದ ಸಿಕ್ಸರ್‌ಗಳಿಂದಲೇ ಆರಂಭಿಸಿದ ತಿಲಕ್ ವರ್ಮಾ ಈ ಬಾರಿ ಬರೋಬ್ಬರಿ 275ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದರು. 23 ಬಾಲ್ ಮಾತ್ರ ಎದುರಿಸಿದ ಪಾಂಡ್ಯ ತಮ್ಮ ನೈಜ ಆಟದೊಂದಿಗೆ 4 ಸಿಕ್ಸರ್ ಮತ್ತು 2 ಬೌಂಡರಿಗಳೊಂದಿಗೆ 50 ರನ್ ಚಚ್ಚಿದರು. ತಿಲಕ್ ವರ್ಮಾ ಕೇವಲ 16 ಬಾಲ್‌ಗಳಲ್ಲಿ 3 ಬೌಂಡರಿ 4 ಸಿಕ್ಸರ್‌ಗಳೊಂದಿಗೆ ಔಟಾಗದೆ 44 ರನ್ ಬಾರಿಸಿದರು.

## 158 ಭಾರತೀಯರ ಕನಿಷ್ಠ ಸ್ಟ್ರೈಕ್‌ರೇಟ್!

ಭಾರತ ತಂಡದ ಯಾವುದೇ ಬ್ಯಾಟರ್‌ಗಳೂ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬೀಳಲೇ ಇಲ್ಲ. ಬಂದವರೆಲ್ಲಾ ಮೊದಲ ಬಾಲ್‌ನಿಂದಲೇ ಬೌಂಡರಿಗಟ್ಟುವ ಸ್ಪಷ್ಟ ನಿರ್ಧಾರ ಮಾಡಿಬಿಟ್ಟಿದ್ದರು. ಯಾರೊಬ್ಬರೂ ತಮ್ಮ ಸ್ಕೋರುಗಳ ಕಡೆ ಗಮನವೇ ಹರಿಸಲಿಲ್ಲ. ಸಿಂಗಲ್ ಪಡೆಯಲೋ ಅಥವಾ ಡಾಟ್ ಮಾಡಲು ಹೋಗಿ ಔಟಾಗಲೇ ಇಲ್ಲ. ಔಟಾಗದೆ ಉಳಿದವರೂ ಕೂಡ ಸಿಂಗಲ್ ಪಡೆಯಲು ಯತ್ನಿಸಲೇ ಇಲ್ಲ. ಗೌರವಿಸಬೇಕಾದ ಎಸೆತಗಳನ್ನು ಗೌರವಿಸಿದ್ದು ಬಿಟ್ಟರೆ ಇನ್ನುಳಿದ ಬಾಲ್‌ಗಳನ್ನೇಲ್ಲಾ ಬೌಂಡರಿಗಟ್ಟಿದರು. ಹೀಗಾಗಿ ಭಾರತ ತಂಡದ ಆಟಗಾರರ ಕನಿಷ್ಠ ಸ್ಟ್ರೈಕ್‌ರೇಟ್ 158 ಆಗಿತ್ತು. ಇಶಾನ್ ಕಿಶನ್ 158, ಅಭಿಷೇಕ್ ಶರ್ಮ 160, ಸೂರ್ಯ 253, ಪಾಂಡ್ಯ 217 ಮತ್ತು ತಿಲಕ್ 275 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು.

## ಸ್ಕೋರ್‌ಬೋರ್ಡ್

ಭಾರತ 20 ಓವರ್‌ಗಳಲ್ಲಿ 256/4

| | | |
|---|---|---|
| ಸಂಜು | ಸಿ ಬರ್ಲ್ ಬಿ ಮುಝರಬಾನಿ | 24 |
| ಅಭಿಷೇಕ್ | ಸಿ ರಜಾ ಬಿ ಮಾಪೋಸಾ | 55 |
| ಕಿಶನ್ | ಸಿ ಗರಾವ ಬಿ ರಜಾ | 38 |
| ಸೂರ್ಯ | ಸಿ ಮುಸೆಕಿವಾ ಬಿ ಗರಾವ | 33 |
| ಪಾಂಡ್ಯ | ನಾಟೌಟ್ | 50 |
| ತಿಲಕ್ | ನಾಟೌಟ್ | 44 |
| ಇತರೆ | | 12 |

ಬೌಲಿಂಗ್ ವಿವರ

| | |
|---|---|
| ರಿಚಾರ್ಡ್ | 4-0-62-1 |
| ಬ್ಲೆಸ್ಸಿಂಗ್ ಮಾಪೋಸಾ | 4-0-43-1 |
| | 2-0-40-1 |
| ಈವಾನ್ಸ್ | 4-0-52-0 |
| ರಜಾ | 3-0-29-1 |
| ಬೆನೆಟ್ | 2-0-16-0 |
| ಬರ್ಲ್ | 1-0-10-0 |

ಜಿಂಬಾಬ್ವೆ 20 ಓವರ್‌ಗಳಲ್ಲಿ 184/6

| | | |
|---|---|---|
| ಬೆನೆಟ್ | ನಾಟೌಟ್ | 97 |
| ಮರುಮಾನಿ | ಸಿ ಕಿಶನ್ ಬಿ ಅಕ್ಷರ್ | 20 |
| ಮೇಯ್ಸ್ | ಸಿ ವರ್ಮಾ ಬಿ ಚಕ್ರವರ್ತಿ | 6 |
| ರಜಾ | ಸಿ ಅಭಿಷೇಕ್ ಬಿ ಅರ್ಷದೀಪ್ | 31 |
| ಬರ್ಲ್ | ಎಲ್‌ಬಿ ಬಿ ಅರ್ಷದೀಪ್ | 0 |
| ಟೋನಿ | ಬಿ ಅರ್ಷದೀಪ್ | 11 |
| ಮುಸೆಕಿವಾ | ಸಿ ಸ್ಯಾಮ್ಸನ್ ಬಿ ದುಬೆ | 7 |
| ಈವಾನ್ಸ್ | ನಾಟೌಟ್ | 1 |
| ಇತರೆ | | 11 |

ಬೌಲಿಂಗ್ ವಿವರ

| | |
|---|---|
| ಅರ್ಷದೀಪ್ | 4-0-24-3 |
| ಹಾರ್ದಿಕ್ | 3-0-21-0 |
| ಬೂಮ್ರಾ | 3-0-21-0 |
| ವರುಣ್ | 4-0-35-1 |
| ದುಬೆ | 2-0-46-1 |

## ಇತಿಹಾಸ ಬರೆದ ಭಾರತ

ಈ ಗೆಲುವಿನ ಮೂಲಕ ಭಾರತ ಐತಿಹಾಸಿಕ ದಾಖಲೆಯೊಂದನ್ನು ಮಾಡಿತು. ವಿಶ್ವಕಪ್‌ನಲ್ಲಿ ಭಾರತ 300 ರನ್ ಬಾರಿಸುತ್ತದೆ ಎಂಬ ಮಾತುಗಳು ಎಲ್ಲೆಡೆ ಹರಿದಾಡುತ್ತಿದ್ದವು. ಆದರೆ ಭಾರತ ಮಾತ್ರ 150 ರನ್ ಬಾರಿಸುವುದಕ್ಕೂ ಪರದಾಡುತ್ತಿತ್ತು. ಅಂತಹ ಸ್ಥಿತಿಯಲ್ಲಿ ಜಿಂಬಾಬ್ವೆ ವಿರುದ್ಧ ಸ್ಫೋಟಕ ಬ್ಯಾಟಿಂಗ್ ಮಾಡಿ ಬರೋಬ್ಬರಿ 256 ಚಚ್ಚಿದೆ. ಇದು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಗಳಿಸಿದ ಅತಿ ಹೆಚ್ಚು ರನ್ ಆಗಿದೆ. ಇದಲ್ಲದೆ, ವಿಶ್ವಕಪ್‌ನಲ್ಲಿ ತಂಡವೊಂದು ಬಾರಿಸಿದ ಎರಡನೇ ಅತಿ ಹೆಚ್ಚು ರನ್ ಆಗಿದೆ. 2009ರಲ್ಲಿ ಶ್ರೀಲಂಕಾ 260 ರನ್ ಬಾರಿಸಿತ್ತು. ಅದು ವಿಶ್ವಕಪ್‌ನ ಅತಿ ಹೆಚ್ಚು ರನ್ ಆಗಿದೆ.

## ದಕ್ಷಿಣ ಆಫ್ರಿಕಾ ಸೆಮಿಗೆ

**ಅಹಮದಾಬಾದ್:** ಕಳೆದ ಪಂದ್ಯದಲ್ಲಷ್ಟೇ ಭಾರತ ತಂಡವನ್ನು ಸೋಲಿಸಿ ಕೋಟ್ಯಂತರ ಅಭಿಮಾನಿಗಳ ಪಾಲಿಗೆ ವಿಲನ್ ಆಗಿದ್ದ ದ.ಆಫ್ರಿಕಾ ತಂಡವು ಗುರುವಾರ ವೆಸ್ಟ್ ಇಂಡೀಸ್ ವಿರುದ್ಧ ಗೆದ್ದು ಭಾರತ ಅಭಿಮಾನಿಗಳ ಪಾಲಿಗೆ ಆಸರೆಯಾದ ನೆರಳಾಯಿತು. ಜತೆಗೆ ತನ್ನ ಸೆಮಿಫೈನಲ್ ಪ್ರವೇಶ ಖಚಿತ ಪಡಿಸಿಕೊಂಡಿದೆ.

ಭಾರತ ಸೆಮಿಫೈನಲ್‌ಗೇರಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡದ ವಿರುದ್ಧ ಗೆಲ್ಲಲೇಬೇಕಿತ್ತು. ಈ ಪಂದ್ಯದಲ್ಲೂ ಕೂಡ ಕಳೆದ ಪಂದ್ಯದ ಲಯವನ್ನೇ ಪ್ರದರ್ಶಿಸಿದ ಹರಿಣರು ವಿಶ್ವಕಪ್‌ನ ಬಲಿಷ್ಠ ತಂಡ, ಸೋಲದಿರುವ ಅಜೇಯ ಪಡೆ ಎನಿಸಿಕೊಂಡಿದೆ. ಗುರುವಾರದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಬುಲಾವ್ ನೀಡಿದ ಮಾರ್ಕ್ರಂ ಪಡೆ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ವಿಂಡೀಸ್ ತಂಡದ ಹೆಡೆಮುರಿ ಕಟ್ಟಿತು. ಆದಾಗ್ಯೂ ರೋಮಾರಿಯೋ ಶೆಫರ್ಡ್ ಹಾಗೂ ಜೇಸನ್ ಹೋಲ್ಡರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಉತ್ತಮ ಪ್ರದರ್ಶನ ನೀಡಿದ ವಿಂಡೀಸ್ ತನ್ನ ಪಾಲಿನ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 176 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಪೇರಿಸಿತು. ಪ್ರತಿಯಾಗಿ ದ.ಆಫ್ರಿಕಾ ಮೊದಲಿನ ಮೂರು ಬ್ಯಾಟರ್‌ಗಳ ಹೊಡೆತದಾಟದೊಂದಿಗೆ 16.1 ಓವರ್‌ಗಳಲ್ಲಿ 1 ವಿಕೆಟ್ ಮಾತ್ರ ಕಳೆದುಕೊಂಡು 177 ರನ್ ಬಾರಿಸಿ ಗೆದ್ದಿತು. ಪಂದ್ಯದ ಏರಿಳಿತ ವಿಂಡೀಸ್, ಆಫ್ರಿಕಾಗಿಂತ ಭಾರತದ ಅಭಿಮಾನಿಗಳನ್ನೇ ಆತಂಕಕ್ಕೀಡು ಮಾಡಿತು. ಏಡನ್ ಮಾರ್ಕ್ರಂ ಅಜೇಯ 82 ರನ್ ಬಾರಿಸಿ ಪಂದ್ಯದ ಹೀರೋ ಎನಿಸಿದರು. ಡಿಕಾಕ್ ಮತ್ತು ರ್‍ಯಾನ್ ರಿಕೆಲ್ಟನ್ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. ಎದುರಾಳಿ ವಿಂಡೀಸ್ ಕಡೆಯವರೂ ಕೂಡ ಉತ್ತಮ ಬ್ಯಾಟರ್ ಎನಿಸುವಂತೆ ಆಡಿದರು. ಲುಂಗಿ ಎನ್‌ಗಿಡಿ ಪಂದ್ಯದ ಉತ್ತಮ ಬೌಲರ್ ಎನಿಸಿಕೊಂಡರು. ಈ ಗೆಲುವಿನೊಂದಿಗೆ ದ.ಆಫ್ರಿಕಾ ಬಹುತೇಕ ಸೆಮಿಫೈನಲ್ ಖಚಿತಪಡಿಸಿಕೊಂಡಿದೆ. ವಿಂಡೀಸ್ ಭಾರತದೊಂದಿಗೆ ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕೊಂಡಿದೆ.

### ಸಂಕ್ಷಿಪ್ತ ಸ್ಕೋರ್

ವಿಂಡೀಸ್ 20 ಓವರ್‌ಗಳಲ್ಲಿ 176/8: ಶೆಫರ್ಡ್ 52★, ಹೋಲ್ಡರ್ 49; ಎನ್‌ಗಿಡಿ 30/3
ಆಫ್ರಿಕಾ 16.1 ಓವರ್‌ಗಳಲ್ಲಿ 177/1: ಮಾಕ್ರರಂ 82★, ಡಿಕಾಕ್ 47, ರಿಕಲ್ಟನ್ 48★; ಚೇಸ್ 46/1

## ಮಾರ್ಕ್ರಂ ಆರ್ಭಟ

ಗುರಿ ಬೆನ್ನತ್ತುವಾಗ ವಿಂಡೀಸ್‌ಗೆ ಯಾವುದೇ ಖುಷಿ ಪಡುವ ಘಳಿಗೆ ಕೂಡಿ ಬರಲಿಲ್ಲ. ಅಕ್ಷರಶಃ ಅತ್ಯುತ್ತಮ ಬ್ಯಾಟಿಂಗ್ ಮಾಡಿದ ನಾಯಕ ಮಾರ್ಕ್ರಂ ಮನಬಂದಂತೆ ದಂಡಿಸಿದರು. ಉತ್ತಮ ಎಸೆತಕ್ಕೆ ಗೌರವ ನೀಡುತ್ತಾ, ವೀಕ್ ಎಸೆತಗಳನ್ನು ಥಳಿಸುತ್ತಾ ಲೀಲಾಜಾಲವಾಗಿ ಅರ್ಧಶತಕ ಬಾರಿಸಿದರು ಮಾರ್ಕ್ರಂ. ಅವರಿಗೆ ಸಾಥ್ ನೀಡುವಲ್ಲಿ ಡಿಕಾಕ್ ಕೂಡ ಅಷ್ಟೇ ಸಫಲರಾದರು. 24 ಬಾಲ್‌ಗಳಲ್ಲಿ 47 ರನ್‌ಗಳಿಸಿ ಡಿಕಾಕ್ ಔಟಾದಂತೆ ಮೂರನೇ ಕ್ರಮಾಂಕದಲ್ಲಿ ರಿಕಲ್ಟನ್ ಬಂದರು. ಅವರು ಡಿಕಾಕ್ ಆಟವನ್ನೇ ಮುಂದುವರಿಸಿದರು. ಓವರ್‌ಗಳಿಗೆ ಕನಿಷ್ಠ ಹತ್ತರಂತೆ ಬಾರಿಸಿದ ದ.ಆಫ್ರಿಕಾ 16.1 ಓವರ್‌ಗಳಲ್ಲೇ ಗುರಿ ಮುಟ್ಟಿತು. ಮಾರ್ಕ್ರಂ 46 ಬಾಲ್‌ಗಳಲ್ಲಿ ಅಜೇಯ 82 ರನ್ ಬಾರಿಸಿದರು. ರಿಕಲ್ಟನ್ 28 ಬಾಲ್‌ಗಳಲ್ಲಿ ಅಜೇಯ 48 ರನ್ ಗಳಿಸಿದರು.



## ಶೆಫರ್ಡ್-ಹೋಲ್ಡರ್ ಆಸರೆ

ಮೊದಲ ಇನ್ನಿಂಗ್ಸ್‌ನಲ್ಲಿ ಮೂರು ತಿರುವುಗಳಾದವು. ಮೊದಲ ಓವರ್‌ನಲ್ಲಿ ವಿಂಡೀಸ್ 17 ರನ್ ಬಾರಿಸಿ ಮಿಂಚಿತ್ತು. ದೊಡ್ಡ ಸ್ಕೋರ್‌ನತ್ತ ಸಾಗುತ್ತಿತ್ತು. ಆದರೆ ಬಳಿಕ ಚುರುಕುಗೊಂಡ ಆಫ್ರಿಕಾ, ಸರಸರನೇ ವಿಕೆಟ್‌ಗಳನ್ನು ಪಡೆಯಿತು. ಅಲ್ಲಿ 83 ರನ್ ಆನ್ನುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತ್ತು. ಈ ಬಳಿಕ ಮತ್ತೊಂದು ತಿರುವು ಸಿಕ್ಕಿತು. ರೋಮಾರಿಯೊ ಶೆಫರ್ಡ್ ಮತ್ತು ಹೋಲ್ಡರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ತಮ್ಮ ತಂಡದ ಕುಸಿತ ಉಳಿಸಿದ ಈ ಜೋಡಿ 20 ಓವರ್ ತನಕ ಬ್ಯಾಟಿಂಗ್ ಮಾಡಿ 175ರ ಗಡಿ ದಾಟುವಂತೆ ಮಾಡಿತು. ಶೆಫರ್ಡ್ 52, ಹೋಲ್ಡರ್ 49 ರನ್‌ಗಳಿಸಿದರು.

## ಇಂದಿನ ಪಂದ್ಯ

ಇಂಗ್ಲೆಂಡ್ VS ನ್ಯೂಜಿಲೆಂಡ್
ಸಂಜೆ 7 (ಕೊಲಂಬೋ)

## ಸೂಪರ್-8 ಅಂಕಪಟ್ಟಿ

ಗುಂಪು 1

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ರನ್‌ರೇಟ್ |
|---|---|---|---|---|---|---|
| ದ.ಆಫ್ರಿಕಾ (Q) | 2 | 2 | 0 | 0 | 4 | +2.890 |
| ವಿಂಡೀಸ್ | 2 | 1 | 1 | 0 | 2 | +1.791 |
| ಭಾರತ | 2 | 1 | 1 | 0 | 2 | -0.100 |
| ಜಿಂಬಾಬ್ವೆ | 2 | 0 | 2 | 0 | 0 | -4.475 |

ಗುಂಪು 2

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ರನ್‌ರೇಟ್ |
|---|---|---|---|---|---|---|
| ಇಂಗ್ಲೆಂಡ್ (Q) | 2 | 2 | 0 | 0 | 4 | +1.491 |
| ಕಿವೀಸ್ | 2 | 1 | 0 | 1 | 3 | +3.050 |
| ಪಾಕಿಸ್ತಾನ | 2 | 0 | 1 | 1 | 1 | -0.461 |
| ಶ್ರೀಲಂಕಾ | 2 | 0 | 2 | 0 | 0 | -2.800 |

## ಕಿರುಸುದ್ದಿ

### ಟಿಟಿ: ದಾಖಲೆ ಮಾಡಿದ ಭಾರತ ಜೋಡಿ

**ಹೊಸದಿಲ್ಲಿ:** ಭಾರತದ ಅಗ್ರ ಟೇಬಲ್ ಟೆನಿಸ್ ಜೋಡಿಯಾದ ಮನುಶ್ ಶಾ ಮತ್ತು ಮಾನವ್ ಟಕ್ಕರ್ ಇತಿಹಾಸ ಸೃಷ್ಟಿಸಿದರು. ಲೀಗ್ ಹಂತದಿಂದ ಹಿಡಿದು ಕ್ವಾರ್ಟರ್ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ನೀಡಿ ಭಾರತದ ಪದಕ ಆಸೆ ಜೀವಂತವಾಗಿರಿಸಿದ್ದ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಗೆಲುವು ಸಾಧಿಸಿದರು. ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯ ಅವರಿಗೆ ಕೇವಲ ಗೆಲುವಾಗದೆ, ಇತಿಹಾಸ ಸೃಷ್ಟಿಸುವ ಸಾಧನೆಯಾಗಿತ್ತು. ಆರನೇ ಸೀಡ್‌ನ ಮನುಶ್ ಮತ್ತು ಮಾನವ್ ಮಾರ್ಟಿನ್ ಅಲ್ಲೆಗ್ರೊ ಹಾಗೂ ಆಡ್ರೀನ್ ರಾಸ್ಸೆನ್‌ಫೊಸ್ಸೆ ಅವರನ್ನು ಎದುರಿಸಿದ್ದರು. ಈ ಪಂದ್ಯದಲ್ಲಿ ಮೊದಲಿನಿಂದಲೂ ಸಮಯೋಚಿತ ಪ್ರದರ್ಶನ ನೀಡಿದ ಅವರು, 3-0(11-8, 11-9, 11-9)ರಿಂದ ಭರ್ಜರಿ ಗೆಲುವು ಸಾಧಿಸಿ ಮಿಂಚಿದರು. ಇದರೊಂದಿಗೆ ಎದುರಾ ಳಿಗಳೊಂದಿಗಿದ್ದ ಮುಖಾಮುಖಿಯನ್ನು 2-0ಕ್ಕೆ ಹಿಗ್ಗಿಸಿದರು.

**ವಿಶ್ವದಾಖಲೆ:** ಪ್ರತಿ ಪಂದ್ಯದಲ್ಲೂ ತಮ್ಮ ಪರಾಕ್ರಮದೊಂದಿಗೆ ದಾಖಲೆಗಳನ್ನು ಮಾಡುತ್ತಾ ಬಂದ ಈ ಜೋಡಿ, ಡಬ್ಲ್ಯುಟಿಟಿ ಗ್ರ್ಯಾಂಡ್ ಸ್ಮ್ಯಾಷ್ ಇವೆಂಟ್‌ನ ಸೆಮಿಫೈನಲ್ ಲಗ್ಗೆ ಹಾಕಿದ ಮೊದಲ ಭಾರತೀಯ ಜೋಡಿ ಎನಿಸಿದೆ.

### ಬೆಂಗಳೂರಿಗಿಂದು ಪಂಜಾಬ್ ಸವಾಲು

**ಬೆಂಗಳೂರು:** ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ತಂಡಗಳ ನಡುವೆ ಹೈ-ವೋಲ್ಟೇಜ್ ಪಂದ್ಯ ನಡೆಯಲಿದೆ. ಪಂಜಾಬ್ ಎಫ್‌ಸಿ ತಂಡವು ಸತತ ಎರಡನೇ ಪಂದ್ಯಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದು, ಜಮ್‌ಶೆಡ್‌ಪುರ ಎಫ್‌ಸಿ ವಿರುದ್ಧದ 1-0 ಸೋಲಿನ ಬಳಿಕ ಚೇತರಿಸಿಕೊಳ್ಳುವ ಗುರಿ ಹೊಂದಿದೆ. ಮತ್ತೊಂದೆಡೆ, ಬೆಂಗಳೂರು ಎಫ್‌ಸಿ ಈ ಸೀಸನ್‌ನ ತನ್ನ ಮೂರನೇ ಪಂದ್ಯಕ್ಕೆ ಸಜ್ಜಾಗಿದೆ. ನಾರ್ತ್-ಈಸ್ಟ್ ಯುನೈಟೆಡ್ ವಿರುದ್ಧದ ಪಂದ್ಯ 1-1 ಸಮಬಲದಲ್ಲಿ ಅಂತ್ಯಗೊಂಡ ನಂತರ, ಸುನಿಲ್ ಚೆಟ್ರಿ ಸಾರಥ್ಯದ ತಂಡವು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ.

ಎರಡೂ ತಂಡಗಳು ಪೂರ್ಣ 3 ಅಂಕಗಳಿಗಾಗಿ ಹೋರಾಡಲಿರುವುದರಿಂದ ಮೈದಾನದಲ್ಲಿ ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ. ಎರಡೂ ಕ್ಲಬ್‌ಗಳು ಹೊಸ ಆಟಗಾರರನ್ನು ಸೇರಿಸಿಕೊಂಡಿರುವುದು ಪಂದ್ಯದ ಕುತೂಹಲವನ್ನು ಹೆಚ್ಚಿಸಿದೆ. ಬೆಂಗಳೂರು ಎಫ್‌ಸಿ ತಂಡ ಮಧ್ಯಮೈದಾನದಲ್ಲಿ ಬ್ರಾಯನ್ ಸಾಂಚೆಝ್ ಅವರ ದೃಷ್ಟಿ ಮತ್ತು ಆಟದ ಸೃಜನಶೀಲತೆ ತಂಡಕ್ಕೆ ಬಲ ತುಂಬಿದೆ. ವಿಂಗರ್ ಆಶಿಕ್ ಕುರುಣಿಯಾನ್ ಅವರ ವೇಗವು ಎದುರಾಳಿ ರಕ್ಷಣಾ ಪಡೆಯನ್ನು ಮಣಿಸಲು ಪ್ರಮುಖ ಅಸ್ತ್ರವಾಗಿದೆ. ಹಾಗೆಯೇ ಸಿರೋಜಿದ್ದಿನ್ ಕುಝಿಯೇವ್ ಅವರ ತಾಂತ್ರಿಕ ಕೌಶಲ್ಯವು ತಂಡಕ್ಕೆ ಹೊಸ ಚೈತನ್ಯ ನೀಡಲಿದೆ. ಪಂಜಾಬ್ ಎಫ್‌ಸಿ ತಂಡವು ಮಿಡ್‌ಫೀಲ್ಡ್‌ನಲ್ಲಿ ಡ್ಯಾನಿ ರಾಮಿರೆಜ್ ಆಟದ ವೇಗವನ್ನು ನಿಯಂತ್ರಿಸಿದರೆ, ಮುಂಚೂಣಿಯಲ್ಲಿ ದೈಹಿಕವಾಗಿ ಬಲಿಷ್ಠವಾಗಿರುವ ಎಫಿಯಾಂಗ್ ನುಂಗುಸಿ ಗೋಲು ಗಳಿಸುವ ಜವಾಬ್ದಾರಿ ಹೊತ್ತಿದ್ದಾರೆ.

## ಬ್ಯಾಡ್ಮಿಂಟನ್: ಭಾರತ ನೀರಸ ಆರಂಭ

**ಹೊಸದಿಲ್ಲಿ:** ಸೂಪರ್ ಬ್ಯಾಡ್ಮಿಂಟನ್ ಪಂದ್ಯಾ ವಳಿಗಳಲ್ಲಿ ತಮ್ಮದೇ ವಿಶಿಷ್ಠ ಆಟಗಳ ಮೂಲಕ ವಿಶ್ವದ ಗಮನ ಸೆಳೆದಿರುವ ಭಾರತೀಯ ಶೆಟ್ಲರ್‌ಗಳು ತಮ್ಮ ಲಯವನ್ನು ಮುಂದುವರಿಸಲು ವಿಫಲರಾಗಿದ್ದಾರೆ. ಗುರುವಾರ ಶುರುವಾಗಿರುವ ಜರ್ಮನ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯ ಮೊದಲ ದಿನವೇ ಭಾರತೀಯ ರಿಗೆ ಹಿನ್ನಡೆಯಾಗಿದೆ.

ನಾಕೌಟ್ ಮಾದರಿಯ ಕೂಟದ 32ರ ಸುತ್ತಿನ ಪಂದ್ಯದಲ್ಲಿ ಕಿರಣ್ ಜಾರ್ಜ್ ಅವರು ಟಾಪ್ ಸೀಡ್‌ನ ಕ್ರಿಸ್ಟೋ ಪೊಪೊವ್ ಅವರೊಂದಿಗೆ ಸೋತರು. 47 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಮೊದಲಿನಿಂದಲೂ ಬಿಗಿ ಹಿಡಿತ ಸಾಧಿಸಿದ ಅವರು, ಕಿರಣ್‌ಗೆ ಅವಕಾಶವೇ ನೀಡಲಿಲ್ಲ. ಆರಂಭಿಕ ಸೆಟ್‌ನಲ್ಲಿ 10 ಅಂಕವಷ್ಟೇ ಗಳಿಸಿ ನಿರಾಸೆ ಮೂಡಿಸಿದ್ದ ಕಿರಣ್ ಮುನ್ನಡೆ ಬಿಟ್ಟುಕೊಟ್ಟರು. ಮುಂದಿನ ಸೆಟ್‌ನಲ್ಲಿ ತಮ್ಮ ಪ್ರದರ್ಶನದ ದಿಕ್ಕು ಬದಲಾಯಿಸಿದರು. ಆದಾಗ್ಯೂ 20-22ರಿಂದ ಎದುರಾಳಿ ಪಂದ್ಯವನ್ನು ಗೆದ್ದು ಕಿರಣ್ ಅವರನ್ನು ಹೊರನೂಕಿದರು.



ಮತ್ತೋರ್ವ ಭಾರತೀಯ ತರುಣ್ ಮನ್ನೆಪಲ್ಲಿ ಚೀನಾದ ವಾಂಗ್ ಅವರೊಂದಿಗೆ ರೋಚಕ ಪಂದ್ಯದಲ್ಲಿ ಸೋತರು. ಅಲ್ಲಿ ಮೊದಲನೇ ಸೆಟ್‌ನಲ್ಲಿ ಗೆದ್ದು ಗೆಲುವಿನ ಹಳಿ ಆರಂಭಿಸುವ ಭರವಸೆಯಲ್ಲಿದ್ದ ಅವರಿಗೆ ನಂತರ ಭಾರೀ ಹಿನ್ನಡೆಯಾಯಿತು ಇನ್ನು ಮಹಿಳಯರ ವಿಭಾಗದಲ್ಲಿ ಮಾಳ್ವಿಕಾ ಬನ್ಸೋದ್ ಅಮೆರಿಕದ ಬೇವಾನ್ ಝಾಂಗ್ ಅವರೊಂದಿಗೆ ಸೋತರು. ಮೊದಲಿಗೆ ಮುನ್ನಡೆ ಸಾಧಿಸಿದ ಮಾಳ್ವಿಕಾ ನಂತರದಲ್ಲಿ ಹಿನ್ನಡೆ ಅನುಭವಿಸಿದರು. ಇನ್ನು ತಸ್ನೀನ್ ಮಿರ್ ಕೂಡ ವಾಂಗ್ ಝಿ ಅವರೊಂದಿಗೆ ಸೋತರು. ಆ ಪಂದ್ಯದಲ್ಲಿ ಯಾವುದೇ ಹೆಚ್ಚಿನ ಹೊಡೆದಾಟ ಕಾಣಿಸಲಿಲ್ಲ. ಮೊದಲ ಸೆಟ್‌ನಲ್ಲಿ 21-9ರಿಂದ ಗೆದ್ದ ಎದುರಾಳಿ ಎರಡನೇ ಸೆಟ್‌ನಲ್ಲಿ 21-14ರಿಂದ ಗೆದ್ದರು.

ಮೊದಲ ಸುತ್ತಿನಲ್ಲೇ ಸೋತ ಭರವಸೆಯ ಶಟ್ಲರ್ಸ್

रणजि ಫೈನಲ್: ಸಂಕಷ್ಟದಲ್ಲಿ ಕರ್ನಾಟಕ | ಮಯಾಂಕ್ ಅಗರ್‌ವಾಲ್ ಆಸರೆ

## ಪ್ರಶಸ್ತಿಯ ಸನಿಹಕ್ಕೆ ಜಮ್ಮು-ಕಾಶ್ಮೀರ

ವಿಜಯಕುಮಾರ ಬೆಳ್ಳೇರಿಮಠ

**ಹುಬ್ಬಳ್ಳಿ:** ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡದ ಬ್ಯಾಟರ್‌ಗಳು ಸತತ ಎರಡು ದಿನ ರಾಜ್ಯ ತಂಡದ ಬೌಲರ್‌ಗಳ ಬೆವರಿಳಿಸಿದರೆ, ಮೂರನೇ ದಿನ ಬೌಲರ್‌ಗಳು ಕಾಟ ಕೊಟ್ಟರು. ಇದರಿಂದಾಗಿ ಇಲ್ಲಿ ನಡೆದಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಸಂಕಷ್ಟಕ್ಕೆ ಸಿಲುಕಿದೆ. 9ನೇ ಬಾರಿ ಪ್ರಶಸ್ತಿಗೆ ಮುತ್ತಿಕ್ಕುವ ಕನಸು ಕಮರುವಂತಾಗಿದೆ. ಪಂದ್ಯದ 3ನೇ ದಿನದ ಆಟದ ಅಂತ್ಯಕ್ಕೆ ಕರ್ನಾಟಕ ತಂಡ 220ಕ್ಕೆ ಮಹತ್ವದ 5 ವಿಕೆಟ್‌ಗಳನ್ನು ಕಳೆದುಕೊಂಡು ಪರದಾಡುತ್ತಿದೆ.

**ಮಯಾಂಕ್ ಆಸರೆ:** ಮಾಜಿ ನಾಯಕ ಮಯಾಂಕ್ ಅಗರ್‌ವಾಲ್ ಮಾತ್ರ (207 ಎಸೆತಗಳಲ್ಲಿ ಅಜೇಯ 130) ಶತಕ ಗಳಿಸುವ ಮೂಲಕ ಕ್ರೀಸ್ ಕಾಯ್ದುಕೊಂಡು ಆಸರೆಯಾಗಿದ್ದಾರೆ. ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಜೊತೆಯಾಗಿದ್ದಾರೆ (75 ಎಸೆತಗಳಲ್ಲಿ 27 ರನ್). ಆದರೆ, ಆತಿಥೇಯ ತಂಡ ಪ್ರಶಸ್ತಿ ಗಳಿಸಬೇಕೆಂದರೆ ಈ ಇಬ್ಬರೂ ಬ್ಯಾಟರ್‌ಗಳ ಜೊತೆಯಾಟ ಬೆಟ್ಟದಂಥ ಗುರಿಯನ್ನು ತಲುಪುವವರೆಗೂ ಮುಂದುವರಿಯಬೇಕಿರುವುದು ಅನಿವಾರ್ಯ. ಮೂರನೇ ದಿನದಾಟದ ಅತ್ಯಂಕ್ಕೆ ಆತಿಥೇಯ ಕರ್ನಾಟಕ 69 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 220 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಲೀಡ್ ಪಡೆಯಲು ಇನ್ನೂ 364 ರನ್ ಗಳಿಸಬೇಕಿದ್ದು, ದೊಡ್ಡ ಸವಾಲನ್ನು ಮೀರುವುದು ಕಷ್ಟ ಸಾಧ್ಯವೆನ್ನಿಸಿದೆ. ಆದಾಗ್ಯೂ ಆಸರೆಯಾಗಿರುವ ಮಯಾಂಕ್ ಹೋರಾಟ ಜಾರಿಯಿಟ್ಟಿದ್ದಾರೆ.



ಚಿತ್ರ: ಮಂಜುನಾಥ ಜರತಾರಘರ

### ಆರಂಭಿಕ ಆಘಾತ

ಜಮ್ಮು ಕಾಶ್ಮೀರ ತಂಡ ನೀಡಿದ ಬೃಹತ್ ಗುರಿ ಬೆನ್ನಟ್ಟಿದ ಕರ್ನಾಟಕ ಆರಂಭಿಕ ಆಘಾತ ಅನುಭವಿಸಿತು. ನಬಿ ಎಸೆದ 11ನೇ ಓವರ್‌ನಲ್ಲಿ ಭರವಸೆಯ ಆಟಗಾರ ಕೆ.ಎಲ್.ರಾಹುಲ್ (13 ರನ್, 39 ಎಸೆತ, 2 ಬೌಂಡರಿ) ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್‌ಗೆ ಕ್ಯಾಚಿತ್ತು ನೀಡಿ ಬೇಸರದಿಂದ ಪೆವಿಲಿಯನ್‌ಗೆ ತೆರಳಿದರು. ಇನ್ನೊಂದು ಬದಿ ಬಾಲಿಂಗ್ ಮಾಡುತ್ತಿದ್ದ ಸುನೀಲ್ ಕುಮಾರ 11 ರನ್‌ಗಳಿದ್ದ ನಾಯಕ ದೇವದತ್ತ ಪಡಿಕಲ್ ಅವರ ವಿಕೆಟ್ ಉರುಳಿಸಿದರು. ಮೊದಲ ಸ್ಲಿಪ್‌ನಲ್ಲಿದ್ದ ಅಬ್ದುಲ್ ಸಮದ್ ಕೆಳ ಮಟ್ಟದಲ್ಲಿ ಬಂದ ಕ್ಯಾಚ್ ಪಡೆದು ಸಂಭ್ರಮಿಸಿದರು. ನಬಿ ಎಸೆದ 18ನೇ ಓವರ್‌ನಲ್ಲಿ ಕರುಣ್ ನಾಯರ್ ಹಾಗೂ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಆರ್. ಸ್ಮರಣ್ ಸಹ ಸೊನ್ನೆ ಸುತ್ತಿದರು.

### ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 584/10(173.1 ಓ)
ಲೋತ್ರಾ; 72, ಅಬೀದ್ ಮುಷ್ತಾಕ 28, ಅಕೀಬ್ ನಬಿ 2, ಯುಧವೀರ 30, ಸುನೀಲಕುಮಾರ 1
ಕರ್ನಾಟಕ ಬೌಲಿಂಗ್:
ಪ್ರಸಿದ್ಧ 5 ವಿಕೆಟ್, 34.1 ಓವರ್, 98 ರನ್,
**ಕರ್ನಾಟಕ** 220-5(69)
ಕೆ.ಎಲ್.ರಾಹುಲ್; 13, ಮಯಂಕ್: ಔಟಾಗದೆ 130 ರನ್, 207 ಎ, 17 ಬೌ, ಶ್ರೇಯಸ್; 27 ರನ್, 83 ಎ, 1 ಬೌ, ಕೃತೀಕ್ : ಬ್ಯಾಟಿಂಗ್ 27 ರನ್, 75 ಎ, 2 ಬೌ.
ಜಮ್ಮು ಕಾಶ್ಮೀರ ಬೌಲಿಂಗ್
ಅಕೀಬ್ ನಬಿ: 3 ವಿಕೆಟ್, 14 ಓವರ್, 32 ರನ್

### ಮೂರನೇ ದಿನ ಆಗಿದ್ದೇನು?

ಮೂರನೇ ದಿನದಾಟದ ಮೊದಲ ಅವಧಿಯಲ್ಲಿ ರಾಜ್ಯದ ಬೌಲರ್‌ಗಳು ಮಿಕ್ಕ ನಾಲ್ಕು ವಿಕೆಟ್ ಗಳಿಸಿದರಾದರೂ ಅಷ್ಟರೊಳಗೆ ಕಾಶ್ಮೀರ ತಂಡ 584 ರನ್ ಗಳಿಸಿಯಾಗಿತ್ತು. ಬ್ಯಾಟಿಂಗ್‌ಗೆ ಅನುಕೂಲಕರ ವಾತಾವರಣ ಕಲ್ಪಿಸಿರುವ ಪಿಚ್‌ನಲ್ಲಿ ಕರ್ನಾಟಕದ ಆಟಗಾರರೂ ತಕ್ಕ ಉತ್ತರ ನೀಡಬಹುದು ಎಂಬ ನಿರೀಕ್ಷೆಯನ್ನು ವೇಗದ ಬೌಲರ್ ಅಕಿಬ್ ನಬಿ ದಾರ್ (14 ಓವರ್‌ಗಳಲ್ಲಿ 32ಕ್ಕೆ 3 ವಿಕೆಟ್) ಹುಸಿಯಾಗಿಸಿದರು. ಸುನೀಲ್ ಕುಮಾರ್ ಹಾಗೂ ಯುಧವೀರ್ ಸಿಂಗ್ ಸಹ ತಲಾ ಒಂದು ವಿಕೆಟ್ ಗಳಿಸುವ ಮೂಲಕ ಅಕಿಬ್ ನಬಿ ಅವರಿಗೆ ಸಾಥ್ ನೀಡಿದರು. ಇವರಿಬ್ಬರ ದಾಳಿಗೆ ಕರ್ನಾಟಕ ಬ್ಯಾಟಿಗರು ಹಿನ್ನಡೆ ಅನುಭವಿಸಿದರು. ಪಡಿಕ್ಕಲ್, ಕರುಣ್ ಮತ್ತು ಸ್ಮರಣ್ ಕೈಕೊಟ್ಟರು.

## ಚೆಸ್: ಗುಕೇಶ್ ಪಂದ್ಯ ಡ್ರಾ

**ಹೊಸದಿಲ್ಲಿ:** ಪೋರ್ಜುಗಲ್ ಚೆಸ್ ಫೆಸ್ಟಿವಲ್ ಮಾಸ್ಟರ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅಮೆರಿಕದ ಹಂಸ್ ನೀಮನ್ ವಿರುದ್ಧ ಕಠಿಣ ಹೋರಾಟದ ಬಳಿಕ ಡ್ರಾಗೆ ತೃಪ್ತಿಪಟ್ಟರು. ಪಂದ್ಯ ರೋಚಕವಾಗಿತ್ತು. ಕಪ್ಪು ಕಾಯಿಗಳೊಂದಿಗೆ ಆಡಿದ ಗುಕೇಶ್ ಮೊದಲಿನಿಂದಲೂ ಚಾಣಾಕ್ಷ್ಯ ಆಟವಾಡಿ ದರು. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಮಧ್ಯಮದಲ್ಲಿ ಅಲ್ಪ ಮುನ್ನಡೆ ಸಾಧಿಸಿದರೂ ಕೊನೆಯಲ್ಲಿ ಪಂದ್ಯ ಡ್ರಾಗೆ ತಲುಪಿತು. ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಉಜ್ಬೆಕಿಸ್ತಾನದ ನೋಡಿರ್‌ಬೇಕ್ ಅವರೊಂದಿಗೆ ವಿರುದ್ಧ ಸೋಲನುಭವಿಸಿದರು. ಫಿಲಿಡರ್ ಡಿಫೆನ್ಸ್ ಆಡಿದ ಅರವಿಂದ್, ಕೊನೆಯಲ್ಲಿ ಚಾಣಾಕ್ಷ್ಯತೆ ಮೆರೆದರೂ ಗೆಲ್ಲಲು ಸಾಕಾಗಲಿಲ್ಲ. ಕನಿಷ್ಠ ಪಕ್ಷ ಡ್ರಾ ಮಾಡಿಕೊಳ್ಳಲೂ ಆಗಲಿಲ್ಲ. ಜರ್ಮನಿಯ ಟಾಪ್ ಸೀಡ್ ಕೀಮರ್ ನೆದರ್ಲೆಂಡ್ಸ್ ಆಟಗಾರ ಜಾರ್ಡನ್ ವಿರುದ್ಧ ಸೋಲು ಕಂಡರು. ಬರ್ಲಿನ್ ಡಿಫೆನ್ಸ್‌ನ ಹೊಸ ಆಲೋಚನೆಯಿಂದ ಕೀಮರ್ ಗೊಂದಲಕ್ಕೀಡಾದರು. ಉಜ್ಬೆಕಿಸ್ತಾನದ ಯಾಕೂಬ್ಬೊವ್ ಸ್ಪೇನ್‌ನ ಈಚಿಡಜಿಥ ಆಲ್ಪೆಟ್ಟ ಎಜ್ಜಿಚ್ಚಿಟ ವಿರುದ್ಧ ಜಯಿಸಿದರು. ಸ್ಥಳೀಯ ಆಟಗಾರ ಡೆವಿಡ್ ನವಾರಾ ಇರಾನ್‌ನ ಪರ್ಹಾವನ್ ವಿರುದ್ಧ ಮೇಲುಗೈ ಸಾಧಿಸಿದರು.



**ಚಾಲೆಂಜರ್ಸ್ ವಿಭಾಗದಲ್ಲಿ:** ಚಾಲೆಂಜರ್ಸ್ ವಿಭಾಗದಲ್ಲಿ ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಹಂಗೇರಿಯ ಟಾಪ್ ಸೀಡ್ ಬೆಂಜಾಮಿನ್ ಗ್ಲೇಡುರಾ ವಿರುದ್ಧ ಉತ್ತಮ ಗೆಲ್ಲುವ ಹಂತಕ್ಕೆ ಹೋದರೂ ಡ್ರಾಗೆ ತೃಪ್ತಿಪಟ್ಟರು. ಇನ್ನೊಂದೆಡೆ ಭಾರತದ ಸೂರ್ಯ ಶೇಖರ್ ನೆದರ್‌ಲ್ಯಾಂಡ್ಸ್‌ನ ಥಾಮಸ್ ವಿರುದ್ಧ ಸೋಲು ಕಂಡರು.

## ಪದಬಂಧ

ರಾಜಾ ಸಂಗಮೇಶ ಹಿರೇಮಠ



5908

5907 ಉತ್ತರ

ಎಡದಿಂದ ಬಲಕ್ಕೆ:
1.ಗಿರಿಧರ
3.ವಿಶರದ 5.ನರ್ತನ
6.ಯುಗಾಂತರ
8.ರವಿವಾರ 10.ಅನುಜ
11.ನಮನ 13.ಮರಾಣ
15.ನವರಾತ್ರಿ
16.ಗಂಜಿಬಿ

ಮೇಲಿನಿಂದ ಕೆಳಕ್ಕೆ :
1.ಗಿಟುಕಿಹಾಯಿ
2.ರತನ 3.ವಿಜ್ಞಾನ
4.ಕಥ್ಯವಾರ 7.ತನುಜ
9.ವಿಮಾನ 10.ಅರ್ಜುನ
12.ನಕಲಿ 12.ಮತ್ರಿ
14.ಗಣ

ಎಡದಿಂದ ಬಲಕ್ಕೆ
1.ಒದಗಿ ಬಂದ ಸುಸಂದರ್ಭ (3)
3.ಸಾಯುವವರೆಗೂ ಎಂಬರ್ಥದ ಶಬ್ದ(5)
5.ಸಂತೋಷದ ಸಮಾನಪದ (3)
7.ಕಾವ್ಯ ಸರಳಭಾಷೆಯಲ್ಲಿ(3)
8.ವರ್ಗಕೋಣೆಯಲ್ಲಿ ಇರುವರಿ(3)
9. ಅರದ ನವರತ ಕರಗಣೊಂದಿದ್ದವನ (3)
10. ಬೇಡಿದ್ದನ್ನು ಕೊಡುವ ಆಕಳು (3)
11. ಹಾಡುಗಾರರಲ್ಲಿ ತಿರುಗಿದ್ದಾನೆ (3)
12. ಗಂಗೆಯೊಂದಿಗೆ ಇರುವ ಚಿಹ್ನೆ (3)
13. ಸೂರ್ಯನ ಮಗನಾಗಿ ಕರ್ಣ (3)
15. ತಲೆದೋರಿದ ಮದ್ದಿನ ಬದಿ (5)
16. ಕಟುವನ ನಡುವೆ ಕೋಳಿಯದ (3)

ಮೇಲಿನಿಂದ ಕೆಳಕ್ಕೆ
2.ಹಾಲುವಿಗೆ ಬದ್ಧ ಹುರಿಯುವ ಹೆಂಬು (3)
3.ಪದವಿ-ಉನ್ನತಸ್ಥಾನ ಹೊಂದಿರುವ (4)
4.ಹುಣ್ಣಿಮೆ-ಅಮಾವಾಸ್ಯೆಯ ನಂತರದ ಮೂರನೆಯ ದಿನ (3)
6.ವಿಶ್ವಾಸ ಚಲನಚಿತ್ರವಾಗಿ ತಲೆಕೆಳಗಾಗಿದೆ (5)
7.ನರುಕಿನಲ್ಲಿ ಕರ ಹಿಡಿದು ದಾರಿ ತೋರಿದ ಆಕಾಶಾವ (5)
11.ಹಕ್ಕಿಗಳ ಮಧುರವಾದ ಧ್ವನಿ (4)
12. ಯೌವನವಲ್ಲಿ ತಲೆಕೆಳಗಾಗಿದೆ (3)
14.ಉಸಿರಾಡುವ ಗಾಳಿಯಷ್ಟೇ ನಂಬಿಕೆ (3)

## ಕಿರುಸುದ್ದಿ

### ಮಾದಕ ವಸ್ತು ಸೇವನೆ: ಇಬ್ಬರ ಬಂಧನ

**ಬಂಟ್ವಾಳ:** ಬಿ ಮೂಡ ಗ್ರಾಮದ ಪಲ್ಲಮಜಲು ಎಂಬಲ್ಲಿ ಮಾದಕ ವಸ್ತು ಸೇವಿಸಿ ನಶೆಯೇರಿಸಿಕೊಂಡು ಸಾರ್ವಜನಿಕ ಸ್ಥಳದಲ್ಲಿ ಅನುಚಿತವಾಗಿ ವರ್ತಿಸುತ್ತಿದ್ದ ಇಬ್ಬರನ್ನು ಬಂಟ್ವಾಳ ನಗರ ಪೊಲೀಸರು ಬಂಧಿಸಿದ್ದಾರೆ. ಬಂಟ್ವಾಳ ನಿವಾಸಿಗಳಾದ ಅಬ್ದುಲ್ ರಜಾಕ್ ಹಾಗೂ ಫೆಬಿಯಸ್ ಜೈಸನ್ ಪಿರೇರಾ ಬಂಧಿತ ಆರೋಪಿಗಳಾಗಿದ್ದಾರೆ. ಫೆ 25 ರಂದು ಬೆಳಿಗ್ಗೆ ಬಂಟ್ವಾಳ ತಾಲೂಕು ಬಿ ಮೂಡಾ ಗ್ರಾಮದ ಪಲ್ಲಮಜಲು ಸಾರ್ವಜನಿಕ ಮೈದಾನದಲ್ಲಿ ಇಬ್ಬರು ವ್ಯಕ್ತಿಗಳು ಮಾದಕ ವಸ್ತು ಸೇವಿಸಿ ನಶೆ ಹೊಂದಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸುತ್ತಿದ್ದಾರೆಂದು ಖಚಿತ ಮಾಹಿತಿ ಬಂದ ಮೇರೆಗೆ ಸ್ಥಳಕ್ಕೆ ತೆರಳಿದ ಬಂಟ್ವಾಳ ನಗರ ಪೊಲೀಸ್ ಠಾಣಾ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

### ಪಕ್ಷಿಗೆ ಹಾರಿಸಿದ ಗುಂಡು ತಗುಲಿ ವ್ಯಕ್ತಿಗೆ ಗಾಯ: ಆರೋಪಿ ಬಂಧನ

**ಮಡಿಕೇರಿ:** ಪಕ್ಷಿಗೆಂದು ಹಾರಿಸಿದ್ದ ಗುಂಡು ತಗುಲಿ ವ್ಯಕ್ತಿಯೊಬ್ಬರು ಗಾಯಗೊಂಡ ಘಟನೆ ಸಿದ್ದಾಪುರ ಸಮೀಪದ ಪುಲಿಯೇರಿಯಲ್ಲಿ ನಡೆದಿದ್ದು, ಗುಂಡು ಹಾರಿಸಿದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆನಂದಪುರ ನಿವಾಸಿ ಅನೇಸ್ಟ ಡಿಕುನ್ಹ ಎಂಬವರು ತಮ್ಮ ಮನೆಗೆ ಸೌದೆ ತರುತ್ತಿದ್ದ ಸಂದರ್ಭ, ತೋಟದ ಒಳಗಿನಿಂದ ಗುಂಡು ಹಾರಿ ಅವರ ಎದೆ, ಕಾಲು, ಕೈ ಸೊಂಟದ ಭಾಗಕ್ಕೆ ಹೊಕ್ಕು ಗಾಯಗೊಂಡಿದ್ದು ಅವರನ್ನು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ಸಂಬಂಧ ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಾಗ ಆನಂದಪುರ ನಿವಾಸಿ ಜೆರಾಲ್ಡ್ ಅರವಿಂದ್ (51) ಎಂಬವರು ಪಕ್ಷಿಗೆ ಹಾರಿಸಿದ ಗುಂಡು ತಗುಲಿ ಅನೇಸ್ಟ ಅವರಿಗೆ ತಗುಲಿರುವುದಾಗಿ ಗೊತ್ತಾಗಿದೆ. ಈ ಸಂಬಂಧ ಆರೋಪಿಯೂ ತಪ್ಪೊಪ್ಪಿಕೊಂಡಿದ್ದು, ಜೆರಾಲ್ಡ್ ಅವರನ್ನು ಬಂಧಿಸಿರುವ ಪೊಲೀಸರು ಬಂದೂಕನ್ನು ವಶಪಡಿಸಿಕೊಂಡಿದ್ದಾರೆ.

### ಗಲ್ಫ್ ಉದ್ಯೋಗಿ ನೇಣು ಬಿಗಿದು ಆತ್ಮಹತ್ಯೆ

**ಪೆರ್ಲ:** ಗಲ್ಫ್‌ನಿಂದ ಊರಿಗೆ ಬಂದಿದ್ದ ವ್ಯಕ್ತಿ ಗುರುವಾರ ಬೆಳಗ್ಗೆ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಇಡಿಯಡ್ಕ ದೇವಸ್ಥಾನ ಬಳಿಯ ನಿವಾಸಿ ವೆಂಕಟ್ರಮಣ ಆಚಾರ್ಯ (58) ಮೃತಪಟ್ಟವರು. ಬುಧವಾರ ರಾತ್ರಿ ಮನೆಯಲ್ಲಿ ಊಟ ಮಾಡಿ ನಿದ್ರಿಸಿದ್ದ ಅವರು ಗುರುವಾರ ಬೆಳಗ್ಗೆ ನಾಪತ್ತೆಯಾಗಿದ್ದರು. ಇದರಿಂದ ಮನೆಮಂದಿ ಹುಡುಕಾಟ ನಡೆಸಿದಾಗ ಮನೆ ಬಳಿಯ ಮರದಲ್ಲಿ ನೇಣು



ಬಿಗಿದ ಸ್ಥಿತಿಯಲ್ಲಿ ಪತ್ತೆಯಾದರು. ಬದಿಯಡ್ಕ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ನಡೆಸಿದರು. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಗಲ್ಫ್‌ನಲ್ಲಿ ಟೈಲರಿಂಗ್ ವೃತ್ತಿ ನಡೆಸುತ್ತಿದ್ದ ವೆಂಕಟ್ರಮಣ ಆಚಾರ್ಯ ಅವರು ಫೆ.19ರಂದು ಊರಿಗೆ ಬಂದಿದ್ದರು. ಸಾವಿಗೆ ಕಾರಣ ತಿಳಿದುಬಂದಿಲ್ಲ. ದಿ.ಮಾಧವ ಆಚಾರ್ಯ ಪುತ್ರನಾದ ಮೃತರು ತಾಯಿ ಚಂದ್ರಾವತಿ, ಪತ್ನಿ ಹೇಮಲತಾ, ಮಕ್ಕಳಾದ ತಶ್ವಿ, ಹಿಮಾನಿ, ಮಹರ್ಷ ಅವರನ್ನು ಅಗಲಿದ್ದಾರೆ.

### ಅಸೌಖ್ಯ ಬಾಧಿಸಿ ಚಿಕಿತ್ಸೆಯಲ್ಲಿದ್ದ ವಿದ್ಯಾರ್ಥಿನಿ ಮೃತ್ಯು

**ಕಾಸರಗೋಡು:** ಅಸೌಖ್ಯ ಬಾಧಿಸಿ ಚಿಕಿತ್ಸೆಯಲ್ಲಿದ್ದ 10ನೇ ತರಗತಿ ವಿದ್ಯಾರ್ಥಿನಿ ಮೃತಪಟ್ಟಿದ್ದಾರೆ. ಕುಣಿಯ ಸರಕಾರಿ ವೊಕೇಶನಲ್ ಹೈಯರ್ ಸೆಕೆಂಡರಿ ಶಾಲಾ ವಿದ್ಯಾರ್ಥಿನಿ ಆಯಿಷತ್ ಮೆಸಿನ್ (15) ಮೃತಪಟ್ಟವರು. ಕಳೆದ ಮೂರು ದಿನಗಳ ಹಿಂದೆ ಹೊಟ್ಟೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು. ಕುಣಿಯ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ಮಜೀದ್ – ರಸಿಯಾ ದಂಪತಿಯ ಪುತ್ರಿಯಾದ ಮೃತರು ತಂದೆ, ತಾಯಿ, ಸಹೋದರ ಕೆ.ಎಂ.ಅಬ್ದುಲ್ ರಶೀದ್, ಸಹೋದರಿ ಕೆ.ಎಂ.ಫಾತಿಮತ್ ರುಮಾನ ಅವರನ್ನು ಅಗಲಿದ್ದಾರೆ.

### ಮಾವಿನ ಮರದಿಂದ ಬಿದ್ದು ಓರ್ವ ಸಾವು

**ಬೆಳ್ತಂಗಡಿ:** ಧರ್ಮಸ್ಥಳ ಗ್ರಾಮದ ಕೆಂಬರ್ಜೆ ನಿವಾಸಿ ಸುರೇಶ್ ಗೌಡ (40)ರವರು ಮರದಿಂದ ಬಿದ್ದು ಮೃತಪಟ್ಟ ಘಟನೆ ಫೆ.26 ರಂದು ಬೆಳಗ್ಗೆ ನಡೆದಿದೆ. ಬೆಳಗ್ಗೆ ಮಾವಿನಕಾಯಿ ಕೀಳಲು ಮರ ಹತ್ತಿದ ಸುರೇಶ್ ಅವರು ಆಕಸ್ಮಿಕವಾಗಿ ಮರದಿಂದ ಬಿದ್ದ ಪರಿಣಾಮವಾಗಿ ಅಲ್ಲಿಯೇ ಸಾವನಪ್ಪಿದ್ದಾರೆ. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

ಹೆಚ್ಚುತ್ತಿದೆ ಕಾಲೇಜು ವಿದ್ಯಾರ್ಥಿಗಳಿಗೆ ಉದ್ಯೋಗ ಕೊಡುವ ಆಮಿಷವೊಡ್ಡಿ ಆರ್ಥಿಕ ವಂಚನೆ ಪ್ರಕರಣ

# ನೆಟ್‌ವರ್ಕ್ ವಿರುದ್ಧ ಯುವಪಡೆ ಸಮರ

**ಮಂಗಳೂರು:** ಕಾಲೇಜು ವಿದ್ಯಾರ್ಥಿಗಳಿಗೆ ಉದ್ಯೋಗ ಕೊಡುವ ಆಮಿಷವೊಡ್ಡಿ ಅವರಿಂದ ಬ್ಯುಸಿನೆಸ್ ನೆಪದಲ್ಲಿ ಹಣ ಪಡೆದು ವಂಚಿಸುತ್ತಿರುವ ಪ್ರಕರಣ ಮಂಗಳೂರು ನಗರದಲ್ಲಿ ನಡೆಯುತ್ತಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ವಿದ್ಯಾರ್ಥಿ ಸಂಘಟನೆಗಳು ತಿಳಿಸಿವೆ.




ಆಮಿಷಕ್ಕೆ ಒಳಗಾಗಿರುವ ಸಂತ್ರಸ್ತೆಯರ ಸಮ್ಮುಖದಲ್ಲಿ ವಿದ್ಯಾರ್ಥಿ ಸಂಘಟನೆಗಳಾದ ಎಬಿವಿಪಿ ಹಾಗೂ ಎನ್‌ಎಸ್‌ಯುಐ ಪ್ರತಿನಿಧಿಗಳು ಗುರುವಾರ ಸುದ್ದಿಗೋಷ್ಠಿ ನಡೆಸಿ, ಕುದ್ರೋಳಿಯಲ್ಲಿ ಕಾರ್ಯಾಚರಿಸುತ್ತಿರುವ ಕಂಪನಿಗೆ ಬೀಗ ಹಾಕುವವರೆಗೆ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

ಎಬಿವಿಪಿ ಬೆಂಬಲಿತ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಾತ್ವಿಕ್ ಮುಳಿಯ ಮಾತನಾಡಿ, ಕಾಲೇಜಿನ ಅಮಾಯಕ ವಿದ್ಯಾರ್ಥಿಗಳನ್ನು ಕೆಲಸ ಕೊಡಿಸುವ ನೆಪದಲ್ಲಿ ಚೈನ್ ಬಿಸ್ನೆಸ್‌ಗೆ ಸೇರಿಸಿಕೊಂಡು ಬಳಿಕ ವಿದ್ಯಾರ್ಥಿಗಳು ನೊಂದು ಆತ್ಮಹತ್ಯೆಗೆ ಮುಂದಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ನಗರದ ವಿವಿಧ ಕಾಲೇಜುಗಳು ಸುಮಾರು 100ಕ್ಕೂ ಅಧಿಕ ವಿದ್ಯಾರ್ಥಿಗಳು ನೆಟ್‌ವರ್ಕ್ ಮಾರ್ಕೆಟಿಂಗ್ ಹೆಸರಿನಲ್ಲಿ ಕಾರ್ಯಾಚರಿಸುತ್ತಿರುವ ಈ ಕಂಪನಿಯ ಮೋಸದ ಬಲೆಗೆ ಬಿದ್ದು ಹಣ ಕಳೆದುಕೊಂಡಿದ್ದಾರೆ. ಹಣಕ್ಕಾಗಿ ಮನೆಯವರಿಂದ ವಿವಿಧ ರೀತಿಯ ನೆಪ ಹೇಳಿರುವುದಲ್ಲದೆ, ಕೆಲ ವಿದ್ಯಾರ್ಥಿಗಳು ಚಿನ್ನವನ್ನು ಒತ್ತೆಯಿರಿಸಿ ಈ ಕಂಪನಿಗೆ ಹಣ ನೀಡಿ ಮೋಸ ಹೋಗಿದ್ದಾರೆ. ಕೆಲ ವಿದ್ಯಾರ್ಥಿಗಳು ಇದೀಗ ಕಂಪನಿಯ ಮೋಸ ಅರಿವಾಗಿ ಅದರಿಂದ ಹೊರ ಬಂದಿದ್ದರೆ ಮತ್ತಷ್ಟು ವಿದ್ಯಾರ್ಥಿಗಳು ಆ ಕಂಪನಿಯ ಬಲೆಯಲ್ಲಿ ಸಿಲುಕಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದ್ದು, ತನಿಖೆ ನಡೆಯುತ್ತಿದೆ ಎಂದರು.

ಈಗಲೂ ಆ ಕಂಪನಿಯಲ್ಲಿ ಸುಮಾರು 40 ಮಂದಿ ಕೆಲಸ ಮಾಡುತ್ತಿರುವುದು ತಿಳಿದು ಬಂದಿದೆ. ಪೊಲೀಸರು ಸೇರಿದಂತೆ ಸಂಬಂಧಪಟ್ಟವರು ಈ ಬಗ್ಗೆ ಸೂಕ್ತ ಕಾನೂನು ಕ್ರಮ ವಹಿಸಬೇಕು. ಆ ಕಂಪನಿಗೆ ಬಾಡಿಗೆ ನೀಡಿರುವ ಕಟ್ಟಡದ ಮಾಲಕರ ಬಗ್ಗೆಯೂ ಅನುಮಾನವಿದ್ದು, ಈ ಪ್ರಕರಣದ ಬಗ್ಗೆ ಸೂಕ್ತ ತನಿಖೆ ಆಬೇಕು ಎಂದು ಸಾತ್ವಿಕ್ ಒತ್ತಾಯಿಸಿದರು.

ಎನ್‌ಎಸ್‌ಯುಐನ ಮಂಗಳೂರು ದಕ್ಷಿಣ ಘಟಕದ ಅಧ್ಯಕ್ಷ ಕ್ರಿಸ್ಟನ್ ಮಿನೇಜಸ್ ಮಾತನಾಡಿ, ಮಹಾರಾಷ್ಟ್ರ ನಾಸಿಕ್ ಮೂಲದ ಕಂಪನಿ ಇದಾಗಿದ್ದು, ವ್ಯಾಪಾರ ಪರವಾನಿಗೆಯನ್ನೂ ಈ ಕಂಪನಿ ಪಡೆದುಕೊಂಡಿದೆ. ಆರು ತಿಂಗಳ ಹಿಂದೆಯೂ ಈ ಕಂಪನಿಯ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಪೊಲೀಸ್ ವಿಚಾರಣೆಯಾಗಿದೆ. ಹಾಗಿದ್ದರೂ ಮತ್ತೆ ವಿದ್ಯಾರ್ಥಿಗಳಿಗೆ ಹಣ ಗಳಿಸುವ ಆಸೆ ಹುಟ್ಟಿಸಿ, ಕೊನೆಗೆ ಮಾನಸಿಕ ಹಿಂಸೆ ನೀಡುತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಮುಖ್ಯಮಂತ್ರಿ, ಗೃಹ ಸಚಿವರ ಗಮನಕ್ಕೂ ತಂದು ಆ ಕಂಪನಿ ಮುಚ್ಚುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ವಿದ್ಯಾರ್ಥಿ ನಾಯಕರಾದ ಪ್ರೀತೇಶ್, ಸಿಂಚನ, ಸಿಂಧು ಉಪಸ್ಥಿತರಿದ್ದರು.

**ಆತ್ಮಹತ್ಯೆಗೂ ಮುಂದಾಗಿದ್ದೆ**

ಸಂತ್ರಸ್ತೆ ವಿದ್ಯಾರ್ಥಿನಿಯೊಬ್ಬರು ಮಾತನಾಡಿ ಇನ್‌ಸ್ಟಾಗ್ರಾಂನಲ್ಲಿ ಸ್ನೇಹಿತೆಯ ಮೂಲಕ ಕಳೆದ ಜೂನ್‌ನಲ್ಲಿ ಕೋರ್ಸ್ ಮೂಲಕ ಉದ್ಯೋಗ ಪಡೆಯುವ ಅವಕಾಶದ ಹಿನ್ನೆಲೆಯಲ್ಲಿ ನಾನು ಆರಂಭದಲ್ಲಿ ಮೂರು ದಿನಗಳ ತರಬೇತಿಗಾಗಿ ಆ ಕಂಪನಿಗೆ ಸೇರಿದ್ದೆ. ಆರಂಭದಲ್ಲಿ ನನ್ನಿಂದ 2500 ರೂ.ಗಳನ್ನು ಪಡೆಯಲಾಯಿತು. ಬಳಿಕ 11000 ಅಥವಾ 51000 ರೂ.ಗಳನ್ನು ಪಾವತಿಸಿ ಅವರು ನೀಡುವ ವಸ್ತುಗಳನ್ನು ಖರೀದಿಸಬೇಕು ಹಾಗೂ ಮತ್ತೆ ಮೂವರನ್ನು ಸೇರ್ಪಡೆಗೊಳಿಸುವ ಮೂಲಕ ಪಾವತಿಸಿದ ಹಣ ವಾಪಾಸು ಕೊಡಿಸುವ ಭರವಸೆ ನೀಡಲಾಯಿತು. ಆರಂಭದಲ್ಲಿ ಇದು ಒಂದು ರೀತಿಯ ವ್ಯವಹಾರ ಎಂದು ನಂಬಿಕೊಂಡು ತಾಯಿ ಬಳಿ ಲ್ಯಾಪ್‌ಟಾಪ್‌ಗಾಗಿ ಹಣ ಕೇಳಿ ಕಂಪನಿಯ ಪ್ರತಿನಿಧಿಗಳಿಗೆ ನೀಡಿದ್ದೆ. ಆದರೆ ನನಗೆ ನೀಡಲ್ಪಟ್ಟ ವಸ್ತುಗಳು ಸರಿ ಇಲ್ಲದಾಗ ನನಗೆ ಅನುಮಾನ ಬಂದು ನನಗೆ ಹಣವನ್ನು ಮರು ಪಾವತಿಸುವಂತೆ ಕೋರಿದರೂ ಹಲವು ಸಮಯದವರೆಗೆ ನನ್ನನ್ನು ಸತಾಯಿಸಲಾಯಿತು. ಈ ನಡುವೆ ತಾಯಿಗೂ ವಿಷಯ ತಿಳಿದಾಗ ಅವರೂ ನನ್ನ ಮೇಲೆ ಬೇಸರ ಮಾಡಿಕೊಂಡಾಗ ಆತ್ಮಹತ್ಯೆಗೂ ಮುಂದಾಗಿದ್ದೆ. ನನ್ನ ಸ್ನೇಹಿತೆ ಧೈರ್ಯ ತುಂಬಿದ ಬಳಿಕ ಪೊಲೀಸರಿಗೆ ದೂರು ನೀಡಿ ಕಂಪನಿಯವರನ್ನು ಕರೆಸಿ ಹಣ ಹಿಂತಿರುಗಿಸುವ ಭರವಸೆ ನೀಡಲಾಯಿತು. ಆದರೆ ಅವರು ಮತ್ತೆ ಸತಾಯಿಸಿದಾಗ ಮತ್ತೆ ಆತ್ಮಹತ್ಯೆಯ ದಾರಿ ಹಿಡಿಯಬೇಕಾಯಿತು. ಬಳಿಕ ಹಣ ಮರಳಿ ಪಡೆದಿದ್ದೇನೆ ಎಂದು ಹೇಳಿದರು.

> **ಸಾಫ್ಟ್‌ವೇರ್ ಡೆವಲಪರ್ ಆಗಿ 30000 ರೂ. ವೇತನದ ಉದ್ಯೋಗವೆಂದು ಹೇಳಿ ನನ್ನ ಸ್ನೇಹಿತೆ ನನ್ನನ್ನು ಆ ಕಂಪನಿಗೆ ಸೇರಿಸಿದ್ದಳು. ಕೇವಲ ಆಧಾರ್ ಕಾರ್ಡ್ ಮಾತ್ರವೇ ಪಡೆಯಲಾಗಿತ್ತು. ತರಬೇತಿ ಸಮಯದಲ್ಲಿ ಅಲ್ಲಿ ಒಬ್ಬರಿಗೊಬ್ಬರು ಮಾತನಾಡುವಂತಿಲ್ಲ. ಹೀಗೆ ತಂಡ ತಂಡವಾಗಿ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಅವರ ಕುಟುಂಬದ ಹಿನ್ನೆಲೆ ತಿಳಿದುಕೊಂಡು ಮರಳು ಮಾಡಿ ಹಣ ನೀಡಲು ಒತ್ತಾಯಿಸಲಾಗುತ್ತದೆ. ಉದ್ಯೋಗದ ಆಸೆ ಹಾಗೂ ಉತ್ತಮ ಸಂಪಾದನೆಯ ಭರವಸೆಯಲ್ಲಿ ವಿದ್ಯಾರ್ಥಿಗಳು ಈ ಕಂಪನಿಯ ಜಾಲಕ್ಕೆ ಬೀಳುತ್ತಿದ್ದಾರೆ ಎಂದು ಆರೋಪಿಸಿದರು.**
>
> ■ ಇನ್ನೋರ್ವ ಸಂತ್ರಸ್ತೆ

---

ಉಡುಪಿಗೆ ಮರೀಚಿಕೆಯಾದ 'ನಿಕ್ಷಯ್ ಪೋಷಣ್' ನೆರವು

## ನೆರವು ಸಿಗದೆ ತಿಂಗಳು ಎಂಟು!

▸ ಸುದೀಪ್ ರಾಜ್ ಸುಳ್ಯ

**ಉಡುಪಿ:** ಜಿಲ್ಲೆಯಲ್ಲಿ ಕ್ಷಯ ರೋಗದಿಂದ ಬಳಲುತ್ತಿರುವ ಸುಮಾರು 1,300ಕ್ಕೂ ಅಧಿಕ ರೋಗಿಗಳು ಕಳೆದ ಎಂಟು ತಿಂಗಳುಗಳಿಂದ ಸರ್ಕಾರದ ಆರ್ಥಿಕ ನೆರವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ನಿಕ್ಷಯ್ ಪೋಷಣ್ ಯೋಜನೆ'ಯ ಅಡಿಯಲ್ಲಿ ಪ್ರತೀ ಕ್ಷಯ ರೋಗಿಗೆ ಚಿಕಿತ್ಸೆಯ ಅವಧಿ ಪೌಷ್ಟಿಕ ಆಹಾರ ಸೇವನೆಗೆಪ್ರತಿತಿಂಗಳುಸಾವಿರರೂಪಾಯಿ ಸಹಾಯಧನ ನೀಡಲಾಗುತ್ತಿತ್ತು. ಆದರೆ, ಕಳೆದ ಎಂಟು ತಿಂಗಳುಗಳಿಂದ ಪೋರ್ಟಲ್‌ನಲ್ಲಿ ಉಂಟಾದ ತಾಂತ್ರಿಕ ದೋಷದಿಂದ ಈ ಹಣ ರೋಗಿಗಳ ಖಾತೆಗೆ ಜಮೆಯಾಗುತ್ತಿಲ್ಲ. ಕ್ಷಯ ರೋಗದ ಚಿಕಿತ್ಸೆಯಲ್ಲಿ ಔಷಧಿಗಳಷ್ಟೇ ಪೌಷ್ಟಿಕ ಆಹಾರವೂ ಮುಖ್ಯವಾಗಿದ್ದು, ಆರ್ಥಿಕವಾಗಿ ಹಿಂದುಳಿದ ರೋಗಿಗಳು ಈ ಮಾಸಾಶನ ಬಾರದೆ ಹಣ್ಣು, ಹಾಲು ಹಾಗೂ ಪೌಷ್ಟಿಕಾಂಶಯುಕ್ತ ಆಹಾರ ಕೊಳ್ಳಲು ಪರದಾಡುವಂತಾಗಿದೆ.

**ನೇರ ನಗದು ವರ್ಗಾವಣೆ**

ಈ ಯೋಜನೆಯು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ದೇಶವನ್ನು ಕ್ಷಯ ರೋಗ ಮುಕ್ತಗೊಳಿಸುವ ಉದ್ದೇಶದಿಂದ ಜಾರಿಗೆ ತರಲಾಗಿದೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳು ನಿಕ್ಷಯ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡರೆ ಅವರಿಗೆ ನೇರ ನಗದು ವರ್ಗಾವಣೆ ಮೂಲಕ ಈ ಹಣ ತಲುಪಬೇಕಿದೆ. ಉಡುಪಿ ಜಿಲ್ಲೆಯ ರೋಗಿಗಳು ಗುಣಮುಖರಾಗುವ ಹಂತದಲ್ಲಿದ್ದರೂ, ಈ ರೀತಿಯ ತಾಂತ್ರಿಕ ಅಡೆತಡೆಗಳು ಅವರ ಚಿಕಿತ್ಸೆಯ ಫಲಿತಾಂಶದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ.

**ಇಲಾಖೆ ಕ್ರಮ ಕೈಗೊಳ್ಳಲಿ**

ಜಿಲ್ಲಾ ಆರೋಗ್ಯ ಇಲಾಖೆಯು ಈ ಪೋರ್ಟಲ್ ಸಮಸ್ಯೆಯನ್ನು ಉನ್ನತ ಮಟ್ಟದಲ್ಲಿ ಬಗೆಹರಿಸಿ, ಬಾಕಿ ಇರುವ ಎಂಟು ತಿಂಗಳ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡುವ ಮೂಲಕ ರೋಗಿಗಳ ನೆರವಿಗೆ ಬರಬೇಕಿದೆ ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

**ಕ್ಷಯ ರೋಗಿಗಳ ಪೌಷ್ಟಿಕತೆಗೆ ಆಸರೆ**

ಕೇಂದ್ರ ಸರ್ಕಾರದ ಈ ಯೋಜನೆಯಡಿ ನೋಂದಾಯಿತ ಕ್ಷಯ ರೋಗಿಗಳಿಗೆ ಚಿಕಿತ್ಸೆಯ ಅವಧಿಯಲ್ಲಿ ಪೌಷ್ಟಿಕ ಆಹಾರ ಸೇವಿಸಲು ಪ್ರತಿ ತಿಂಗಳು ರೂ. 1,000 ಸಹಾಯಧನ ನೀಡಲಾಗುತ್ತದೆ. ನೇರ ನಗದು ವರ್ಗಾವಣೆ ಮೂಲಕ ರೋಗಿಗಳ ಬ್ಯಾಂಕ್ ಖಾತೆಗೆ ಈ ಹಣ ಜಮೆಯಾಗುತ್ತದೆ. ರೋಗನಿರೋಧಕ ಶಕ್ತಿ ಹೆಚ್ಚಿಸಿ, ದೇಶವನ್ನು ಕ್ಷಯ ಮುಕ್ತಗೊಳಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.

> **ತಕ್ಷಣ ಪಾವತಿ**
>
> **2015ಕ್ಕೆ ಹೋಲಿಸಿದರೆ 2022ರಲ್ಲಿ ಉಡುಪಿ ಜಿಲ್ಲೆಯಲ್ಲಿ ಶೇ. 40 ರಷ್ಟು ಟಿ.ಬಿ. ಪ್ರಕರಣ ನಿಯಂತ್ರಣಕ್ಕೆ ಬಂದಿದೆ. ಪ್ರಸ್ತುತ ಈ ಪ್ರಮಾಣ 80 ಕ್ಕೆ ಏರಿಕೆಯಾಗಿದೆ. ಪೋರ್ಟಲ್ ಸಮಸ್ಯೆಯಿಂದಾಗಿ ಹಣ ಹಾಕಲು ಸಾಧ್ಯವಾಗಿರಲಿಲ್ಲ. ಸದ್ಯ ಪೋರ್ಟಲ್ ಸರಿಯಾಗಿದ್ದು, ಬಜೆಟ್ ಹಣ ಬಿಡುಗಡೆಯಾದ ತಕ್ಷಣ ಪಾವತಿಸಲಾಗುವುದು.**
>
> ■ ಡಾ. ಚಿದಾನಂದ್, ಕ್ಷಯ ರೋಗ ನಿಯಂತ್ರಣ ಅಧಿಕಾರಿ, ಉಡುಪಿ ಜಿಲ್ಲೆ

---

## 'ಅಮೆಜಾನ್'ನಲ್ಲೂ ಇನ್ನು ಅಡೂರು ಕರಿಮೆಣಸು, ಕರಿಮೆಣಸು ಹುಡಿ ಲಭ್ಯ

**ಮುಳ್ಳೇರಿಯ:** ಅಡೂರಿನಗಾಳಿಮುಖ ಕುಂಟಾರಿನಲ್ಲಿ ಗೇರು ತೋಟದ ಸಾವಯವ ಕರಿಮೆಣಸು, ಕರಿಮೆಣಸಿನ ಹುಡಿ ಇನ್ನು ಆನ್‌ಲೈನ್ ಮಾರುಕಟ್ಟೆಯಲ್ಲಿ ಸಂಚಲನ ಮೂಡಿಸಲಿದೆ.




ಸಂಪೂರ್ಣವಾಗಿ ಸಾವಯವವಾಗಿ ಮತ್ತು ಯಾವುದೇ ರೀತಿಯ ರಾಸಾಯನಿಕಗಳ ಬಳಕೆಯಿಲ್ಲದೆ ಬೆಳೆಯುವ ಈ ಎರಡು ಉತ್ತಮ ಗುಣಮಟ್ಟದಉತ್ಪನ್ನಗಳನ್ನುಆರಂಭದಲ್ಲಿ ಅಮೆಜಾನ್ ಮೂಲಕ ಮತ್ತು ನಂತರ ಇತರ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲಾಗುವುದು.

ರಾಜ್ಯ ಕೃಷಿ ಇಲಾಖೆ ಒದಗಿಸುವ ಕೇರಳ ಗ್ರೋ ಬ್ರ್ಯಾಂಡಿಂಗ್‌ನೊಂದಿಗೆ ಕಾಳುಮೆಣಸು ಮತ್ತು ಮೆಣಸಿನ ಹುಡಿ ಮಾರುಕಟ್ಟೆಯಲ್ಲಿ ಬೇಡಿಕೆ ಕುದುರಿಸಲು ಬರುತ್ತಿದೆ. ಇದರೊಂದಿಗೆ ಸಾವಯವ ಉತ್ಪನ್ನಗಳಿಗೆ ಸಾವಯವ ಪ್ರಮಾಣೀಕರಣವನ್ನು ಪಡೆಯಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಎರಡು ವಾರಗಳಲ್ಲಿ ಆನ್‌ಲೈನ್ ಮಾರುಕಟ್ಟೆಯಲ್ಲಿ ಲಭ್ಯವಾಗುವ ಉತ್ಪನ್ನಗಳನ್ನು ಪ್ರಸ್ತುತ ಕುಂಟಾರಿನ ಗೇರು ತೋಟದಲ್ಲಿ ನೇರವಾಗಿ ಮಾರಾಟ ಮಾಡಲಾಗುತ್ತಿದೆ. ಕಾಳುಮೆಣಸು ಮತ್ತು ಮೆಣಸಿನ ಹುಡಿ 100 ಗ್ರಾಂ ಮತ್ತು 250 ಗ್ರಾಂ ಪ್ಯಾಕೆಟ್‌ಗಳಲ್ಲಿ ಲಭ್ಯವಿರುತ್ತದೆ. ಕುಂಟಾರು ಗಾಳಿಮುಖದಲ್ಲಿರುವ ಗೇರು ತೋಟವು ರಾಜ್ಯ ಕೃಷಿ ಇಲಾಖೆಯ ಅಭಿವೃದ್ಧಿ ಯೋಜನೆಗಳ ಮಾರಾಟ, ಖರೀದಿ ಮತ್ತು ಅನುಷ್ಠಾನವನ್ನು ಗೇರು ಅಭಿವೃದ್ಧಿ ಅಧಿಕಾರಿ ಮನು ನರೇಂದ್ರನ್ ನೇತೃತ್ವ ವಹಿಸುತ್ತಾರೆ. ಗೇರು ತೋಟವು ಕೃಷಿ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಗೇರು ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯವು ನೀಡಿದ ಮಾನ್ಯತೆ ಪ್ರಮಾಣಪತ್ರವನ್ನು ಪಡೆದ ಕೇರಳದ ಮೊದಲ ಸರಕಾರಿ ತೋಟವಾಗಿದೆ.

**ಕೋಟಿ ರೂ.ಗಳ ದಾಖಲೆ ವಹಿವಾಟು**

**ಕಳೆದ ವರ್ಷ ಈ ತೋಟವು ಒಂದು ಕೋಟಿ ರೂ.ಗಳ ದಾಖಲೆಯ ವಹಿವಾಟು ದಾಖಲಿಸಿದೆ. ಹೈಬ್ರಿಡ್ ಗೇರು ಸಸಿ ಜೊತೆಗೆ ಕರಿಮೆಣಸು, ಮಾವಿನ ಸಸಿ, ತೆಂಗಿನ ಸಸಿ, ಹಲಸಿನ ಸಸಿ, ವಿವಿಧ ರೀತಿಯ ತರಕಾರಿ ವಸ್ತು, ಪ್ರೀಮಿಯಂ ವಿಧದ ಹಲಸು ಮತ್ತು ಮಾವು ಸೇರಿದಂತೆ ವ್ಯಾಪಕ ಶ್ರೇಣಿಯ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ಸಾವಯವ ಕೃಷಿಯ ವಿಶ್ವಾಸಾರ್ಹತೆ ಮತ್ತು ಸರಕಾರದ ಬೆಂಬಲದಲ್ಲಿ ಗೇರು ತೋಟವು ಈಗ ಆನ್‌ಲೈನ್ ಮಾರುಕಟ್ಟೆಯಲ್ಲಿಯೂ ಸಕ್ರಿಯವಾಗಲಿದೆ.**

---

## ಕಾಸರಗೋಡು ಜಿಲ್ಲೆಯ ಚುನಾವಣಾ ಪ್ರಚಾರಕ್ಕೆ ಬಿಜೆಪಿ ವಿಶಿಷ್ಟ ರೀತಿ ಚಾಲನೆ

**ಕಾಸರಗೋಡು:** ಜಿಲ್ಲೆಯಲ್ಲಿ ಎನ್‌ಡಿಎ ಒಕ್ಕೂಟದ ಚುನಾವಣಾ ಪ್ರಚಾರ ಅಭಿಯಾನ ಆರಂಭಗೊಂಡಿದೆ. ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಗೋಡೆಗಳ ಮೇಲೆ ಬಣ್ಣ ಬಳಿಯುವ ಮೂಲಕ ಅಭಿಯಾನವನ್ನು ಉದ್ಘಾಟಿಸಿದರು.



ಈ ಸಂದರ್ಭ ಕಲ್ಲಿಕೋಟೆ ವಲಯ ಅಧ್ಯಕ್ಷ, ವಕೀಲ ಕೆ.ಶ್ರೀಕಾಂತ್, ಪ್ರಧಾನ ಕಾರ್ಯದರ್ಶಿ ಸುಧಾಮ ಗೋಸಾಡ, ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಬಾಬುರಾಜ್, ಜಿಲ್ಲಾ ಉಪಾಧ್ಯಕ್ಷ ಕೆ.ರಮೇಶ್, ಕಾರ್ಯದರ್ಶಿ ಪ್ರಮೀಳಾ ಮಜಲ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಬದಿಯಡ್ಕ ಮಂಡಲಾಧ್ಯಕ್ಷ ಗೋಪಾಲಕೃಷ್ಣ ಎಂ., ರಾಜ್ಯ ಪರಿಷತ್ ಸದಸ್ಯ ಎನ್.ಸತೀಶ್, ನಗರಸಭಾ ಈಸ್ಟ್ ವಲಯ ಅಧ್ಯಕ್ಷ ವರಪ್ರಸಾದ್ ಕೋಟೆಕಣಿ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯಕ್, ಒಬಿಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಅಶೋಕನ್ ಚೆಟ್ಟಿಯಾರ್, ಕಿಶೋರ್ ಮತ್ತು ಗಣೇಶ್ ಉಪಸ್ಥಿತರಿದ್ದರು.

---

## ಕಾನೂನು ಉಲ್ಲಂಘನೆ ಆರೋಪ: ಪುತ್ತೂರು ಕಾಲೇಜ್ ಪ್ರಭಾರ ಪ್ರಾಂಶುಪಾಲೆ ಅಮಾನತು!

**ಪುತ್ತೂರು:** ಪುತ್ತೂರು ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ವೇದಶ್ರೀ ನಿಡ್ಯಾ ಅವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಈ ಆದೇಶ ಹೊರಡಿಸಿದ್ದಾರೆ. ಕಾನೂನು ಉಲ್ಲಂಘನೆ ಆರೋಪದಲ್ಲಿ ಅಮಾನತು ಆದೇಶ ಹೊರಡಿಸಲಾಗಿದೆ.

**ಅನಿವಾರ್ಯವಿತ್ತು: ಪ್ರಾಂಶುಪಾಲೆ**

ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ವೇದಶ್ರೀ ನಿಡ್ಯಾ ತಮ್ಮ ಹೇಳಿಕೆಯಲ್ಲಿ ನೂತನ ಕಟ್ಟಡಕ್ಕಾಗಿ ಶಾಸಕರಿಗೆ ಮನವಿ ನೀಡಿದ್ದು, ಫೆ. 16ರಂದು ತರಗತಿಗೆ ಬಂದ ಸಂದರ್ಭದಲ್ಲಿ ಉಸಿರು ಗಟ್ಟಿಸುವ ವಾತಾವರಣ ಇದ್ದ ಕಾರಣ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿರುವುದಾಗಿ ತಿಳಿಸಿದ್ದಾರೆ.

**ಅನುಮತಿ ಪಡೆದಿಲ್ಲ: ಪೊಲೀಸ್**

ಪುತ್ತೂರು ನಗರ ಪೊಲೀಸ್ ಠಾಣೆ



ನಿರೀಕ್ಷಕರು ತಮ್ಮ ಪತ್ರದಲ್ಲಿ ಫೆ. 16ರಂದು ಬೆಳಗ್ಗೆ ಸುಮಾರು 9.30ಕ್ಕೆ ಪುತ್ತೂರಿನ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ಸಾರ್ವಜನಿಕ ಸ್ಥಳದಲ್ಲಿ ರಸ್ತೆ ತಡೆಯನ್ನು ಯಾವುದೇ ಪೂರ್ವಾನುಮತಿ ಪಡೆಯದೆ ನಡೆಸಿದ್ದು ಇದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಿರುವುದಾಗಿ ತಿಳಿಸಿರುತ್ತಾರೆ. ಪ್ರತಿಭಟನೆಯ ಸಂದರ್ಭದಲ್ಲಿ ಪ್ರಾಂಶುಪಾಲೆ ವೇದಶ್ರೀ ನಿಡ್ಯಾ ಮತ್ತು ಪ್ರಾಧ್ಯಾಪಕ ಐವನ್ ಪ್ರಾನ್ಸಿಸ್ ಲೋಬೋ ಉಪಸ್ಥಿತರಿದ್ದು ಮತ್ತು ಈ ಪ್ರತಿಭಟನೆಗೆ ಪ್ರೇರೇಪಿಸಿರುವ ಬಗ್ಗೆ ಇಲಾಖೆಗೆ ಗುಪ್ತ ಮಾಹಿತಿ ಬಂದಿರುವುದಾಗಿ ತಿಳಿಸಿದ್ದಾರೆ.

**ನನ್ನ ಗಮನಕ್ಕೆ ತಂದಿಲ್ಲ: ಶಾಸಕರು**

ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿರುವ ಪುತ್ತೂರಿನ ಶಾಸಕರು ತಮ್ಮ ಪತ್ರದಲ್ಲಿ ಕಾಲೇಜಿನಲ್ಲಿ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ವೇದಶ್ರೀ ನಿಡ್ಯಾ ಅವರು ವಿದ್ಯಾರ್ಥಿಗಳು ಡಯಾಲಿಸಿಸ್ ಕೇಂದ್ರದ ನಿರ್ಮಾಣ ಕಾಮಗಾರಿಯಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಆರೋಗ್ಯದ ಸಮಸ್ಯೆಗಳಾಗಲಿ, ತೊಂದರೆಗಳಾಗಲಿ ಯಾವುದೇ ಮಾಹಿತಿಯನ್ನು ಶಾಸಕರ ಅಥವಾ ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ತಂದಿರುವುದಿಲ್ಲ ಮತ್ತು ಈ ವಿಚಾರವಾಗಿ ವಿದ್ಯಾರ್ಥಿಗಳಿಗೆ ತಪ್ಪು ಮಾಹಿತಿ ನೀಡಿ ವಿದ್ಯಾರ್ಥಿಗಳಿಂದ ಸರ್ಕಾರದ ವಿರುದ್ಧ ಹಾಗೂ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಿರುವುದಾಗಿ ತಿಳಿಸಿದ್ದಾರೆ.

---

ಕೇರಳ ಪಟ್ಟಾ ಮೇಳಕ್ಕೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಚಾಲನೆ | ಕಾಸರಗೋಡಿನ 73 ಬುಡಕಟ್ಟು ಜನಾಂಗ ಸಹಿತ 659 ವಲಯದವರಿಗೆ ಭೂ ಹಕ್ಕು

## 10 ವರ್ಷದ ಅವಧಿಯಲ್ಲಿ 4.5 ಲಕ್ಷ ಕುಟುಂಬಗಳಿಗೆ ಭೂ ಹಕ್ಕುಪತ್ರ ವಿತರಣೆ


**ಕಾಸರಗೋಡು:** ಕಳೆದ 10 ವರ್ಷಗಳ ಅವಧಿಯಲ್ಲಿ ಸುಮಾರು 4.50 ಲಕ್ಷ ಕುಟುಂಬಗಳು ಭೂ ಮಾಲಕರಾಗಿದ್ದಾರೆ. ಅವರೆಲ್ಲರಿಗೂ ಭೂ ಹಕ್ಕುಪತ್ರಗಳನ್ನು ವಿತರಿಸಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ರಾಜ್ಯ ಮಟ್ಟದ ಭೂ ಹಕ್ಕುಪತ್ರ ಮೇಳದ ಜೊತೆಗೆ ಕಾಸರಗೋಡು ಜಿಲ್ಲಾ ಮಟ್ಟದ ಭೂ ಹಕ್ಕುಪತ್ರ ಮೇಳದಲ್ಲಿ ಮುಖ್ಯಮಂತ್ರಿಗಳು ಆನ್‌ಲೈನ್ ಮೂಲಕ ಗುರುವಾರ ಉದ್ಘಾಟಿಸಿ ಮಾತನಾಡಿದರು.

ಒಂದು ಕುಟುಂಬದಲ್ಲಿ ನಾಲ್ಕು ಜನರು ಇದ್ದಾರೆಂದು ಭಾವಿಸಿದರೆ 40 ಲಕ್ಷ ಜನರು 4.50 ಲಕ್ಷ ಭೂ ಹಕ್ಕುಪತ್ರಗಳ ಫಲಾನುಭವಿಗಳಾದರು. ಹಿಂದಿನ ಸರಕಾರದ ಅವಧಿಯಲ್ಲಿ ಪ್ರವಾಹ, ಭಾರೀ ಮಳೆ, ಕೊರೋನಾ, ನಿಫಾ ವೈರಸ್ ಮುಂತಾದ ವಿಪತ್ತುಗಳು ಸಂಭವಿಸಿದಾಗಲೂ 1,77,011 ಭೂ ಹಕ್ಕುಪತ್ರಗಳನ್ನು ವಿತರಿಸಲಾಗಿದೆ ಎಂದು ಅವರು ಉಲ್ಲೇಖಿಸಿದರು.

ಕೇರಳದಲ್ಲಿ ಎಡರಂಗ ಒಕ್ಕೂಟ ಅಧಿಕಾರ ವಹಿಸಿಕೊಂಡಾಗ ಮೊದಲ ಹಂತದಲ್ಲಿ 54,535 ಭೂ ಹಕ್ಕುಪತ್ರಗಳನ್ನು ನೀಡಲಾಯಿತು. ನಂತರ 67,069 ಭೂ ಹಕ್ಕುಪತ್ರಗಳನ್ನು ವಿತರಿಸಲಾಯಿತು. ಮತ್ತೆರಡು ಹಂತಗಳಲ್ಲಿ ತಲಾ 31,499 ಹಾಗೂ 27,784 ಭೂ ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಸರಕಾರದ ಅಧಿಕಾರಾವಧಿಯ ಮೊದಲ ಮೂರು ವರ್ಷಗಳಲ್ಲಿ ಇದನ್ನು ಸಾಧಿಸಲಾಯಿತು. ಬಳಿಕ ವಿವಿಧ ಹಂತಗಳಲ್ಲಿ ಮತ್ತೆ ಭೂ ಹಕ್ಕುಪತ್ರಗಳನ್ನು ವಿತರಿಸಲಾಯಿತು. ಇಂದು ರಾಜ್ಯಮಟ್ಟದ ಪಟ್ಟಾ ಮೇಳದಲ್ಲಿ 27,752 ಭೂ ಹಕ್ಕುಪತ್ರಗಳನ್ನು ವಿತರಿಸುವುದರೊಂದಿಗೆ, ಸರಕಾರವು ನಾಲ್ಕೂವರೆ ಲಕ್ಷ ಭೂ ದಾಖಲೆಪತ್ರಗಳನ್ನು ವಿತರಿಸುವ ಗುರಿಯನ್ನು ತಲುಪುವ ಹಾದಿಯಲ್ಲಿದೆ ಎಂದರು.

ಭೂಮಿ ಮತ್ತು ಮನೆಗಳನ್ನು ಒದಗಿಸುವುದು ಸರಕಾರದ ಪ್ರಣಾಳಿಕೆಯಾಗಿತ್ತು. ಜಾಗತೀಕರಣವನ್ನು ಹಾಗೆಯೇ ಜಾರಿಗೆ ತಂದಿದ್ದರೆ ಕಾರ್ಪೋರೇಟ್‌ಗಳು ಮಾತ್ರ ಬೆಳೆಯುತ್ತಿದ್ದವು, ಆದ್ದರಿಂದ ಸರಕಾರವು ಪರ್ಯಾಯ ನೀತಿಯಿಂದಾಗಿ ವಸತಿ ರಹಿತ ಮತ್ತು ಭೂರಹಿತ ಜನರಿಲ್ಲದ ಕೇರಳ ಎಂಬ ಭರವಸೆ ಈಡೇರುತ್ತಿದೆ. ಲೈಫ್ ವಸತಿ ಯೋಜನೆಯಡಿ ಐದು ಲಕ್ಷ ಜನರಿಗೆ ಮನೆಗಳನ್ನು ಒದಗಿಸಲಾಗಿದೆ ಎಂದು ಪಿಣರಾಯಿ ವಿಜಯನ್ ತಿಳಿಸಿದರು.



ತಿರುವನಂತಪುರದ ಚೆಟ್ಟಾಚಲದಲ್ಲಿ ಭೂ ಹೋರಾಟವನ್ನು ಕೊನೆಗೊಳಿಸುವ ಮೂಲಕ 137 ಕುಟುಂಬಗಳಿಗೆ ಭೂಮಿಯನ್ನು ಒದಗಿಸಲಾಗಿದೆ. 2016 ರಿಂದ 2025ರ ವರೆಗೆ ಅರಣ್ಯ ಹಕ್ಕು ಕಾಯ್ದೆಯಡಿ 4,690 ಬುಡಕಟ್ಟು ಕುಟುಂಬಗಳಿಗೆ 6,288 ಎಕರೆ ಭೂಮಿಯನ್ನು ನೀಡಲಾಗಿದೆ. ವ್ಯವಸ್ಥಿತ ಚಟುವಟಿಕೆಗಳ ಮೂಲಕ ಭೂ ವಿತರಣೆ ಮತ್ತು ಭೂ ಹಕ್ಕು ವಿತರಣೆಯನ್ನು ಜಾರಿಗೆ ತರಲಾಯಿತು. ಈ ನಿಟ್ಟಿನಲ್ಲಿ ವಿಶೇಷ ಡ್ಯಾಶ್ ಬೋರ್ಡ್ ಸ್ಥಾಪಿಸಲಾಯಿತು. ಭೂ ನ್ಯಾಯ ಮಂಡಳಿಯಲ್ಲಿ ಭೂ ಹಕ್ಕು ಅದಾಲತ್‌ಗಳನ್ನು ನಡೆಸಲಾಯಿತು. ಇ-ಭೂಮಿ ಹಕ್ಕುಗಳನ್ನು ನೀಡುವ ಮೂಲಕ ಭೂ ಹಕ್ಕು ಮಿಷನ್ ರಚಿಸಲಾಯಿತು ಎಂದು ಅವರು ಸಮಗ್ರ ಮಾಹಿತಿ ನೀಡಿದರು.

ತೃಶೂರಿನಲ್ಲಿ ನಡೆದ ರಾಜ್ಯ ಮಟ್ಟದ ಭೂ ಹಕ್ಕುಪತ್ರ ವಿತರಣಾ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಂದಾಯ ಮತ್ತು ವಸತಿ ಇಲಾಖೆ ಸಚಿವ ಕೆ.ರಾಜನ್ ಅವರು, ಕೆಳ ಹಂತದ ಜನರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ ಎಂದು ಹೇಳಿದರು. ಇತರ ಹಲವು ಇಲಾಖೆಗಳ ಭೂಮಿಯನ್ನು ಕಂದಾಯ ಇಲಾಖೆಯ ವ್ಯಾಪ್ತಿಗೆ ತರುವ ಮೂಲಕ ಸಂಕೀರ್ಣ ಹಕ್ಕುಪತ್ರ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಎಂದು ಅವರು ನುಡಿದರು.

ಕಾಸರಗೋಡು ಜಿಲ್ಲಾ ಮಟ್ಟದ ಪಟ್ಟಾ ಮೇಳದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಅವರು, ನಾಲ್ಕೂವರೆ ಲಕ್ಷದಷ್ಟು ಭೂಹಕ್ಕುಪತ್ರಗಳನ್ನುವಿತರಿಸಲುಸಾಧ್ಯವಾಗಿರುವುದು ಸರಕಾರದ ದೊಡ್ಡ ಸಾಧನೆಯಾಗಿದೆ. ಇದರಲ್ಲಿ ಕಂದಾಯ ಇಲಾಖೆಗೆ ಹೆಚ್ಚಿನ ಬೆಂಬಲವಿದೆ. ಪಟ್ಟಾ ವಿತರಿಸಲು ಸಾಧ್ಯವಾಗದ ಪ್ರತ್ಯೇಕ ಪ್ರಕರಣಗಳನ್ನು ಅಧ್ಯಯನ ಮಾಡಿ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಮಟ್ಟದ ಪಟ್ಟಾ ಮೇಳದಲ್ಲಿ 73 ಬುಡಕಟ್ಟು ಜನಾಂಗಗಳುಸೇರಿದಂತೆಒಟ್ಟು659 ವಲಯದವರಿಗೆ ಭೂ ಹಕ್ಕುಗಪತ್ರಗಳನ್ನು ವಿತರಿಸಲಾಯಿತು. ಇದರೊಂದಿಗೆ ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ವಿತರಿಸಲಾದ ಭೂ ಹಕ್ಕುಪತ್ರಗಳ ಸಂಖ್ಯೆ 6844ಕ್ಕೆ ತಲುಪಿದೆ. ಹೊಸದುರ್ಗ ತಾಲೂಕಿನಲ್ಲಿ 42, ವೆಳ್ಳರಿಕುಂಡು ತಾಲೂಕಿನಲ್ಲಿ 154, ಕಾಸರಗೋಡು ತಾಲೂಕಿನಲ್ಲಿ 123 ಮತ್ತು ಮಂಜೇಶ್ವರ ತಾಲೂಕಿನಲ್ಲಿ 79 ಕುಟುಂಬಗಳಿಗೆ ಭೂ ಹಕ್ಕುಪತ್ರ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 252 ಭೂ ಹಕ್ಕುಪತ್ರಗಳನ್ನು ವಿತರಿಸಲಾಗಿದೆ.

ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಉದುಮ ಶಾಸಕ ಸಿ.ಎಚ್.ಕುಂಞಂಬು, ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್, ವಾರ್ಡ್ ಕೌನ್ಸಿಲರ್ ಪಿ.ವಿ.ಚಂದ್ರನ್, ತಹಶೀಲ್ದಾರ್‌ಗಳು, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಸ್ವಾಗತಿಸಿ, ಎಡಿಎಂ ಪಿ.ಅಖಿಲ್ ವಂದಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33⁰ 22⁰ | ಉಡುಪಿ 31⁰ 22⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
# ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 27, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ಸುಳ್ಯ 110 ಕೆ.ವಿ. ಶೇ.50ರಷ್ಟು ಪೂರ್ಣ: ಶಾಸಕಿ ಮುರುಳ್ಯ



ಪುಟ 5
ಕಾಸರಗೋಡು ಜಿಲ್ಲೆಯಲ್ಲಿ ಮನೆಮನೆಗೇ ಬರಲಿದ್ದಾರೆ 'ಸಾಂತ್ವನ' ಮಿತ್ರರು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

# ಶ್ರೀ ಚೀರುಂಬಾ ಭಗವತೀ ಕ್ಷೇತ್ರ
ಭಗವತಿ ಟೆಂಪಲ್ ರೋಡ್, ತೆರುವತ್ತ್, ಕಾಸರಗೋಡು

# SRI CHEERUMBA BHAGAVATHI KSHETHRA
Bhagavathi Temple Road, Teruvath, Kasaragod

ಇಂದು
# ಬ್ರಹ್ಮಕಲಶೋತ್ಸವ ನಡಾವಳಿ ಮಹೋತ್ಸವ
ಫೆಬ್ರವರಿ 23ರಿಂದ ಮಾ.1ರ ತನಕ



ವಿದೇಶಗಳಲ್ಲಿಯೂ ಭಾರತದ ವಿವಿಧ ಪ್ರದೇಶಗಳಲ್ಲಿ ಯೂ ವಿಶೇಷವಾಗಿ ಉತ್ತರ ಕೇರಳದ ಕಾಸರಗೋಡಿನಲ್ಲಿ ವಾಸವಾಗಿರುವ ನಮ್ಮ ಸಮಾಜ ಬಾಂಧವರ ಅಭಯ ಕೇಂದ್ರ ಹಾಗೂ ಹೆಮ್ಮೆಯ ಪ್ರತೀಕವಾಗಿರುವ ಕಾಸರಗೋಡು ತೆರುವತ್ತ್ ಶ್ರೀ ಚೀರುಂಬಾ ಭಗವತಿ ಕ್ಷೇತ್ರವು ಅರಬೀ ಸಮುದ್ರವನ್ನು ಸೇರುವ ಪ್ರಶಾಂತ ಸುಂದರವಾದ ಚಂದ್ರಗಿರಿ ನದಿಯ ಕಿನಾರೆಯಲ್ಲಿ ನೆಲೆಗೊಂಡಿದೆ.

ಭಾರತದ ಮೂಲ ಸಂಸ್ಕೃತಿಯಲ್ಲಿ 'ಶಕ್ತಿ ಆರಾಧನೆ'ಗೆ ವಿಶಿಷ್ಟ ಸ್ಥಾನವಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದೇವೀ ಆರಾಧನೆ ವಿವಿಧ ರೂಪ ಹಾಗೂ ರೀತಿಗಳಿಂದ ಬಹು ಪ್ರಾಚೀನ ಕಾಲದಿಂದಲೇ ನಡೆಯುತ್ತಾ ಬಂದಿದೆ. ಕೆಲವೆಡೆ ಆಕೆ ರುದ್ರ ಭಯಂಕರೆಯಾದರೆ, ಕೆಲವೆಡೆ ಶಾಂತ ಸುಂದರಳಾಗಿದ್ದಾಳೆ. ಶಾಕ್ತಮತದ ಒಂದು ಭಾಗವೇ 'ಭಗವತೀ ಆರಾಧನೆ' ಎನ್ನಬಹುದು.

ಭಗವತೀ ಆರಾಧನಾ ಕೇಂದ್ರಗಳನ್ನು 'ಸ್ಥಾನ' ಅಥವಾ 'ಕ್ಷೇತ್ರ' ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಇಂತಹ ಕ್ಷೇತ್ರಗಳಲ್ಲಿ ಆರಾಧಿಸಲ್ಪಡುವ ಭಗವತಿಯರು ವಿಭಿನ್ನ ಹೆಸರುಗಳಿಂದ ಗುರುತಿಸಲ್ಪಡುತ್ತಾರೆ. ಉತ್ತರ ಕೇರಳದ ತೀರ ಪ್ರದೇಶದಲ್ಲಿ ಕಂಡು ಬರುವ ಭಗವತಿಯರು ಸಮುದ್ರದ ಮೂಲಕವಾಗಿ ದೋಣಿಯಲ್ಲಿ ಬಂದವರು ಎಂದು ಹೇಳಲಾಗುತ್ತದೆ.

ದಕ್ಷಿಣ ಕನ್ನಡ ಮತ್ತು ಕಾಸರಗೋಡು ಭಾಗದ ಶಾಲಿಯರು ಭಗವತೀ ಆರಾಧಕರಾಗಿರಲು ಮೂಲ ಕಾರಣ ಅವರು ಕೇರಳದ ಮುಖಾಂತರವಾಗಿ ಹಾದುಬಂದುದೇ ಆಗಿದೆ. ಮೂಲತಃ ಸ್ತ್ರೀ ಶಕ್ತಿಯ ವಿವಿಧ ರೂಪಗಳ ದೇವೀ ಆರಾಧಕರಾದ ಶಾಲಿಯರು ಕೇರಳಕ್ಕೆ ಬಂದಾಗ ತಮ್ಮ ಆಶ್ರಯದಾತರು ಆರಾಧಿಸುವ ದೈವಗಳನ್ನೇ ಆರಾಧಿಸಿದರು.

ಈ ಹಿನ್ನೆಲೆಯಲ್ಲಿ ಭಗವತಿಯು ದೇವಿಯ ಇನ್ನೊಂದು ರೂಪವಾದುದರಿಂದ ಆ ಭಗವತಿಯೇ ಇವರ ಪ್ರಧಾನ ದೈವವಾದಳು ಎನ್ನಬಹುದು. ಇವರು ಆರಾಧಿಸುವ ಭಗವತಿಯರು ಚೂಳಿಯಾರ್ ಭಗವತಿ, ಚೀರುಂಬಾ ಭಗವತಿ, ಎರಿಂಞಿಕಲ್ ಭಗವತಿ, ಚುಅಲಿ ಭಗವತಿ, ಆರ್ಯಕ್ಕರ ಭಗವತಿ, ಅಷ್ಟಮಿಚ್ಚಾಲ್ ಭಗವತಿ, ಪೋರ್ಕಲಿ ಭಗವತಿ, ಅರಯಿಲ್ ಭಗವತಿ. ದೇವಿಯ ಇತರ ರೂಪಗಳಾದ ಚಾಮುಂಡಿ, ಪಿಲಿಚಾಮುಂಡಿ, ಕುದಿರಕ್ಕಾಳಿಯಮ್ಮ, ಸೋಮೇಶ್ವರಿ, ಮೂವಾಳಂಕುಳಿ ಚಾಮುಂಡಿಯರನ್ನೂ ಇವರು ಆರಾಧಿಸುತ್ತಾರೆ. (ಮೂವಾಳಂಕುಳಿ ಚಾಮುಂಡಿಯೂ ಚಂದ್ರಗಿರಿಯ ದಕ್ಷಿಣದಲ್ಲಿ ಭಗವತಿಯಂತೇ ಶಾಲಿಯರ ಪ್ರಧಾನ ದೇವತೆ). ಚಂದ್ರಗಿರಿ ಹೊಳೆಯ ಉತ್ತರದ ತೆರುಗಳಲ್ಲಿ ಪ್ರಧಾನ ದೈವವು ಚೀರುಂಬಾ ಭಗವತಿ.

## ಉತ್ಸವ ವಿಧಾನಗಳು

ಹಿಂದೆ ಪ್ರತಿ ತಿಂಗಳು ಸಂಕ್ರಾಂತಿಯ ದಿನ ಮಾತ್ರ ಕ್ಷೇತ್ರದಲ್ಲಿ ಪೂಜೆ ನಡೆಸುವುದು ಸಂಪ್ರದಾಯವಾಗಿತ್ತು. ಉಳಿದ ದಿನಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ದೀಪ ಹಚ್ಚಲಾಗುತ್ತಿತ್ತು. ಆದರೆ 1985ರಲ್ಲಿ ನಡೆದ ಪುನರ್ ಪ್ರತಿಷ್ಠೆಯ ಅನಂತರ ನಿತ್ಯವೂ ಬೆಳಗ್ಗೆ ಮತ್ತು ಸಂಜೆ ಪೂಜೆ ನಡೆಯುತ್ತದೆ. ಶಾಲಿಯ ದೇವಸ್ಥಾನಗಳ ಪೈಕಿ ನಿತ್ಯಪೂಜಾ ಸಂಪ್ರದಾಯವಿರುವ ದೇವಾಲಯ ಇದು ಮಾತ್ರವೆಂದು ತಿಳಿಯಲಾಗಿದೆ. ಈಗ ಸಂಕ್ರಾಂತಿ ಹಾಗೂ ಚೊವ್ವ ವಿಳಕ್ಕಿನ (ಮಂಗಳೋತ್ಸವ) ದಿನ ವಿಶೇಷ ಪೂಜೆ ನಡೆಸುವುದರ ಜತೆಗೆ ಅನ್ನದಾನವನ್ನೂ, ಚೊವ್ವ ವಿಳಕ್ಕಿನ ದಿನ ರಾತ್ರಿ ಭಜನೆಯನ್ನೂ ನಡೆಸಲಾಗುತ್ತದೆ. ವರ್ಷಂಪ್ರತಿ ನಡೆಸುತ್ತಾ ಬಂದಿರುವ ಉತ್ಸವಗಳಲ್ಲಿ ಪ್ರಧಾನವಾದುದು ನವರಾತ್ರಿ ಮಹೋತ್ಸವ. ಮಹೋತ್ಸವದ ಭಾಗವಾಗಿ 8 ದಿನಗಳು ಭಜನೆ ಹಾಗೂ 9ನೇ ದಿನ ಸಂಜೆ ದೀಪಪ್ರತಿಷ್ಠೆಯೊಂದಿಗೆ ಆರಂಭಗೊಂಡು 12 ಗಂಟೆಗಳ ದೀರ್ಘವಾದ ಏಕಾಹ ಭಜನೆಯು ನಡೆದು ಮರುದಿನ ಸೂರ್ಯೋದಯ ದೀಪ ವಿಸರ್ಜನೆಯೊಂದಿಗೆ ಕೊನೆಗೊಳ್ಳುತ್ತಿದೆ.

## ▶ ಕ್ಷೇತ್ರ ಹಾಗೂ ಆಚಾರಾನುಷ್ಠಾನಗಳು

ಕಾಸರಗೋಡು ತೆರುವತ್ತು ಶ್ರೀ ಚೀರುಂಬಾ ಭಗವತೀ ಕ್ಷೇತ್ರವು ಕ್ರಿ.ಶ. 1565ಕ್ಕೂ ಮೊದಲೂ ಸ್ಥಾಪಿಸಿದ ಅತೀ ಪುರಾತನ ಕ್ಷೇತ್ರವೆಂದು ಕ್ಷೇತ್ರಭಂಡಾರದಲ್ಲಿ ರಕ್ಷಿಸಿರಿಸಲಾದ ಪಟ್ಟೋಲೆ ಉಲ್ಲೇಖನಿಗಳಿಂದ ತಿಳಿದು ಬರುತ್ತದೆ.

ಕ್ಷೇತ್ರ ಸಮುಚ್ಚಯ ಸುತ್ತು ಪೌಳಿಯೊಂದಿಗೆ ಕೂಡಿಕೊಂಡ ಕ್ಷೇತ್ರ ಸಮುಚ್ಚಯದ ಮಧ್ಯಭಾಗದಲ್ಲಿ ಶ್ರೀ ಚೀರುಂಬಾ ಭಗವತಿ (ಮೂತ್ತ ಭಗವತಿ)ಯ ಪ್ರಧಾನ ಕ್ಷೇತ್ರವಿದೆ. ಈ ಪ್ರಧಾನ ಕ್ಷೇತ್ರದಲ್ಲಿ ಶ್ರೀ ಚೀರುಂಬಾ ಭಗವತಿಯ ದರ್ಪಣ ಬಿಂಬದ ಪ್ರತಿಷ್ಠೆಯೂ ಉತ್ಸವ ಮೂರ್ತಿಯೂ, ಘಂಟಕರ್ಣ ಹಾಗೂ ದಂಡನ ಆಯುಧ ಪ್ರತಿಷ್ಠೆಯೊಂದಿಗಿನ ಸ್ಥಾನವು ಇದೆ. ಪ್ರಧಾನ ದೇಗುಲದ ಬಲಭಾಗದಲ್ಲಿ ಶ್ರೀ ಇಳಯ ಭಗವತಿಯ ದರ್ಪಣ ಬಿಂಬ ಹಾಗೂ ಉತ್ಸವ ಮೂರ್ತಿಯನ್ನೂ ಪ್ರತಿಷ್ಠಾಪಿಸಲಾಗಿದೆ. 1950ರಿಂದ ಇತ್ತೀಚೆಗೆ ಕ್ಷೇತ್ರದ ಉಳಿದೆಲ್ಲಾ ಕಾರ್ಯ ಕ್ಷೇತ್ರಗಳನ್ನು ಕ್ಷೇತ್ರಾಡಳಿತ ಮಂಡಳಿಯು ನಡೆಸಿಕೊಂಡು ಬರುತ್ತಿದೆ.

ವಿಜಯ ದಶಮಿಯ ದಿನ ಇಳಯ ಭಗವತಿಯ ಮುಂದೆ ಕ್ಷೇತ್ರದ ಆಚಾರ್ಯ ವರ್ಗದವರು ಎಳೆಯ ಮಕ್ಕಳಿಗೆ ಅಕ್ಷರಾಭ್ಯಾಸದೊಂದಿಗೆ ವಿದ್ಯಾರಂಭ ಮಾಡಿಸುತ್ತಾರೆ.

ವರ್ಷಂಪ್ರತಿ ವಿಷುದಿನದಂದು ಮುಂಜಾನೆ ವಿಷುಕ್ಕಣಿ ಪೂಜೆಯನ್ನು ಮಾಡಲಾಗುತ್ತದೆ. ವಿಷು ಮಹೋತ್ಸವದ ಭಾಗವಾಗಿ ಮೊದಲ ದಿನ ತೆರುವಿನ ಎಲ್ಲಾ ಮನೆಗಳನ್ನೂ ಸಂದರ್ಶಿಸಿ ನಡೆಸುವ ನಗರಭಜನೆಯೂ ಇರುತ್ತದೆ.

ಮಾತ್ರವಲ್ಲದೆ ಮೂರು ವರ್ಷಗಳಿಗೊಮ್ಮೆ ಬಹಳ ವಿಜೃಂಭಣೆಯಿಂದ ನಡಾವಳಿ ಉತ್ಸವವನ್ನು ಆಚರಿಸಲಾಗುತ್ತದೆ. ಉತ್ಸವದ 5 ದಿನಗಳ ಮೊದಲು ಬಾಳೆಗೊನೆ ಕಡಿಯುವ ಗೊನೆ ಮುಹೂರ್ತ ಕಾರ್ಯಕ್ರಮವು ನಡಾವಳಿ ಉತ್ಸವದ ಪಾರಂಬಿಕ ಸೂಚನೆಯನ್ನು ನೀಡುತ್ತದೆ.

ನೂತನ ಭಂಡಾರ ಮನೆಯ ಗೃಹ ಪ್ರವೇಶ ಹಾಗೂ ಭಂಡಾರ ಪ್ರತಿಷ್ಠೆಯನ್ನು ಕ್ಷೇತ್ರದ ನವೀಕರಣ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ದೊಂದಿಗಿನ ಶುಭ ಮುಹೂರ್ತದಲ್ಲಿ ತಾರೀಕು 01-03-2012ರಂದು ನಡೆಯಿತು. ಈಗ 2026ರಂದು 14 ವರ್ಷದ ನಂತರ ನಡೆಯುತ್ತಿದೆ.

ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಹಾಗೂ ನಡಾವಳಿ ಮಹೋತ್ಸವವು ಫೆ. 23ರಿಂದ ಮಾ.01ರ ವರೆಗೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ, ಕಾರ್ಯಕ್ರಮಗಳೊಂದಿಗೆ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣುಪ್ರಕಾಶ ತಂತ್ರಿ, ಕಾವು ಮಠ, ಇವರ ದಿವ್ಯ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ.

## ಕಾರ್ಯಕ್ರಮಗಳು

**27/02/2026 ಶುಕ್ರವಾರ :** ಪೂರ್ವಾಹ್ನ ಗಂಟೆ 6.00: ಮಹಾಗಣಪತಿ ಹೋಮ, : ಪ್ರಾಸಾದ ಶುದ್ಧಿ, ಕಲಶಪೂಜೆ, ಶ್ರೀಚೀರುಂಬಾ ಭಗವತಿ ಹಾಗೂ ಪರಿವಾರ ದೇವತೆಗಳ ಬ್ರಹ್ಮಕಲಶೋತ್ಸವ, 11.00 : ಮಹಾಪೂಜೆ, ಸಾಮೂಹಿಕ ಪ್ರಾರ್ಥನೆ, ಪ್ರಸಾದ ವಿತರಣೆ, 11.30 : ದೇವರ ನೃತ್ಯ ಬಲಿ ಉತ್ಸವ, ತಚ್ಚಂಗಾಡು ಶ್ರೀ ಲಕ್ಷ್ಮೀಕಾಂತ ಅಗ್ಗಿತ್ತಾಯರು ಮತ್ತು ಶಿಷ್ಯರು, ಮಧ್ಯಾಹ್ನ ಗಂಟೆ 1.00 : ಅನ್ನಪ್ರಸಾದ, ಸಾಯಂಕಾಲ ಗಂಟೆ 6.00: ಶ್ರೀ ಲಲಿತಸಹಸ್ರನಾಮಾವಳಿ ಶ್ರೀಚೀರುಂಬಾ ಭಗವತಿ ಮಹಿಳಾ ಸಮಿತಿ, ತೆರುವತ್ತು, ಕಾಸರಗೋಡು, ರಾತ್ರಿ ಗಂಟೆ 8.00 : ಅನ್ನಪ್ರಸಾದ, 8.30 : ಭಂಡಾರ ಮೆರವಣಿಗೆ: ಶ್ರೀಕ್ಷೇತ್ರ ಭಂಡಾರ ಮನೆಯಿಂದ ವಾದ್ಯ ಘೋಷಗಳೊಂದಿಗೆ ಶ್ರೀಕ್ಷೇತ್ರಕ್ಕೆ ಆಗಮಿಸುವುದು, ಹುಲ್ಪೆ ಮೆರವಣಿಗೆ: ಶ್ರೀ ಚೀರುಂಬಾ ಭಗವತಿ ಮಹಿಳಾ ಸಮಿತಿ ತೆರುವತ್ತು, ಕಾಸರಗೋಡು, ಇವರ ವತಿಯಿಂದ ಶ್ರೀಕ್ಷೇತ್ರ ಭಂಡಾರ ಮನೆಯಿಂದ ಶ್ರೀಕ್ಷೇತ್ರಕ್ಕೆ, 9.30 : ದೇವರ ನೃತ್ಯ ಬಲಿ ಉತ್ಸವ ತಚ್ಚಂಗಾಡು ಶ್ರೀ ಲಕ್ಷ್ಮೀಕಾಂತ ಅಗ್ಗಿತ್ತಾಯರು ಮತ್ತು ಶಿಷ್ಯರು

**28/02/2026 ಶನಿವಾರ :** ಪ್ರಾತ:ಕಾಲ ಗಂಟೆ 3.00: ಮಹಾಪೂಜೆ, 4.30 : ದೇವರ ಬಲಿ ಉತ್ಸವ, 5.30 : ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚೀಟಂ, ಪೂರ್ವಾಹ್ನ ಗಂಟೆ 7.30 : ಎಣಜಾಚಾರ ಮತ್ತು ಚಪ್ಪರ ಮದುವೆ, 8.30 : ಶ್ರೀ ಪಿಲಿಚಾಮುಂಡಿ ದೈವದ ಕೋಲ, 10.00 : ಶ್ರೀ ಬಬ್ಬರಿಯನ ಕೋಲ, 10.30 : ಮಹಾಪೂಜೆ, 11.00 : ದೇವರ ನೃತ್ಯ ಬಲಿ ಉತ್ಸವ, ಶ್ರೀ ವಿಷ್ಣುಮೂರ್ತಿ ದೈವದ ಕೋಲ, ವಡಕ್ಕೇ ವಾದಿಲ್ ಒಪ್ಪಿಕ್ಕಲ್, ಮಧ್ಯಾಹ್ನ ಗಂಟೆ1.00 : ಅನ್ನಪ್ರಸಾದ, ಅಪರಾಹ್ನ ಗಂಟೆ 4.00 : ಶ್ರೀ ಗುಳಿಗನ ಕೋಲ, ರಾತ್ರಿ ಗಂಟೆ 8.00 : ಪೂಜೆ, ಪ್ರಸಾದ ವಿತರಣೆ, 8.30 : ಭಂಡಾರ ಹಿಂತಿರುಗುವುದು

**01-03-2026 ಆದಿತ್ಯವಾರ :** ಪೂರ್ವಾಹ್ನ ಗಂಟೆ 8.00: ಪೂಜೆ, ಪ್ರಸಾದ ವಿತರಣೆ, 9.30: ನಾಗತಂಬಿಲ, 10.00: ಬ್ರಹ್ಮರಕ್ಷಸನಿಗೆ ವಿಶೇಷ ಪೂಜೆ, ಅಪರಾಹ್ನ ಗಂಟೆ 2.00: ಶ್ರೀ ಗುಳಿಗನ ಕೋಲ ಡಾ.ಮಂಜುನಾಥ ಶೆಟ್ಟಿ ಇವರ ವತಿಯಿಂದ. ರಾತ್ರಿ ಗಂಟೆ 8.00 : ಪೂಜೆ, ಪ್ರಸಾದ ವಿತರಣೆ, 9.00: ಶ್ರೀ ಬಬ್ಬರ್ಯನಿಗೆ ಅಡ ನೈವೇದ್ಯ

**02/03/2026, ಸೋಮವಾರ :** ಅಪರಾಹ್ನ ಗಂಟೆ 2.00 ಶ್ರೀ ಗುಳಿಗನ ಕೋಲ: ಶ್ರೀ ಕಿಶೋರ್ ಕುಮಾರ್, ವಿವೇಕಾನಂದ ನಗರ್ ಇವರ ವತಿಯಿಂದ

## ಸುತ್ತಮುತ್ತ

### ಇಂದು ವಿದ್ಯುತ್ ವ್ಯತ್ಯಯ

**ಮಂಗಳೂರು:** ಕರಂಗಲ್ಪಾಡಿ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಪಿಂಟೋಸ್ ಲೇನ್, ಕರಂಗಲ್ಪಾಡಿ ಮಾರ್ಕೆಟ್, ಗಣೇಶ್ ರಾವ್ ಲೇನ್, ವಿನಯ ಕ್ಲಿನಿಕ್ ಹಾಸ್ಪಿಟಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.27ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

### ಮೂರ್ತೆದಾರರ ಸೇವಾ ಸಹಕಾರಿ ಸಂಘ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

**ಬಂಟ್ವಾಳ:** ಮೂರ್ತೆದಾರರ ಸೇವಾ ಸಹಕಾರ ಸಂಘ ಶಂಭೂರು ಇದರ 2026-2031ನೇ ಸಾಲಿಗೆ




ಅಧ್ಯಕ್ಷರಾಗಿ ಪುರುಷೋತ್ತಮ ಸಾಲ್ಯಾನ್ ನರಿಕೊಂಬು ಹಾಗೂ ಉಪಾಧ್ಯಕ್ಷರಾಗಿ ಮಾಧವ ಪೂಜಾರಿ ಕರ್ಬೆಟ್ಟು ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಸಂಘದ ಚುನಾವಣೆಯಲ್ಲಿ ಈ ಆಯ್ಕೆ ಪ್ರಕಿಯೆ ನಡೆದಿದ್ದು ನಿರ್ದೇಶಕರಾಗಿ ಮೋನಪ್ಪ ಪೂಜಾರಿ ಬೊಂಡಾಲ, ಗೋಪಾಲ ಸುವರ್ಣ ಬಿ.ಸಿ.ರೋಡು, ಕೃಷ್ಣಪ್ಪ ಪೂಜಾರಿ ಬಾಳ್ತಿಲ, ಶ್ರೀಶ ಆರ್. ರಾಯಸ ನರಿಕೊಂಬು, ಅಶೋಕ್ ಆರ್. ಶಂಭೂರು, ರಾಜೇಶ್ ಶೇಡಿಗುರಿ, ನಾರಾಯಣ ಪೂಜಾರಿ ಕೇದಿಗೆ, ಸುಮತಿ ಮೋನಪ್ಪ ಪೂಜಾರಿ, ವೇದಾವತಿ ಸುರೇಶ್ ಪೂಜಾರಿ ಅವರು ಅವಿರೋಧವಾಗಿ ಪುನರಾಯ್ಕೆಗೊಂಡಿದ್ದಾರೆ.

### ಮಾ.1ಕ್ಕೆ 'ಅಡಿಕೆ ಮಾರುಕಟ್ಟೆ ಸ್ಥಿತಿ ಗತಿ' ಪುಸ್ತಕ ಬಿಡುಗಡೆ

**ವಿಟ್ಲ:** ಸಾರಡ್ಕದಲ್ಲಿ ಮಾ.1ರಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಹಿರಿಯ ಅರ್ಥಶಾಸ್ತ್ರಜ್ಞ ಡಾ. ವಿಘ್ನೇಶ್ವರ ವರ್ಮುಡಿ ಅವರ 'ಅಡಿಕೆ ಮಾರುಕಟ್ಟೆ ಸ್ಥಿತಿ ಗತಿ' ಎಂಬ ಪುಸ್ತಕ ಲೋಕಾರ್ಪಣೆ ನಡೆಯಲಿದೆ. ಕ್ಯಾಂಪ್ಕೋ ಮಾಜಿ ಉಪಾಧ್ಯಕ್ಷ ಶಂ.ನಾ. ಖಂಡಿಗೆ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಈ ಸಂದರ್ಭ ಅಡಿಕೆ ಮಾರುಕಟ್ಟೆ ಸ್ಥಿತಿ ಗತಿ ಕುರಿತು ಡಾ. ವರ್ಮುಡಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ರಾಯಿ ದೇವಸ್ಥಾನ ವಾರ್ಷಿಕ ಜಾತ್ರೆ

**ಬಂಟ್ವಾಳ:** ತಾಲೂಕಿನ ರಾಯಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೆ ಬ್ರಹ್ಮಶ್ರೀ ನಡ್ವಂತಾಡಿ ಬಾಲಕೃಷ್ಣ ಪಾಂಗಣ್ಣಾಯ ಅವರ ನೇತೃತ್ವದಲ್ಲಿ ಆರಂಭಗೊಂಡಿದ್ದು, ಮಾ.2ರ ವರೆಗೆ ಜರಗಲಿದೆ. ಫೆ.27ಕ್ಕೆ ಮಹಾಪೂಜೆ, ಸಂಜೆ ಕಡೇ ಚೆಂಡು, ರಾತ್ರಿ ನಡುಬಲಿ ಮಹೋತ್ಸವ, ಕಟ್ಟೆಪೂಜೆ, ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಫೆ.28ರಂದು ರಾತ್ರಿ ಉತ್ಸವ ಬಲಿ, ಭಜನ ಕಾರ್ಯಕ್ರಮ, ಕವಾಟ ಬಂಧನನಡೆಯಲಿದೆ. ಮಾ.1ಕ್ಕೆ ಬೆಳಗ್ಗೆ ಕವಾಟ ಉದ್ಘಾಟನೆ,ತುಲಾಭಾರಸೇವೆಗಳು, ರಾತ್ರಿ ಮಹಾಚೂರ್ಣೋತ್ಸವ, ದರ್ಶನ ಬಲಿ, ಧ್ವಜಾವರೋಹಣ, ದೈವಗಳಿಗೆ ನೇಮ, ಭಂಡಾರ ನಿರ್ಗಮನ, ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಾ.2ರಂದು ಸಂಪ್ರೋಕ್ಷಣೆ, ರಾತ್ರಿ ರಂಗಪೂಜೆ, ನಡೆಯಲಿದೆ ಎಂದು ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ರಾಘವೇಂದ್ರ ರಾಯಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಕಾವಳಮೂಡೂರು ವಾರ್ಷಿಕ ಜಾತ್ರೆ

**ಬಂಟ್ವಾಳ:** ತಾಲೂಕಿನ ಕಾವಳಮೂಡೂರು ಗ್ರಾಮದ ಕಾವಳಮಾಗಣೆ ಶ್ರೀ ರಾಜನ್ ದೈವ ಕೊಡಮಣಿತ್ತಾಯ ದೈವಸ್ಥಾನದ ವಾರ್ಷಿಕ ಜಾತ್ರೆ ಫೆ.28ರಿಂದ ಮಾ.2ರ ವರೆಗೆ ನಡೆಯಲಿದೆ.

ಫೆ.28ರಂದು ಬೆಳಗ್ಗೆ ಪ್ರಾರ್ಥನೆ, ಸಂಜೆ ಬಲ್ಲೋಡಿ ಮಾಗಣೆ ಗುತ್ತಿನಿಂದಭಂಡಾರ ಆಗಮನ, ಧ್ವಜಾರೋಹಣ ನಡೆಯಲಿದೆ. ಮಾ.1ರಂದು ಸಂಜೆ ಬಲಿ ಉತ್ಸವ, ದೈವ ದರ್ಶನ, ಮಾ.2ರಂದು ಬೆಳಗ್ಗೆ ಗಣಪತಿ ಹೋಮ, ನವಕಲಶ ಪರ್ವ, ಸಂಜೆ ಹೂವಿನ ಪೂಜೆ,ಇತರ ಸೇವೆಗಳು-ಅಂಕ ಅಂಬೋಡಿ, ಮುಂಡೇವು, ಸೂಟೆದಾರ, ಕಾವಳಕಟ್ಟೆ ಬಸದಿಯಲ್ಲಿ ಪಂಚಾಮೃತಾಭಿಷೇಕ, ರಾತ್ರಿ ಅನ್ನಸಂತರ್ಪಣೆ, ಶ್ರೀ ರಾಜನ್ ದೈವ ಕೊಡಮಣಿತ್ತಾಯ ದೈವದ ನೇಮೋತ್ಸವ, ಬಲಿ ಉತ್ಸವ, ದರಿ ದೀಪೋತ್ಸವ, ಹುಲಿಬಂಡಿ ಉತ್ಸವ, ಕುದುರೆ ಬಂಡಿ ಉತ್ಸವ ನಡೆಯಲಿದೆ. ರಾತ್ರಿ ನೃತ್ಯ ಕಾರ್ಯಕ್ರಮ, ತುಳು ನಾಟಕ ನಡೆಯಲಿದೆ.ಮಾ.2ರಂದು ಬೆಳಗ್ಗೆ ಧ್ವಜಾವರೋಹಣ, ಕುರುತಂಬಿಲ ನೇಮ, ಶ್ರೀ ಕ್ಷೇತ್ರದಿಂದ ದೈವದ ಭಂಡಾರ ಬಲ್ಲೋಡಿ ಮಾಗಣೆ ಗುತ್ತಿಗೆ ನಿರ್ಗಮನ ನಡೆಯಲಿದೆ ಎಂದು ಆಡಳಿತ ಮೊಕ್ತೇಸರ ಬಿ.ಭರತ್ ಕುಮಾರ್ ಜೈನ್ ಬಲ್ಲೋಡಿಗುತ್ತು ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಫೆ.28-ಮಾ.1: ಶಿವಾಜಿ ಸಂಭ್ರಮ್

**ಬಂಟ್ವಾಳ:** ತಾಲೂಕಿನ ಕಾವಳಪಡೂರು ಗ್ರಾಮದ ಮಧ್ವ ಶಿವಾಜಿ ಬಳಗದ ವಾರ್ಷಿಕೋತ್ಸವ ಶಿವಾಜಿ ಸಂಭ್ರಮ್ ಕಾರ್ಯಕ್ರಮ ಫೆ.28ರಿಂದ ಮಾ.1ರ ವರೆಗೆ ಮಧ್ವ ಶ್ರೀ ರಾಮ ನಗರದ ಕ್ರೀಡಾಂಗಣದಲ್ಲಿ ನಡೆಯಲಿದೆ. ಫೆ.28ಕ್ಕೆ ಸಂಜೆ ಭಜನೆ,ಮಹಾಪೂಜೆ, ಪುರುಷರ ಮತ್ತು ಮಹಿಳೆಯರ ಮುಕ್ತ ಬ್ಯಾಡ್ಮಿಂಟನ್ ಪಂದ್ಯಾಟ ನಡೆಯಲಿದೆ. ಮಾ.1ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀ ಅಯ್ಯಪ್ಪ ಸ್ವಾಮಿಗೆ ಮಹಾಪೂಜೆ, ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್, ಶಾಸಕ ಹರೀಶ್ ಪೂಂಜ ಭಾಗವಹಿಸಲಿರುವರು.ರಾತ್ರಿ ಪುಂಜಾಲಕಟ್ಟೆ ತಾಂಬೂಲ ಕಲಾವಿದರಿಂದ 'ಎಲ್ಲೆ ದಾದ'ತುಳು ನಾಟಕ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

---

### ವಿದ್ಯುತ್ ಲೈನ್ ಕಾಮಗಾರಿ ವಿಳಂಬ ಕುರಿತು ಎಸಿ, ಅಧಿಕಾರಿಗಳ ಜೊತೆ ಸಭೆ | ತ್ವರಿತ ಕ್ರಮಕ್ಕೆ ಸೂಚನೆ

# ಸುಳ್ಯ 110 ಕೆ.ವಿ. ಶೇ.50ರಷ್ಟು ಪೂರ್ಣ: ಶಾಸಕಿ ಮುರುಳ್ಯ

**ಸುಳ್ಯ:** 110 ಕೆ.ವಿ. ವಿದ್ಯುತ್ ಲೈನ್ ಕಾಮಗಾರಿ ವಿಳಂಬಕ್ಕೆ ಸಂಬಂಧಿಸಿ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಉಪಸ್ಥಿತಿಯಲ್ಲಿ ಅಧಿಕಾರಿಗಳ ಸಭೆ ಗುರುವಾರ ನಡೆಯಿತು.

ಸುಳ್ಯ 110 ಕೆ.ವಿ. ವಿದ್ಯುತ್ ಲೈನ್ ಕಾಮಗಾರಿಯಲ್ಲಿ ಕಳೆದ ಸಭೆಯ ಬಳಿಕ ಶೇ.50ರಷ್ಟು ಕಾಮಗಾರಿ ಮುಕ್ತಾಯಗೊಂಡಿದ್ದು, ಒಟ್ಟಾರೆ 89 ಟವರ್‌ಗಳ ಪೈಕಿ ಇದೀಗ 31 ಟವರ್‌ಗಳ ಅಡಿಪಾಯ ಕೆಲಸಗಳು ಮುಕ್ತಾಯವಾಗಿದೆ. ಇದರಲ್ಲಿ ಸುಳ್ಯ ತಾಲೂಕಿನ 7 ಮತ್ತು ಪುತ್ತೂರು ತಾಲೂಕಿನ 6 ಪಾಯಿಂಟ್ ಸರಕಾರಿ ಜಮೀನುಗಳಲ್ಲಿ ಟವರ್ ಅಡಿಪಾಯ ಹಾಕಲಾಗಿದ್ದು, 18 ಖಾಸಗಿ ಜಮೀನುಗಳಲ್ಲಿ ಅಡಿಪಾಯ ರಚಿಸಲಾಗಿದೆ. ಜೊತೆಗೆ ಖಾಸಗಿ ಜಮೀನು ಮಾಲಕರಿಗೆ ಮೊದಲ ಕಂತಿನ ಪರಿಹಾರ ಧನ ಪಾವತಿಸಲಾಗಿದೆ ಎಂದು ಕೆಪಿಟಿಸಿಎಲ್ ಅಧೀಕ್ಷಕ ಇಂಜಿನಿಯರ್ ಚೈತನ್ಯ ತಿಳಿಸಿದರು.



ಈ ಸಂದರ್ಭ ಸಹಾಯಕ ಆಯುಕ್ತರಾದ ಸ್ಟೆಲ್ಲಾ ವರ್ಗೀಸ್ ಗ್ರಾಮವಾರು ಮಾಹಿತಿ ಕೇಳಿದರು. ಪುತ್ತೂರು ತಾಲೂಕಿನಲ್ಲಿ 26 ಟವರ್ ನಿರ್ಮಾಣವಾಗಬೇಕಿದ್ದು ಈ ಪೈಕಿ 20 ಖಾಸಗಿ ಜಮೀನುಗಳಲ್ಲಿ ಬಂದರೆ 6 ಸರಕಾರಿ ಜಮೀನುಗಳಲ್ಲಿ ಬರಲಿದ್ದು, ಸರಕಾರಿ ಜಮೀನಿನಲ್ಲಿ ನಿರ್ಮಾಣವಾಗುತ್ತಿದೆ. ಯಾವುದೇ ಸಮಸ್ಯೆಗಳು ಇಲ್ಲ ಇಂಜಿನಿಯರ್ ಎಂದು ಮಾಹಿತಿ ನೀಡಿದರು. ಖಾಸಗಿ ಜಮೀನುಗಳ ಕುರಿತು 15 ದಿನಗಳ ಒಳಗಾಗಿ ಸಂಪೂರ್ಣ ಮಾಹಿತಿ ನೀಡುವಂತೆ ಪುತ್ತೂರು ಉಪತಹಶಿಲ್ದಾರ್ ರವಿ ಕುಮಾರ್ ಅವರಿಗೆ ಸಹಾಯಕ ಆಯುಕ್ತರು ತಿಳಿಸಿದರು. ಸುಳ್ಯ ನಗರದಲ್ಲಿ 2 ಟವರ್ ಹಾಗೂ ಅಜ್ಜಾವರ ಗ್ರಾಮದಲ್ಲಿ 6 ಟವರ್‌ಗಳು ಆಗಬೇಕಿದ್ದು ಇದರಲ್ಲಿ ಕೆಲವೊಂದು ಸಮಸ್ಯೆಗಳು ಇದ್ದರೆ ಬಾಕಿ ಉಳಿದವುಗಳನ್ನು ತಂಡಗಳಂತೆ ಸಮಸ್ಯೆ ಇತ್ಯರ್ಥಕ್ಕೆ ಸೂಚಿಸಿದರು.

ಪುತ್ತೂರು ತಾಲೂಕಿನ ಕೊಳ್ತಿಗೆ, ಪಾಲ್ತಾಡಿ, ಕೆಯ್ಯೂರುಗಳಲ್ಲಿ ಟವರ್ ನಿರ್ಮಾಣದ ಕೆಲಸಗಳು ಆಗಬೇಕಿದೆ ಎಂದು ಕೆಪಿಟಿಸಿಎಲ್ ಅಧಿ ಕಾರಿಗಳು ಸಭೆಗೆ ತಿಳಿಸಿದರು. ಒಟ್ಟಾರೆಯಾಗಿ 19 ಟವರ್‌ಗಳ ಪೈಕಿ 2 ಸರಕಾರಿ ಜಮೀನುಗಳಲ್ಲಿ ಮತ್ತು 17 ಖಾಸಗಿ ಜಮೀನುಗಳಲ್ಲಿ ಬರುತ್ತದೆ. ಇವುಗಳಲ್ಲಿ ಖಾಸಗಿ ಜಮೀನುಗಳನ್ನು ಸರ್ವೆ ನಡೆಸಿ ಅವರ ಮನವೊಲಿಸಿ ಟವರ್ ನಿರ್ಮಾಣ ಮಾಡುವಂತೆ ಹಾಗೂ ಆ ಅಡಿ ಸ್ಥಳಗಳ ಕುರಿತು ಸಂಪೂರ್ಣ ಮಾಹಿತಿ ನೀಡುವಂತೆ ಕಂದಾಯ ಇಲಾಖೆಗೆ ಸೂಚಿಸಿದರು. ಖಾಸಗಿ ಜಮೀನುಗಳಲ್ಲಿ ಕೆಲಸ ಸಮಸ್ಯೆಗಳು ಇದ್ದು ಅವುಗಳ ಪರಿಹಾರಕ್ಕೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ತೀರ್ಮಾನಿಸಲಾಯಿತು.

**ಅರಣ್ಯ ಇಲಾಖೆಯಲ್ಲಿ ಸಮಸ್ಯೆ ಇತ್ಯರ್ಥ**

ಈ ಹಿಂದೆ ಜಾಲ್ಸೂರು ಕನಕಮಜಲು ಖಾಸಗಿ ಜಮೀನುಗಳಲ್ಲಿ ಸಮಸ್ಯೆಗಳಿದ್ದವು. ಈ ಹಿಂದೆ ಆಗಸ್ಟ್ ತಿಂಗಳಿನ ಸಭೆಯ ಬಳಿಕದ ವಿದ್ಯಮಾನಗಳಲ್ಲಿ ಅವುಗಳು ಪರಿಹಾರಗೊಂಡಿದ್ದು, ಅಲ್ಲಿ ಅಡಿಪಾಯ ನಿರ್ಮಾಣದ ಸಿದ್ಧತೆಯಲ್ಲಿದೆ ಹಾಗೂ ಒಂದು ಸ್ಥಳದಲ್ಲಿ ಮಾತ್ರ ಡಿಸಿ ಕೋರ್ಟ್‌ಗೆ ಹಾಕಿದ್ದು ಅವುಗಳು ಪರಿಹಾರವಾಗಲಿದೆ ಎಂದು ತಿಳಿಸಿದರು.

**ಪರಿಹಾರ ಬಿಡುಗಡೆ ಮಾಹಿತಿ**

ಸುಳ್ಯದ 110 ಕೆ.ವಿ.ಯಲ್ಲಿ ಈಗಾಗಲೇ ಅಡಿಪಾಯ ಹಾಕಲಾದ ಜಮೀನು ಮಾಲಕರುಗಳಿಗೆ ಪರಿಹಾರವು ಬಂದಿದೆಯೇ ಎಂದು ಎಸಿ ಅವರು ಪ್ರಶ್ನಿಸಿದಾಗ, ದಾಖಲೆ ನೀಡಿದ ದಿನದಿಂದ ಕೇವಲ 7 ದಿನಗಳಲ್ಲಿ ಪರಿಹಾರ ನೇರವಾಗಿ ಅವರ ಖಾತೆಗೆ ಜಮೆಯಾಗಿದೆ ಹಾಗೂ ಜಿಲ್ಲಾಧಿಕಾರಿಗಳು ತಿಳಿಸಿದಂತೆ ಮೊತ್ತಗಳನ್ನು ಪಾವತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಈ ಸಂದರ್ಭದಲ್ಲಿ ಕಂದಾಯ ಮತ್ತು ಪಂಚಾಯತ್ ಈ ಬಗ್ಗೆ ಮನೆಗೆ ತೆರಳಿ ಪರಿಹಾರದ ಬಗ್ಗೆ ಮಾಹಿತಿ ಪಡೆದು ಮಾಹಿತಿ ನೀಡುವಂತೆ ಸೂಚಿಸಿದರು.

ಕೆಪಿಟಿಸಿಎಲ್ ಅಧಿಕಾರಿ ರಾಮಚಂದ್ರ, ಶ್ರೀನಾಥ್ ಆಚಾರ್ಯ, ವಿವೇಕಾನಂದ ಶೆಣೈ, ಮೆಸ್ಕಾಂ ಅಧಿಕಾರಿ ಸಚಿನ್ ಕುಮಾರ್, ಸುಳ್ಯ ಎಇಇ ಹರೀಶ್ ನಾಯ್ಕ್, ಅರಣ್ಯಾಧಿಕಾರಿ ಕಿರಣ್ ಬಿ., ಮಂಜುನಾಥ್ ಪೋಲಿಸ್ ಉಪನಿರೀಕ್ಷಕ ಸಂತೋಷ್, ಸುಳ್ಯ ಉಪ ತಹಶೀಲ್ದಾರ್ ಚಂದ್ರಶೇಖರ,ತೋಟಗಾರಿಕೆ ಇಲಖಾಧಿಕಾರಿ ಪ್ರಮೋದ್, ಕಂದಾಯ ನಿರೀಕ್ಷಕ ಅವಿನ್ ರಂಗತಮಲೆ, ಎಡಿಎಸ್‌ಆರ್ ಜಿನೀಶ್ ಕುಮಾರ್, ತಾ.ಪಂ. ಮ್ಯಾನೇಜರ್ ರಾಜಲಕ್ಷ್ಮಿ, ಶಾಸಕರ ಆಪ್ತ ಕಾರ್ಯದರ್ಶಿ ಹರೀಶ್, ಪ್ರಸಾದ್ ಕಾಟೂರ್, ಪ್ರಮುಖರಾದ ಹರೀಶ್ ಕಂಜಿಪಿಲಿ, ಸುಬೋದ್ ಶೆಟ್ಟಿ ಮೇನಾಲ, ಗುತ್ತಿಗೆದಾರ ಮ್ಯಾನೇಜರ್ ಚಂದ್ರಶೇಖರ ರೆಡ್ಡಿ ಮತ್ತಿತರರು ಇದ್ದರು.

---

### ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘದ ಉಪ್ಪಿನಂಗಡಿ ಶಾಖೆ

# ಮಾ.1ಕ್ಕೆ ಸ್ಥಳಾಂತರ, ವಿದ್ಯಾರ್ಥಿ ವೇತನ ವಿತರಣೆ

**ಪುತ್ತೂರು:** 10 ವರ್ಷಗಳನ್ನು ಪೂರೈಸುತ್ತಿರುವ ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘದ ಉಪ್ಪಿನಂಗಡಿ ಶಾಖೆ ಗಾಂಧಿ ಪಾರ್ಕ್ ಬಳಿಯಿರುವ ರಾಮಗೋಪಾಲ್ ಕಾಂಪ್ಲೆಕ್ಸ್‌ಗೆ ಸ್ಥಳಾಂತರ ಹಾಗೂ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಮಾ.1ರಂದು ನಡೆಯಲಿದೆ.

ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಸ್ಥಳಾಂತರಿತ ಶಾಖೆಯನ್ನು ಉದ್ಘಾಟಿಸಲಿದ್ದಾರೆ. ಸಹಕಾರ ಸಂಘದ ಅಧ್ಯಕ್ಷ, ಯುವನ್ಯಾಯವಾದಿ ಭಾಸ್ಕರಪೆರುವಾಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಜಿ.ಪಂ, ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ದ.ಕ. ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಸಂಘದ ಅಧ್ಯಕ್ಷ ಮಯೂರ್ ಉಳ್ಳಾಲ್, ಹಿರಿಯ ವಕೀಲ ನರಸಿಂಹ ಪ್ರಸಾದ್, ಸಹಕಾರಿ ಅಭಿವೃದ್ಧಿ ಅಧಿಕಾರಿ ಶೋಭಾ ಎಸ್.ಎಸ್., ಕೊಂಬೆಟ್ಟಿನ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ವಸಂತ ಮೂಲ್ಯ, ಉಪ್ಪಿನಂಗಡಿಯ ಶಾಲಿವಾಹನ ಫ್ಯುಯೆಲ್ಸ್ ಮಾಲಕ ಚಂದ್ರಶೇಖರ ತಾಳ್ತಾಜೆ, ವಕೀಲ ಉಮಾಕರ ಬಂಗೇರ, ಸಿದ್ಧಕಟ್ಟೆಯ ಜನೌಷದಿ ಕೇಂದ್ರದ ಮಾಲಕ ಮನೋಜ್ ಕುಲಾಲ್ ಸಿದ್ಧಕಟ್ಟೆ, ವರ್ಕಾಡಿ ಪಂಚಾಯತ್ ಸದಸ್ಯ ಗೋಪಾಲಕೃಷ್ಣಪಜ್ವ, ರಾಮಗೋಪಾಲ್ ಕಾಂಪ್ಲೆಕ್ಸ್ ಮಾಲಕ ರಾಜೇಶ್ ನಾಯಕ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

> **ಗುಡಿ ಕೈಗಾರಿಕಾ ಉತ್ಪನ್ನ ಖರೀದಿ**
>
> ಸಹಕಾರ ಸಂಘದ ಕೇಂದ್ರ ಕಚೇರಿಯು ಪುತ್ತೂರಿನ ಹೃದಯ ಭಾಗದಲ್ಲಿದ್ದು, ಕೌಡಿಚಾರು, ಬೆಳ್ಳಾರೆ, ಗುರುವಾಯನಕೆರೆ, ಮಾಣಿ, ವಿಟ್ಲ, ಕುಡ್ತಮುಗೇರು, ಉಪ್ಪಿನಂಗಡಿ, ಬಿ.ಸಿ. ರೋಡ್, ಮೆಲ್ಕಾರು, ಬೆಳ್ತಂಗಡಿ, ಸಿದ್ಧಕಟ್ಟೆ, ಮುಡಿಪು, ಫರಂಗಿಪೇಟೆ, ಮಡಂತ್ಯಾರು, ಮಾಡೂರು, ಕಡಬ ಕಲ್ಲಡ್ಕ ಎಂಬಲ್ಲಿ ಒಟ್ಟು 18 ಶಾಖೆಗಳನ್ನು ಹೊಂದಿದೆ. ಆತ್ಮ ನಿರ್ಭರ ಭಾರತದ ದೃಷ್ಟಿಕೋನವನ್ನಿಟ್ಟುಕೊಂಡು ದ.ಕ. ಜಿಲ್ಲೆಯಲ್ಲಿಯೇ ಗ್ರಾಮೀಣ ಗುಡಿ ಕೈಗಾರಿಕಾ ಉತ್ಪನ್ನ ಖರೀದಿಸಿ ಮಾರಾಟ ಮಾಡುವ ಏಕೈಕ ಸಹಕಾರ ಸಂಘವಾಗಿದೆ.

ಪ್ರಸಕ್ತ ಸಹಕಾರ ಸಂಘದ ಅಧ್ಯಕ್ಷ ಯುವ ನ್ಯಾಯವಾದಿ ಭಾಸ್ಕರ ಎಂ. ಪೆರುವಾಯಿ ಅವರ ಸಾರಥ್ಯದಲ್ಲಿ ಸಹಕಾರ ಸಂಘವು ಕ್ಷಿಪ್ರ ಬೆಳವಣಿಗೆಯನ್ನು ಕಂಡಿದೆ. ಸುಮಾರು 39809 ಸದಸ್ಯ ಬಲವನ್ನು ಹೊಂದಿದ್ದು ರೂ.336.91 ಲಕ್ಷ ಸದಸ್ಯರಿಂದ ಆಕರ್ಷಕ ಬಡ್ಡಿ ದರದಲ್ಲಿ ಠೇವಣಿ ಸಂಗ್ರಹಣೆ ಮಾಡಲಾಗುತ್ತಿದೆ. ಹಿರಿಯ ನಾಗರಿಕ ಸದಸ್ಯರ ಠೇವಣಿಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿದೆ. ಪ್ರಸಕ್ತ 148 ಕೋಟಿ ಠೇವಣಿ ಇರುತ್ತದೆ. ಸಾಲದಲ್ಲಿ ರೂ 115 ಕೋಟಿ ಹೊರಬಾಕಿ ಸಾಲ ಇರುತ್ತದೆ. ಕುಂಬಾರಿಕೆ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲಿ ಶೇ.9 ಬಡ್ಡಿ ದರದಲ್ಲಿ ಕುಂಬಾರಿಕೆ ಅಭಿವೃದ್ಧಿ ಸಾಲ ನೀಡಲಾಗುತ್ತಿದೆ. 2024-25ನೇ ಸಾಲಿನಲ್ಲಿ ರೂ.626.53 ಕೋಟಿ ವ್ಯವಹಾರ ನಡೆಸಿ ರೂ.264.45 ಲಕ್ಷ ಲಾಭ ಗಳಿಸಲಾಗಿದೆ. ಸಂಘದ ಲೆಕ್ಕ ಪರಿಶೋಧನೆಯಲ್ಲಿ ಎ ವರ್ಗವನ್ನು ನಿರಂತರ ಕಾಯ್ದುಕೊಳ್ಳಲಾಗಿದೆ.

ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಉತ್ತಮ ಸಹಕಾರ ಸಂಘ ಪ್ರಶಸ್ತಿ ಸಹಿತ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದಿಂದ ಕೊಡ ಮಾಡುವ ಉತ್ತಮ ಸಹಕಾರ ಸಂಘ ಪ್ರಶಸ್ತಿ ಗಳಿಸಿದೆ.

ಸಂಘದ ಸದಸ್ಯರ ಅನುಕೂಲಕ್ಕಾಗಿ ಇ-ಕಲೆಕ್ಷನ್ ಸೇವಾ ಸೌಲಭ್ಯವನ್ನು ಐಸಿಐಸಿಐ ಬ್ಯಾಂಕಿನ ಸಹಯೋಗದೊಂದಿಗೆ ಇರುತ್ತದೆ. ಪುತ್ತೂರು, ಬಿ.ಸಿ. ರೋಡ್, ಬೆಳ್ತಂಗಡಿ ಶಾಖೆಗಳಲ್ಲಿ ಆಸುಪಾಸಿನ ಸದಸ್ಯರ ಇ-ಸ್ಟಾಂಪ್ ಪೇಪರ್, ಮಾರಾಟ ವ್ಯವಸ್ಥೆಯನ್ನು ಮಾಡಲಾಗಿದೆ. ಸದಸ್ಯರ ಪಹಣಿ ಪತ್ರಿಕೆಯನ್ನು ತೆಗೆದು ಕೊಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

---

### ವಿಧಾನ ಪರಿಷತ್ ಸದಸ್ಯ ಪ್ರತಾಪ ಸಿಂಹ ನಾಯಕ್ ಅಧ್ಯಕ್ಷತೆಯಲ್ಲಿ ಸಭೆ

# ಉಜಿರೆ ಬ್ರಹ್ಮಕಲಶೋತ್ಸವಕ್ಕೆ ಅಂತಿಮ ಸಿದ್ಧತೆ

**ಬೆಳ್ತಂಗಡಿ:** ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ವಿವಿಧ ಧಾರ್ಮಿಕ, ವೈದಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಹಿನ್ನಲೆಯಲ್ಲಿ ಅಂತಿಮ ಹಂತದ ಸಿದ್ಧತೆ ಬಗ್ಗೆ ವಿಶೇಷ ಸಭೆಯು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ವಿ.ಪ. ಸದಸ್ಯ ಪ್ರತಾಪ ಸಿಂಹ ನಾಯಕ್ ಅಧ್ಯಕ್ಷತೆಯಲ್ಲಿ ಫೆ.24ಕ್ಕೆ ಶ್ರೀ ರಾಮಕೃಷ್ಣ ಸಭಾಮಂಟಪದಲ್ಲಿ ನಡೆಯಿತು.



ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸುನಾದ ನಿರಂತರ ಭಜನಾ ಕಾರ್ಯಕ್ರಮದ ಬಗೆಗೆ ಪ್ರೊ. ಪ್ರಕಾಶ್ ಪ್ರಭು ಮಾತನಾಡಿ, ಮಾ.4ರಿಂದ 8 ದಿನಗಳ ಕಾಲ ಬೆಳಿಗ್ಗೆ 6.30ರಿಂದ ಸಂಜೆ 6.30ರವರೆಗೆ ಜಿಲ್ಲೆಯ 96 ಭಜನಾ ತಂಡಗಳಿಂದ ನಿರಂತರ ಸೂರ್ಯಾಸ್ತಮಾನ ಭಜನೆ ಹಾಗೂ ಮಾ.11ರಂದು ಸಂಜೆ 65 ಭಜನಾ ತಂಡಗಳಿಂದ ಭಜನೋತ್ಸವ ಹಾಗೂ ಮಾ.3ರಂದು ಬೆಳಾಲು ಕ್ರಾಸ್‌ನಿಂದ ದೇವಸ್ಥಾನದವರೆಗೆ ನಗರ ಭಜನೆಯ ಭಜನೋತ್ಸವ ನಡೆಯಲಿದೆ ಎಂದರು.

ಸ್ವಾಗತ ಸಮಿತಿಯ ಬಗೆಗೆ ಪಾಂಡುರಂಗ ಬಾಳಿಗಾ, ಬೆಂಗಳೂರು ಸಮಿತಿಯ ಪರವಾಗಿ ವೆಂಕಟ್ರಮಣ ರಾವ್, ಆರ್ಥಿಕ ಸಮಿತಿಯ ಲಕ್ಷ್ಮಣ ಸಫಲ್ಯ, ಆಮಂತ್ರಣ ಪತ್ರಿಕೆ ವಿತರಣೆ ಕುರಿತು ಮೋಹನ ಶೆಟ್ಟಿಗಾರ್, ಮಾತೃ ಶಕ್ತಿ ಶಿಲಾ ಸಂಚಯನ ಕುರಿತು ವನಿತಾ ಶೆಟ್ಟಿ ಪ್ರಸಾದ ತಯಾರಿ ಹಾಗೂ ವಿತರಣೆ ವ್ಯವಸ್ಥೆ ಬಗೆಗೆ ಮುರಲೀಕೃಷ್ಣ ಆಚಾರ್, ಸಾಂಸ್ಕೃತಿಕ ಹಾಗೂ ಸಭಾ ಕಾರ್ಯಕ್ರಮದ ಕುರಿತು ಡಾ. ಶ್ರೀಧರ ಭಟ್ ಮತ್ತು ಪ್ರಸಾದ್ ಬಿ.ಎಸ್., ಮಹಿಳಾ ಮತ್ತು ಸ್ವಯಂಸೇವಕ ಸಮಿತಿ ಕುರಿತು ವನಿತಾ ಶೆಟ್ಟಿ ಮತ್ತು ಸಂತೋಷ್ ಅತ್ತಾಜೆ, ಆಹಾರ ಸಮಿತಿ ವ್ಯವಸ್ಥೆ ಬಗೆಗೆ ಅರುಣಕುಮಾರ್ ಎಂ.ಎಸ್., ನೀರಾವರಿ ಮತ್ತು ವಿದ್ಯುತ್ ವ್ಯವಸ್ಥೆ ಕುರಿತು ರಾಧಾಕೃಷ್ಣ ಶೆಟ್ಟಿ ವ್ಯಾಪಾರ ಮಳಿಗೆಗಳ ಕುರಿತು ಪ್ರಕಾಶ್ ಕುದ್ದಣ್ಣಾಯ, ಪೂರ್ಣಕುಂಭ ಸ್ವಾಗತ ಬಗೆಗೆ ಪುಷ್ಪಾವತಿ ಆರ್ ಶೆಟ್ಟಿ, ಮಾಧ್ಯಮ ಸಮಿತಿ ಬಗೆಗೆ ಶ್ರೀನಿವಾಸ ತಂತ್ರಿ, ದೃಶ್ಯ ಮಾಧ್ಯಮ ಕುರಿತು ದಿನೇಶ್ ಕೋಟಿಯಾನ್, ಹಸಿರುವಾಣಿ ಹೊರೆ ಕಾಣಿಕೆ ವ್ಯವಸ್ಥೆ ಮತ್ತು ವಿಶೇಷವಾಗಿ ಕೊಪ್ಪರಿಗೆಗೆ ಅಕ್ಕಿ ಸಮರ್ಪಿಸುವ ಸೇವೆ ಕುರಿತು ರವಿಕುಮಾರ್ ಬರಮೇಲು, ಪಾನೀಯ ವ್ಯವಸ್ಥೆ ಕುರಿತು ಯಶೋಧರ, ವಾಹನ ನಿಲುಗಡೆ ವ್ಯವಸ್ಥೆ ಕುರಿತು ಸುಧಾಕರ, ಅತಿಥಿ ಸತ್ಕಾರ ಬಗೆಗೆ ಪ್ರೊ.ಟಿ.ಕೃಷ್ಣಮೂರ್ತಿ, ಮುದ್ರಣ ವ್ಯವಸ್ಥೆ ಕುರಿತು ಶೇಖರ್ ಟಿ., ಉಗ್ರಾಣ ಸಮಿತಿ ವ್ಯವಸ್ಥೆ ಕುರಿತು ರಾಮಣ್ಣ ಗೌಡ, ಚಪ್ಪರ ಸಮಿತಿ ವ್ಯವಸ್ಥೆ ಕುರಿತು ಪ್ರಕಾಶ್ ಗೌಡ ಅಪ್ರಮೇಯ, ಕಾರ್ಯಾಲಯ ವ್ಯವಸ್ಥೆ ಕುರಿತು ಸಂಜೀವ ಶೆಟ್ಟಿ ಕುಂಟಿನಿ ಕಾರ್ಯಗಳ ಪ್ರಗತಿ ಬಗ್ಗೆ ಮಾಹಿತಿ ನೀಡಿದರು.

ಸುದರ್ಶನ ಸಭಾಭವನ ಹಾಗೂ ಅನ್ನಛತ್ರದ ವ್ಯವಸ್ಥೆ ಬಗೆಗೆ ಪ್ರಧಾನ ಸಂಚಾಲಕ ಕೆ. ಮೋಹನ ಕುಮಾರ್ ಮಾಹಿತಿ ನೀಡಿ ಕಾರ್ಯಕ್ರಮಗಳ ಯಶಸ್ಸಿಗೆ ಕರೆ ನೀಡಿದರು. ಮಾ.11ರಂದು ಅಪ್ಪೈರಿ ದಿನ ಸಂಜೆ 4.30ಕ್ಕೆ ಗಣ್ಯ ಅತಿಥಿಗಳನ್ನು ಎಸ್‌ಡಿಎಂ ಕಾಲೇಜು ಮುಂಭಾಗದಿಂದ ಬೃಹತ್ ಮೆರವಣಿಗೆಯಲ್ಲಿ 'ಧರ್ಮಯಾನ'ದ ಮೂಲಕ ವೇದಿಕೆಗೆ ಬರಮಾಡಿಕೊಳ್ಳುವ ಯೋಜನೆ ಪ್ರಕಟಿಸಿದರು. ಗ್ರಾ. ಯೋ. ಯಶೋಧರ ಇದ್ದರು. ಸಮಿತಿ ಕಾರ್ಯದರ್ಶಿ ರವೀಂದ್ರ ಶೆಟ್ಟಿ ನಿರೂಪಿಸಿದರು. ಕಾರ್ಯದರ್ಶಿ ಸಂಜೀವ ಶೆಟ್ಟಿ ಕುಂಟಿನಿ ವಂದಿಸಿದರು.

---

# ಕರಾಡ ಬ್ರಾಹ್ಮಣ ಸಮಾಜಕ್ಕೆ ನಿವೇಶನ ನೀಡಲು ಡಿಸಿಎಂ ಡಿಕೆಶಿಗೆ ಮನವಿ ಸಲ್ಲಿಕೆ

**ಪುತ್ತೂರು:** ಕರಾವಳಿ ಮೂಲದ ಕರಾಡ ಬ್ರಾಹ್ಮಣ ಸಮಾಜವು ತಮ್ಮ ಧಾರ್ಮಿಕ, ಸಾಮಾಜಿಕ ಹಾಗೂ ಇನ್ನಿತರೆ ಗೌರವ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಕಾರದ ವತಿಯಿಂದ ಬೆಂಗಳೂರು ನಗರದಲ್ಲಿ ನಿವೇಶನವನ್ನು ಒದಗಿಸಿ ಕೊಡಬೇಕೆಂದು ಒತ್ತಾಯಿಸಿ ಕರಾಡ ಬ್ರಾಹ್ಮಣ ಸಮಾಜದ ಪ್ರಮುಖರು ರಾಜ್ಯದ ಉಪಮುಖ್ಯ ಮಂತ್ರಿ ಡಿ.ಕೆ. ಶಿವ ಕುಮಾರ್ ಅವರಿಗೆ ಮನವಿಯನ್ನು ಸಲ್ಲಿಸಿದೆ.



ಕರಾವಳಿ ಮೂಲದ ಕರಾಡ ಬ್ರಾಹ್ಮಣ ಸಮಾಜದ ಸಮುದಾಯದ ಜನಾಂಗದವರು ಬೆಂಗಳೂರು ನಗರದಲ್ಲಿ ಸುಮಾರು 4 ಲಕ್ಷಕ್ಕೂ ಅಧಿಕವಾಗಿ ನಮ್ಮ ಸಮಾಜದವರು ನೆಲೆಸಿದ್ದಾರೆ. ಶೃಂಗೇರಿ ಜಗದ್ಗುರುಗಳು ಹಾಗೂ ಶೃಂಗೇರಿ ಮಠದ ಮಾರ್ಗದರ್ಶನದಲ್ಲಿ ಬೆಂಗಳೂರಿನಲ್ಲಿ ಕರಾಡ ಬ್ರಾಹ್ಮಣ ಸಮುದಾಯದವರು ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದಾರೆ. ಈ ಸಮುದಾಯದವರು ಯಾವುದೇ ಸಭೆ-ಸಮಾರಂಭಗಳನ್ನು ನಡೆಸಬೇಕೆಂದಲ್ಲಿ ಖಾಸಗಿಯವರ ಮೊರೆ ಹೋಗುವಂತಹ ಸಂದರ್ಭ ನಿರ್ಮಾಣವಾಗಿರುತ್ತದೆ. ಈ ಸಮಾಜದವರು ತಮ್ಮ ಧಾರ್ಮಿಕ, ಸಾಮಾಜಿಕ ಹಾಗೂ ಇನ್ನಿತರೆ ಗೌರವ ಕಾರ್ಯಕ್ರಮನಡೆಸಲುಅನುಕೂಲವಾಗುವಂತೆ ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕ್ರಸಂ. 32 ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್-7 ಕೊಮ್ಮಘಟ್ಟ ನಿವೇಶನ ಸಂ.02 ಅನ್ನು ಸದರಿ ಸಮಾಜದ ಅನುಕೂಲಕ್ಕೆ ನೀಡುವಂತೆ 2025ರ ಮೇ 2ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದು, ನೋಂದಣಿ ಶುಲ್ಕವನ್ನು ಪಾವತಿಸಲಾಗಿದೆ. ಈ ನಿಟ್ಟಿನಲ್ಲಿ ಕರಾಡ ಬ್ರಾಹ್ಮಣ ಸಮಾಜದವರ ಅನುಕೂಲಕ್ಕಾಗಿ ಕೊಮ್ಮಘಟ್ಟ ಗ್ರಾಮದಲ್ಲಿ ನಿವೇಶನವನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಿ ಕೊಡುವಂತೆ ಮನವಿಯಲ್ಲಿ ತಿಳಿಸಿದ್ದಾರೆ.

ಪುತ್ತೂರು ಶಾಸಕ ಅಶೋಕ್ ರೈ ನೇತೃತ್ವದಲ್ಲಿ ಕರಾಡ ಬ್ರಾಹ್ಮಣ ಸಮಾಜದ ಪ್ರಮುಖರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ಗೆ ಮನವಿ ಸಲ್ಲಿಸಿದ್ದಾರೆ.

---

# ಗಡಿನಾಡ ಕನ್ನಡಪರ ಕಾರ್ಯಕ್ರಮಕ್ಕೆ ಅನುದಾನ ಪ್ರಸ್ತಾವನೆಗೆ ಸಿಎಸ್ ಒಪ್ಪಿಗೆ

**ಸುಳ್ಯ:** ಕನ್ನಡ ಶೇ.3.76 ವೇಗದಲ್ಲಿ ಬೆಳೆಯುತ್ತಿರುವ ಭಾಷೆಯಾಗಿದೆ. ಮುಂದಿನ ದಿನಗಳಲ್ಲಿ ಭಾಷಾಧಾರಿತವಾಗಿ ಲೋಕಸಭಾ ಚುನಾವಣೆಗೆ ಸೀಟು ನಿರ್ಣಯವಾದಲ್ಲಿ ಹಿಂದಿ ಭಾಷೆಯನ್ನು ಹೊಂದಿರುವ ಉತ್ತರ ಭಾರತದಲ್ಲಿ 544 ಸೀಟುಗಳು ಹಾಗೂ ದಕ್ಷಿಣ ಭಾರತಕ್ಕೆ (ತೆಲುಗು, ತಮಿಳು, ಮಲೆಯಾಳ, ಕನ್ನಡ, ತುಳು) ಕೇವಲ 154 ಸೀಟುಗಳು ಮಾತ್ರವೇ ಸಿಗಲಿದೆ. ಆಗ ಸಣ್ಣ ಭಾಷೆಗಳು ಪತನವಾಗುತ್ತದೆ. ಆದ್ದರಿಂದ ನಾವು ಕನ್ನಡ ಹಾಗೂ ಕನ್ನಡವನ್ನು ಬೆಳೆಸಿದ ಸಣ್ಣ ಭಾಷೆಗಳಿಗೆ ಹೊಸ ಉತ್ಸಾಹ ತರಲು ಸಣ್ಣ ಭಾಷೆಗಳ ಸಬಲೀಕರಣಕ್ಕೆ ಯೋಜನೆ ರೂಪಿಸಲಿದ್ದೇವೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಹೇಳಿದರು.



ಅವರು ಸುಳ್ಯದಲ್ಲಿ ಪತ್ರಕರ್ತರ ಜೊತೆ ಮಾತನಾಡಿ, ಪ್ರಸ್ತುತ ಕರ್ನಾಟಕದಲ್ಲಿ 290 ಭಾಷೆಗಳಿವೆ. ಕರ್ನಾಟಕದಲ್ಲಿ 10 ಸಾವಿರಕ್ಕಿಂತ ಹೆಚ್ಚು ಮಂದಿ ಮಾತನಾಡುವ 29 ಭಾಷೆಗಳಿವೆ. ಅದಕ್ಕಾಗಿ ಈ 29 ಭಾಷೆಗಳನ್ನು ಮೂರನೇ ಭಾಷೆಯಾಗಿ ಶಾಲೆಯಲ್ಲಿ ಜಾರಿಗೆ ಬರಬೇಕು ಎಂಬ ಪ್ರಸ್ತಾವನೆಯನ್ನು ಪ್ರಾಧಿಕಾರ ಸಲ್ಲಿಸಿದೆ. ಅದಕ್ಕಾಗಿ ಸಣ್ಣ ಭಾಷೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಶಾಲೆಗಳಲ್ಲಿ ಸಣ್ಣ ಭಾಷೆಗಳಲ್ಲಿ ಕಲಿಸಿದಾಗ ಆ ಭಾಷೆಗಳು ಉಳಿಯಲಿದೆ ಎಂದರು.

ಕೊರಗ ಭಾಷೆ ಕೇವಲ 2 ಸಾವಿರಕ್ಕೆ ಇಳಿದಿದೆ. ಇದು ಬೇಸರದ ಸಂಗತಿಯಾಗಿದೆ. ಕಾಸರಗೋಡಿನ ಕನ್ನಡ ಸಾಧಕರಿಗೂ ರಾಜ್ಯೋತ್ಸವ ಪ್ರಶಸ್ತಿ ಸಿಗಬೇಕು. ಕಾಸರಗೋಡಿನಲ್ಲಿ ಕನ್ನಡ ಸಂಸ್ಕೃತಿಯ ಕಾರ್ಯಕ್ರಮಗಳನ್ನು ನಡೆಸಲು ರೂ.10 ಲಕ್ಷದಷ್ಟು ಅನುದಾನ ನೀಡಿ ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂಬ ನಿಟ್ಟಿನಲ್ಲಿ ಈಗಾಗಲೇ ನಾವು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಸರಕಾರದ ಮುಖ್ಯ ಕಾರ್ಯದರ್ಶಿಗಳು ಇದಕ್ಕೆ ಒಪ್ಪಿಗೆ ನೀಡಿದ್ದಾರೆ ಎಂದರು. ಹೊರ ರಾಜ್ಯದ ಕನ್ನಡಿಗರಿಗೆ ರಾಜ್ಯದಲ್ಲಿ ಉದ್ಯೋಗದಲ್ಲಿ ಶೇ.5ರಷ್ಟು ಮೀಸಲಾತಿ ಜಾರಿಯಲ್ಲಿದೆ. ಆದರೆ, ಇದಕ್ಕೆ ಅಧಿ ಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಅದನ್ನು ಶೇ.10ಕ್ಕೆ ಏರಿಸುವ ಪ್ರಯತ್ನ ಇದೆ ಎಂದು ಅವರು ಪ್ರಶ್ನೆಗೆ ಉತ್ತರಿಸಿದರು. ನಾನು ಅಧ್ಯಕ್ಷನಾದ ಬಳಿಕ ಸರಕಾರಿ ಶಾಲೆಗಳ ಆಸ್ತಿಗಳನ್ನು ರಕ್ಷಿಸುವ ಕಾರ್ಯ ಪ್ರಾಧಿಕಾರದಿಂದ ಆಗಿದ್ದು ಇದೀಗ 240 ಮದರಸಗಳಲ್ಲಿ ಕನ್ನಡ ಕಲಿಸುವ ಕೆಲಸ ಮಾಡಲಾಗಿದೆ ಎಂದು ಹೇಳಿದರು. ಈ ಸಂದರ್ಭ ಸುಳ್ಯ ಕಸಾಪ ಅಧ್ಯಕ್ಷ ಚಂದ್ರಶೇಖರ ಪೇರಾಲು ಉಪಸ್ಥಿತರಿದ್ದರು.

---

# ಬಜಾಲ್ ವಾರ್ಡ್: ತಡೆಗೋಡೆ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ



**ಮಂಗಳೂರು:** ಮಹಾನಗರ ಪಾಲಿಕೆ ವ್ಯಾಪ್ತಿಯ 53ನೇ ಬಜಾಲ್ ವಾರ್ಡಿನ ಜಯನಗರದ ರೋಹಿಣಿ ಮನೆ ಬಳಿಯಿಂದ ಹರಿಣಾಕ್ಷಿ ಮನೆ ತನಕ 75 ಲಕ್ಷ ರೂ. ವೆಚ್ಚದಲ್ಲಿ ತಡೆಗೋಡೆ ಅಭಿವೃದ್ಧಿ ಕಾಮಗಾರಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಇದು ಬಹಳಷ್ಟು ವರ್ಷಗಳಿಂದ ಬೇಡಿಕೆಯಿದ್ದ ಅತೀ ಅಗತ್ಯ ಕಾಮಗಾರಿಯಾಗಿದೆ. ಈ ಪ್ರದೇಶವು ಎತ್ತರ ತಗ್ಗು ಇರುವುದರಿಂದ ರಸ್ತೆ ನಿರ್ಮಾಣ ಬಹುದೊಡ್ಡ ಸವಾಲು. ದಿನನಿತ್ಯದ ಕೆಲಸಗಳಿಗೆ ಇಲ್ಲಿನ ಜನರು ತೀವ್ರ ತೊಂದರೆ ಅನುಭವಿಸುತ್ತಿರುವುದು ನನ್ನ ಗಮನದಲ್ಲಿದೆ. ಮೊದಲು ಇಲ್ಲಿ ಸುಸಜ್ಜಿತ ತಡೆಗೋಡೆ ನಿರ್ಮಿಸಿ ನಂತರ ರಸ್ತೆ ನಿರ್ಮಿಸುವ ಬಗ್ಗೆ ಯೋಜನೆ ಹಾಕಿಕೊಳ್ಳಲಾಗಿದೆ. ಸ್ಥಳೀಯ ಬಿಜೆಪಿ ಮುಖಂಡ ಚಂದ್ರಶೇಖರ ಬಜಾಲ್ ಅವರ ವಿಶೇಷ ಮನವಿ ಮೇರೆಗೆ ಈ ಕಾಮಗಾರಿ ನಡೆಯುತ್ತಿದ್ದು, ಈ ಹಿಂದಿನ 2022-23 ನೇ ಸಾಲಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರುಗೊಂಡಿರುವ ಕಾಮಗಾರಿಯಾಗಿದೆ. ಅಂದು ಕೊಂಡಂತೆ ಎಲ್ಲವೂ ನಡೆದು ಮುಂದಿನ ದಿನಗಳಲ್ಲಿ ಎಲ್ಲರ ಆಶಯದಂತೆ ಇಲ್ಲಿ ಅಡೆ ತಡೆಯಿಲ್ಲದೇ ವಾಹನಗಳ ಸಂಚಾರ ಆರಂಭವಾಗುವ ವಾತಾವರಣ ನಿರ್ಮಾಣವಾಗಲಿದೆ ಎಂದರು. ಪ್ರಮುಖರಾದ ಪ್ರವೀಣ್ ನಿಡ್ಡೇಲ್, ಸುಕೇಶ್, ಸುರೇಶ್ ರಾವ್, ಶಿವಾನಂದ, ರಹೀಮ್, ಲಕ್ಷ್ಮಿ, ಸರಸ್ವತಿ, ಶಿವಾಜಿ ರಾವ್, ಶೈಲೇಶ್, ಶಿವಾನಂದ, ಪ್ರಕಾಶ್, ಅಚ್ಯುತ್ ಸಾಲ್ಯಾನ್, ವಾರ್ಡಿನ ಕಾರ್ಯಕರ್ತರು, ಪರಿಸರದ ನಿವಾಸಿಗಳು ಉಪಸ್ಥಿತರಿದ್ದರು.

---

### ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ ನೂತನ ಕಟ್ಟಡಕ್ಕೆ ಶಿಲಾನ್ಯಾಸ ಕಾರ್ಯಕ್ರಮ

# ಸಹಕಾರಿ ಕ್ಷೇತ್ರದಿಂದ ದೇಶದ ಅಭಿವೃದ್ಧಿಗೆ ಕೊಡುಗೆ: ಯು.ಟಿ. ಖಾದರ್ ಬಣ್ಣನೆ

**ಬಂಟ್ವಾಳ:** ಸಾಮರಸ್ಯದ ಮೂಲಕ ಜೀವನ ಹಾಗೂ ಸಮಾಜವನ್ನು ಮುನ್ನಡೆಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಬೇಕು. ಭಿನ್ನಾಭಿಪ್ರಾಯವನ್ನು ಸಕರಾತ್ಮಕವಾಗಿ ಸ್ವೀಕರಿಸಿಕೊಂಡು ನಾವೆಲ್ಲರೂ ಭಾರತೀಯರು ಎಂಬ ಭಾವನೆಯೊಂದಿಗೆ ಭವಿಷ್ಯದ ಸಮಾಜಕ್ಕೆ ಪ್ರತಿಯೊಬ್ಬರು ಕಟಿಬದ್ಧರಾಗಬೇಕು ಎಂದು ಸ್ಪೀಕರ್ ಡಾ. ಯು.ಟಿ. ಖಾದರ್ ಹೇಳಿದರು.



ಗುರುವಾರ ಸಜೀಪಮುನ್ನೂರು ಮೂರ್ತೆ ದಾರರ ಸೇವಾ ಸಹಕಾರಿ ಸಂಘ ಇದರ ಕೇಂದ್ರ ಕಚೇರಿಯ ನೂತನ ಕಟ್ಟಡಕ್ಕೆ ಸಜೀಪಮೂಡ ಗ್ರಾಮದ ಸುಭಾಷ್ ನಗರದಲ್ಲಿ ನಡೆದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ದೀಪ ಪ್ರಜ್ವಲಿಸಿ ಮಾತನಾಡಿ, ಸಹಕಾರಿ ಕ್ಷೇತ್ರ ದೊಡ್ಡ ಮಟ್ಟದ ಕೊಡುಗೆಯನ್ನು ದೇಶಕ್ಕೆ ನೀಡುತ್ತಿದೆ. ಸಹಕಾರ ಸಂಘಗಳು ಜನರ ವಿಶ್ವಾಸದೊಂದಿಗೆ ವ್ಯವಹಾರ ಮಾಡುತ್ತಿದೆ. ಇಲ್ಲಿನ ಸಮುದಾಯ ಭವನ ನಿರ್ಮಾಣಕ್ಕೆ ನಿಯಮಕ್ಕೆ ಅನುಗುಣವಾಗಿ ಅನುದಾನವನ್ನು ಸರಕಾರದಿಂದ ಒದಗಿಸಿ ಕೊಡುವುದಾಗಿ ಭರವಸೆ ನೀಡಿದರು.

ಮಾಜಿ ಸಚಿವ ಬಿ. ರಮಾನಾಥ ರೈ ಕೇಂದ್ರ ಕಚೇರಿಯ ನೂತನ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ, ಮೂರ್ತೆದಾರರ ಅಭಿವೃದ್ಧಿಗಾಗಿ ಸ್ವಂತವಾದ ಸಹಕಾರಿ ಸಂಘ ಸ್ಥಾಪಿಸಿ 5 ಕೋ.ರೂ. ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕೆಮುಂದಾಗಿರುವುದುಮೆಚ್ಚುವ ಕಾರ್ಯ ಎಂದು ಅಭಿನಂದಿಸಿದರು.

ಸಂಜೀವ ಪೂಜಾರಿ ನಾರಾಯಣ ಗುರುಗಳ ಆಶಯಕ್ಕೆ ಪೂರಕವಾಗಿ ಈ ಸಂಘದ ಮೂಲಕ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸಂಘದ ಅಧ್ಯಕ್ಷ ಕೆ. ಸಂಜೀವ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗಗಳಆಯೋಗದ ಸದಸ್ಯೆ ಪ್ರತಿಭಾ ಕುಳಾಯಿ, ಮಾಜಿ ಶಾಸಕ ರುಕ್ಮಯ ಪೂಜಾರಿ ಏಳ್ತಿಮಾರ್, ಬೂಡ ಅಧ್ಯಕ್ಷ ಬೇಬಿ ಕುಂದರ್, ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಜಿ.ಪಂ. ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ, ಸಜೀಪಮೂಡ ಗ್ರಾ.ಪಂ. ಅಧ್ಯಕ್ಷೆ ಶೋಭಾ ಶೆಟ್ಟಿ ನಂದಾವರ ಶ್ರೀ ವಿನಾಯಕ ಶಂಕರ ನಾರಾಯಣ ದುರ್ಗಾಂಬ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕಾಂತಾಡಿಗುತ್ತು, ಸಜೀಪನಡು ಶ್ರೀ ನಾಲ್ಕೈತ್ತಾಯ ದೈವಸ್ಥಾನದ ದೈವಪಾತ್ರಿ ಶಂಕರ ಯಾನೆ ಕೋಚ ಪೂಜಾರಿ, ಅಮ್ಮೆಂಬಳ ಸಂತ ಥೋಮಸರ ಚರ್ಚಿನ ಧರ್ಮಗುರುಗಳಾದ ವಂ.ಫಾ. ಮೈಕಲ್ ಡಿಸಿಲ್ವಾ, ಕೊಳಕೆ ಮುಹಿಯುದ್ದೀನ್ ಜುಮ್ಮಾ ಮಸೀದಿಯ ಅಧ್ಯಕ್ಷ ಎಸ್. ಸಿದ್ದೀಕ್, ಸಜೀಪಮೂಡ ಬ್ರಹ್ಮಶ್ರೀ ನಾರಾಯಣ ಜ್ಞಾನಮಂದಿರದ ಅಧ್ಯಕ್ಷ ಕೆ. ಮೋಹನ್‌ದಾಸ್ ಪೂಜಾರಿ, ಪದ್ಮಾವತಿ ಶೆಟ್ಟಿ ಸಂಘದ ಉಪಾಧ್ಯಕ್ಷ ವಿಠಲ ಪೂಜಾರಿ ಇದ್ದರು. ನಿರ್ದೇಶಕ ಗಿರೀಶ್ ಕುಮಾರ್ ಪೆರ್ವ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಮೇಶ್ ಅನ್ನಪ್ಪಾಡಿ ವಂದಿಸಿದರು. ದಿನೇಶ್ ಸುವರ್ಣ ರಾಯಿ ನಿರೂಪಿಸಿದರು. ನಿರ್ದೇಶಕ ಸುಂದರ ಪೂಜಾರಿ ಬೀಡಿನಪಾಲು,ಜಯಶಂಕರ್ ಕಾನ್ಸಾಲೆ, ಕೆ. ಸುಜಾತ ಎಂ., ವಾಣಿ ವಸಂತ್, ಆಶಿಶ್ ಪೂಜಾರಿ, ಚಿದಾನಂದ ಎಂ. ಕಡೇಶ್ವಾಲ್ಯ, ಸಿಇಒ ಮಮತಾ ಜಿ. ಚೇಳೂರು ಸಿಬ್ಬಂದಿಗಳು ಭಾಗವಹಿಸಿದ್ದರು.

### ಸುತ್ತಮುತ್ತ

## ನಾಳೆ ಮ್ಯಾನೇಜ್ಮೆಂಟ್, ಕಲ್ಚರಲ್ ಫೆಸ್ಟ್ 'ಯುವ-2026'

**ಕುಂದಾಪುರ:** ಮೂಡ್ಲಕಟ್ಟೆ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕುಂದಾಪುರ ಇಲ್ಲಿನ ಎಂಬಿಎ ವಿಭಾಗದ ವತಿಯಿಂದ ರಾಜ್ಯ ಮಟ್ಟದ ಅಂತರ್ ಕಾಲೇಜು ಮ್ಯಾನೇಜ್ಮೆಂಟ್ ಮತ್ತು ಕಲ್ಚರಲ್ ಫೆಸ್ಟ್ 'ಯುವ 2026' ಫೆ.28ರಂದು ನಡೆಯಲಿದೆ ಎಂದು ಡಿಪಾರ್ಟ್ ಮೆಂಟ್ ಆಫ್ ಎಂಬಿಎ ಇದರ ಎಚ್ ಒಡಿ ಡಾ. ಸುಚಿತ್ರಾ ಪೂಜಾರಿ ಹೇಳಿದರು.

ಕುಂದಾಪುರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀನುಗಾರಿಕೆ, ಬಂದರು ಒಳನಾರಿಗೆ ಸಚಿವ ಮಂಕಾಳ ಎಸ್ ವೈದ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಸಿದ್ಧ ಕಲಾವಿದ ಪ್ರಕಾಶ್ ತುಮ್ಮಿನಾಡು ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೂಡ್ಲಕಟ್ಟೆ ಐಎಂಜೆ ವಿದ್ಯಾಸಂಸ್ಥೆಗಳ ಅಧ್ಯಕ್ಷ ಸಿದ್ಧಾರ್ಥ್ ಜೆ. ಶೆಟ್ಟಿ ವಹಿಸಲಿದ್ದಾರೆ. ಒಂದು ಲಕ್ಷಕ್ಕೂ ಮೀರಿದ ಒಟ್ಟು ಬಹುಮಾನ ಮೊತ್ತ ಇರುವ ಈ ಯುವ 2026 ಪ್ರತಿಸ್ಪರ್ಧೆಯಲ್ಲಿ ಟ್ರೋಫಿ, ನಗದು ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು ಹಾಗೂ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಪಾರ್ಟಿಸಿಪೇಶನ್ ಸರ್ಟಿಫಿಕೇಟ್ ಕೂಡ ನೀಡಲಾಗುವುದು ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಐದು ಮ್ಯಾನೇಜ್ಮೆಂಟ್ ವಿಷಯಕ್ಕೆ ಸಂಭಂದಪಟ್ಟ ಮತ್ತು ಒಂದು ಸಾಂಸ್ಕೃತಿಕ ಸ್ಪರ್ಧೆಗಳಿದ್ದು, ಮ್ಯಾನೇಜ್‌ಮೆಂಟ್‌ನಲ್ಲಿ ಬೆಸ್ಟ್ ಮ್ಯಾನೇಜರ್, ಮಾರ್ಕೆಟಿಂಗ್, ಮೊಕ್ಸೆಸ್, ಬಿಸಿನೆಸ್ ಐಡಿಯಾ ಹಾಗೂ ವಿಕಾಸ್ ಭಾರತ್ ವಿಷಯದ ಮೇಲೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಗುಂಪು ನೃತ್ಯ, ಡ್ರಾಮ, ಫ್ಯಾಶನ್ ಶೋ ಮತ್ತು ಗುಂಪು ಗಾಯನ ಇವೆಲ್ಲವನ್ನು ಒಳಗೊಂಡ ವೆರೈಟಿ ಕಲ್ಚರಲ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ಮ್ಯಾನೇಜ್‌ಮೆಂಟ್ ಹಾಗೂ ಕಲ್ಚರಲ್ ಇವೆಂಟಿಗೆ ನಗದು ಬಹುಮಾನಗಳನ್ನು ಇಡಲಾಗಿದ್ದು, ಮ್ಯಾನೇಜ್ಮೆಂಟ್ ಇವೆಂಟಿನ ಪ್ರಥಮ ಸ್ಥಾನಕ್ಕೆ 5000 ರೂ. ಮತ್ತು ದ್ವಿತೀಯ ಸ್ಥಾನಕ್ಕೆ 3000 ರೂ. ಬಹುಮಾನಗಳನ್ನು ಹಾಗೂ ಕಲ್ಚರಲ್ ಇವೆಂಟಿನ ಪ್ರಥಮ ಸ್ಥಾನಕ್ಕೆ 35,000 ರೂ. ಹಾಗೂ ದ್ವಿತೀಯ ಸ್ಥಾನಕ್ಕೆ 25,000 ರೂ. ಬಹುಮಾನಗಳನ್ನು ನೀಡಿ ಗೌರವಿಸಲಾಗುವುದು ಎಂದು ಎಂಐಟಿ ಪ್ರಾಂಶುಪಾಲ ಡಾ.ರಾಮಕೃಷ್ಣ ಹೆಗಡೆ ಹೇಳಿದರು.

ಈ ಯುವ 2026 ಸ್ಪರ್ಧೆಗೆ ಯಾವುದೇ ಯೂನಿವರ್ಸಿಟಿಯಲ್ಲಿ ರಿಜಿಸ್ಟರ್ ಆಗಿರುವ ಪದವಿ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಲಾಗಿದ್ದು 30ಕ್ಕೂ ಹೆಚ್ಚಿನ ಕಾಲೇಜುಗಳು ಆಗಮಿಸುವ ನಿರೀಕ್ಷೆಯಲ್ಲಿದ್ದು ಈಗಲೇ ಹೆಚ್ಚಿನ ಕಾಲೇಜುಗಳು ನೊಂದಾಯಿಸಿವೆ. ಮತ್ತು ಸ್ಥಳದಲ್ಲೇ ನೋಂದಣಿಗೆ ಅವಕಾಶ ನೀಡಲಾಗಿದೆ. ಇದು ಎಂಐಟಿ ಕುಂದಾಪುರದ ಎಂಬಿಎ ವಿಭಾಗ ನಡೆಸಿಕೊಂಡು ಬರುತ್ತಿರುವ ಐದನೇ ಯುವ ಕಾರ್ಯಕ್ರಮ ಆಗಿದೆ ಎಂದರು. ಅಸಿಸ್ಟೆಂಟ್ ಪ್ರೊಫೆಸರ್ ಕಾವ್ಯ ಮತ್ತು ಅಡ್ಮಿನಿಸ್ಟ್ರೇಟಿವ್ ಹೆಡ್ ಕಿರಣ್ ಶೆಟ್ಟಿ ಇದ್ದರು.

## ಮನೆ ಮೇಲೆ ಮರ ಬಿದ್ದ ಪ್ರಕರಣ: ಸೌಲಭ್ಯ ಕಲ್ಪಿಸಲು ಮನವಿ

**ಸುಳ್ಯ:** ಸುಳ್ಯ ತಾಲೂಕಿನ ಆಲೆಟ್ಟಿ ಮತ್ತು ಸಂಪಾಜೆ ಗ್ರಾಮದಲ್ಲಿ ಮನೆ ಮೇಲೆ ಮರ ಬಿದ್ದ ಪ್ರಕರಣದಲ್ಲಿ ತುರ್ತು ವಾಸ್ತವ್ಯಕ್ಕೆ ಪರಿಹಾರ ಕಲ್ಪಿಸುವಂತೆ ಸಹಾಯಕ ಆಯುಕ್ತರಿಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಸುಳ್ಯ ಶಾಸಕರ ಅಧ್ಯಕ್ಷತೆಯಲ್ಲಿ ಜರುಗಿದ 110 ಕೆವಿ ಸಭೆಯ ಹಿನ್ನಲೆಯಲ್ಲಿ ಆಗಮಿಸಿದ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಅವರಿಗೆ ಸಂಪಾಜೆ ಗ್ರಾಮದ ಗೂನಡ್ಕ ಎಂಬಲ್ಲಿ ಮಹಿಳೆಯೋರ್ವರ ಮನೆಗೆ ತೆಂಗಿನ ಮರ ಬಿದ್ದು ಮನೆ ಸಂಪೂರ್ಣ ಹಾನಿಯಾಗಿದ್ದರೆ, ಇತ್ತ ಆಲೆಟ್ಟಿ ಗ್ರಾಮದಲ್ಲಿಯು ಒಂದು ಮನೆಯ ಮೇಲೆ ಮರ ಬಿದ್ದು ಮನೆ ಸಂಪೂರ್ಣ ಮುರಿದು ಬಿದ್ದಿದ್ದು ಒಂದು ಕಡೆಗೆ ಅಧಿಕಾರಿಗಳಿಗೆ ಭೇಟಿ ನೀಡಿದ್ದರೆ ಆಲೆಟ್ಟಿ ಗ್ರಾಮದ ಮನೆಗೆ ಕಂದಾಯ ಅಧಿಕಾರಿಗಳು ಭೇಟಿ ನೀಡಿಲ್ಲ ಎಂದು ದೂರಿಕೊಂಡರು. ಈ ಸಂದರ್ಭ ಸ್ಥಳದಲ್ಲಿದ್ದ ಉಪತಹಶೀಲ್ದಾರ್ ಚಂದ್ರಶೇಖರ ಅವರಿಗೆ ತಕ್ಷಣ ಸ್ಥಳ ವೀಕ್ಷಿಸಿ ಅವರಿಗೆ ಉಳಿದುಕೊಳ್ಳಲು ಬೇಕಾಗುವ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸತ್ಯಕುಮಾರ್ ಆಡಿಂಜ, ಭವಾನಿಶಂಕರ್ ಕಲ್ಮಡ್ಕ,ರಕ್ಷಿತ್ ಕೂರ್ನಡ್ಕ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ಒಡ್ಯ ಶಾಲೆಗೆ ಸೌಂಡ್ ಸಿಸ್ಟಮ್ ಕೊಡುಗೆ

**ನಿಡ್ಪಳ್ಳಿ:** ದ.ಕ.ಜಿ.ಪಂ.ಹಿರಿಯ ಪ್ರಾಥಮಿಕ ಶಾಲೆ ಒಡ್ಯ ಪಾಣಾಜೆ ಇಲ್ಲಿಗೆ ಮೇಘ ಮತ್ತು ಸುಧಾಕರ ಶೆಟ್ಟಿ ಅಲ್ಚಾರು ಇವರು ಪುತ್ರ ಮಾಸ್ಟರ್ ಅವ್ಯುಕ್ತ್ ಇವರ ಜನ್ಮ ದಿನಾಚರಣೆ ಪ್ರಯುಕ್ತ ಸೌಂಡ್ ಸಿಸ್ಟಮನ್ನು ಫೆ.24 ರಂದು ಕೊಡುಗೆಯಾಗಿ ನೀಡಿದರು.

ಮುಖ್ಯಗುರು ಜನಾರ್ಧನ ಅಲ್ಚಾರು ಕೊಡುಗೆಯನ್ನು ಸ್ವೀಕರಿಸಿದರು.ಎಸ್.ಡಿ. ಎಂ.ಸಿ ಅಧ್ಯಕ್ಷರಾದ ಪ್ರೇಮ ಪಡ್ಯಂಬೆಟ್ಟು ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ವಹಿಸಿದ್ದರು.ಮುಖ್ಯ ಅತಿಥಿಗಳಾಗಿ ಅನಂತರಾಮ ರೈ ಕೆದುಂಬಾಡಿ,ಮಾಜಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶಂಕರ ರೈ ಬಾಳೆಗುಳಿ,ಯಶೋಧ ಒಡ್ಯ ಭಾಗವಹಿಸಿದ್ದರು. ಹಿರಿಯ ಶಿಕ್ಷಕಿ ಸ್ವರ್ಣಲತಾ ಕಾರ್ಯಕ್ರಮ ನಿರೂಪಿಸಿದರು. ಸಹ ಶಿಕ್ಷಕರು ಸಹಕರಿಸಿದರು.

## ವಿದ್ಯುತ್ ವ್ಯತ್ಯಯ

**ಮಂಗಳೂರು:** ಕುಲಶೇಖರ ಉಪಕೇಂದ್ರದಿಂದ ಹೊರಡುವ ಅಡ್ಯಾರ್ ಫೀಡರ್ ಮತ್ತು ಕಣ್ಣೂರು ಫೀಡರ್‌ನಲ್ಲಿ ಕಾಮಗಾರಿ ಹಾಗೂ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಫೆ. 28ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಅಡ್ಯಾರ್, ಅಡ್ಯಾರ್ ಕಟ್ಟೆ, ವಳಚ್ಚಿಲ್, ವಳಚ್ಚಿಲ್ ಪದವು, ಮೇರ್ಲಪದವು, ಮೇರೆಮಜಲು, ತುಪ್ಪೆಕಲ್ಲು, ಕಣ್ಣೂರು, ಬಲ್ಲೂರು, ಕೊಡಕ್ಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

### ಕಡಬ: ಮೆಸ್ಕಾಂ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಬಳಕೆದಾರರ ಜನ ಸಂಪರ್ಕ ಸಭೆ

## ಸಾರ್ವಜನಿಕರಿಂದ ವಿವಿಧ ಬೇಡಿಕೆ ಪ್ರಸ್ತಾಪ, ಸಮಸ್ಯೆಗಳ ಚರ್ಚೆ

**ಕಡಬ:** ಮೆಸ್ಕಾಂ ಕಡಬ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಬಳಕೆದಾರರ ಜನ ಸಂಪರ್ಕ ಸಭೆಯು ಕಡಬ ಮೆಸ್ಕಾಂ ಕಚೇರಿಯ ಸಭಾಂಗಣದಲ್ಲಿ ಗುರುವಾರ ನೆರವೇರಿತು. ಸಾರ್ವಜನಿಕರು ಗುಣಮಟ್ಟದ ವಿದ್ಯುತ್ ಪೂರೈಕೆಯ ನಿಟ್ಟಿನಲ್ಲಿ ವಿವಿಧ ಬೇಡಿಕೆಗಳನ್ನು ಅಧಿಕಾರಿಗಳ ಮುಂದೆ ಮಂಡಿಸಿ ಸಮಸ್ಯೆಗಳ ಕುರಿತು ಚರ್ಚಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಬಳಕೆದಾರರೊಂದಿಗೆ ಸಮಸ್ಯೆಗಳ ಕುರಿತು ಚರ್ಚಿಸಿದ ಮೆಸ್ಕಾಂ ಮಂಗಳೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ, ದಿನದ 24 ಗಂಟೆ ತ್ರೀ ಫೇಸ್ ವಿದ್ಯುತ್ ಒದಗಿಸುವ ಸಲುವಾಗಿ ನೆಕ್ಕಿಲಾಡಿ 110 ಕೆ.ವಿ. ಸ್ಟೇಷನ್ ಒಂದು ವರ್ಷದ ಒಳಗಾಗಿ ಸಿದ್ಧವಾಗಲಿದ್ದು, ಸಂಪೂರ್ಣ ವಿದ್ಯುತ್ ಪೂರೈಕೆ ಸಾಧಿಸಲು ಸಾಧ್ಯವಾಗುತ್ತದೆ. ಅವರೆಗೆ ಆಲಂಕಾರಿನಿಂದ ಲಿಂಕ್ ಲೈನ್ ಮಾಡಿ ವಿದ್ಯುತ್ ವಿತರಿಸುವ ಯೋಜನೆಯಿದ್ದು, ಅನಿಯಮಿತ ವಿದ್ಯುತ್ ಪೂರೈಕೆ ಮಾಡಬಹುದಾಗಿದೆ. ಉಪಕೇಂದ್ರದಿಂದ ಕ್ಯೊಲ-ಆಲಂಕಾರುವರೆಗೆ ಲೈನ್ ಅಳವಡಿಸುವ ಕಾಮಗಾರಿಯ ಟೆಂಡರ್



ಪ್ರಕ್ರಿಯೆಯ ಹಂತದಲ್ಲಿರುತ್ತದೆ. ಆ ಕಾಮಗಾರಿ ಪೂರ್ಣಗೊಳ್ಳುವವರೆಗೆ ವಿದ್ಯುತ್ ವೋಲ್ಟೇಜ್ ಗುಣಮಟ್ಟವನ್ನು ಕಾಯ್ದುಕೊಳ್ಳಲು ಕೃಷಿ ಉದ್ದೇಶಕ್ಕೆ ಸಂಪರ್ಕವನ್ನು ಪಡೆದುಕೊಂಡ ಗ್ರಾಹಕರು ಸೂಕ್ತ ಪ್ರಮಾಣದ ಹಾಗೂ ಗುಣಮಟ್ಟದ ಕೆಪ್ಯಾಸಿಟರ್ ಗಳನ್ನು ಅಳವಡಿಸುವಂತೆ ಸೂಚಿಸಿದರು.

**ಪರಿವರ್ತಕಗಳ ಬದಲಾವಣೆ**

ಕಡಬ ಮೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಜಿ ಕುಮಾರ್ ಮಾತನಾಡಿ, ಈಗಾಗಲೇ ಕಡಬ ಉಪವಿಭಾಗ ವ್ಯಾಪ್ತಿಯಲ್ಲಿ ಒಟ್ಟು 1515 ವಿವಿಧ ಕೆಪಾಸಿಟಿಯ ವಿದ್ಯುತ್ ಪರಿವರ್ತಕಗಳಿದ್ದು, ಕಡಬ, ಬಿಳಿನೆಲೆ, ನೆಲ್ಯಾಡಿ ಮತ್ತು ಆಲಂಕಾರು ಸೇರಿದಂತೆ ಒಟ್ಟು 1000ಕ್ಕೂ ಮಿಕ್ಕಿ ಪರಿವರ್ತಕಗಳ ವಾಹಕ ಬದಲಾವಣೆಯಾಗಿದೆ. ಉಳಿದ ಪರಿವರ್ತಕಗಳ ವಾಹಕ ಬದಲಾವಣೆ ಕೆಲಸವನ್ನು ಹಂತ ಹಂತವಾಗಿ ಮಾಡಲಾಗುವುದು.

**ಸ್ವೀಕೃತ ದೂರಿಗೆ ಸ್ಪಂದಿಸಲು ಸೂಚನೆ**

ಸ್ವೀಕೃತವಾದ ದೂರುಗಳನ್ನು ಆದ್ಯತೆಯ ಮೇರೆಗೆ ಸರಿಪಡಿಸುವಂತೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಅಧಿಕಾರಿಗಳು ಸೂಚಿಸಿದರು. ತಂತಿ ಬದಲಾವಣೆ, ಹೆಚ್ಚುವರಿ ವಿದ್ಯುತ್ ಪರಿವರ್ತಕ ಅಳವಡಿಸುವ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಕಂಪನಿ ನಿಯಮಾನುಸಾರ ಅಂದಾಜು ಪಟ್ಟಿಗಳನ್ನು ಸಲ್ಲಿಸಲು ಸೂಚಿಸಲಾಯಿತು.

ಸರಕಾರದ ಪಂಚ ಗ್ಯಾರಂಟಿ ಯೋಜನೆಯ ಗೃಹ ಜ್ಯೋತಿ ಯೋಜನೆಯಲ್ಲಿ ಕಡಬ ಉಪವಿಭಾಗದ ಶೇ.99 ಗ್ರಾಹಕರು ನೋಂದಾವಣೆ ಮಾಡಿ ಯೋಜನೆಯ ಫಲಾನುಭವಿಗಳಾಗಿರುತ್ತಾರೆ ಎಂದು ಮಾಹಿತಿ ನೀಡಿದರು.

ಪುತ್ತೂರು ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ಎ. ಉಪಸ್ಥಿತರಿದ್ದರು. ಸಹಾಯಕ ಇಂಜಿನಿಯರ್(ತಾಂತ್ರಿಕ) ಅನ್ನಮ್ಮ ಟಿ.ವಿ., ಬಿಳಿನೆಲೆ ಶಾಖಾಧಿಕಾರಿ ಪ್ರಶಾಂತ್, ನೆಲ್ಯಾಡಿ ಶಾಖಾಧಿಕಾರಿ ರಾಮಣ್ಣ ಎಚ್., ಆಲಂಕಾರು ಶಾಖಾಧಿಕಾರಿ ಪ್ರೇಮ್, ಮೇಲ್ವಿಚಾರಕ ಮನೋಜ್ ಅವರು ಪೂರಕ ಮಾಹಿತಿ ನೀಡಿದರು.

ಸಭೆಯಲಿ ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸಯ್ಯದ್ ಮೀರಾ ಸಾಹೇಬ್, ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್ ಪಿ.ಕೆ., ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪೂವಪ್ಪ ನಾಯ್ಕ್, ಕಡಬ ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಂ. ಹನೀಫ್, ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸತೀಶ್, ಪ್ರಮುಖರಾದ ಕೇಶವ ಮಜ್ಜಾರು, ರೋಯಿ ಅಬ್ರಹಾಂ, ಸತೀಶ್ ನ್ಯಾಕ್ ಮೇಲಿನಮನೆ, ಹಂಝ ಕಳಾರ, ಲೋಕಯ್ಯ ಗೌಡ ಕೊಣಾಜೆ, ಸಂತೋಷ್ ಉಳಿಪ್ಪು ಮತ್ತಿತರರು ಸಲಹೆ ಸೂಚನೆಗಳನ್ನು ನೀಡಿದರು.

ಸಹಾಯಕ ಇಂಜಿನಿಯರ್ ಸತ್ಯನಾರಾಯಣ ಸಿ.ಕೆ., ಸ್ವಾಗತಿಸಿ, ಸಹಾಯಕ ಲೆಕ್ಕಾಧಿಕಾರಿ ಕೃಷ್ಣಮೂರ್ತಿ ಕೆ. ವಂದಿಸಿದರು

## ಮೆಸ್ಕಾಂ ವಿಜಿಲೆನ್ಸ್ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲು ಗ್ಯಾರಂಟಿ ಸದಸ್ಯರ ಆಗ್ರಹ

**ಸುಳ್ಯ:** ಸುಳ್ಯ ನಗರದಲ್ಲಿ ಕಾರ್ಯಾಚರಿಸುತ್ತಿರುವ ಎಲ್‌ಡಿ ಬ್ಯಾಂಕ್ ಎಂದೇ ಕರೆಸಿಕೊಳ್ಳುವ ಸುಳ್ಯ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಗೃಹ ಜ್ಯೋತಿಯನ್ನು ದುರ್ಬಳಕೆ ಮಾಡಿಕೊಂಡಿರುವ ಕುರಿತು ಜಾಗೃತ ದಳಕ್ಕೆ ಬಂದಿರುವ ದೂರಿನ ಹಿನ್ನೆಲೆಯಲ್ಲಿ ದಾಳಿ ನಡೆಸಿ ವಿಧಿಸಲಾಗಿರುವ ದಂಡದ ಮೊತ್ತದ ವಿಚಾರದಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಗಂಭೀರ ಚರ್ಚೆಗಳು ನಡೆದವು.

ಬ್ಯಾಂಕಿಗೆ ಕೇವಲ ಒಂದು ವರ್ಷಕ್ಕೆ ರೂ.30 ಸಾವಿರದಂತೆ ದಂಡ ವಿಧಿಸಲಾಗಿದ್ದು ಬಡವರಿಗಾದಲ್ಲಿ ಹೆಚ್ಚು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಬ್ಯಾಂಕ್ ಒಪ್ಪಿಕೊಂಡಂತೆ 2018ರಿಂದಲೇ ದುರ್ಬಳಕೆ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದರು. ಕೇವಲ ಒಂದು ವರ್ಷದ ದಂಡ ಕಟ್ಟಿಸಿರುವುದು ಎಷ್ಟು ಸರಿ ಹಾಗೂ ಈ ಕುರಿತು ಲೋಕಾಯುಕ್ತಕ್ಕೆ ದೂರು ನೀಡಬೇಕು. ಗೃಹ ಜ್ಯೋತಿಯನ್ನು ವಾಣಿಜ್ಯ ಕಟ್ಟಡಕ್ಕೆ ಬಳಸಲಾಗುತ್ತಿತ್ತು. ಇದರ ವಿರುದ್ಧ ದಾಳಿ ನಡೆಸಿ ಮೆಸ್ಕಾಂ ಕೇವಲ ಒಂದು ವರ್ಷಕ್ಕೆ ಮಾತ್ರ ದಂಡ ವಿಧಿಸಿದ್ದು ಉಳಿದ ವರ್ಷಗಳ ದಂಡ ಪಾವತಿಸುವವರು ಯಾರು? ಮೆಸ್ಕಾಂ ಅಧಿಕಾರಿಗಳು ಇದರಲ್ಲಿ ಶಾಮೀಲು ಆಗಿದ್ದಾರೆಯೇ ಎಂಬ ಪ್ರಶ್ನೆ ಸಭೆಯಲ್ಲಿ ಕೇಳಿ ಬಂದಿತು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮಿತಿ



ಸದಸ್ಯ ಭವಾನಿಶಂಕರ್ ಕಲ್ಮಡ್ಕ ಮಾತನಾಡಿ, ಮೆಸ್ಕಾಂ ಇಲಾಖೆಯ ಪ್ರಗತಿ ಪರಿಶೀಲನೆ ಸಂದರ್ಭ ಸುಳ್ಯ ಮೆಸ್ಕಾಂ ಎಇ ಅವರು ಸಾರ್ವಜನಿಕರ ಜೊತೆಗೆ ದುರ್ವರ್ತನೆ ತೋರುತ್ತಿದ್ದು, ಈ ಕುರಿತು ಎಇ ವಿರುದ್ಧ ಕೇರ್ಪಳ ನಿವಾಸಿ ಪೊಲೀಸ್ ದೂರು ನೀಡಿದ್ದರು. ಈ ಕುರಿತು ಎಇ ವಿರುದ್ಧ ನೋಟಿಸ್ ಜಾರಿ ಮಾಡಿ ತಿಳುವಳಿಕೆ ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವಂತೆ ಸಭೆಯಲ್ಲಿ ಸೂಚಿಸಲಾಯಿತು. ಈ ಸಂದರ್ಭ ಸದಸ್ಯ ಕಾರ್ಯದರ್ಶಿ ರಾಜಣ್ಣ ಮಾತನಾಡಿ, ಎಇಯನ್ನು ಕೂಡಲೇ ಕರೆಸಿ ಸೂಚನೆ ನೀಡಿ ಸಾರ್ವಜನಿಕರೊಂದಿಗೆ ಗೌರವಯುತವಾಗಿ ನಡೆಯುವಂತೆ ಹಾಗೂ ಹಿರಿಯ ಅಧಿಕಾರಿಗಳಿಗೆ ಈ ಕುರಿತು ಮಾಹಿತಿ ನೀಡುವಂತೆ ಮೆಸ್ಕಾಂ ಎಇಇ ಗೆ ಸೂಚನೆ ನೀಡಿದರು.

ಸಮಿತಿ ಸಭೆಯಲ್ಲಿ ರಾಜ್ಯ ಸರಕಾರ ಆಹಾರದ ಪ್ರತಿಯೊಬ್ಬ ಬಿಪಿಎಲ್ ಕಾರ್ಡ್‌ದಾರರಿಗೆ ಕಿಟ್ ನೀಡುವ ಬಗ್ಗೆ ಸರಕಾರ ಕೈಗೊಂಡ ಕ್ರಮ ಮತ್ತು ಕಿಟ್‌ಗಳ ಪ್ರಾರಂಭವಾಗಿದೆಯೇ ಎಂದು ಸದಸ್ಯರು ಪ್ರಶ್ನಿಸಿದರು. ಅಲ್ಲದೇ ದ.ಕ. ಜಿಲ್ಲೆಗೆ ಬೆಳ್ತಿಗೆ ಜೊತೆಗೆ ಕುಚ್ಚಲು ಅಕ್ಕಿಯು ಸಮಾನವಾಗಿ ನೀಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು.

## ಮಹಾಕಾಳಿಪಡ್ಪು: 17 ಲಕ್ಷ ರೂ. ವೆಚ್ಚದ ಅಂಗನವಾಡಿಗೆ ಗುದ್ದಲಿಪೂಜೆ



**ಮಂಗಳೂರು:** ಮಹಾನಗರ ಪಾಲಿಕೆ ವ್ಯಾಪ್ತಿಯ 55ನೇ ಅತ್ತಾವರ ವಾರ್ಡಿನ ಮಹಾಕಾಳಿಪಡ್ಪುವಿನಲ್ಲಿ ಸುಮಾರು 17 ಲಕ್ಷ ರೂ. ವೆಚ್ಚದ ಅಂಗನವಾಡಿ ಕೇಂದ್ರ ಕಟ್ಟಡದ ಕಾಮಗಾರಿಯ ಗುದ್ದಲಿ ಪೂಜೆ ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ನಡೆಯಿತು.

ನಂತರ ಮಾತನಾಡಿದ ಶಾಸಕರು, 2022-23ನೇ ಸಾಲಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಅಂಗನವಾಡಿ ಕಟ್ಟಡಗಳ ನಿರ್ಮಾಣ ಕ್ರಿಯಾಯೋಜನೆ ಮೂಲಕ ಮಂಜೂರಾದ ಈ ಕೇಂದ್ರದಲ್ಲಿ ಬೋಧನಾ ಕೊಠಡಿ, ಕಿಚನ್, ಶೌಚಾಲಯ ಸಹಿತ ಸುಸಜ್ಜಿತ ಕಟ್ಟಡ ನಿರ್ಮಾಣವಾಗಲಿದೆ. ಈ ಕಾಮಗಾರಿಗೆ ರಾಜ್ಯದಲ್ಲಿ ನಂತರ ಅಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ತಡೆ ನೀಡಿದ ವಿಳಂಬವಾಗಿತ್ತು. ಇದೀಗ ಅನೇಕ ಬಾರಿ ಮನವಿ ಮಾಡಿದ ನಂತರ ಹಿಂದಿನ ಅನುದಾನ ಮತ್ತೆ ಬಿಡುಗಡೆಗೊಂಡಿದೆ. ಆ ಮೂಲಕ ಇಲ್ಲಿಗೊಂದು ಅಂಗನವಾಡಿ ಕೇಂದ್ರ ಬೇಕೆಂದು ಅನೇಕ ಬಾರಿ ಮನವಿ ಮಾಡಿದ್ದ ಪಾಲಿಕೆ ಮಾಜಿ ಸದಸ್ಯ ಶೈಲೇಶ್ ಶೆಟ್ಟಿಯವರ ಪ್ರಯತ್ನವೂ ಸಹಕಾರಗೊಳ್ಳಲಿದೆ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ವೇತಾ, ಪ್ರಮುಖರಾದ ಪುಷ್ಪರಾಜ್ ಶೆಟ್ಟಿ, ನಾರಾಯಣ ಶೆಟ್ಟಿ, ಪುಂಡಲೀಕ ಸುವರ್ಣ, ರಾಜರತ್ನ ಸನಿಲ್, ದೇವದಾಸ್ ಶೆಟ್ಟಿ, ರಾಜಗೋಪಾಲ್, ಪ್ರಮೋದ್ ಕೊಟ್ಟಾರಿ, ನಿತಿನ್, ಕಿಶನ್, ಅಶೋಕ್, ದಿನೇಶ್, ಪೂಜಾ, ಉಷಾ, ಸುಂದರಿ, ಪ್ರೇಮಲತಾ ನಾಯ್ಕ್, ಲೋಲಾಕ್ಷಿ, ಯೋಗೀಶ್, ಪ್ರವೀಣ್ ಪಟ್ನ, ಮಧು ಕುಲಾಲ್, ನಾರಾಯಣ ಕುಂದರ್, ಪಾಂಡೇಶ್ವರ ವಲಯದ ಮೇಲ್ವಿಚಾರಕಿ ಅಶ್ವಿನಿ, ಅನುಪಮಾ, ಮಹಾಕಾಳಿ ಪಡ್ಪು ಅಂಗನವಾಡಿ ಶಿಕ್ಷಕಿ ಸುಮಿತ್ರ ಶೆಟ್ಟಿ, ಸಹಾಯಕಿ ರೇಖಾ, ಪ್ರಮುಖರಾದ ಜಯಮಾಲಾ, ನಜ್ಮಾ, ಭಾಸ್ಕರ, ವೆಂಕಪ್ಪ, ಅನ್ವರ್, ಮುಜೀಬ್, ಸಮದ್, ರಾಮಚಂದ್ರ, ಸುಂದರಿ, ಹೊನ್ನಮ್ಮ, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

## ಸಂಕೋಡಿ: ಪುನರ್‌ಪ್ರತಿಷ್ಠೆ ಬ್ರಹ್ಮ ಕಲಶಾಭಿಷೇಕ , ಧಾರ್ಮಿಕ ಸಭೆ



**ಬಂಟ್ವಾಳ:** ಹಿಂದುಗಳ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲೂ ಪ್ರಯತ್ನಿಸಬೇಕು ಎಂದು ಮಂಗಳೂರು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಬುಧವಾರ ರಾತ್ರಿ ಬಂಟ್ವಾಳ ತಾಲೂಕಿನ ಬೋಳಂತೂರು ಗ್ರಾಮದ ಸಂಕೋಡಿ ಶ್ರೀ ನಾಗಬ್ರಹ್ಮ ರಕ್ತೇಶ್ವರಿ ಸಾನಿಧ್ಯ ಪುನರ್ ಪ್ರತಿಷ್ಠೆ ಬ್ರಹ್ಮ ಕಳಶಾಭಿಷೇಕ ಮತ್ತು ಯಕ್ಷಗಾನ ಬಯಲಾಟದ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು. ಅಧ್ಯಕ್ಷತೆಯನ್ನು ಶ್ರೀ ನಾಗ ಬ್ರಹ್ಮ ರಕ್ತೇಶ್ವರಿ ಸಾನಿಧ್ಯದ ಸಮಿತಿ ಅಧ್ಯಕ್ಷ ಸೀತಾರಾಮಚಂದ್ರ ಆಚಾರ್ಯ ದಂಡೆಮಾರು ವಹಿಸಿದ್ದರು. ಬ್ರಹ್ಮಶ್ರೀ ಬಡಾಜೆಬೀಡು ಗೋಪಾಲಕೃಷ್ಣ ತಂತ್ರಿಗಳು, ಸೀತಾರಾಮ ಅಡ್ಯಾನಂತಾಯ ಬೋಳಂತೂರು ಗುತ್ತು, ಬಿಜೆಪಿ ಬಂಟ್ವಾಳ ಮಂಡಲ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್, ಪುಳಿಂಚ ಸೇವಾ ಪ್ರತಿಷ್ಠಾನದ ಅಧ್ಯಕ್ಷ, ವಕೀಲ ಶ್ರೀಧರ್ ಶೆಟ್ಟಿ ಪುಳಿಂಚ, ಬೀಡಿ ಉದ್ಯಮಿ ಸುಧಾಕರ್ ಆಚಾರ್ಯ ಮಾರ್ನಬೈಲ್, ಕಲ್ಲಡ್ಕ ಗೇರುಕಟ್ಟೆ ಉಮಾಶಿವ ಕ್ಷೇತ್ರ ಅಧ್ಯಕ್ಷ ಈಶ್ವರ ಭಟ್ ರಾಕೋಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿಟ್ಲ ಯೋಜನಾಧಿಕಾರಿ ಸುರೇಶ್ ಗೌಡ, ರಾಮಚಂದ್ರ ಆಚಾರ್ಯ ದಂಡೆಮಾರು ನಾರಾಯಣ ಸಫಲ್ಯ ಸಂಕೋಡಿ, ಮಂಚಿಗುತ್ತು ಗಡಿಕಾರರಾದ ರವಿ, ದೈವನರ್ತಕ ಕಾಂತಣ್ಣ ಕಾಂತಾಡಿ, ಹರೀಶ್ ಸಫಲ್ಯ ಸಂಕೋಡಿ, ಶ್‌ರೀಕಾಂತ್ ಭಟ್, ಸೂರ್ಯಕಾಂತ ಆಚಾರ್ಯ ದಂಡೆಮಾರು, ಚೇತನ್ ಸಫಲ್ಯ ಸಂಕೋಡಿ, ಪ್ರಮೋದ್ ಆಚಾರ್ಯ ದಂಡೆಮಾರು ಇದ್ದರು.

ಬೆಳಿಗ್ಗೆ ಬಡಾಜೆಬಿಡು ಶ್ರೀ ಗೋಪಾಲಕೃಷ್ಣ ತಂತ್ರಿಗಳ ವಿವಿಧ ವೈದಿಕ ಕಾರ್ಯಕ್ರಮಗಳೊಂದಿಗೆ ಶ್ರೀ ನಾಗಬ್ರಹ್ಮ ರಕ್ತೇಶ್ವರಿ ಸಾನಿಧ್ಯದ ಪುನರ್ ಪ್ರತಿಷ್ಠ ಬ್ರಹ್ಮಕಲಶಾಭಿಷೇಕ, ಆಶ್ಲೇಷ ಬಲಿ, ನಾಗತಂಬಲ, ಭಜನೆ ಜರಗಿತು. ಸೀತಾರಾಮಚಂದ್ರ ಆಚಾರ್ಯ ದಂಡೆಮಾರು ದಂಪತಿಗಳನ್ನು ಅಭಿನಂದಿಸಲಾಯಿತು. ಸೃಜನ್ಯ ಮತ್ತು ನಿವ್ಯ ಪ್ರಾರ್ಥಿಸಿ, ಕಲ್ಲಡ್ಕ ರೈತರ ಸೇವಾ ಸಹಕಾರಿ ಸಂಘದ ನಿರ್ದೇಶಕ ಜಯರಾಮ್ ರೈ ಪ್ರಾಸ್ತಾವಿಕದೊಂದಿಗೆ ಸ್ವಾಗತಿಸಿ, ರಾಜೇಶ್ ಕೊಟ್ಟಾರಿ ಕಲ್ಲಡ್ಕ ನಿರೂಪಿಸಿದರು. ಸಂಜೆ ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ ಆರನೇ ಮೇಳದಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಜರಗಿತು.

## ಉಜಿರೆ ಬ್ರಹ್ಮಕಲಶ ಆಹಾರ, ಸ್ವಯಂ ಸೇವಕ ಸಮಿತಿ ಸಮಾಲೋಚನಾ ಸಭೆ



**ಬೆಳ್ತಂಗಡಿ:** ಆಹಾರ ವಿತರಣೆ ಎಲ್ಲ ಕಾರ್ಯಕ್ರಮಗಳ ಮೂರ್ತರೂಪ. ರಾಮಚಂದ್ರ ಶೆಟ್ಟಿ ಮತ್ತು ಅರುಣಕುಮಾರ್ ನೇತೃತ್ವದಲ್ಲಿ ಬ್ರಹ್ಮಕಲಶೋತ್ಸವದ ಸಾರ್ವಜನಿಕ ಅನ್ನಸಂತರ್ಪಣೆ ಸ್ವಯಂ ಸೇವಕರ ನೆರವಿನಿಂದ ನಡೆಯಲಿದೆ ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ಕೃಷ್ಣ ಪಡುವೆಟ್ನಾಯ ಹೇಳಿದರು.

ಉಜಿರೆ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆದ ಬ್ರಹ್ಮಕಲಶೋತ್ಸವದ ಆಹಾರ ಮತ್ತು ಸ್ವಯಂಸೇವಕ ಸಮಿತಿಯ ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ಆಹಾರ ಸಮಿತಿ ಸಂಚಾಲಕ ರಾಮ ಚಂದ್ರ ಶೆಟ್ಟಿ ಮಾಹಿತಿ ನೀಡಿ 'ಸುರುಚಿ ಪಾಕಶಾಲೆ'ಯಲ್ಲಿ 30 ಬಾಣಸಿಗರು ಪದಾರ್ಥ ಸಿದ್ಧಪಡಿಸಿ, 'ಸುಪ್ರಸಾದ' ಭೋಜನ ಶಾಲೆಯಲ್ಲಿ ಸುಮಾರು 300 ಸ್ವಯಂಸೇವಕರು 8 ಕೌಂಟರ್ ಗಳಲ್ಲಿ ಭಕ್ತರಿಗೆ ಏಕ ಕಾಲದಲ್ಲಿ 2ರಿಂದ 2500 ಮಂದಿಗೆ ಅನ್ನಪ್ರಸಾದ ವಿತರಿಸಲಿದ್ದಾರೆ. ಮಧ್ಯಾಹ್ನ 12 ಗಂಟೆ ಹಾಗೂ ರಾತ್ರಿ 7 ಗಂಟೆಗೆ ಅನ್ನಪ್ರಸಾದ ವಿತರಣೆ ಆರಂಭಗೊಳ್ಳಲಿದೆ. ಜಯಂತ ಶೆಟ್ಟಿ ನೇತೃತ್ವದಲ್ಲಿ ವಿಐಪಿ ವಿಭಾಗದಲ್ಲಿ ಗಣ್ಯ ಅತಿಥಿಗಳಿಗೆ, ದಾನಿಗಳಿಗೆ ಅನ್ನಪ್ರಸಾದ ವಿತರಣೆ ನಡೆಯಲಿದೆ. ಬೈಲುವಾರು ಸ್ವಯಂಸೇವಕರು ಮುಂಚಿತವಾಗಿ ಬಂದು ಸಿದ್ಧಪಡಿಸಿಕೊಳ್ಳಬೇಕು ಎಂದರು.

ಸ್ವಯಂಸೇವಕರ ಸಮಿತಿಯ ಶಿವಪ್ರಸಾದ ಸುರ್ಯ ನಿರೂಪಿಸಿದರು. ಅರುಣಕುಮಾರ್ ಎಂ. ಎಸ್., ಸಂತೋಷ್ ಅತ್ತಾಜೆ ,ವನಿತಾ ಶೆಟ್ಟಿ, ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಯಶೋಧರ ಮೊದಲಾದವರು ಉಪಸ್ಥಿತರಿದ್ದು ಸಲಹೆ, ಸೂಚನೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲಾಯಿತು.

## ಇಂದು, ನಾಳೆ ಓಂ ಶ್ರೀಗಣೇಶ ಯುವಕ ಮಂಡಲದ ನೂತನ ಕಟ್ಟಡ ಉದ್ಘಾಟನೆ

**ಉಳ್ಳಾಲ:** ಪಜೀರು ಪಾಣೆಲದ ಓಂ ಶ್ರೀ ಗಣೇಶ ಯುವಕ ಮಂಡಲ, ಮಹಿಳಾ ಮಂಡಲ, ಭಜನಾ ಮಂಡಳಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಫೆ. 27, 28ರಂದು ನಡೆಯಲಿದೆ ಎಂದು ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷ ಸಂತೋಷ್ ರೈ ಬೋಳಿಯಾರ್ ತಿಳಿಸಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಕಾರ್ಯಕ್ರಮದ ಮಾಹಿತಿ ನೀಡಿದರು. ಸಂಘದ ಅಧ್ಯಕ್ಷ ಜಗದೀಶ್ ಕೋಟ್ಯಾನ್ ಮಾತನಾಡಿ ಫೆ. 27ರಂದು ಸಂಜೆ 4ಕ್ಕೆ ಬೋಳಿಯಾರು ಪಡೀಲಿನಿಂದ ನೂತನ ಕಟ್ಟಡದವರೆಗೆ ಭವ್ಯ ಶೋಭಾಯಾತ್ರೆ ನಡೆಯಲಿದೆ. ಸಂಜೆ 6 ಕ್ಕೆ ನೂತನ ಕಟ್ಟಡದಲ್ಲಿ ಉದಯ ಗುರು ಸ್ವಾಮಿ ಮಂಜೇಶ್ವರ ದೀಪ ಪ್ರಜ್ವಲನೆ ನಡೆಸಲಿದ್ದಾರೆ. ಭಗವಧ್ವಜ ಅನಾವರಣವನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸೇಸಪ್ಪ ಟೈಲರ್ ಸುದರ್ಶನನಗರ ಪಜೀರು ನಡೆಸಲಿದ್ದಾರೆ. ಸಂಜೆ 6.30ರ ನಂತರ ಧಾರ್ಮಿಕ ಸಭೆ, ಸಾಮೂಹಿಕ ಪ್ರಾರ್ಥನೆ, ರಾಕ್ಷೋಘ್ನ ಹೋಮ, ವಾಸ್ತು ಹೋಮ ನಡೆಯಲಿದೆ. ರಾತ್ರಿ 8ಕ್ಕೆ ದೇವೆರ್ ಬರೆತಿನ ಹಣೆಬರಹ ತುಳು ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಸಂಜೆ ಕೀರ್ತಿಶೇಷ ಪದ್ಮಾವತಿ ಕೋಚಣ್ಣ ಆಳ್ವ ಸ್ಮಾರಕ ವೇದಿಕೆಯಲ್ಲಿ ನಡೆಯಲಿರುವ ಸಭೆಯಲ್ಲಿ ಓಂ ಶ್ರೀ ಗಣೇಶ ಯುವಕ ಮಂಡಲದ ಅಧ್ಯಕ್ಷ ಜಗದೀಶ್ ಕೋಟ್ಯಾನ್ ಪಾಣೇಲ ಅಧ್ಯಕ್ಷತೆ ವಹಿಸಲಿದ್ದಾರೆ. ದಿ. ಮೈಸೂರು ಎಲೆಕ್ಟ್ರಿಕಲ್ಸ್ ಇಂಡಸ್ಟ್ರೀಸ್‌ನ ಮಾಜಿ ಅಧ್ಯಕ್ಷ ಸಂತೋಷ್ ರೈ ಬೋಳಿಯರು ದೀಪ ಪ್ರಜ್ವಲನೆ ನಡೆಸಲಿದೆ ಎಂದರು.

ಫೆ.28ರಂದು ಬೆಳಿಗ್ಗೆ 8ಕ್ಕೆ ಗಣಪತಿ ಹೋಮ, ದೀಪ ಪ್ರಜ್ವಲನೆ ಬಳಿಕ ಭಜನೆ ನಡೆಯಲಿದೆ. ಬೆಳಿಗ್ಗೆ 11.33ಕ್ಕೆ ಕಟ್ಟಡ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಮಧ್ಯಾಹ್ನ 3 ಗಂಟೆಗೆ ಸತ್ಯನಾರಾಯಣ ಪೂಜೆ ನಡೆಯಲಿದೆ. ಸಂಜೆ ಸಭೆಯ ಅಧ್ಯಕ್ಷತೆಯನ್ನು ಸಂತೋಷ್ ಕುಮಾರ್ ರೈ ಬೋಳಿಯಾರು ವಹಿಸಲಿದ್ದಾರೆ. ಸಂಸದ ಕ್ಯಾ.ಬ್ರಿಜೇಶ್ ಚೌಟ ಉದ್ಘಾಟಿಸುವರು. ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ದೀಪ ಪ್ರಜ್ವಲಿಸಲಿದ್ದಾರೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ನಿತಿನ್ ಪೂಂಜ ಪಾಣೇಲ ಬರಿಕೆ ಇದ್ದರು.

## ಮಲ್ಯರಮಠ ಶ್ರೀ ವೆಂಕಟರಮಣ ಬ್ರಹ್ಮರಥೋತ್ಸವ: ಅವಭೃತ ಉತ್ಸವ



**ಕುಂದಾಪುರ:** 360 ವರ್ಷ ಪುರಾತನ ವಾದ ಗಂಗೊಳ್ಳಿಯ ಮಲ್ಯರ ಮಠ ಶ್ರೀ ವೆಂಕಟರಮಣ ದೇವಸ್ಥಾನ ದಲ್ಲಿ ಕಾಲಂಪ್ರತಿ ಜರಗುವ ಬ್ರಹ್ಮರಥೋತ್ಸವ ಧಾರ್ಮಿಕ ವಿಧಿ ವಿಧಾನಗಳು ಧ್ವಜಾವರೋಹಣ ದೊಂದಿಗೆ ಬುಧವಾರ ಮುಕ್ತಾಯವಾಯಿತು.

ಬುಧವಾರ ಸಂಜೆ ಅವಭೃತ ಉತ್ಸವ, ಧ್ವಜ ಅವರೋಹಣ, ಶ್ರೀದೇವರಿಗೆ ವಿಶೇಷ ಪೂಜೆ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ಶ್ರೀಪಾದ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ದೇವಳದ ಪ್ರಧಾನ ಅರ್ಚಕ ಎಸ್. ವೆಂಕಟರಮಣ ಆಚಾರ್ಯ, ದೇವಳದ ತಾಂತ್ರಿಕ ಜಿ. ವಸಂತ ಭಟ್ ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ನಡೆಯಿತು. ರಾತ್ರಿ ಪಂಚ ಗಂಗಾವಳಿ ನದಿಯಲ್ಲಿ ಶ್ರೀ ದೇವರ ನಿರಾಟ ಉತ್ಸವ ಜರುಗಿತು. ಆಡಳಿತ ಮಂಡಳಿ ಸದಸ್ಯರು, ಅರ್ಚಕರು, ಪುರೋಹಿತರು, ಸಮಾಜ ಉಪಸ್ಥಿತರಿದ್ದರು.

## ಮಾ. 7, 8ರಂದು ನಾವೂರಿನಲ್ಲಿ ಮೂಡೂರು ಪಡೂರು ಜೋಡುಕರೆ ಕಂಬಳ

**ಬಂಟ್ವಾಳ:** ಅವಿಭಜಿತ ದ.ಕ. ಜಿಲ್ಲೆಯ ಕಂಬಳಕೂಟದಲ್ಲಿಯೇ ವಿಶೇಷ ಮೆರಗು ಮತ್ತು ಹೊಸತನಕ್ಕೆ ಸಾಕ್ಷಿಯಾಗುತ್ತಿರುವ 'ಬಂಟ್ವಾಳ ಕಂಬಳ' ಎಂದೇ ಪ್ರಖ್ಯಾತಿಯ ಮೂಡೂರು ಪಡೂರು ಜೋಡುಕರೆ ಕಂಬಳ ಮಾ. 7, 8ರಂದು ಬಂಟ್ವಾಳ ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ನಡೆಯಲಿದ್ದು, ನಡೆಯಲಿದ್ದು, ಸಂಜೆಯ ಸಭಾ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಲಿದ್ದಾರೆ ಎಂದು ಕಂಬಳ ಸಮಿತಿಯ ಗೌರವಾಧ್ಯಕ್ಷ,ಮಾಜಿ ಸಚಿವ ಬಿ ರಮಾನಾಥ ರೈ ಅವರು ತಿಳಿಸಿದ್ದಾರೆ.

ಗುರುವಾರ ಬಿ.ಸಿ.ರೋಡಿನಲ್ಲಿ ಕಂಬಳದ ಆಮಂತ್ರಣಪತ್ರ ಬಿಡುಗಡೆಗೊಳಿಸಿ ಬಳಿಕ ಮಾತನಾಡಿದ ಅವರು, ಬೆಳಗ್ಗೆ 8.45ಕ್ಕೆ ಕಂಬಳದ ಉದ್ಘಾಟನೆಯನ್ನು ಸೋಲೂರು ಮಹಾಸಂಸ್ಥಾನದ ಶ್ರೀ ವಿಖ್ಯಾತಾನಂದ ಸ್ವಾಮೀಜಿ ನೆರವೇರಿಸಲಿದ್ದು,



ಬಾರ್ಕೂರು ಮಹಾಸಂಸ್ಥಾನದ ಶ್‌ರೀ ವಿದ್ಯಾವಾಚಸ್ಪತಿ ಡಾ. ಸಂತೋಷ್ ಗುರೂಜಿ, ಅಳದಂಗಡಿ ಅರಮನೆ ತಿಮ್ಮಣ್ಣರಸರಾದ ಡಾ. ಪದ್ಮಪ್ರಸಾದ ಅಜಿಲ, ಅಲ್ಲಿಪಾದೆ ಚರ್ಚ್ ಧರ್ಮಗುರು ವಂ.ರಾಬರ್ಟ್ ಡಿಸೋಜ ಭಾಗವಹಿಸಲಿದ್ದಾರೆ ಎಂದರು.

ಸಂಜೆ 6.30ಕ್ಕೆ ಸಭಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಉಪಸ್ಥಿತರಿರುವರು. ಸಚಿವರಾದ ದಿನೇಶ್ ಗುಂಡೂರಾವ್, ಡಾ. ಜಿ. ಪರಮೇಶ್ವರ್, ರಾಮಲಿಂಗಾರೆಡ್ಡಿ ಸಹಿತ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರದ ಗಣ್ಯರು ಭಾಗವಹಿಸುವರು ಎಂದರು.

ಮೂಡೂರು- ಪಡೂರು ಕಂಬಳ ವಿಶೇಷತೆಯ ಜೊತೆ ಹೊಸತನದೊಂದಿಗೆ ಕಳೆದ 15 ವರ್ಷಗಳಿಂದ ನಡೆಯುತ್ತಾ ಬಂದಿವೆ ಬಹುಬೇಡಿಕೆಯ ಸಿನಿಮಾತಾರೆಯರನ್ನು ಕಂಬಳದ ಮೂಲಕ ಪರಿಚಯಿಸಲಾಗಿದೆ. ರಾಜಕೀಯ ಸಾಮಾಜಿಕ ನೇತಾರರು ಕಂಬಳಕ್ಕೆ ಆಗಮಿಸಿ ಮೆರುಗು ನೀಡಿದ್ದಾರೆ. ಜಿಲ್ಲೆಯಲ್ಲೇ ಮೂಡೂರು-ಪಡೂರು ಕಂಬಳ ಆಯೋಜನೆಯಲ್ಲಿ ನಂಬರ್ ವನ್ ಸ್ಥಾನದಲ್ಲಿದೆ.ಬಂಟ್ವಾಳ ಕಂಬಳವನ್ನು ಹಬ್ಬದ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದರು.

**ಆಹಾರ ಮೇಳ**

ಈ ಬಾರಿ ಕಂಬಳದಲ್ಲಿ 'ಆಹಾರ ಮೇಳ' ವಿಶೇಷತೆಗಳಲ್ಲಿ ಒಂದಾಗಿದ್ದು, ಪಾರ್ಕಿಂಗ್‌ಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ವಾಹನಗಳ ಓಡಾಟಕ್ಕೆ ಸಮಸ್ಯೆಯಾಗದಂತೆ ಪಾಂಗೋಡಿ ಎಂಬಲ್ಲಿ ಹೊಸರಸ್ತೆಯನ್ನು ನಿರ್ಮಿಸಲಾಗಿದೆ. ಶಾಶ್ವತವಾದ ಭವ್ಯವಾದ ವೇದಿಕೆಯನ್ನು ನಿರ್ಮಿಸಲಾಗಿದೆ ಎಂದು ರಮಾನಾಥ ರೈ ವಿವರಿಸಿದರು.

ಕಂಬಳದ ಅಧ್ಯಕ್ಷ ಪಿಯೂಸ್ ಎಲ್ ರೊಡ್ರಿಗಸ್ ಮಾತನಾಡಿ ಸಮಿತಿಯ ಗೌರವಾಧ್ಯಕ್ಷ ರಮಾನಾಥ ರೈ ಅವರ ಪರಿಕಲ್ಪನೆಯಂತೆ ಕಳೆದ 15 ವರ್ಷಗಳಿಂದ ಕಂಬಳವನ್ನು ಆಯೋಜಿಸಲಾಗುತ್ತಿದೆ. ಲಕ್ಷಾಂತರ ಮಂದಿ ಕಂಬಳ ವೀಕ್ಷಕರಿದ್ದು, ಇತ್ತೀಚೆಗೆ ಹೆಣ್ಮಕ್ಕಳು ಕೂಡ ಕಂಬಳದ ಆಸಕ್ತಿಯನ್ನು ಹೊಂದಿದ್ದಾರೆ. ಬಂಟ್ವಾಳ ಕಂಬಳದಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ಗ್ಯಾಲರಿ ವ್ಯವಸ್ಥೆಯನ್ನುಮಾಡಲಾಗುತ್ತಿದೆ ಎಂದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಜೀವ ಶೆಟ್ಟಿ ಎಡ್ತೂರು, ಕಾರ್ಯಾಧ್ಯಕ್ಷ ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಸಂಚಾಲಕ ಪದ್ಮಶೇಖರ್ ಜೈನ್,ಸಮಿತಿ ಪದಾಧಿಕಾರಿಗಳಾದ ಬೇಬಿಕುಂದರ್, ಚಂದ್ರಶೇಖರ ಭಂಡಾರಿ, ಬಾಲಕೃಷ್ಣ ಅಂಚನ್, ಸುದರ್ಶನ ಜೈನ್, ಅಬ್ಬಾಸ್ ಆಲಿ, ಸುದೀಪ್ ಕುಮಾರ್ ಶೆಟ್ಟಿ, ನವಾಜ್ ಬಡಕಬೈಲು,ಫಿಲಿಫ್ ಫ್ರೇಂಕ್, ಮಹಮ್ಮದ್ ನಂದಾವರ, ಮೋಹನ್ ಶೆಟ್ಟಿ ಇದ್ದರು.

## ಸುತ್ತ ಮುತ್ತ

### ಇಂದು ವಿದ್ಯುತ್ ವ್ಯತ್ಯಯ

**ಮಂಗಳೂರು:** ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ, ಜೆ.ಎಂ. ರೋಡ್, ಭಟ್ರಬೆಟ್ಟು, ವಿಜಯನಗರ, ಆಲ್ವಿನ್ ಗೊದ್ರೇಜ್, ಆದರ್ಶನಗರ, ಹೇಮಾವತಿನಗರ, ತುಂಗನಗರ, ಜಲ್ಲಿಗುಡ್ಡೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.27ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

### ಕೂತ್ಕುಂಜದಲ್ಲಿ ಅರೆ ಭಾಷೆ ನಾಟಕ 'ಅಪ್ಪೆ' ಪ್ರದರ್ಶನ

**ಸುಬ್ರಹ್ಮಣ್ಯ:** ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕಾಫಿಕೃಪಾ ಕಟ್ಟಡ ಮತ್ತು ಶಿವಾಜಿ ಯುವಕ ಮಂಡಲ ಕೂತ್ಕುಂಜ, ಪಂಜ ಇವರ ಆಶ್ರಯದಲ್ಲಿ ಕೂತ್ಕುಂಜದ ಅಟಲ್ ಜೀ ಕ್ರೀಡಾಂಗಣದಲ್ಲಿ ಸೋಮವಾರ ಅರೆಭಾಷೆ ನಾಟಕ 'ಅಪ್ಪೆ' ಹಾಗೂ ಗಾನ ವೈಭವ ನಡೆಯಿತು. ಸಂಚಾಲಕ ಚಂದ್ರಶೇಖರ ಪೇರಾಲು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಪಂಜ ಪರಿವಾರ ಶ್ರೀ ಪಂಚಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರು ಶುಭ ಹಾರೈಸಿದರು. ನಾಟಕ ನಿರ್ದೇಶಕ ಯೋಗೀಶ್ ಉರುಬೈಲು, ಪ್ರಮುಖರಾದ ದೇವಿಪ್ರಸಾದ್ ಜಾಕೆ, ದೇವಿಪ್ರಸಾದ್ ಚಿಕ್ಮುಳಿ, ನಾಗೇಶ್ ಕಿನ್ನಿಕುಮೇರಿ, ನೇತ್ರಾವತಿ ಕಲ್ಲಾಜೆ, ಶಶಿಧರ ಪಳಂಗಾಯ, ಯೋಗೀಶ್ ಚಿದ್ಗಲ್, ಕಾರ್ಯಪ್ಪ ಗೌಡ ಚಿದ್ಗಲ್, ಲಿಖಿತ್ ಅಜ್ಜಿಹಿತ್ಲು, ಜಯರಾಮ ಕಲ್ಲಾಜೆ ವೇದಿಕೆಯಲ್ಲಿದ್ದರು.

### ಮಾ.1ರಂದು ಆರೋಗ್ಯ ಶಿಬಿರ

**ಬಂಟ್ವಾಳ:** ಬಂಟರ ಸಂಘ ಬಂಟ್ವಾಳ ತಾಲೂಕು ಇದರ ಮಹಿಳಾ ವಿಭಾಗದ ವತಿಯಿಂದ ಎ.ಜೆ ಆಸ್ಪತ್ರೆ ಮತ್ತು ರಿಸರ್ಚ್ ಸೆಂಟರ್ ಮಂಗಳೂರು ಹಾಗೂ ಎ.ಜೆ ವೈದ್ಯಕೀಯ ಮಹಾವಿದ್ಯಾಲಯ ಮಂಗಳೂರು, ಕ್ಯಾನ್ಸರ್ ಸ್ಪೆಷಾಲಿಟಿ ಆಸ್ಪತ್ರೆ ಪಂಪ್ ವೆಲ್ ಮಂಗಳೂರು, ಎನ್‌ಜಿ ವರ್ಲ್ಡ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು ಇವರ ಸಹಯೋಗದೊಂದಿಗೆ ಬೃಹತ್ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ಕ್ಯಾನ್ಸರ್ ಬಗ್ಗೆ ಜಾಗೃತಿ ಮತ್ತು ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ ಮಾ.1ಕ್ಕೆ ಬ್ರಹ್ಮರಕೂಟ್ಲುವಿನಲ್ಲಿರುವ ಬಂಟವಾಳದ ಬಂಟರ ಭವನದಲ್ಲಿ ನಡೆಯಲಿದೆ. ಬೆಳಗ್ಗೆ 9ರಿಂದ ಮಧ್ಯಾಹ್ನ 1 ರವರೆಗೆ ನಡೆಯುವ ಈ ಶಿಬಿರದಲ್ಲಿ ಹೃದ್ರೋಗ ಕ್ಯಾನ್ಸರ್, ಎಲುಬು ಮತ್ತು ಕೀಲು, ಸ್ತ್ರೀರೋಗ, ದಂತ, ಕಣ್ಣಿನ ತಪಾಸಣೆ, ಇ.ಸಿ.ಜಿ, ಬಿ.ಪಿ, ಶುಗರ್ ಹಾಗೂ ಸಾಮಾನ್ಯ ತಪಾಸಣೆ,ಉಚಿತ ಕನ್ನಡಕ ವಿತರಣೆ, ರಕ್ತದಾನ ಶಿಬಿರವು ಇರಲಿದೆ. ರಕ್ತದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಕ್ತದಾನ ಮಾಡುವಂತೆ ವಿನಂತಿಸಲಾಗಿದೆ. ಸಾರ್ವಜನಿಕರು ಕೂಡ ಈ ವೈದ್ಯಕೀಯ ಶಿಬಿರದ ಸದುಪಯೋಗ ಪಡೆಯುವಂತೆ ಕೋರಲಾಗಿದೆ. ಕ್ಯಾನ್ಸರ್ ತಜ್ಞ ಡಾ. ದಿವ್ಯ ಜ್ಯೋತಿ ಶಿಬಿರ ಉದ್ಘಾಟಿಸಲಿದ್ದು, ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಸಭಾಧ್ಯಕ್ಷತೆ ವಹಿಸಲಿದ್ದಾರೆ. ಮಹಿಳಾ ಘಟಕದ ಅಧ್ಯಕ್ಷೆ ಸುಜಾತ ಪಿ ರೈ. ಹಾಗೂ ತಜ್ಞ ವೈದ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಹರಿಹರ: ಶ್ರೀ ದೇವಳದಲ್ಲಿ ದೈವಗಳ ನೇಮ

**ಸುಬ್ರಹ್ಮಣ್ಯ:** ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಜಾತ್ರೋತ್ಸವ ಸಂಪನ್ನವಾದ ಬಳಿಕ ದೈವಗಳ ನೇಮೋತ್ಸವವು ಭಾನುವಾರ ಶ್ರದ್ಧಾ ಭಕ್ತಿಯಿಂದ ನೆರವೇರಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸುಬ್ರಹ್ಮಣ್ಯ ಭಟ್, ಕೆ. ದಯಾನಂದ ಕಟ್ಟೆಮನೆ, ಗುಣವರ್ಧನ ಕೆದಿಲ, ಕೆ. ಬೆಳ್ಯಪ್ಪ ಗೌಡ ಖಂಡಿಗೆ, ವಿನೂಪ್ ಮಲ್ಲಾರ, ಕೇಶವ ಕೆ. ಕೊಪ್ಪತ್ತಡ್ಕ, ಸವಿತಾ ಕೆ. ಕಟ್ಟೆಮನೆ, ಪದ್ಮಿನಿ ಎನ್.ಜಿ. ಉಪಸ್ಥಿತರಿದ್ದರು.

### ಸಚಿವರಿಗೆ ಮನವಿ

**ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಘಟಕದ ವಿಶೇಷಾಧಿಕಾರಿ ಡಾ. ಎನ್. ನರಸಿಂಹಯ್ಯ ಮಾನ್ಯ ಕುಲಪತಿಗಳಾದ ಪ್ರೊ. ಧರ್ಮ ರವರ ಸೂಚನೆ ಮೇರೆಗೆ ಕರ್ನಾಟಕ ಮಾನ್ಯಸಮಾಜ ಕಲ್ಯಾಣ ಸಚಿವರಾದ ಡಾ. ಎಚ್ ಸಿ ಮಹದೇವಪ್ಪ ರನ್ನು ಬೆಂಗಳೂರಿನ ಅವರ ಗೃಹ ಕಚೇರಿಯಲ್ಲಿ ಭೇಟಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಅಂಬೇಡ್ಕರ್ ಭವನ ನಿರ್ಮಾಣಕ್ಕೆ' ಸುಮಾರು 5 ಕೋಟಿ ಅನುದಾನ ಬಿಡುಗಡೆಗೆ ಮನವಿ ಸಲ್ಲಿಸಿದರು.



## ಬೆಳ್ತಂಗಡಿ ಪರಿಶಿಷ್ಟ ಜಾತಿ, ಪಂಗಡಗಳ ಕುಂದುಕೊರತೆ ಸಭೆಯಲ್ಲಿ ದಲಿತ ಮುಖಂಡರ ಆಗ್ರಹ

# ಶ್ರೀಧರ್ ಸಾವು ಪ್ರಕರಣ ಉನ್ನತ ಮಟ್ಟದ ತನಿಖೆಯಾಗಲಿ

**ಬೆಳ್ತಂಗಡಿ:** ಶಿಬಾಜೆಯ ಎಸ್ಟೇಟ್‌ನಲ್ಲಿ ನಡೆದ ಶ್ರೀಧರ್ ಮುಗೇರ ಕೊಲೆ ಪ್ರಕರಣವನ್ನು ಎಸ್ ಐಟಿ ತನಿಖೆ ನಡೆಸಲು ಅವಕಾಶ ಕಲ್ಪಿಸಿರುವುದನ್ನು ಸ್ವಾಗತಾರ್ಹ. ವರ್ಷಗಳ ಹಿಂದೆ ನಡೆದ ಶ್ರೀಧರ್ ಮುಗೇರರ ಅಸಹಜ ಸಾವಿನ ಬಗ್ಗೆಯೂ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂಬ ಆಗ್ರಹ ಪರಿಶಿಷ್ಟ ಜಾತಿ ಪಂಗಡಗಳ ಕುಂದುಕೊರತೆ ಸಭೆಯಲ್ಲಿ ಕೇಳಿ ಬಂತು.

ಬೆಳ್ತಂಗಡಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬೆಳ್ತಂಗಡಿ ಪೊಲೀಸ್ ಉಪ ವಿಭಾಗದ ಡಿವೈಎಸ್ಪಿ ರೋಹಿಣಿ ಅವರ ಅಧ್ಯಕ್ಷತೆಯಲ್ಲಿ ಫೆ.22ರಂದು ಮಾಸಿಕ ಪರಿಶಿಷ್ಟ ಜಾತಿ/ಪಂಗಡಗಳ ಕುಂದುಕೊರತೆಗಳ ಸಭೆ ನಡೆಯಿತು. ಈ ವೇಳೆ ಹಿರಿಯ ದಲಿತ ಮುಖಂಡ ಸಂಜೀವ ಆರ್. ಮಾತನಾಡಿ, 2022ರಲ್ಲಿ ನಡೆದ ಶಿಬಾಜೆಯ ಶ್ರೀಧರ್ ಮುಗೇರ ಕೊಲೆ ಪ್ರಕರಣದಲ್ಲಿ ಕೆಲವು ಬಲಾಢ್ಯರಿದ್ದು ತನಿಖೆ ಹಾದಿ ತಪ್ಪಲು ಕಾರಣವಾಗಿತ್ತು. ಆ ಬಳಿಕ ದಲಿತ ಸಂಘಟನೆಗಳು ವ್ಯಾಪಕ ಪ್ರತಿಭಟನೆ ನಡೆಸಿದ ಬಳಿಕ ರಾಜ್ಯ ಸರ್ಕಾರ ಸಿಐಡಿ ತನಿಖೆ ನಡೆಸಿದರೂ



ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ, ಇದೀಗ ರಾಜ್ಯ ಹೈಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ಎಸ್‌ಐಟಿ ತನಿಖೆ ನಡೆಸಲು ಆದೇಶಿಸಿರುವುದು ಸ್ವಾಗತಾರ್ಹ ವಿಚಾರ. ಈ ಬಗ್ಗೆ ಸರಿಯಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂದು ಒತ್ತಾಯಿಸಿದ ಅವರು ವರ್ಷಗಳ ಹಿಂದೆ ಕಳಿಯ ಗ್ರಾಮದಲ್ಲಿ ಶ್ರೀಧರ್ ಮುಗೇರ ಎಂಬವರ ಮೃತದೇಹ ಸಂಶಯಾಸ್ಪದವಾಗಿ ಕೆರೆಯಲ್ಲಿ ಪತ್ತೆಯಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಅಸಹಜ ಸಾವು ಎಂದು ಪ್ರಕರಣ ದಾಖಲಾಗಿದ್ದರೂ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಧ್ವನಿಗೂಡಿಸಿದ ದಲಿತ ಮುಖಂಡ ಶೇಖರ್ ಲಾಯಿಲ, ಶಿಬಾಜೆ ಪ್ರಕರಣದ ಆರೋಪಿಗಳಿಗೆ ಪೋಲಿಸರು ರಕ್ಷಣೆ ನೀಡಿದ್ದಾರೆ ಎಂದು ಆರೋಪಿಸಿದರು. ಈ ವೇಳೆ ಮಾತನಾಡಿದ ಬೆಳ್ತಂಗಡಿ ಇನ್ಸ್‌ಪೆಕ್ಟರ್ ಬಿ.ಜಿ ಸುಬ್ಬಾಪುರ್ ಮಠ್ ಇದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಅಸಹಜ ಪ್ರಕರಣ ದಾಖಲಾಗಿದ್ದು, ವೈದ್ಯಕೀಯ ತಾಂತ್ರಿಕ ಪರೀಕ್ಷೆಯ ವರದಿಯ ಆಧಾರದಲ್ಲಿ ತನಿಖೆ ನಡೆಯುತ್ತಿದ್ದು, ತಿಂಗಳಲ್ಲಿ ತನಿಖೆಯಲ್ಲಿ ಪ್ರಗತಿ ಸಾಧಿಸಲಿದ್ದೇವೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಅಪ್ರಾಪ್ತ ವಯಸ್ಸಿನ ಮಕ್ಕಳು, ದ್ವಿಚಕ್ರ ಸೇರಿದಂತೆ ವಾಹನಗಳನ್ನು ಅಡ್ಡಾದಿಡ್ಡಿಯಾಗಿ, ಅತಿವೇಗವಾಗಿ ಚಲಾಯಿಸುತ್ತಿದ್ದರೂ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸುತ್ತಿಲ್ಲ, ನಂಬರ್ ಪ್ಲೇಟ್ ಧರಿಸದೇ ಕೆಲವರು ಬೈಕ್ ಚಲಾಯಿಸುತ್ತಿರುವುದು ಕಂಡು ಬರುತಿದ್ದು, ಇದು ಅಪಾಯಕಾರಿ ಬೆಳವಣಿಗೆ ಎಂದು ಆತಂಕ ವ್ಯಕ್ತಪಡಿಸಿದ ಶೇಖರ್ ಲಾಯಿಲ ಒಂದೆರಡು ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಿದರೆ ಕಡಿವಾಣ ಬೀಳಬಹುದು ಎಂದು ಹೇಳಿದರು.

ಇನ್ನೋರ್ವ ಮುಖಂಡ ಶೀನ ಪಿಲ್ಯ ಮಾತನಾಡಿ, ಪಿಲ್ಯ ಮಾರಿಗುಡಿ ಬಳಿ ವ್ಯಾಪಕ ಅಪಘಾತಗಳು ಸಂಭವಿಸುತ್ತಿದ್ದು ಇಲ್ಲಿ ಬ್ಯಾರಿಕೇಡ್ ಅಳವಡಿಸಬೇಕು ಎಂದು ಒತ್ತಾಯಿಸಿದರು.

**ದಲಿತ ವ್ಯಕ್ತಿಗೆ ಹಲ್ಲೆ**

ನಾರಾವಿಯ ಕೃಷ್ಣಪ್ಪ ಮಾತನಾಡಿ, ಇತ್ತೀಚಿಗೆ ನಾರಾವಿಯಲ್ಲಿ ದಲಿತ ವ್ಯಕ್ತಿಯೊಬ್ಬರ ಮನೆಗೆ ಅಕ್ರಮವಾಗಿ ಪ್ರವೇಶಿಸಿ ಮಕ್ಕಳ ಎದುರಿನಲ್ಲಿಯೇ ಹಲ್ಲೆ ನಡೆಸಿದ ಘಟನೆ ಬಗ್ಗೆ ಪ್ರಸ್ತಾಪಿಸಿ, ಪೊಲೀಸ್ ಇಲಾಖೆ ಯಾವುದೇ ಒತ್ತಡಕ್ಕೆ ಮಣಿಯದೆ ಕಾನೂನಿನಡಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಚೆನ್ನಕೇಶವ, ವೆಂಕಪ್ಪ ನಾಯ್ಕ ಉಪ್ಪಿನಂಗಡಿ, ರಾಮಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಸಭೆಯಲ್ಲಿ ಬೆಳ್ತಂಗಡಿ ಪೊಲೀಸ್ ಉಪ ವಿಭಾಗ ವ್ಯಾಪ್ತಿಯ ಠಾಣೆಗಳ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು. ಡಿವೈಎಸ್ಪಿ ಕಚೇರಿಯ ಮನೋಹರ್ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಯ ಮುಂದಿಟ್ಟರು.

**ಅಕ್ರಮ ಚಟುವಟಿಕೆಗೆ ಬೀಳಲಿ ಕಡಿವಾಣ**

ಲಾಯಿಲ ಗ್ರಾಮದ ದರ್ಪಿಣಂಜೆ ಸೇತುವೆ ಸುತ್ತಮುತ್ತ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಇದೀಗ ಇಲ್ಲಿ ಲಾಯಿಲ ಗ್ರಾ.ಪಂ. ಮಾಜಿ ಸದಸ್ಯ ಪ್ರಸಾದ್ ಶೆಟ್ಟಿ ಏಣಿಂಜೆರವರು ಮುತುವರ್ಜಿಯಿಂದ ಸಿಸಿ ಕ್ಯಾಮರಾ ಅಳವಡಿಸಿದ್ದು, ಅದರ ಸಹಾಯದಿಂದ ಅಕ್ರಮ ಚಟುವಟಿಕೆಗಳಲ್ಲಿ ನಿರತರಾಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಬೆಳ್ತಂಗಡಿ ಬಸ್ ನಿಲ್ದಾಣ ಸೇರಿದಂತೆ ಕೆಲವು ಕಡೆಗಳಲ್ಲಿ ಮಾನಸಿಕ ಅಸ್ವಸ್ಥರು ಕೆಲವೊಮ್ಮೆ ತೀರಾ ಕೆಟ್ಟ ರೀತಿಯಲ್ಲಿ ವರ್ತಿಸುತಿದ್ದಾರೆ. ಇದರಿಂದ ಮಹಿಳೆಯರು, ವಿದ್ಯಾರ್ಥಿಗಳು ತೀರಾ ಮುಜುಗರಕ್ಕೀಡಾಗುತಿದ್ದಾರೆ. ಈ ಬಗ್ಗೆಯೂ ಕ್ರಮ ಕೈಗೊಳ್ಳಬೇಕು ಎಂದರು.

## ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಶಿವಾಜಿ ಜಯಂತಿ

# ಶಿವಾಜಿ ಜೀವನ ಸಾಧನೆ ಪ್ರೇರಣಾದಾಯಿ: ಕಮ್ಮಜೆ

**ಪುತ್ತೂರು:** ಶಿವಾಜಿ ಮಹಾರಾಜರು ಜನಿಸಿ 396 ವರ್ಷಗಳಾದರೂ ಅವರ ಜೀವನ ಸಾಧನೆಗಳು ಇಂದಿಗೂ ಪ್ರೇರಣೆಯಾಗಿ ಉಳಿದಿವೆ. ಹುಟ್ಟಿನ ಸಂದರ್ಭದಲ್ಲಿ ತನ್ನದಾದ ಒಂದಿಂಚು ಭೂಮಿ ಇಲ್ಲದಿದ್ದರೂ ಗತಿಸುವ ವೇಳೆಗೆ ಅವರು ನಿರ್ಮಿಸಿ ಹೋದ ಮರಾಠ ಸಾಮ್ರಾಜ್ಯ ಅವರ ಜೀವನ ಸಾಧನೆಗೆ ಹಿಡಿದ ಕೈಗನ್ನಡಿ ಎಂದು ಅಂಬಿಕಾ ಕಾಲೇಜಿನ ಪ್ರಾಂಶುಪಾಲ ರಾಕೇಶ ಕುಮಾರ್ ಕಮ್ಮಜೆ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರಾಯೋಜಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಲಾದ ಛತ್ರಪತಿ ಶಿವಾಜಿ ಮಹಾರಾಜರ ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಒಂದೆಡೆಯಿಂದ ಆದಿಲ್‌ಶಾಹಿಗಳು ಹಾಗೂ ಇನ್ನೊಂದೆಡೆಯಿಂದ ಮೊಘಲರನ್ನು ಎದುರಿಸುತ್ತಾ ತನ್ನ ಸಾಮ್ರಾಜ್ಯವನ್ನು ಕಟ್ಟಿದವರು ಶಿವಾಜಿ. ಕೋಟಿಸಂಖ್ಯೆಯಲ್ಲಿದ್ದ ಮೊಘಲರನ್ನು ಹಲವು ಬಾರಿ ಹಿಮ್ಮೆಟ್ಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ತಾಯಿ ಜೀಜಾಬಾಯಿ ಒಡಮೂಡಿಸಿದ ರಾಷ್ಟ್ರಭಕ್ತಿ, ಧರ್ಮಪ್ರಜ್ಞೆ ಹಾಗೂ ಸಂಸ್ಕಾರಗಳು ಶಿವಾಜಿ ಮಹಾರಾಜರನ್ನು ಮಹಾನ್ ನಾಯಕನನ್ನಾಗಿಸಿತು. ಶಿವಾಜಿ ಪರಾಕ್ರಮದಿಂದಲಾಗಿ ಸರಿಸುಮಾರು ಮುನ್ನೂರು ಕೋಟೆಗಳ ಮೇಲೆ ಸನಾತನ ಧರ್ಮಧ್ವಜ ಹಾರಾಡುವಂತಾಯಿತು ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ., ದೇಹದ ಶಕ್ತಿಯೊಂದಿಗೆ ಮಾನಸಿಕ ಶಕ್ತಿ ಬೆಳೆಸಿಕೊಳ್ಳಬೇಕು. ಸಮಸ್ಯೆ ಬಂದಾಗ ಮಾತ್ರ ಕೆಲಸ ಮಾಡುತ್ತೇನೆ ಎಂಬ ಮನೋಭಾವ ಬಿಟ್ಟು ಕಾರ್ಯ ತತ್ಪರರಾಗಬೇಕು. ಪ್ರತಿಯೊಬ್ಬರೂ ತಮ್ಮೊಳಗಿನ ಶಕ್ತಿಯನ್ನು ರಾಷ್ಟ್ರ ಸೇವೆಗೆ ಬಳಸಬೇಕು. ಇಲ್ಲದಿರುವುದರ ವಿಷಯದ ಬಗೆಗೆ ಗಮನ ಹರಿಸದೆ ಇರುವುದನ್ನೇ ಮೆಟ್ಟಿಲಿನಂತೆ ಉಪಯೋಗಿಸಿಕೊಂಡು ಮೇಲಕ್ಕೇರುವುದೇ ನಿಜವಾದ ಸಾಧಕನ ಜಾಣ್ಮೆ ಎಂದರು. ಸಂಸ್ಥೆಯ ಉಪ ಪ್ರಾಂಶುಪಾಲೆ ಸುಜನಿ ಬೋರ್ಕರ್ ಇದ್ದರು. ವಿದ್ಯಾರ್ಥಿ ವಸಿಷ್ಟ ಸ್ವಾಗತಿಸಿ, ಹರ್ಷಲ್ ಡಿ. ರೈ ವಂದಿಸಿದರು. ವಿದ್ಯಾರ್ಥಿನಿ ಪ್ರಣಮ್ಯ ಕಾರ್ಯಕ್ರಮ ನಿರ್ವಹಿಸಿದರು.




**ವಿವಿಧ ಕಾರ್ಯಕ್ರಮ**

ಸಭಾ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಂದ ಶಿವಾಜಿ ಮಹಾರಾಜರ ಜೀವನಾಧಾರಿತ ರೂಪಕ ಪ್ರದರ್ಶನಗೊಂಡಿತು. ಶಿವಾಜಿ ಮಹಾರಾಜರ ಕುರಿತು ಸನ್ಮಯ್ ಗಾಯನ ಪ್ರಸ್ತುತಪಡಿಸಿದರು. ಅವ್ಯಾನ್ ಶಂಗ್ರಿತ್ತಾಯ ಹಾಗೂ ಮಯೂರ್ ಎಸ್. ಮಯ್ಯ ಅವರು ಶಿವಾಜಿ ಮಹಾರಾಜರ ಕುರಿತು ಭಾಷಣ ಮಾಡಿದರು.

## ಸುಳ್ಯ ಶಾಸಕಿ ಮುರುಳ್ಯಗೆ ಪಶು ಸಖಿಯರಿಂದ ಮನವಿ ಸಲ್ಲಿಕೆ

# ಗೌರವ ಧನ ಒದಗಿಸಿಕೊಡಲು ಒತ್ತಾಯ

**ಕಡಬ:** ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯ ಪಶು ಸಖಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯತ್ ಸಂಜೀವಿನಿ ಒಕ್ಕೂಟದ ಪಶು ಸಖಿಯರಿಗೆ ಇಲಾಖಾ ವತಿಯಿಂದ ಗೌರವಧನ ಒದಗಿಸಿಕೊಡುವಂತೆ ಶಿಫಾರಸ್ಸು ಮಾಡಬೇಕು ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರಿಗೆ ಕಡಬ ತಾಲೂಕಿನ ಪಶು ಸಖಿಯರು ಮನವಿ ಮಾಡಿದರು.

ಕಡಬ ಮಿನಿವಿಧಾನ ಸೌಧದ ಶಾಸಕ ಕಚೇರಿಯಲ್ಲಿ ಮನವಿ ಸಲ್ಲಿಸಿದ ಪಶು ಸಖಿಯರು ನಾವು ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟದ ಸಿಬ್ಬಂದಿಗಳಾಗಿ 2022-23ನೇ ಸಾಲಿನಿಂದ ಎನ್‌ಆರ್ ಎಲ್‌ಎಂ ಹಾಗೂ ಒಗ್ಗೂಡಿಸುವಿಕೆ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದೇವೆ. ಅದರೊಂದಿಗೆ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಕಾರ್ಯಚಟುವಟಿಕೆಗಳಾದ ಲಸಿಕಾ ಕಾರ್ಯಕ್ರಮ, ಪಶು ಧನ್ ಆ್ಯಪ್‌ನಲ್ಲಿ ಜಾನುವಾರುಗಳ ಟ್ಯಾಗ್ ಎಂಟ್ರಿ, ಕರುಗಳ ನೋಂದಣಿ, ರೇಬೀಸ್ ಲಸಿಕಾ ಕಾರ್ಯಕ್ರಮ, ಜಾನುವಾರು ಗಣತಿ, ರೈತರಿಗೆ ಇಲಾಖೆಯ ಮಾಹಿತಿಗಳು ಹಾಗೂ ಇತರ ಇಲಾಖಾ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ನಮಗೆ ಸಂಬಂಧಪಟ್ಟ ಇಲಾಖಾ ವ್ಯಾಪ್ತಿಯ ರೈತರ ಮತ್ತು ಇಲಾಖೆಯ ನಡುವೆ ಕೊಂಡಿಯಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಆದರೆ, ನಾವು ಎನ್‌ಎಲ್‌ಆರ್‌ಎಂ ಯೋಜನೆಯಡಿ ಸಂಜೀವಿನಿ ಒಕ್ಕೂಟಗಳ ಮುಖಾಂತರ ಮಾಸಿಕ ಗೌರವಧನವನ್ನು ಮಾತ್ರ ಪಡೆಯುತ್ತಿದ್ದೇವೆಯೇ ಹೊರತು ಪಶುಪಾಲನಾ ಇಲಾಖೆಯಿಂದ ಯಾವುದೇ ಗೌರವ ಧನವಾಗಲೀ, ಪ್ರಯಾಣ ಭತ್ಯೆಯನ್ನಾಗಲೀ ಹಾಗೂ ಮೊಬೈಲ್ ಇಂಟರ್‌ನೆಟ್ ಭತ್ಯೆಯನ್ನಾಗಲೀ ಪಡೆಯುತ್ತಿಲ್ಲ, ಆದುದರಿಂದ ನಮ್ಮ ಸೇವೆ ಪರಿಗಣಿಸಿ ಪಶುಪಾಲನಾ ಇಲಾಖೆ ಯಿಂದ ಗೌರವ ಧನ, ಪ್ರಯಾಣ ಭತ್ಯೆ ಹಾಗೂ ಮೊಬೈಲ್ ಇಂಟರ್‌ನೆಟ್ ಭತ್ಯೆ ಸೌಲಭ್ಯ ಒದಗಿಸಿಕೊಡುವಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಸೂಚಿಸಬೇಕು. ಸರಕಾರದ ಮಟ್ಟದಲ್ಲಿ ನಮ್ಮ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿ ನ್ಯಾಯ ಒದಗಿಸಕೊಡಬೇಕೆಂದು ವಿನಂತಿಸಿದರು.

ಪಶು ಸಖಿ ಹೇಮಲತಾ ಸವಣೂರು, ಲೀಲಾವತಿ ಕಾಣಿಯೂರು, ಸುಧಾ ಬೆಳಂದೂರು, ಹೇಮಲತಾ ಕೌಕ್ರಾಡಿ, ಅನುರಾಧಾ ಕುಟ್ರುಪ್ಪಾಡಿ, ಕವಿತಾ ಎಡಮಂಗಲ, ಶಶಿಕಲಾ ಸುಬ್ರಹ್ಮಣ್ಯ, ಸುಮತಿ ಶಿರಾಡಿ, ವಿಮಲ ನೆಲ್ಯಾಡಿ, ನಯನಕೊಣಾಜೆ, ಸುನೀತಗೋಳಿತೊಟ್ಟು ಗೀತಾ ಪೆರಾಬೆ, ಮೀನಾಕ್ಷಿ ಕ್ಯೊಲ, ಶ್ವೇತಾ ರಾಮಕುಂಜ, ಶೀಲಾ ನೂಜಿಬಾಳ್ತಿಲ ಮತ್ತಿತರರು ಉಪಸ್ಥಿತರಿದ್ದರು.



**ಪ್ರಾಮಾಣಿಕ ಪ್ರಯತ್ನ**

ಮನವಿಗೆ ಪ್ರತಿಕ್ರಿಯಿಸಿದ ಶಾಸಕಿ ಭಾಗೀರಥಿ ಮುರುಳ್ಯ ಅವರು, ನಿಮ್ಮ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಧಿವೇಶನದಲ್ಲಿ ಕೂಡಾ ಈ ಕುರಿತು ವಿಷಯ ಪ್ರಸ್ತಾಪಿಸುತ್ತೇನೆ ಎಂದು ಭರವಸೆ ನೀಡಿದರು.

## ವಿಟ್ಲ: ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆಯ ಪದಾಧಿಕಾರಿಗಳ ಸಭೆ



**ವಿಟ್ಲ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಂಗ ಸಂಸ್ಥೆ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಬಂಟ್ವಾಳ ತಾಲೂಕು ಇದರ ತಾಲೂಕು ವೇದಿಕೆ ಪದಾಧಿಕಾರಿಗಳ ಸಭೆ ವಿಟ್ಲ ಯೋಜನ ಕಚೇರಿ ಸಭಾಂಗಣದಲ್ಲಿ ತಾಲೂಕು ಅಧ್ಯಕ್ಷ ರೋನಾಲ್ಡ್ ಡಿಸೋಜ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.

ಸಭೆಯನ್ನು ಬಂಟ್ವಾಳ ತಾಲೂಕು ಜನಜಾಗೃತಿ ವೇದಿಕೆಯ ವಿಟ್ಲ ವಲಯ ಅಧ್ಯಕ್ಷ ಕೃಷ್ಣಯ್ಯ ಬಲ್ಲಾಳ್ ಉದ್ಘಾಟಿಸಿದರು. ಜಿಲ್ಲೆ 1ರ ನಿರ್ದೇಶಕ ದಿನೇಶ್ ಡಿ. ಮಾತನಾಡಿ, ಗ್ರಾಮ ಮಟ್ಟದಲ್ಲಿ ಸಂಘಟನೆಯನ್ನು ಬಲಪಡಿಸೋಣ, ನವಜೀವನ ಸಮಿತಿ ಸದಸ್ಯರ ಏಳಿಗೆಗಾಗಿ ಪ್ರಯತ್ನಿಸೋಣ ಎಂದರು.

ಜಿಲ್ಲೆ 2ರ ನಿರ್ದೇಶಕ ಬಾಬು ನಾಯ್ಕ ಮಾತನಾಡಿ, ಮದ್ಯಮುಕ್ತ ಗ್ರಾಮವನ್ನಾಗಿ ಮಾಡಲು ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂದರು. ಜನಜಾಗೃತಿ ವೇದಿಕೆ ಪ್ರಾದೇಶಿ ಯೋಜನಾಧಿಕಾರಿ ಗಣೇಶ್ ಆಚಾರ್ಯ 2025-26ನೇ ಸಾಲಿನ ಕ್ರಿಯಾ ಯೋಜನೆಯ ಗುರಿ ಸಾಧನೆ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಾಧನ ವರದಿಯನ್ನು ಮಂಡಿಸಲಾಯಿತು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯವೈಖರಿಯ ಅಂಕಿ ಅಂಶಗಳು ಹಾಗೂ ಜನಜಾಗೃತಿ ಕಾರ್ಯಕ್ರಮದ ಸಾಕ್ಷ್ಯ ಚಿತ್ರ ಪ್ರದರ್ಶನ ಮಾಡಲಾಯಿತು.

ಮಾಜಿ ಅಧ್ಯಕ್ಷ ಬಾಲಕೃಷ್ಣ ಆಳ್ವ ಕೊಡಾಜೆ, ಕಿರಣ್ ಹೆಗ್ಡೆ ಇದ್ದರು. ಬಂಟ್ವಾಳ ಯೋಜನಾಧಿಕಾರಿ ಜಯಾನಂದ ಪಿ. ವಾರ್ಷಿಕ ವರದಿ ವಾಚಿಸಿದರು. ವಿಟ್ಲ ಯೋಜನಾಧಿಕಾರಿ ಸುರೇಶ್ ಗೌಡ ಸ್ವಾಗತಿಸಿ, ಜನಜಾಗೃತಿ ಮೇಲ್ವಿಚಾರಕ ನಿತೇಶ್ ಕೆ. ವಂದಿಸಿದರು.

ಈ ಸಂದರ್ಭ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ರಾಜಾರಾಮ್ ಶೆಟ್ಟಿ, ಕೋಶಾಧಿಕಾರಿಯಾಗಿ ಬಾಲಕೃಷ್ಣ ಕಾರಂತ್ ಆಯ್ಕೆಯಾದರು.

## ಶ್ರೀ ಜಾರಂದಾಯ ಧೂಮಾವತಿ ಕೊಳಚಿಕಂಬಳ ಕ್ಲಬ್‌ನ ವಾರ್ಷಿಕೋತ್ಸವ



**ಮುಲ್ಕಿ:** ಕೊಳಚಿಕಂಬಳ ಶ್ರೀ ಜಾರಂದಾಯ ಧೂಮಾವತಿ ದೈವಸ್ಥಾನದ ಸಮಿತಿಯ ಸಹ ಸಂಸ್ಥೆ ಶ್ರೀ ಜಾರಂದಾಯ ಧೂಮಾವತಿ ಯೂತ್ ಕ್ಲಬ್‌ನ 17 ನೇ ವಾರ್ಷಿಕೋತ್ಸವ ಕೊಳಚಿಕಂಬಳ ಶ್ರೀ ಜಾರಂದಾಯ ಧೂಮಾವತಿ ದೈವಸ್ಥಾನದ ವಠಾರದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಪ್ರತಿಭಾ ಪುರಸ್ಕಾರ, ಊರಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ವಿತರಣೆ ಕಾರ್ಯಕ್ರಮ ನಡೆಯಿತು.

ಉಡುಪಿ ಜಿ.ಪಂ ಮಾಜೀ ಸದಸ್ಯೆ ಗೀತಾಂಜಲಿ ಸುವರ್ಣ ಕಾರ್ಯಕ್ರಮ ಉದ್ಘಾಟಿಸಿದರು.. ಅಧ್ಯಕ್ಷತೆಯನ್ನುಉದ್ಯಮಿ ಪ್ರಭಾಕರ್ ಪೂಜಾರಿ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಉದ್ಯಮಿಗಳಾದ ಪ್ರವೀಣ್ ಕುಮಾರ್ ಬೊಳ್ಳೂರು, ಪ್ರಬೋದ್ ಕುಡ್ವ ಮಂತ್ರ ಸರ್ಫ್ ಕ್ಲಬ್, ಕೊಳಚಿಕಂಬಳದ ನಟರಾಜ್ ಕೊಳಚಿಕಂಬಳ ಶ್ರೀ ಜಾರಂದಾಯ ದೈವಸ್ಥಾನದ ಗುರಿಕಾರರಾದ ಹರೀಶ್ಚಂದ್ರ ಪಿ. ಸಾಲ್ಯಾನ್,ತೇಜ ಪೂಜಾರಿ ಪ್ರಾಣೇಶ್ ಪೂಜಾರಿ ಸಾನದ ಮನೆ, ಕೃಷ್ಣ ಕೋಟ್ಯಾನ್ ಸಾನದ ಮನೆ, ದೈವಸ್ಥಾನದ ಸಮಿತಿಯ ಉಪಾಧ್ಯಕ್ಷ ಹೇಮನಾಥ ಕೋಟ್ಯಾನ್, ಮಹಿಳಾ ಮಂಡಳಿಯ ಅಧ್ಯಕ್ಷೆ ಲತಾ ಶೇಖರ್, ಕ್ಲಬ್‌ನ ಅಧ್ಯಕ್ಷ ಚರಣ್ ಬಂಗೇರ, ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಕೋಟ್ಯಾನ್, ಕೋಶಾಧಿಕಾರಿ ಸುನೀಲ್‌ಕೋಟ್ಯಾನ್ ಪದಾಧಿಕಾರಿಗಳು ಇದ್ದರು. ಯೂತ್ ಕ್ಲಬ್ ಅಧ್ಯಕ್ಷ ಚರಣ್ ಬಂಗೇರ ಸ್ವಾಗತಿಸಿ, ಹರೀಶ್ಚಂದ್ರ ಪಿ ಸಾಲ್ಯಾನ್ ಪ್ರಸ್ತಾವನೆಗೈದರು, ಲತಾ ಶೇಖರ್ ನಿರೂಪಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಸಿಂಧು ಗುಜರನ್, ನಡಿಕುದ್ರು ಶ್ರೀ ಜಾರಂದಾಯ ದೈವಸ್ಥಾನದ ಅರ್ಚಕ ನಿರಂಜನ್ ಪೂಜಾರಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೈವ ನರ್ತಕ ಭಾಸ್ಕರ್ ಬಂಗೇರ ಪಡುಬಿದ್ರಿ, ಜಯ ಕೃಷ್ಣ ಕೋಟ್ಯಾನ್ ಮತ್ತು ದೈವದ ಪರಿಚಾರಕ ಮಾಧವ ಮಡಿವಾಳ, ಚಿತ್ರಾಪು ಅವರನ್ನು ಸನ್ಮಾನಿಸಲಾಯಿತು ಕೊಳಚಿಕಂಬಳ ಸಾನದಮನೆ ದಿ.ರಾಮಣ್ಣ ಪೂಜಾರಿ ಮತ್ತು ದಿ.ಹರಿಯಪ್ಪ ಕೋಟ್ಯಾನ್ ಸ್ಮರಣಾರ್ಥ ವಿದ್ಯಾರ್ಥಿಗಳನ್ನು ಸಾಧಕರನ್ನು,ದಾನಿಗಳನ್ನು ಗೌರವಿಸಲಾಯಿತು.



ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ ಬಂಟ್ವಾಳ ವಲಯದಿಂದ ಬಂಟ್ವಾಳ ವೈಶಾಲಿ ಸ್ಟುಡಿಯೋದಲ್ಲಿ 40 ವರ್ಷ ಸೇವೆಗೈದ ಅಮರಾಜಿ ಜೈನ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಸ್ಟುಡಿಯೋ ಮಾಲಕ ಹರೀಶ್ ರಾವ್ ಹಾಗೂ ಜಿಲ್ಲಾಧ್ಯಕ್ಷರು, ವಲಯದ ಎಲ್ಲಾ ಮಾಜಿ ಅಧ್ಯಕ್ಷರುಗಳು ಉಪಸ್ಥಿತರಿದ್ದರು.

## ತೀಯಾ ವೆಲ್ಫೇರ್ ಸೊಸೈಟಿ ಸದಸ್ಯರ ಭೇಟಿ



**ಮಂಜೇಶ್ವರ:** ಸುಮಾರು ಹದಿನೆಂಟು ಶ್ರೀ ಭಗವತಿ ಕ್ಷೇತ್ರದ ತೀಯಾ ಸಮುದಾಯವನ್ನು ಒಗ್ಗಟ್ಟು ಮಾಡುವ ಅಂಗವಾಗಿ ಬಂದ್ಯೋಡು ಅಡ್ಕ ಶ್ರೀ ಭಗವತಿ ಕ್ಷೇತ್ರದ ಕೃಷ್ಣ ಕಾರ್ನವರ್ ಅವರನ್ನು ತೀಯಾ ವೆಲ್ಫೇರ್ ಸೊಸೈಟಿ ಸದಸ್ಯರು ಭೇಟಿಯಾಗಿ ತೀಯಾ ಸಮುದಾಯಕ್ಕೆ ಕೇರಳ ಸರಕಾರದ ಸವಲತ್ತುಗಳನ್ನು ಪಡೆಯುವ ಬಗ್ಗೆ ಮಾತುಕತೆ ನಡೆಸಿದರು.

ಈ ಸಂದರ್ಭ ತೀಯಾ ಕ್ಷೇಮಾ ಸಭಾ ಅಧ್ಯಕ್ಷ ರವಿ ಕುಳಂಗರೆ, ತೀಯಾ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಗಣೇಶ್ ಪಾವೂರು, ತೀಯಾ ವೆಲ್ಫೇರ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಾಗೇಶ್ ಕುಂಬ್ಳೆ, ತೀಯಾ ಕ್ಷೇಮಾ ಸಭಾ ಪ್ರದಾನ ಕಾರ್ಯದರ್ಶಿ ನಾರಾಯಣ ಮಾಯ್ಯಲ್, ಸತೀಶ್ ಕುವತೊಟ್ಟಿ ಭಾಸ್ಕರ ಮೊದಲಾದವರು ಭಾಗವಹಿಸಿ ಮಾತುಕತೆ ನಡೆಸಿದರು.

## ವೀರಾಜಪೇಟೆಯಲ್ಲಿ ಹಿಂದೂ ಸಂಗಮ ಕಾರ್ಯಕ್ರಮ | ಆಕರ್ಷಕ ಶೋಭಾಯಾತ್ರೆ, ನೂರಾರು ಕಾರ್ಯಕರ್ತರು ಭಾಗಿ

# ಅವಿಭಕ್ತ ಕುಟುಂಬವೇ ಹಿಂದು ಧರ್ಮದ ದೊಡ್ಡ ಶಕ್ತಿ: ಪ್ರವೀಣ್ ಸರಳಾಯ ಅಭಿಪ್ರಾಯ

**ಮಡಿಕೇರಿ:** ಅವಿಭಕ್ತ ಕುಟುಂಬವೇ ಹಿಂದೂ ಧರ್ಮದ ದೊಡ್ಡ ಶಕ್ತಿಯಾಗಿದ್ದು, ಯಾರೊಬ್ಬರೂ ಕುಟುಂಬದಿಂದ ಬೇರ್ಪಟ್ಟು ಹೋಗದೆ ಒಟ್ಟಾಗಿ ಬದುಕುವ ಸಂಸ್ಕಾರ ನಮ್ಮ ಧರ್ಮದ ಮೂಲವಾಗಿದೆ. ಇತ್ತೀಚಿನ ನಗರ ವ್ಯಾಮೋಹ ಹಾಗೂ ಆಧುನಿಕ ಜೀವನ ಶೈಲಿಯಿಂದ ಕುಟುಂಬ ವಿಚ್ಛೇದನ ಹೆಚ್ಚಾಗುತ್ತಿದ್ದು, ಇದು ಹಿಂದೂ ಧರ್ಮ ಹಾಗೂ ಸಮಾಜಕ್ಕೆ ಮಾರಕವಾಗುವ ಅಪಾಯವಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಗೋ ಸೇವಾ ಪ್ರಮುಖ್ ಪ್ರವೀಣ್ ಸರಳಾಯ ನುಡಿದರು.

ವೀರಾಜಪೇಟೆ ಹಿಂದೂ ಸಂಗಮ ಆಯೋಜನಾ ಸಮಿತಿ ವತಿಯಿಂದ ವೀರಾಜಪೇಟೆಯಲ್ಲಿ ನಡೆದ ಹಿಂದೂ ಸಂಗಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಕುಟುಂಬ ಮೌಲ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು.



ಪ್ರತಿಯೊಬ್ಬ ಹಿಂದೂ ನಾವೆಲ್ಲ ಒಂದು ಎಂಬ ಪರಿಕಲ್ಪನೆಯಲ್ಲಿ ಒಗ್ಗೂಡಬೇಕಾಗಿದೆ. ಭಾರತೀಯರು ಜಗತ್ತಿಗೆ ಸಂಸ್ಕೃತಿ, ನಾಗರಿಕತೆ ಹಾಗೂ ಬದುಕುವ ಕಲೆ ಹೇಳಿಕೊಟ್ಟಿದ್ದಾರೆ. ನಮ್ಮ ದೇಶ ಉಳಿಯಬೇಕೆಂದರೆ ಹಿಂದೂ ಧರ್ಮ ಉಳಿಯಬೇಕು. ಆ ನಿಟ್ಟಿನಲ್ಲಿ ಹಿಂದೂಗಳು ಸಂಘಟಿತರಾಗಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಡಾ. ಮಾತಂಡ ಅಯ್ಯಪ್ಪ ಮಾತನಾಡಿ, ನಮ್ಮ ಕಾರ್ಯಕ್ರಮ ಯಾರ ವಿರುದ್ಧವೂ ಅಲ್ಲ, ನಾವೆಲ್ಲರೂ ಒಂದು ಎಂಬ ಸಂಕಲ್ಪದೊಂದಿಗೆ ನಾವು ಒಟ್ಟು ಸೇರಬೇಕು. ನೂರು ವರ್ಷಗಳ ಹಿಂದೆ ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಹೆಡಗೇವಾರರ ಸಂಕಲ್ಪದಿಂದ ಹಿಂದೂಗಳನ್ನು ಒಂದುಗೂಡಿಸುವ ಸಂಕಲ್ಪ ಬಂದಿದ್ದು, ಅಂದು ಹುಟ್ಟಿಕೊಂಡ ಸಂಘ ನಮ್ಮದು. ಹಿಂದುತ್ವ ಅಂದರೆ ಭಾರತೀಯರ ವಿಶ್ವ ದೃಷ್ಟಿ ಜೀವನ ದರ್ಶನ, ಭಾರತೀಯರ ನಡವಳಿಕೆ ಆಗಿದೆ. ಹಿಂದುತ್ವದಿಂದ ಭಾರತವನ್ನು ಬಿಡಿಸಿ ನೋಡಲು ಸಾಧ್ಯವಿಲ್ಲ, ಎಲ್ಲದರಲ್ಲೂ ಹಿಂದೂ ಸಮಾಜ ಸಮ್ಮಿಳಿತವಾಗಿದೆ ಎಂದರು.

ಹಿಂದುತ್ವ ಜಾತಿಯಲ್ಲ, ಮತ, ಪಂಥವಲ್ಲ ಅದು ಮನುಷ್ಯನ ಜೀವನಕ್ಕೆ ಪೂರಕವಾದುದ್ದು, ಇಲ್ಲಿ ನಾವು ಸೇರಿರುವುದು ಯಾಕೆ ಎಂಬುದನ್ನು ತಿಳಿಯಬೇಕು ಎಂದರು. ಭಾರತ ದೇಶದಲ್ಲಿ ಭಾರತೀಯತೆ ಇದೆ. ಅದು ಸನಾತನ ಧರ್ಮದಲ್ಲಿದೆ. ಹಿಂದೂ ಧರ್ಮದ ಆಳ ಅರಿವಿಲ್ಲದ ನಮ್ಮಲ್ಲಿ ಪರಿವರ್ತನೆ ಆಗಬೇಕು. ಧರ್ಮಕ್ಕೆ ಅಳಿವಿಲ್ಲ, ಆದರೆ ಪರಿವರ್ತನೆ ಅವಶ್ಯ ಸಮಾಜದಲ್ಲಿ ಅಸ್ಪೃಶ್ಯತೆ ನಾಶವಾಗಬೇಕು, ನಾವೆಲ್ಲರೂ ಹಿಂದೂ ಸಂರಕ್ಷಣೆಯ ಸೇನಾಧಿಗಳಾಗಬೇಕು. ಸಂಘರ್ಷಕ್ಕೆ ಸಂಘಟನೆಯೊಂದೇ ಉತ್ತರ. ದೇಶದ ಉಳಿವು ಯುವಕರು ಮತ್ತು ಮಾತೆಯರ ಕೈಯಲ್ಲಿದೆ. ಮನೆಯಲ್ಲಿ ದೇವರ ಕೋಣೆ ಹೇಗಿದೆಯೋ ಹಾಗೆ ಪ್ರಪಂಚಕ್ಕೆ ಭಾರತ ದೇಶ ಪವಿತ್ರ ದೇಶ ಎನ್ನುವ ಭಾವನೆ ಬರುವಂತಾಗಲಿ ಎಂದು ನುಡಿದರು.

ಪ್ರಮುಖರಾದ ಡಾ.ಚೇಂದಿರ ಬೋಪಣ್ಣ ಮಾತನಾಡಿದರು. ಹಿಂದೂ ಸಂಗಮ ಆಯೋಜನಾ ಸಮಿತಿ ವೀರಾಜಪೇಟೆ ತಾಲೂಕು ಅಧ್ಯಕ್ಷ ಕುಪ್ಪಂಡ ರಾಜೀವ್ ಕಾರ್ಯಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಹ ಸಂಚಾಲಕ ಹೇಮಂತ್, ಸಂಯೋಜಕ ಮನೆಯಪಂಡ ಕಾಂತಿ ಸತೀಶ್, ಪಟ್ರಪಂಡ ಗೀತಾ ಬೆಳ್ಯಪ್ಪ ಅಂಜಪರವಂಡ ಅನಿಲ್ ಮಂದಣ್ಣ ಸವಿತಾ ಸಮಾಜದ ಅಧ್ಯಕ್ಷ ವೆಂಕಟೇಶ್, ಮುತ್ತಪ್ಪ ಮಲೆಯಾಳಿ ಸಮಾಜದ ಅಧ್ಯಕ್ಷ ಪಿ.ಜಿ. ಸುಮೇಶ್, ಕೊಡವ ಸಮಾಜದ ಪರವಾಗಿ ಸಂಪಿ ಪೂಣಚ್ಚ, ಮಾಳೇಟಿರ ಶ್ರೀನಿವಾಸ್, ಕಾವೇರಿ ಆಶ್ರಮದ ಪ್ರಮುಖರಾದ ಪ್ರತಾಪ್ ಇದ್ದರು. ಈ ಸಂದರ್ಭ ಪಟ್ಟಡ ರೀನಾ ಪ್ರಕಾಶ್, ಸಹ ಸಂಯೋಜಕ ಅಜಯ್ ರಾವ್, ಪ್ರದೀಪ್ ರೈ, ಕೂತಂಡ ಸಚಿನ್, ಸುರೇಶ್ ಬಾಮಿ, ಖಜಾಂಚಿ ಅಮ್ಮಣಿಚಂಡ ರಂಜನ್ ನಂಜಪ್ಪ, ಸಹ ಖಜಾಂಚಿ ವಿನೋದ್, ಕೋಶಾಧ್ಯಕ್ಷ ದುಶ್ಯಂತ್ ರಾವ್ ಮತ್ತಿತರರು ಇದ್ದರು. ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಮೂರು ಕಡೆಗಳಿಂದ ಶೋಭಾಯಾತ್ರೆ ನಡೆಯಿತು. ನೂರಾರು ಕಾರ್ಯಕರ್ತರು ಭಾಗವಹಿಸಿದರು.

## ಸುತ್ತ ಮುತ್ತ

### ಮಾ.1: ಕಾಸರಗೋಡು ನಗರ ಮಾತೃ ಸಂಗಮ

**ಕಾಸರಗೋಡು:** ದೇಶದಾದ್ಯಂತ ಪಂಚಾಯತ್ ಮಟ್ಟದಲ್ಲಿ ನಡೆಯುತ್ತಿರುವ ಹಿಂದು ಸಮಾಜೋತ್ಸವದ ಅಂಗವಾಗಿ ಕಾಸರಗೋಡು ನಗರ ಹಿಂದು ಸಮಾಜೋತ್ಸವ ಸಮಿತಿಯ ಆಶ್ರಯದಲ್ಲಿ ಹಿಂದು ಏಕತಾ ಸಂಗಮ ಕಾರ್ಯಕ್ರಮವು ಕಾಸರಗೋಡು ಕೋಟಿ ಚೆನ್ನಯ ನಗರ (ತಾಳಿಪಡ್ಪು ಮೈದಾನ)ದಲ್ಲಿ ಮಾ.8ರಂದು ಅಪರಾಹ್ನ 3.30ರಿಂದ ಜರಗಲಿದೆ. ಹಿಂದು ಏಕತಾ ಸಂಗಮದಲ್ಲಿ ಹಿಂದು ಸಮಾಜವು ಪ್ರಸ್ತುತ ಎದುರಿಸುತ್ತಿರುವ ಲವ್ ಜಿಹಾದ್, ಮಾದಕ ವಸ್ತುಗಳ ಬಳಕೆ ಮೊದಲಾದವುಗಳ ಕುರಿತು ಜಾಗೃತಿಗೋಸ್ಕರ ಎಲ್ಲಾ ಹಿಂದು ಮಹಿಳಾ ಸಂಘಟನೆಗಳು, ಸ್ವಸಹಾಯ ಗುಂಪುಗಳು, ಭಜನಾ ಮಂಡಳಿಗಳನ್ನು ಒಗ್ಗೂಡಿಸಿ ಕಾಸರಗೋಡು ನಗರ ಹಿಂದು ಮಹಿಳಾ ಒಕ್ಕೂಟವನ್ನು ರೂಪಿಸಲು ಹಾಗೂ ಹಿಂದು ಏಕತಾ ಸಂಗಮದಲ್ಲಿ ಎಲ್ಲಾ ಕುಟುಂಬ ಸದಸ್ಯರು ಭಾಗವಹಿಸಲು ಕಾರ್ಯಯೋಜನೆಗೋಸ್ಕರ ಮಾ.1ರಂದು ಸಂಜೆ 4 ಗಂಟೆಗೆ ಕಾಸರಗೋಡು ಕೋ ಓಪರೇಟಿವ್ ಟೌನ್ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿರುವ ಬ್ಯಾಂಕ್‌ನ ಸೆಂಟಿನರಿ ಹಾಲ್‌ನಲ್ಲಿ ಮಹಿಳಾ ಸಮಾವೇಶವನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಕಾಸರಗೋಡು ನಗರದ ಎಲ್ಲಾ ಹಿಂದು ಮಹಿಳಾ ಸಂಘಟನೆಗಳು, ಹಿಂದು ಸ್ವ ಸಹಾಯ ಗುಂಪುಗಳ ಮಹಿಳಾ ಸದಸ್ಯೆಯರು ಹಾಗೂ ಮಹಿಳಾ ಭಜನಾ ತಂಡಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಲಾಗಿದೆ.

### ಮಾ.1: ಬೈಕ್ ರ್‍ಯಾಲಿ

**ಕಾಸರಗೋಡು** ನಗರದ ಹಿಂದು ಏಕತಾ ಸಂಗಮದ ಪ್ರಚಾರಾರ್ಥ ಮಾ.1ರಂದು ಬೆಳಿಗ್ಗೆ 10 ಗಂಟೆಗೆ ಕಾಸರಗೋಡು ತಾಳಿಪಡ್ಪು ಮೈದಾನದಿಂದ ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ಕ್ಷೇತ್ರದವರೆಗೆ ದ್ವಿಚಕ್ರ ವಾಹನ ರ್‍ಯಾಲಿಯನ್ನು ಆಯೋಜಿಸಲಾಗಿದೆ. ದ್ವಿಚಕ್ರ ವಾಹನ ಹೊಂದಿರುವ ಎಲ್ಲಾ ಹಿಂದು ಬಾಂಧವರು ಮಾತೆಯರು ಸಹಿತ ಈ ವಾಹನ ರ್‍ಯಾಲಿಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಲಾಗಿದೆ.

### ಯೋಜನಾ ಸಮಿತಿ ಸಭೆ

**ಕಾಸರಗೋಡು:** ಜಿಲ್ಲಾ ಯೋಜನಾ ಸಮಿತಿ ಸಭೆ ಮಾ.3ರಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಯೋಜನಾ ಸಮಿತಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

### ಮಾ.3: ವಿಶೇಷ ಸಭೆ

**ಕಾಸರಗೋಡು:** ಕೇರಳ ವಿಧಾನಸಭಾ ಚುನಾವಣೆ ಪೂರ್ವಭಾವಿಯಾಗಿ ಜಿಲ್ಲೆಯಲ್ಲಿ ಮುದ್ರಣ ಮತ್ತು ಡಿಜಿಟಲ್ ವಿನ್ಯಾಸ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುದ್ರಣ, ಡಿಜಿಟಲ್ ವಿನ್ಯಾಸ ಮತ್ತು ಪ್ರಕಾಶನ ಸಂಸ್ಥೆಗಳ ಪ್ರತಿನಿಧಿಗಳ ವಿಶೇಷ ಸಭೆ ಮಾ.3 ರಂದು ಬೆಳಿಗ್ಗೆ 11 ಗಂಟೆಗೆ ಕಾಸರಗೋಡು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯಲಿದೆ.

### ತಾತ್ಕಾಲಿಕ ನೇಮಕಾತಿ

**ಕಾಸರಗೋಡು:** ಚಟ್ಟಂಚಾಲ್ ಮತ್ತು ಕಳನಾಡು ಕುಟುಂಬ ಆರೋಗ್ಯ ಕೇಂದ್ರಗಳಲ್ಲಿನ ವಿವಿಧ ಹುದ್ದೆಗಳಿಗೆ ತಾತ್ಕಾಲಿಕ ನೇಮಕಾತಿಗಾಗಿ ಮಾ.2 ಮತ್ತು 3 ರಂದು ಚಟ್ಟಂಚಾಲ್ ಕುಟುಂಬ ಆರೋಗ್ಯ ಕೇಂದ್ರದ ಸಮ್ಮೇಳನ ಸಭಾಂಗಣದಲ್ಲಿ ಸಂದರ್ಶನ ನಡೆಯಲಿದ್ದು, ಉದ್ಯೋಗಾರ್ಥಿಗಳು 30 ನಿಮಿಷಗಳ ಮೊದಲು ಹಾಜರಿರಬೇಕು ಎಂದು ತಿಳಿಸಲಾಗಿದೆ.



ನೆಲ್ಲಿಕುಂಜೆ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮಾ.29ರಿಂದ ಏಪ್ರಿಲ್ 3ರ ವರೆಗೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬ್ರಹ್ಮಕಲಶದ ಅಂಗವಾಗಿ ಚಪ್ಪರ ಮುಹೂರ್ತ ಗುರುವಾರ ಬೆಳಿಗ್ಗೆ ಜರಗಿತು. ಶ್ರೀ ಕ್ಷೇತ್ರದ ದೇವರ ಮುಂಭಾಗ ಪ್ರಾರ್ಥನೆ ನೆರವೇರಿಸಿದ ಬಳಿಕ ಚಪ್ಪರಕ್ಕೆ ಕಂಬ ಏರಿಸಲಾಯಿತು. ಜೀರ್ಣೋದ್ಧಾರ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ರಮಾನಾಥ ರೈ ಮೇಗಿನ ಕಡಾರ, ಮಹೇಶ್ ಗುತ್ತು, ಗೋಪಾಲಕೃಷ್ಣ ಶರ್ಮ ಸರವು ಮತ್ತಿತರರಿದ್ದರು.

ಶಯ್ಯಾವಸ್ಥೆಯಲ್ಲಿರುವ ರೋಗಿಗಳು – ವೃದ್ಧರಿಗೆ ಆರೈಕೆ ನೆರವು | ವಿನೂತನ ಆರೋಗ್ಯ ಯೋಜನೆ

# ಜಿಲ್ಲೆಯಲ್ಲಿ ಇನ್ನು ಮನೆಮನೆಗೇ ಬರಲಿದ್ದಾರೆ 'ಸಾಂತ್ವನ' ಮಿತ್ರರು



**ಕಾಸರಗೋಡು:** ಜಿಲ್ಲೆಯಲ್ಲಿ ಸಮರ್ಥ ತರಬೇತಿ ಪಡೆದ ಸಾಂತ್ವನ ಮಿತ್ರರು ಎಂಬ ಆರೋಗ್ಯ ಕಾರ್ಯಕರ್ತರು ಅಗತ್ಯವುಳ್ಳವರ ಮನೆಗಳಿಗೆ ಆಗಮಿಸಿ ಶಯ್ಯಾವಸ್ಥೆಯಲ್ಲಿರುವ (ಮಲಗಿದ ಸ್ಥಿತಿಯಲ್ಲಿರುವ) ರೋಗಿಗಳು ಮತ್ತು ಮನೆಯಲ್ಲೇ ಇರುವ ವೃದ್ಧರ ಆರೈಕೆ ಮಾಡಲಿದ್ದಾರೆ.

ಈ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ವಿನೂತನ ಆರೋಗ್ಯ ಯೋಜನೆ ಆರಂಭಿಸಲಾಗಿದೆ. ಪ್ರತೀ ಸ್ಥಳೀಯಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಶಯ್ಯಾವಸ್ಥೆಯಲ್ಲಿರುವ ರೋಗಿಗಳು ಹಾಗೂ ಅಸಹಾಯಕ ಹಿರಿಯ ನಾಗರಿಕರ ಕುಟುಂಬಗಳಿಗೆ ಸಾಂತ್ವನ ಹೇಳಲಿರುವ ಸಾಂತ್ವನ ಮಿತ್ರ ಯೋಜನೆಯನ್ನು ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ.

ವಿಜ್ಞಾನ ಕೇರಳ ಮತ್ತು ಕುಟುಂಬಶ್ರೀ ಮಿಷನ್ ಸಂಸ್ಥೆಗಳು ಸಂಯುಕ್ತವಾಗಿ ಈ ಯೋಜನೆ ಅನುಷ್ಠಾನಗೊಳಿಸುತ್ತಿವೆ. ಆರೋಗ್ಯ ಇಲಾಖೆ ನೇತೃತ್ವದಲ್ಲಿ ಅತ್ಯುತ್ತಮ ಕೇರ್ ಗಿವರ್‌ಗಳನ್ನು ಅಭಿವೃದ್ಧಿಪಡಿಸುವುದು ಕುಟುಂಬಶ್ರೀ ಮಿಷನ್‌ನ ಗುರಿಯಾಗಿದೆ.

ಈ ವಲಯದಲ್ಲಿ ಆಸಕ್ತಿ ಮತ್ತು ಸೇವಾ ಮನೋಭಾವ ಹೊಂದಿರುವ ವ್ಯಕ್ತಿಗಳ ಗುರುತಿಸಿ ವೈಜ್ಞಾನಿಕವಾದ ಕೌಶಲ್ಯ ತರಬೇತಿ ನೀಡುವ ಮೂಲಕ ವ್ಯವಸ್ಥೆಗೊಳಿಸಲಾಗುತ್ತದೆ.

ಸ್ಥಳೀಯಾಡಳಿತ ಸಂಸ್ಥೆಗಳ ಸಹಕಾರದೊಂದಿಗೆ ಪ್ರಸ್ತುತ ಯೋಜನೆಯನ್ನು ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ವಿಸ್ತರಿಸಲು ನಿರ್ಧರಿಸಲಾಗಿದೆ. ಅಲ್ಲದೆ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ರೂಪುರೇಷೆ ಸಿದ್ಧಪಡಿಸಲಾಗಿದ್ದು ಇದಕ್ಕಾಗಿ ಆರೋಗ್ಯ ಇಲಾಖೆಯ ಮಾರ್ಗದರ್ಶನ ಪಡೆಯಲಾಗುತ್ತಿದೆ.

**ಯೋಜನೆಯ ಜಿಲ್ಲಾ ಮಟ್ಟದ ಉದ್ಘಾಟನೆ**

ಚೆರುವತ್ತೂರು ಬ್ಲಾಕ್ ಆರೋಗ್ಯ ಕೇಂದ್ರದಲ್ಲಿ ಸಾಂತ್ವನ ಮಿತ್ರ ಯೋಜನೆಯ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ವೈದ್ಯಾಧಿಕಾರಿ ಟಿ.ಎ.ರಾಜ್ ಮೋಹನನ್ ನೆರವೇರಿಸಿ, ಇಂತಹ ಉತ್ತಮ ವ್ಯವಸ್ಥೆಗಳೊಂದಿಗಿನ ಆರೋಗ್ಯ ಸೇವೆಗಳ ಪ್ರಯೋಜನವನ್ನು ಅರ್ಹರು ಪಡೆಯಬೇಕು. ಈ ಹಿನ್ನೆಲೆ ಯಾವುದೇ ಲೋಪವಾಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಆರೋಗ್ಯ ಅಧಿಕಾರಿ ಪಿ.ಕೆ.ಮಧು ಅಧ್ಯಕ್ಷತೆ ವಹಿಸಿದ್ದರು. ಕಿರಿಯ ಆರೋಗ್ಯ ಅಧಿಕಾರಿ ಪಿ.ಎಂ. ಥೋಮಸ್, ಸಾರ್ವಜನಿಕ ಆರೋಗ್ಯ ನರ್ಸ್ ಪಿ.ಸುಮಾ ಮಾತನಾಡಿದರು. ಪಾಲಿಯೇಟಿವ್ ಕೇರ್ ಘಟಕದ ಜಿಲ್ಲಾ ಸಂಯೋಜಕ ಶಿಜಿ ಶೇಖರ್, ಸ್ಟಾಫ್ ನರ್ಸ್ ಪಿ.ರಂಜಿನಿ, ಸಮುದಾಯ ನರ್ಸ್ ಟಿ.ಪಿ. ಶರ್ಮಿಳಾ, ಸ್ಟಾಫ್ ನರ್ಸ್ ಮಿನಿ ಜೋಸೆಫ್ ತರಗತಿ ನಡೆಸಿಕೊಟ್ಟರು. ಕುಟುಂಬಶ್ರೀ ಬ್ಲಾಕ್ ಸಂಯೋಜಕ ಎ.ಜ್ಯೋತಿಷ್ ಸ್ವಾಗತಿಸಿದರು.

**ಸೇವೆ ಪಡೆಯಬಹುದು**

ಹಾಸಿಗೆ ಹಿಡಿದ ರೋಗಿಗಳ ಜೊತೆಗೆ ಆಸ್ಪತ್ರೆಯಲ್ಲಿ ತಮ್ಮೊಂದಿಗೆ ಇರಲು ಯಾರೂ ಇಲ್ಲದವರು, ಪ್ರಸವಪೂರ್ವ ಆರೈಕೆಯ ಅಗತ್ಯವಿರುವವರು ಮತ್ತು ದಿವ್ಯಾಂಗರು ಸಾಂತ್ವನ ಮಿತ್ರ ಯೋಜನೆ ಕಾರ್ಯಕರ್ತರ ಸೇವೆಗಳ ಪಡೆಯಬಹುದು. ಆದರೆ ಇದೇ ವೇಳೆ ಆರೋಗ್ಯ ಆರೈಕೆಗಾಗಿ ನಿಗದಿತ ಮೊತ್ತ ವಿಧಿಸಲಾಗುತ್ತದೆ.

**ಆರೋಗ್ಯ ರಂಗದಲ್ಲಿ ಹೊಸದೊಂದು ವ್ಯವಸ್ಥೆ**

ಕಾಸರಗೋಡು ಜಿಲ್ಲೆಯ ನಗರ ಮತ್ತು ಗ್ರಾಮೀಣ ಭಾಗಗಳ ವ್ಯತ್ಯಾಸವಿಲ್ಲದೆ ಅಸಹಾಯಕ ರೋಗಿಗಳನ್ನು ಮನೆಗಳಿಗೆ ತೆರಳಿ ಆರೈಕೆ ನಡೆಸುವ ನಿಟ್ಟಿನಲ್ಲಿ ಸಾಂತ್ವನ ಮಿತ್ರ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿದ್ದು, ಆರೋಗ್ಯ ರಂಗದಲ್ಲಿ ಹೊಸ ವ್ಯವಸ್ಥೆ ಇದಾಗಿದೆ. ಜಿಲ್ಲೆಯ 38 ಗ್ರಾಮ ಪಂಚಾಯತ್‌ಗಳು ಮತ್ತು 3 ನಗರಸಭೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಯೋಜನೆಯನ್ನು ಯಾವುದೇ ಕಾಲವಿಳಂಬವಿಲ್ಲದೆ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಈ ಮೂಲಕ ರೋಗಿಗಳು ದುರ್ಬಲರಲ್ಲ ಎಂಬ ಧ್ಯೇಯದೊಂದಿಗೆ ಉದ್ದೇಶ ಸಾಫಲ್ಯಕ್ಕೆ ಕಾರ್ಯಯೋಜನೆ ಹಮ್ಮಿಕೊಳ್ಳಲಾಗಿದೆ.

● ಕೆ.ರತೀಶ್ ಕುಮಾರ್, ಸಂಯೋಜಕ, ಕುಟುಂಬಶ್ರೀ ಜಿಲ್ಲಾ ಮಿಷನ್


## ನಾಲ್ಕು ವಿಧಾನಸಭಾ ಕ್ಷೇತ್ರಗಳ ವಿವಿಧ ಕಾಲೇಜುಗಳಿಗೆ ಮತಯಂತ್ರ ವಾಹನ ಪ್ರವಾಸ



**ಕಾಸರಗೋಡು:** ವಿಧಾನಸಭಾ ಚುನಾವಣಾ ಪ್ರಕ್ರಿಯೆ ಮತ್ತು ಇಲೆಕ್ಟ್ರಾನಿಕ್ ಮತಯಂತ್ರದ ಬಗ್ಗೆ ಪ್ರಥಮ ಬಾರಿಗೆ ಮತದಾರರಿಗೆ ಅರಿವು ಮೂಡಿಸುತ್ತಿರುವ ವೋಟ್ ವ್ಯಾನ್ 4 ವಿಧಾನಸಭಾ ಕ್ಷೇತ್ರಗಳ ವಿವಿಧ ಕಾಲೇಜುಗಳಲ್ಲಿ ತನ್ನ ಪ್ರವಾಸವನ್ನು ಗುರುವಾರ ಪೂರ್ಣಗೊಳಿಸಿದೆ. ಈ ವೋಟ್ ವ್ಯಾನ್ ಜಿಲ್ಲಾಡಳಿತ ಮತ್ತು ಜಿಲ್ಲಾ ಚುನಾವಣಾ ಇಲಾಖೆ ಜಂಟಿಯಾಗಿ ಆಯೋಜಿಸಿರುವ ಸ್ವೀಪ್ ಅಭಿಯಾನವಾಗಿದ್ದು, ಸಾರ್ವಜನಿಕರನ್ನು ಚುನಾವಣೆ ಭಾಗವಾಗಿಸಲು ಆಯೋಜಿಸಲಾಗಿದೆ.

ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರು ಕಾಲೇಜು ಮಟ್ಟದ ವೋಟ್ ವ್ಯಾನ್ ಪ್ರವಾಸಕ್ಕೆ ಕಳೆದ ಶುಕ್ರವಾರ ಚಾಲನೆ ನೀಡಿದ್ದರು ಚುನಾವಣೆ ಇತಿಹಾಸ ಮತ್ತು ಇತಿಹಾಸ ವಿದ್ಯಾರ್ಥಿಗಳು ಮತದಾನದ ಹಕ್ಕುಗಳ ಬಗ್ಗೆ ಅನುಸರಿಸಬೇಕಾದ ವಿಧಾನಗಳ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದರು. ಚುನಾವಣಾ ವಿಧಾನಗಳು ಮತ್ತು ಮತದಾನ ಯಂತ್ರದ ಕಾರ್ಯ ವೈಖರಿಯನ್ನು ಮೊದಲ ಬಾರಿಗೆ ಮತದಾರರಿಗೆ ಡೀಸಿ ವಿವರಿಸಿದರು. ಜಿಲ್ಲೆಯ ಚುನಾವಣಾ ಬ್ರಾಂಡ್ ರಾಯಭಾರಿಯಾಗಿರುವ ಚಲನಚಿತ್ರ ನಟ ಉಣ್ಣಿರಾಜ್ ಚೆರುವತ್ತೂರ್ ಮುಖ್ಯ ಅತಿಥಿಯಾಗಿದ್ದರು. ಚುನಾವಣಾ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್, ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್, ಎಡಿಎಂಸಿ ಕಿಶೋರ್ ಕುಮಾರ್ ಕೆ.ಎಂ., ಸರಕಾರಿ ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಪುಷ್ಪಲತಾ ಮಾತನಾಡಿದರು. ಮತಯಂತ್ರ ವ್ಯಾನ್ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು ವಿಧಾನಸಭಾ ಕ್ಷೇತ್ರಗಳ ವಿವಿಧ ಕಾಲೇಜುಗಳಲ್ಲಿ ಪ್ರವಾಸ ಮಾಡಿ ಮೊದಲ ಬಾರಿಗೆ ಮತದಾರರಿಗೆ ಮಾರ್ಗಸೂಚಿ ಒದಗಿಸಿತು.

## ಮಲೆನಾಡು ಹೆದ್ದಾರಿಯ ನಿರ್ಮಾಣಕ್ಕೆ ಅರಣ್ಯ ಭೂಮಿಗೆ ಬೇಡಿಕೆ ಅರ್ಜಿ ವಾಪಾಸ್



**ಕಾಸರಗೋಡು:** ಮಲೆನಾಡು ಹೆದ್ದಾರಿಯ ನಿರ್ಮಾಣಕ್ಕಾಗಿ ದೇಲಂಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಅರಣ್ಯ ಭೂಮಿಯನ್ನು ಕೇಳಿರುವ ಕೇರಳ ರೋಡ್ ಫಂಡ್ ಬೋರ್ಡ್‌ನ ಅರ್ಜಿಯನ್ನು ಅರಣ್ಯ ಇಲಾಖೆಯು ಮತ್ತೊಮ್ಮೆ ಹಿಂತಿರುಗಿಸಿದೆ.

**ಕಡತ ವಾಪಾಸ್**

ಬದಲಿಗೆ ನೀಡುವ ಭೂಮಿಯ ಸಂಪೂರ್ಣ ದಾಖಲೆಗಳನ್ನು ಸಮರ್ಪಿಸದ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣಾ ಕಾನೂನು ನೋಡೆಲ್ ಆಫೀಸರ್ ಕಡತವನ್ನು ಹಿಂತಿರುಗಿಸಿದ್ದಾರೆ. ಮಲೆನಾಡು ಹೆದ್ದಾರಿಯ ಎಡಪರಂಬ – ಕೋಳಿಚ್ಚಾಲ್ ರೀಚ್‌ನಲ್ಲಿ ದೇಲಂಪಾಡಿ ಗ್ರಾಮ ಪಂಚಾಯತ್‌ನ ಪಾಂಡಿಯ ಎರಡು ಸ್ಥಳಗಳಲ್ಲಾಗಿ ಎರಡು ಕಿಲೋ ಮೀಟರ್‌ನಷ್ಟು ಭಾಗ ಕಾಡಿನ ಮೂಲಕ ಸಾಗುತ್ತದೆ.

**ಸಂಪೂರ್ಣ ದಾಖಲೆ ಸಲ್ಲಿಸಿಲ್ಲ**

ಈ ಪ್ರದೇಶದಲ್ಲಿರುವ 4.33 ಹೆಕ್ಟೇರ್ ಅರಣ್ಯ ಭೂಮಿಯನ್ನು ರಸ್ತೆಗೆ ಬೇಕಾಗಿಯೇ ಮೀಸಲಿಡಲಾಗಿದೆ. ಆದರೆ ಅರಣ್ಯ ಸಂರಕ್ಷಣಾ ಕಾನೂನು ನೆಲೆಗೊಂಡಿರುವ 1980ರ ಮುಂಚಿತವಾಗಿ ಈ ರಸ್ತೆಯು ಇತ್ತೆಂದು ದೃಢೀಕರಿಸುವ ದಾಖಲೆಗಳನ್ನು ಅರಣ್ಯ ಇಲಾಖೆಗೆ ಸಲ್ಲಿಸಲಾಗಿಲ್ಲ, ಅವುಗಳನ್ನು ಸೇರಿಸಿಕೊಂಡು ಒಟ್ಟು 5 ಲೋಪದೋಷಗಳನ್ನು ಸೂಚಿಸಿಯೇ ಕಡತಗಳನ್ನು ಹಿಂತಿರುಗಿಸಲಾಗಿದೆ.

**ನಿರೀಕ್ಷೆ ಹುಸಿ**

ಕಾಸರಗೋಡು ಜಿಲ್ಲೆಯ ಮಲೆನಾಡು ಹೆದ್ದಾರಿ ನಿರ್ಮಿಸಲು ಅನುಮತಿ ಕೂಡಲೇ ಲಭಿಸಬಹುದೆಂಬ ನಿರೀಕ್ಷೆಯಲ್ಲಿರುವಾಗ ಈ ಸಮಸ್ಯೆ ಎದುರಾಗಿದೆ. 22 ಕಿಲೋ ಮೀಟರ್‌ನಷ್ಟು ಉದ್ದದ ರೀಚ್‌ನಲ್ಲಿ ಅರಣ್ಯ ಭೂಮಿ ಹೊರತುಪಡಿಸಿ ಉಳಿದ ಕಡೆಗಳಲ್ಲಿ ರಸ್ತೆ ನಿರ್ಮಾಣ ಬಹುತೇಕ ಅಂತಿಮ ಹಂತದಲ್ಲಿದೆ.



ಕಾಸರಗೋಡು ತೆರುವತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿರುವ ಬ್ರಹ್ಮಕಲಶೋತ್ಸವ ಮತ್ತು ನಡಾವಳಿ ಮಹೋತ್ಸವದ ಪ್ರಯುಕ್ತ ಶ್ರೀ ಕ್ಷೇತ್ರದಲ್ಲಿ ಗುರುವಾರ ಸರ್ವೈಶ್ವರ್ಯ ದೀಪ ಪೂಜೆ ಶ್ರದ್ಧಾಭಕ್ತಿಯಿಂದ ನಡೆಯಿತು.




ಕಾಸರಗೋಡು ತೆರುವತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಹಾಗೂ ನಡಾವಳಿ ಮಹೋತ್ಸವದ ಅಂಗವಾಗಿ ಓಂ ಶಕ್ತಿ ಕಲಾ ಕ್ರೀಡಾ ಕೇಂದ್ರ, ಭಗವತೀ ನಗರ ತೆರುವತ್ ಇದರ ವತಿಯಿಂದ ಬುಧವಾರ ಪಾಂಗೋಡು ಶ್ರೀ ದುರ್ಗಾಪರಮೇಶ್ವರಿ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರದಿಂದ ತೆರುವತ್ ಕ್ಷೇತ್ರಕ್ಕೆ ಆಕರ್ಷಕ ಹುಲ್ಪೆ ಮೆರವಣಿಗೆ ಜರಗಿತು.



ಮುಳ್ಳೇರಿಯ ಸಮೀಪದ ಕುಂಟಾರು ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಗುರುವಾರ ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿ ಮತ್ತು ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ನೇತೃತ್ವದಲ್ಲಿ ವಿವಿಧ ವೈದಿಕ, ತಾಂತ್ರಿಕ, ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

## ಬಿಜೆಪಿ ಬಜಕೂಡ್ಲು ಬೂತ್ ಸಮಿತಿಯ ಸಭೆ: ನೂತನ ಪದಾಧಿಕಾರಿಗಳ ಆಯ್ಕೆ



**ಪೆರ್ಲ:** ಎಣ್ಮಕಜೆ ಗ್ರಾಮ ಪಂಚಾಯತ್‌ನ 12ನೇ ವಾರ್ಡ್ ಬಜಕೂಡ್ಲು 210ನೇ ಬೂತ್ ಬಿಜೆಪಿ ಸಮಿತಿ ಸಭೆ ಬಜಕೂಡ್ಲು ಪದ್ಮನಾಭ ಸುವರ್ಣ ಅವರ ನಿವಾಸದಲ್ಲಿ ಜರಗಿತು. ಪಂಚಾಯತ್ ಸಮಿತಿ ಅಧ್ಯಕ್ಷ ರಮಾನಂದ ಎಡಮಲೆ ಅಧ್ಯಕ್ಷತೆ ವಹಿಸಿದ್ದರು.

ಮಂಡಲ ಸಮಿತಿ ಕಾರ್ಯದರ್ಶಿ ಸುಮಿತ್ ರಾಜ್ ಪೆರ್ಲ, ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ಭಟ್ ಪತ್ತಡ್ಕ ಕ್ಯಾಂಪ್ಕೋ ಮಾಜಿ ಉಪಾಧ್ಯಕ್ಷ ಶಂಕರನಾರಾಯಣ ಖಂಡಿಗೆ, ಮಂಜೇಶ್ವರ ಬ್ಲಾಕ್ ಪಂಚಾಯತ್ ಸದಸ್ಯೆ ವಿದ್ಯಾಕುಮಾರಿ, ಗ್ರಾಮ ಪಂಚಾಯತ್ ಸದಸ್ಯ ಕೃಷ್ಣಪ್ಪ ಬಜಕೂಡ್ಲು, ಹಿರಿಯ ಕಾರ್ಯಕರ್ತ ಸದಾಶಿವ ಭಟ್ ಹರಿನಿಲಯ, ಬಿಜೆಪಿ ಜಿಲ್ಲಾ ಸಮಿತಿ ಸದಸ್ಯ ಉದಯ ಚೆಟ್ಟಿಯಾರ್ ಬಜಕೂಡ್ಲು, ಪಂಚಾಯತ್ ಸಮಿತಿ ಉಪಾಧ್ಯಕ್ಷ ಅಶೋಕ್ ಉಪಸ್ಥಿತರಿದ್ದರು.

ಎಣ್ಮಕಜೆ ಪಂಚಾಯತ್ ಪೂರ್ಣಾವಧಿ ಕಾರ್ಯಕರ್ತ ಅಜೀಶ್ ಅವರು ಮತದಾರರ ಪಟ್ಟಿ ಪರಿಷ್ಕರಣೆ, ಚುನಾವಣಾ ತಯಾರಿ ಬಗ್ಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭ ಬೂತ್ ಸಮಿತಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ಪದ್ಮನಾಭ ಸುವರ್ಣ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ವಿದ್ಯಾಕುಮಾರಿ ಅವರನ್ನು ಆಯ್ಕೆ ಮಾಡಲಾಯಿತು.

ಲತಾಕುಮಾರಿ ಖಂಡಿಗೆ ಫಲಾನುಭವಿ ಸಮಿತಿ ಸಂಚಾಲಕಿ, ಜಯಂತ ಬಜಕೂಡ್ಲು ಮನ್ ಕಿ ಬಾತ್ ಸಮಿತಿ ಸಂಚಾಲಕ, ಲೋಕೇಶ್ ಖಂಡಿಗೆ ವಾಟ್ಸ್ಆ್ಯಪ್ ತಂಡದ ಸಂಚಾಲಕ, ರಾಜೇಶ್ ಕುಲಾಲ್ ಬಜಕೂಡ್ಲು ಬಿಎಲ್‌ಎ ಆಗಿ ಹಾಗೂ ಸಮಿತಿ ಸದಸ್ಯರಾಗಿ ಚಂಪಾವತಿ, ಶಾರದಾ ಖಂಡಿಗೆ, ಪುರುಷೋತ್ತಮ ನಾಯಕ್ ಖಂಡಿಗೆ, ಪುಟ್ಟಪ್ಪ ಖಂಡಿಗೆ, ರಾಧಾಕೃಷ್ಣ ಕುಲಾಲ್, ಅಶ್ವಥ್ ಬಜಕೂಡ್ಲು ಅವರನ್ನು ಆರಿಸಲಾಯಿತು.

## ಸಮಗ್ರ ಜಲ ಸಂರಕ್ಷಣಾ ನಿರ್ವಹಣಾ ಯೋಜನೆ: ಜಿಲ್ಲಾ ಮಟ್ಟದ ಕಾರ್ಯಾಗಾರ



**ಕಾಸರಗೋಡು:** ಪಿಎಂಕೆಎಸ್‌ವೈ ಮತ್ತು ಎಂಜಿಎನ್‌ಆರ್‌ಇಜಿಎಸ್ ಜಂಟಿ ಕಾರ್‍ಯಾಗಾರ ಕಾಸರಗೋಡಿನಲ್ಲಿ ಗುರುವಾರ ಜರಗಿತು. ಸ್ಥಳೀಯಾಡಳಿತ ಇಲಾಖೆ ಜಿಲ್ಲಾ ಜಂಟಿ ನಿರ್ದೇಶಕ ಆರ್.ಶೈನಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸ್ಥಳೀಯಾಡಳಿತ ಇಲಾಖೆ ಯೋಜನಾ ನಿರ್ದೇಶಕ, ಎಂಜಿಎನ್‌ಆರ್‌ಇಜಿಎಸ್ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಟಿ.ಟಿ. ಸುರೇಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಕಾರಡ್ಕ, ಪರಪ್ಪ ಬ್ಲಾಕ್ ಪಂಚಾಯತ್‌ಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಗ್ರಾ.ಪಂ. ಅಧ್ಯಕ್ಷರು, ಕಾರ್ಯದರ್ಶಿಗಳು, ಸ್ಥಳೀಯಾಡಳಿತ ಇಲಾಖೆ ಸಹಾಯಕ ಇಂಜಿನಿಯರ್‌ಗಳು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇಂಜಿನಿಯರ್‌ಗಳು ಭಾಗವಹಿಸಿದ್ದರು.

ಕಾರಡ್ಕ ಮತ್ತು ಪರಪ್ಪ ಬ್ಲಾಕ್ ಪಂಚಾಯತ್‌ಗಳಲ್ಲಿ 2010–11ರಿಂದ 2015–16ರ ವರೆಗೆ ಜಾರಿಗೆ ತರಲಾದ ಸಮಗ್ರ ಜಲ ಸಂರಕ್ಷಣಾ ನಿರ್ವಹಣಾ ಯೋಜನೆಯ (ಪಿಎಂಕೆಎಸ್‌ವೈ) ಮುಂದಿನ ಚಟುವಟಿಕೆಗಳಿಗೆ ಅಗತ್ಯ ನಿರ್ವಹಣಾ ಯೋಜನೆ ಸಿದ್ಧಪಡಿಸಿ ಸಲ್ಲಿಸಲು ಕಾರ್ಯಾಗಾರದಲ್ಲಿ ನಿರ್ಧರಿಸಲಾಯಿತು.

ಮಣ್ಣು ಸಂರಕ್ಷಣೆ ವಿಭಾಗದ ನಿವೃತ್ತ ಜಂಟಿ ನಿರ್ದೇಶಕ ವಿ.ಎಂ.ಅಶೋಕ್ ಕುಮಾರ್, ಸ್ಥಳೀಯಾಡಳಿತ ಇಲಾಖೆ ಎಎಸ್‌ಒ ಕೆ.ವಿ. ಮುಹಮ್ಮದ್ ಮದನಿ, ಮಣ್ಣು ಸಂರಕ್ಷಣಾ ವಿಭಾಗ ಅಧಿಕಾರಿ ರೆಜಿತ್ ಆರ್.ಚಂದ್ರನ್, ಕಿನಾನೂರು ಕರಿಂದಳ ಗ್ರಾ.ಪಂ. ಕಾರ್‍ಯದರ್ಶಿ ಸಂತೋಷ್ ಕೆ.ವಿ., ಎಂಜಿಎನ್‌ಆರ್‌ಇಜಿಎಸ್ ಜಿಲ್ಲಾ ಇಂಜಿನಿಯರ್ ಸಾದಾ ಅಬ್ದುರಹಮಾನ್ ತರಗತಿ ನಿರ್ವಹಿಸಿದರು. ಬಡತನ ನಿರ್ಮೂಲನಾ ಇಲಾಖೆ ಮುಖ್ಯ ಗುಮಾಸ್ತ ರವಿಕುಮಾರ್ ಸ್ವಾಗತಿಸಿ, ಗುಮಾಸ್ತ ಖಲೀಲ್ ರೆಹಮಾನ್ ವಂದಿಸಿದರು.



ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಅವರ ಪ್ರಾದೇಶಿಕ ಅಭಿವೃದ್ಧಿ ನಿಧಿಯಿಂದ 44 ಮಂದಿ ದಿವ್ಯಾಂಗರಿಗೆ ಸಹಾಯಕ ಉಪಕರಣಗಳನ್ನು ವಿತರಿಸಲಾಯಿತು. 37 ತ್ರಿಚಕ್ರ ವಾಹನಗಳು, 5 ಇಲೆಕ್ಟ್ರಾನಿಕ್ ವೀಲ್‌ಚೇರ್‌ಗಳು ಮತ್ತು 2 ಕೃತಕ ಕಾಲುಗಳನ್ನು ಸಂಸದರು ವಿತರಿಸಿದರು. ಕಾಸರಗೋಡು ಕಲೆಕ್ಟರೇಟ್ ಆವರಣದಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಜಿಲ್ಲಾ ಸಾಮಾಜಿಕ ನೀತಿ ಇಲಾಖೆ ಅಧಿಕಾರಿ ಎಂ.ಅಬ್ದುಲ್ಲ, ಉಪ ಯೋಜನಾಧಿಕಾರಿ ಕೆ. ನಜಿಮುನ್ನೀಸಾ, ಸೆಕ್ಷನ್ ಕ್ಲರ್ಕ್ ಪಿ.ಕೆ.ರಘುನಾಥನ್ ಪಾಲ್ಗೊಂಡಿದ್ದರು.

ಅರಣ್ಯ ಇಲಾಖೆ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳಿಂದ ಕಾರ್ಯಾಚರಣೆ

# ಕಾಸರಗೋಡು ಜಿಲ್ಲೆಯಲ್ಲಿ 111 ಕಾಡುಹಂದಿಗಳ ಬೇಟೆ

**ಕಾಸರಗೋಡು:** ಅಪಾಯಕಾರಿಯಾಗಿರುವ ಕಾಡುಹಂದಿಗಳನ್ನು ನಿರ್ಮೂಲನೆ ಮಾಡಲು ಅರಣ್ಯ ಇಲಾಖೆ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ. ಕಾಡುಹಂದಿಗಳು ಜಿಲ್ಲೆಯಲ್ಲಿ ಕೃಷಿಗೆ ವ್ಯಾಪಕ ಹಾನಿಯನ್ನುಂಟು ಮಾಡುತ್ತಿವೆ. ಇದು ಮಾನವ ಜೀವಕ್ಕೂ ಅಪಾಯಕಾರಿಯಾಗಿದೆ ಎಂಬುದನ್ನು ಪರಿಗಣಿಸಿ ನಡೆಸಿದ ಕಾರ್ಯಾಚರಣೆಯಲ್ಲಿ ಜಿಲ್ಲೆಯಲ್ಲಿ 111 ಆಕ್ರಮಣಕಾರಿ ಕಾಡುಹಂದಿಗಳನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಅರಣ್ಯ ಇಲಾಖೆ 45 ಹಂದಿಗಳ ಕೊಂದಿದ್ದು, ಸ್ಥಳೀಯಾಡಳಿತ ಸಂಸ್ಥೆಗಳ ಪಂಚಾಯತ್ ನಿಯಮಿತ ಶೂಟರ್‌ಗಳ ನೇತೃತ್ವ 66 ಹಂದಿಗಳನ್ನು ಕೊಲ್ಲಲಾಗಿದೆ.



ಜಿಲ್ಲೆಯ 14 ಪಂಚಾಯತ್‌ಗಳಲ್ಲಿ ಕಾಡುಹಂದಿ ಸಮಸ್ಯೆ ತೀವ್ರವಾಗಿದೆ. ದೇಲಂಪಾಡಿ, ಕುತ್ತಿಕೋಲು, ಮುಳಿಯಾರು, ಪನತ್ತಡಿ, ಕಲ್ಲಾರು, ಕೋಡೋಂ ಬೇಳೂರು, ಬಳಾಲ್, ಈಸ್ಟ್ ಎಳೇರಿ, ವೆಸ್ಟ್ ಎಳೇರಿ, ಮಡಿಕ್ಕೈ, ಕಿನಾನೂರು ಕರಿಂದಳಂ, ಅಜಾನೂರು, ಪುಲ್ಲೂರು ಪೆರಿಯ ಮತ್ತು ಕಯ್ಯೂರು ಚೀಮೇನಿ ಪಂಚಾಯತ್‌ಗಳಲ್ಲಿ ಹಂದಿಗಳು ಕೃಷಿ ಮತ್ತು ಮನುಷ್ಯರಿಗೆ ತೊಂದರೆ ಉಂಟುಮಾಡುತ್ತಿವೆ.

ಅರಣ್ಯ ಇಲಾಖೆ ಮಿಷನ್ ವೈಲ್ಡ್ ಪಿಗ್ ಭಾಗವಾಗಿ ದೇಶಕ್ಕೆ ಅಪಾಯಕಾರಿಯಾಗಿರುವ ಕಾಡುಹಂದಿಗಳನ್ನು ನಿರ್ಮೂಲನೆ ಮಾಡಲು ಸ್ಥಳೀಯಾಡಳಿತ ಸಂಸ್ಥೆಗಳು ಜೊತೆಗೂಡಿ ಕಾರ್ಯಾಚರಣೆಗಿಳಿದಿವೆ. ಜಿಲ್ಲೆಯಲ್ಲಿ 64 ಎಂ ಪ್ಯಾನಲ್ ಶೂಟರ್‌ಗಳಿದ್ದಾರೆ ಎಂದು ಜಿಲ್ಲಾ ಅರಣ್ಯ ಮುಖ್ಯಸ್ಥರು ತಿಳಿಸಿದ್ದಾರೆ.

ಶೂಟರ್‌ಗಳ ಪಟ್ಟಿ ಎಲ್ಲಾ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಲಭ್ಯವಿದೆ. ಇದನ್ನು ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ (www.forest.kerala.gov.in) ನಿಂದ ಪಡೆಯಬಹುದು. ಪಂಚಾಯತ್ ಅಧಿಕಾರಿಗಳಿಗೆ ಮಾಹಿತಿ ನೀಡಿದರೆ ಹಂದಿಗಳನ್ನು ಗುಂಡು ಹಾರಿಸಲು ಕ್ರಮ ಕೈಗೊಳ್ಳಲಾಗುವುದು. ವನ್ಯಜೀವಿ ವಾರ್ಡನ್‌ಗಳು ಮತ್ತು ಅಧಿಕೃತ ಅಧಿಕಾರಿಗಳಾದ ಸ್ಥಳೀಯಾಡಳಿತ ಸಂಸ್ಥೆಗಳ ಅಧ್ಯಕ್ಷರು ವಸತಿ ಪ್ರದೇಶಗಳಲ್ಲಿ ಹಾನಿ ಉಂಟುಮಾಡುವ ಕಾಡುಹಂದಿಗಳನ್ನು ಗುಂಡು ಹಾರಿಸಿ ಕೊಲ್ಲಲು ಆದೇಶ ಹೊರಡಿಸಬಹುದು.

**ಪರಿಹಾರ ಯೋಜನೆ**

ಕಾಡುಹಂದಿಗಳಿಗೆ ಗುಂಡು ಹಾರಿಸಿದರೆ ಶೂಟರ್‌ಗೆ ಪ್ರತಿ ಹಂದಿಗೆ 1,500 ರೂ. ಮತ್ತು ಸತ್ತ ಹಂದಿಯ ದೇಹಗಳನ್ನು ದಫನ ಮಾಡಿದವರಿಗೆ ತಲಾ 2,000 ರೂ. ನೀಡಲಾಗುತ್ತದೆ. ಇದಕ್ಕಾಗಿ ಸ್ಥಳೀಯಾಡಳಿತ ಸಂಸ್ಥೆಗೆ ವಿಪತ್ತು ಪರಿಹಾರ ನಿಧಿಯಿಂದ ವರ್ಷಕ್ಕೆ 1 ಲಕ್ಷ ರೂ. ವರೆಗೆ ನೀಡುವ ಯೋಜನೆ ಇದೆ.

## ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿ: ಕಡಲ್ಕೊರೆತದಿಂದ ಹಾನಿಗೊಂಡ ರಸ್ತೆಗಳ ದುರಸ್ತಿಗೆ ಸಾರ್ವಜನಿಕರ ಆಗ್ರಹ

**ಉಪ್ಪಳ:** ಕಳೆದ ವರ್ಷ ಮಳೆಗಾಲದ ಸಂದರ್ಭದಲ್ಲಿ ಮಂಗಲ್ಪಾಡಿ ಪಂಚಾ ಯತ್ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ವ್ಯಾಪಕ ಕಡಲ್ಕೊರೆತ ಉಂಟಾಗಿ ಸಮುದ್ರ ತೀರ ಪ್ರದೇಶದ ರಸ್ತೆಗಳು ಸಮುದ್ರ ಪಾಲಾಗಿವೆ. ಆದರೆ ಇದುವರೆಗೂ ಮರು ರಸ್ತೆ ನಿರ್ಮಿಸದೆ ಇರುವುದರಿಂದ ಸ್ಥಳೀಯರಿಗೆ ತುಂಬಾ ತೊಂದರೆಯಾಗಿದೆ.

ಪಂ.ನ ಹನುಮಾನಗರ, ಶಿವಾಜಿನಗರ, ಕುದುಪುಳು, ಬಂಗ್ಲ, ಪೆರಿಂಗಡಿ, ಬೇರಿಕೆ ಸಹಿತ ವಿವಿಧ ಭಾಗಗಳಲ್ಲಿ ರಸ್ತೆಗಳು ಹಾನಿಗೊಂಡು ಸ್ಥಳೀಯ ಮೀನು ಕಾರ್ಮಿಕರ ಕುಟುಂಬಗಳ ಸಂಚಾರಕ್ಕೆ ಸಮಸ್ಯೆ ಯಾಗಿರುವುದಾಗಿ ದೂರಲಾಗಿದೆ. ಗ್ಯಾಸ್ ಸಹಿತ ರೋಗಿಗಳನ್ನು ಕೊಂಡೊಯ್ಯಲು ಇನ್ನಿತರ ಅತ್ಯಗತ್ಯಕ್ಕೆ ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಗಿ ರುವುದಾಗಿ ದೂರಲಾಗಿದೆ.

**ಮನವಿಗೂ ಸ್ಪಂದನೆಯಿಲ್ಲ**



ರಸ್ತೆ ಹಾಗೂ ತಡೆಗೋಡೆಗಳನ್ನು ನಿರ್ಮಿಸಲು ಊರವರು ವಿವಿಧ ಅಧಿಕಾರಿಗಳಿಗೆ ಮನವಿಯನ್ನು ನೀಡಿದ್ದರೂ ಯಾವುದೇ ಕ್ರಮಯಿಲ್ಲ ಎಂದು ಊರವರು ತಿಳಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಮಳೆಗಾಲ ಮುಂಚಿತವಾಗಿ ರಸ್ತೆ ಹಾಗೂ ತಡೆಗೋಡೆ ನಿರ್ಮಿಸಬೇಕೆಂದು ಊರವರು ಒತ್ತಾಯಿಸಿದ್ದಾರೆ.

## ಸುತ್ತಮುತ್ತ

### ಮಾ.1ರಂದು ಸ್ನೇಹ ಸೇತು ಸಮಾರಂಭ

**ಕಾರ್ಕಳ:** ತಾಲೂಕಿನ ಬೆಳ್ಮಣ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದ ಹಳೆ ವಿದ್ಯಾರ್ಥಿಗಳ ಸಮಾವೇಶ ಸ್ನೇಹ ಸೇತು ಕಾರ್ಯಕ್ರಮ ಮಾ. 1ರಂದು ಕಾಲೇಜು ಮೈದಾನದಲ್ಲಿ ಜರುಗಲಿದೆ ಎಂದು ಹಳೆ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಸರ್ವಜ್ಞ ತಂತ್ರಿ ಹೇಳಿದರು.

ಕಾರ್ಕಳ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಬೆಳಿಗ್ಗೆ 9 ಗಂಟೆಗೆ ಬೆಳ್ಮಣ್ ವ್ಯವಸಾಯ ಸೇವಾ ಸಹಕಾರಿ ಸಂಘದಿಂದ ಸಭಾಂಗಣದ ವರೆಗೆ ವೈಭವದ ಮೆರವಣಿಗೆ ಜರುಗಲಿದೆ. ಆ ಬಳಿಕ ಸಮಾರಂಭದ ಉದ್ಘಾಟನೆ ನೆರವೇರಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸುಹಾಸ್ ಹೆಗ್ಡೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಹಳೆ ವಿದ್ಯಾರ್ಥಿಗಳಾದ ನಿವೃತ್ತ ಉಪನ್ಯಾಸಕ ಪ್ರೊ.ಡಾ. ಜಯರಾಮ ಹೆಗ್ಡೆ, ಮುಂಬೈನ ಉದ್ಯಮಿ ರತ್ನಕರ ಶೆಟ್ಟಿ ಕಾಪಿಕೆರೆ, ಬೆಳ್ಮಣ್ ಸಂತ ಜೋಸೆಫರ ಚರ್ಚ್ ಧರ್ಮಗುರು ರೆ.ಫಾ. ಫ್ರೆಡ್ರಿಕ್ ಮಸ್ಕರೇನಸ್, ಹಿರಿಯ ವೈದ್ಯ ಡಾ. ದೇವದಾಸ್ ಕಾಮತ್, ರಾಮಚಂದ್ರ ಆಚಾರ್ಯ ಮೂಡಬಿದಿರೆ, ಶಂಭು ಶೆಟ್ಟಿ ಕಾರವಾರ, ವಾಲ್ಟರ್ ನಂದಳಿಕೆ, ರಘುಪತಿ ರಾವ್, ಸದಾನಂದ ಎಲ್.ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಹಿರಿಯ ನಿವೃತ್ತ ಉಪನ್ಯಾಸಕರಾದ ಜಯಂತ್ ರಾವ್ ಪಿಲಾರ್ ಹಾಗೂ ನಿಲಯ ಆಚಾರ್ ರವರಿಗೆ ಗುರುವಂದನೆ ನಡೆಯಲಿದೆ. ಬಳಿಕ ಹಳೆ ವಿದ್ಯಾರ್ಥಿಗಳಿಂದ ಚಾವಡಿ ಚರ್ಚೆ, ಮಹಿಳಾ ಹಳೇ ವಿದ್ಯಾರ್ಥಿಗಳಿಂದ ನೆನಪಿನ ಅಂಗಳ ಹಾಗೂ ಸಾಂಸ್ಕೃತಿಯ ಕಾರ್ಯಕ್ರಮದ ಅಂಗವಾಗಿ ಉಡುಪಿಯ ಭಾರ್ಗವಿ ನೃತ್ಯ ಕಲಾ ತಂಡದಿಂದ ನೃತ್ಯ ವೈವಿಧ್ಯ ಹಾಗೂ ಸುಂದರ ಬಂಗಾಡಿ ಮತ್ತು ತಂಡದವರಿಂದ ಕುಸೇಲ್ದ ಕೂಟ ಜರುಗಲಿದೆ. ಸಂಜೆ 5ರಿಂದ ಸಮಾರೋಪ ಸಮಾರಂಭ ನಡೆಯಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಹಳೆ ವಿದ್ಯಾರ್ಥಿ ಸಂಘದ ಸದಸ್ಯ ಅಲ್ವಿನ್ ನೇರಿ ಪಿಂಟೋ ಉಪಸ್ಥಿತರಿದ್ದರು.

### ಮಾ.3ರಂದು ರೇಣುಕಾಚಾರ್ಯ, ಯೋಗಿ ನಾರೇಯಣ ಯತೀಂದ್ರ ಜಯಂತಿ

**ಉಡುಪಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆ ಇದರ ಸಹಯೋಗದಲ್ಲಿ ರೇಣುಕಾಚಾರ್ಯ ಜಯಂತಿ ಮತ್ತು ಯೋಗಿ ನಾರೇಯಣ ಯತೀಂದ್ರ ಜಯಂತಿ ಕಾರ್ಯಕ್ರಮವು ಮಾ. 3 ರಂದು ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು ಶಾಸಕ ಯಶ್‌ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ. ರಾಘವೇಂದ್ರ ಭಾಗವಹಿಸಲಿದ್ದಾರೆ.

### ಶರಣ್ ಎಸ್.ಜೆ.ಗೆ ಪಿಎಚ್‌ಡಿ

**ಕುಂದಾಪುರ:** ಕುಂದಾಪುರದ ಭಂಡಾರ್ಕಾರ್ಸ್ ಕಲಾ ಮತ್ತು ವಿಜ್ಞಾನ ಕಾಲೇಜಿನ ಆಂಗ್ಲ ಭಾಷಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಶರಣ್ ಎಸ್.



ಜೆ. ಅವರು ಮಂಡಿಸಿದ 'ವಸಾಹತುಕಾಲೀನ ಬುಡಕಟ್ಟು ಅಧ್ಯಯನಗಳ ಸ್ವರೂಪ (ವಸಾಹತುಕಾಲೀನ ದಕ್ಷಿಣ ಭಾರತದ ಆಯ್ದ ಅಧ್ಯಯನಕಾರರನ್ನು ಪರಿಗಣಿಸಿ)' ಎಂಬ ಸಂಶೋಧನಾ ಮಹಾ ಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿ ಗೌರವಿಸಿದೆ. ಇವರು ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಎ.ಎಸ್.ಪ್ರಭಾಕರ ಹಾಗೂ ಧಾರವಾಡ ಸ್ನಾತಕೋತ್ತರ ವಿಭಾಗದ ಆಂಗ್ಲ ಭಾಷಾ ವಿಭಾಗ ಪ್ರಾಚಾರ್ಯರು ಹಾಗೂ ವಿಭಾಗ ಮುಖ್ಯಸ್ಥ ಡಾ.ಗುರುನಾಥ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಕೈಗೊಂಡಿದ್ದರು.

### ಮಾ.1: ಮರಾಠಿ ಹೋಳಿ ಸಂಭ್ರಮ

**ಉಡುಪಿ:** ಜಿಲ್ಲಾ ಮರಾಠಿ ಸಮಾಜ ಸೇವಾ ಸಂಘ ಇದರ ನೇತೃತ್ವದಲ್ಲಿ ಮರಾಠಿ ಹೋಳಿ ಸಂಭ್ರಮ – 2026 ಕಾರ್ಯಕ್ರಮವನ್ನು ಮಾ. 1ರಂದು ಬ್ರಹ್ಮಾವರ ತಾಲೂಕಿನ ಚೇರ್ಕಾಡಿ ಗ್ರಾಮದ ಮುಂಡ್ಕಿನಜೆಡ್ಡು ಆರ್. ಕೆ. ಪಾಟ್ಕರ್ ಶಾಲಾ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಉಡುಪಿ ಜಿಲ್ಲಾ ಸಂಚಾಲಕ ಉಮೇಶ್ ಎ. ನಾಯ್ಕ್ ಚೇರ್ಕಾಡಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಉಡುಪಿ ಜಿಲ್ಲೆಯಲ್ಲಿರುವ ಮರಾಠಿ ಸಮುದಾಯದ ಸುಮಾರು 136 ಹತ್ತರಕಟ್ಟೆ (ಹತ್ತು ಸಮಸ್ತರ ಕಟ್ಟೆ)ಗಳ 3 ಸಾವಿರಕ್ಕೂ ಅಧಿಕ ಮರಾಠಿ ಜನರು ಈ ಹೋಳಿ ಸಂಭ್ರಮದಲ್ಲಿ ಭಾಗಿಯಾಗಲಿದ್ದಾರೆ. ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನದ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದವರು ಹೇಳಿದರು. ಈ 136 ಹತ್ತರಕಟ್ಟೆಗಳ ಸದಸ್ಯರು ತಂತಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿ ಹೋಳಿ ಕುಣಿತ ಸಂಭ್ರಮ ನಡೆಸುವುದು ವಾಡಿಕೆ. ಆದರೆ ಈ ಬಾರಿ ಮೊದಲ ಬಾರಿಗೆ ಎಲ್ಲರೂ ಒಗ್ಗಟ್ಟಾಗಿ ಈ ಹೋಳಿ ಸಂಭ್ರಮಾಚರಣೆಯಲ್ಲಿ ಭಾಗಿಯಾಗುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಉಡುಪಿ ಜಿಲ್ಲಾ ಮರಾಠಿ ಸಮಾಜ ಸೇವಾ ಸಂಘ ಅಧ್ಯಕ್ಷ ಕೆ. ಟಿ. ನಾಯ್ಕ ಚಾಂತಾರು, ಪ್ರಮುಖರಾದ ವೆಂಕಟೇಶ್ ನಾಯ್ಕ್, ನಾರಾಯಣ ನಾಯ್ಕ ಇದ್ದರು.

## ಬೆಂಗಳೂರು ನಗರವನ್ನೂ ಮೀರಿಸಿದ ಕರಾವಳಿಯ ಮಾಲಿನ್ಯ | ವಿಷಕಾರಿಯಾಗುತ್ತಿದೆ ಪ್ರಾಣವಾಯು

# ಉಡುಪಿಯಲ್ಲಿ ಗಾಳಿ ಗುಣಮಟ್ಟ ಸೂಚಂಕ್ಯ 175 ದಾಖಲು

**ಉಡುಪಿ:** ಸಿಲಿಕಾನ್ ಸಿಟಿ ಬೆಂಗಳೂರನ್ನು ಮೀರಿಸುವ ಮಟ್ಟಕ್ಕೆ ಕರಾವಳಿ ಜಿಲ್ಲೆಗಳ ವಾಯು ಗುಣಮಟ್ಟ ಕುಸಿಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಪ್ರಸ್ತುತ ಉಡುಪಿಯಲ್ಲಿ ಎಕ್ಯು ಐ 175 ದಾಖಲಾಗಿದ್ದು, ಶೀಘ್ರದಲ್ಲೇ 200ರ ಗಡಿ ತಲುಪುವ ಭೀತಿ ಎದುರಾಗಿದೆ.

ಮಂಗಳೂರಿನಲ್ಲೂ ಮಾಲಿನ್ಯದ ಮಟ್ಟ 170ಕ್ಕೆ ಏರಿದ್ದು, ಒಂದು ಕಾಲದ ಶುದ್ಧ ಗಾಳಿಯ ತಾಣಗಳಾಗಿದ್ದ ಈ ಜಿಲ್ಲೆಗಳು ಈಗ ಉಸಿರುಗಟ್ಟಿಸುವ ವಾತಾವರಣಕ್ಕೆ ಸಾಕ್ಷಿಯಾಗುತ್ತಿವೆ.



**ಮಾಲಿನ್ಯಕ್ಕೆ ಪ್ರಮುಖ ಕಾರಣಗಳು**

ಈ ಭಾಗದಲ್ಲಿ ವಾಯು ಗುಣಮಟ್ಟ ಹದಗೆಡಲು ಅವೈಜ್ಞಾನಿಕ ಕೈಗಾರಿಕೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳೇ ಪ್ರಮುಖ ಕಾರಣ. ಮಂಗಳೂರಿನ ಬೈಕಂಪಾಡಿ ಮತ್ತು ಸುರತ್ಕಲ್ ವ್ಯಾಪ್ತಿಯಲ್ಲಿರುವ ಬೃಹತ್ ಕೈಗಾರಿಕೆಗಳು ಹಾಗೂ ಉಡುಪಿ-ಮಣಿಪಾಲ ಭಾಗದ ಕೈಗಾರಿಕಾ ಘಟಕಗಳು ಹೊರಸೂಸುವ ವಿಷಕಾರಿ ಅನಿಲಗಳು ಗಾಳಿಯನ್ನು ಕಲುಷಿತಗೊಳಿಸುತ್ತಿವೆ. ಇದರ ಜೊತೆಗೆ, ಮಂಗಳೂರು-ಉಡುಪಿ ನಡುವಿನ ರಾಷ್ಟ್ರೀಯ ಹೆದ್ದಾರಿ ಹಾಗೂ ನಗರ ಪ್ರದೇಶಗಳಲ್ಲಿ ನಡೆಯುತ್ತಿರುವ ನಿರಂತರ ರಸ್ತೆ ಕಾಮಗಾರಿಗಳಿಂದ ಏಳುವ ಸೂಕ್ಷ್ಮ ಧೂಳಿನ ಕಣಗಳು ವಾತಾವರಣದಲ್ಲಿ ಸೇರಿಕೊಂಡಿವೆ. ಕರಾವಳಿಯ ಹೆಚ್ಚಿನ ತೇವಾಂಶವು ಈ ಮಾಲಿನ್ಯಕಾರಕಗಳನ್ನು ನೆಲದ ಮಟ್ಟದಲ್ಲೇ ಹಿಡಿದಿಟ್ಟುಕೊಳ್ಳುತ್ತಿದ್ದು ಇದರಿಂದ ಉಸಿರಾಟದ ಸಮಸ್ಯೆಗಳು ಗಣನೀಯವಾಗಿ ಹೆಚ್ಚುತ್ತಿವೆ.

**ಕೈಗಾರಿಕಾ ಕಾರಿಡಾರ್‌ಗಳ 'ಕೊಡುಗೆ'**

ಸುರತ್ಕಲ್ ಮತ್ತು ಉಡುಪಿಯ ಮಣಿಪಾಲ ಕೈಗಾರಿಕಾ ಪ್ರದೇಶಗಳ ಸುತ್ತಮುತ್ತಲಿನ ಗಾಳಿಯಲ್ಲಿ ಸಲ್ಫರ್ ಡೈ ಆಕ್ಸೈಡ್ ಮತ್ತು ಸಾರಜನಕದ ಆಕ್ಸೈಡ್‌ಗಳ ಪ್ರಮಾಣ ಹೆಚ್ಚುತ್ತಿದೆ. ಈ ಕೈಗಾರಿಕೆಗಳಿಂದ ಹೊರಬರುವ ಹೊಗೆ ಹಾಗೂ ನಿರಂತರ ಸಂಚರಿಸುವ ಭಾರೀ ವಾಹನಗಳು ಹೊರಸೂಸುವ ಕಾರ್ಬನ್ ಮೊನಾಕ್ಸೈಡ್ ಕರಾವಳಿಯ ಭೂಮಿ ಮತ್ತು ಗಾಳಿಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಇದು ಕೇವಲ ಗಾಳಿಯಲ್ಲದೆ, ಮಣ್ಣಿನ ಫಲವತ್ತತೆಯ ಮೇಲೂ ಪರಿಣಾಮ ಬೀರುತ್ತಿದೆ.

**ಪ್ರವಾಸೋದ್ಯಮಕ್ಕೂ ಗಂಡಾತರ**

ಉಡುಪಿ ಮತ್ತು ಮಂಗಳೂರು ಜಿಲ್ಲೆಗಳು ತಮ್ಮ ನೈಸರ್ಗಿಕ ಸೌಂದರ್ಯ ಮತ್ತು ಸಮುದ್ರ ತೀರಕ್ಕೆ ಹೆಸರುವಾಸಿ. ಆದರೆ ಹೆಚ್ಚುತ್ತಿರುವ ಈ ಮಾಲಿನ್ಯವು ಪ್ರವಾಸಿಗರ ಮೇಲೆ ನಕಾರಾತ್ಮಕ ಪ್ರಭಾವ ಬೀರಬಹುದು. ದಿಲ್ಲಿ ಅಥವಾ ಬೆಂಗಳೂರಿನ ಮಾಲಿನ್ಯದಿಂದ ತಪ್ಪಿಸಿಕೊಳ್ಳಲು ಕರಾವಳಿಗೆ ಬರುವ ಪ್ರವಾಸಿಗರಿಗೆ ಇಲ್ಲಿನ ವಾಯು ಗುಣಮಟ್ಟ ನಿರಾಸೆ ತರುತ್ತಿದೆ. ಸರ್ಕಾರ ಈ ಕೂಡಲೇ ಮುಂಜಾಗರೂಕತಾ ಕ್ರಮ ಕೈಗೊಳ್ಳದಿದ್ದರೆ ಪ್ರವಾಸೋದ್ಯಮಕ್ಕೂ ಗಂಡಾಂತರ ಎದುರಾಗಲಿದೆ.

**ಆರೋಗ್ಯದ ಮೇಲೆ ತೀವ್ರ ಪರಿಣಾಮ**

ವಾಯು ಗುಣಮಟ್ಟ 150 ದಾಟಿದಾಗ ಅದು 'ಕಳಪೆ' ಮಟ್ಟಕ್ಕೆ ಸೇರುತ್ತದೆ. ಇದರಿಂದ ಮಕ್ಕಳು, ಗರ್ಭಿಣಿಯರು ಮತ್ತು ವೃದ್ಧರಲ್ಲಿ ಅಸ್ತಮಾ, ಅಲರ್ಜಿ ಹಾಗೂ ಬ್ರಾಂಕೈಟಿಸ್‌ನಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮುಂಜಾನೆ ವಾಯುವಿಹಾರಕ್ಕೆ ಹೋಗುವವರು ಶುದ್ಧ ಗಾಳಿಯ ಬದಲು ವಿಷಕಾರಿ ಧೂಳನ್ನು ಸೇವಿಸುವಂತಾಗಿದ್ದು, ಕಣ್ಣಿನ ಉರಿ ಮತ್ತು ಗಂಟಲು ನೋವಿನ ಪ್ರಕರಣಗಳು ಆಸ್ಪತ್ರೆಗಳಲ್ಲಿ ಹೆಚ್ಚಾಗುವ ಅಪಾಯವಿದೆ.

## ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನಲ್ಲಿ ಆರೋಗ್ಯ ತಪಾಸಣೆ



**ಶಿರ್ವ:** ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮಹಿಳಾ ಸಬಲೀಕರಣ ಘಟಕವು ಜಂಟಿಯಾಗಿ ಬುಧವಾರ ಕಾಲೇಜಿನ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ತಪಾಸಣೆ, ಹೃದಯ ರೋಗ ತಪಾಸಣೆ, ಕಣ್ಣು, ಕಿವಿ, ಮೂಗು ಮತ್ತು ಗಂಟಲು ತಪಾಸಣೆ, ಪ್ರಸೂತಿ ಮತ್ತು ಸ್ತ್ರೀರೋಗ ತಪಾಸಣೆ, ಎಲುಬು ಮತ್ತು ಸಂಧಿ ರೋಗ ತಪಾಸಣೆ, ಚರ್ಮ ರೋಗ, ತಲೆ ಮತ್ತು ಕುತ್ತಿಗೆ ಶಸ್ತ್ರಚಿಕಿತ್ಸೆ, ದಂತ ತಪಾಸಣೆ, ಆಹಾರ ಮತ್ತು ಪೌಷ್ಟಿಕ ಸಲಹೆ, ರಕ್ತದ ಒತ್ತಡ ತಪಾಸಣೆ, ರಕ್ತದ ಸಕ್ಕರೆ ತಪಾಸಣೆ, ನಡೆಸಲಾಯಿತು. ಈ ಶಿಬಿರದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯರು ಭಾಗವಹಿಸಿ ಸಾರ್ವಜನಿಕರಿಗೆ, ಕಾಲೇಜಿನ ಸಿಬ್ಬಂದಿಗೆ ಮತ್ತು ವಿದ್ಯಾರ್ಥಿಗಳಿಗೆ ಉಚಿತ ತಪಾಸಣೆ ಹಾಗೂ ಆರೋಗ್ಯ ಸಲಹೆ ನೀಡಿದರು. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕ ಸಚಿನ್ ಪ್ರಭು ಮತ್ತು ಮಹಿಳಾ ಸಬಲೀಕರಣ ಘಟಕ ಸಂಯೋಜಕಿ ಮೇಘರಾಣಿ ಯಶಸ್ವಿಯಾಗಿ ನಡೆಸಿ ಕೊಟ್ಟರು.

## ಕೋಟೇಶ್ವರ ಕಾಲೇಜಿನಲ್ಲಿ 'ಮಾದಕ ದ್ರವ್ಯ ದುಷ್ಪರಿಣಾಮ' ಕಾರ್ಯಾಗಾರ



**ಕುಂದಾಪುರ:** ಯುವ ಜನತೆ ಮಾದಕ ದ್ರವ್ಯ ದುಶ್ಚಟಕ್ಕೆ ಬಲಿಯಾಗುತ್ತಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿಯಾದ ವಿದ್ಯಮಾನವಾಗಿದೆ. ದೇಶ ಸದೃಢವಾಗಿರಬೇಕಾದರೆ ಯುವ ಜನತೆ ವ್ಯಸನ ಮುಕ್ತರಾಗಿ ತಾನು, ತನ್ನ ಕುಟುಂಬ ಹಾಗೂ ಸಮಾಜವು ಆರೋಗ್ಯ ಪೂರ್ಣವಾಗಿರುವಂತೆ ಅರಿವು ಮತ್ತು ಜಾಗೃತಿ ಹೊಂದಬೇಕಾಗಿದೆ. ಈ ದಿಶೆಯಲ್ಲಿ ವಿದ್ಯಾರ್ಥಿಗಳು ಇಲಾಖೆಯೊಂದಿಗೆ ಕೈ ಜೋಡಿಸಿದಲ್ಲಿ ಭವ್ಯ ಭಾರತದ ನಿರ್ಮಾಣ ಸಾಧ್ಯವೆಂದು ಉಡುಪಿ ಜಿಲ್ಲೆ ಅಬಕಾರಿ ಉಪ ಆಯುಕ್ತ ಟಿ.ಎಂ. ಶ್ರೀನಿವಾಸ ಹೇಳಿದರು.

ಅಬಕಾರಿ ಇಲಾಖೆ, ಐಕ್ಯೂಎಸಿ, ಮಾದಕ ದ್ರವ್ಯ ತಡೆ ಘಟಕ, ಎನ್.ಎಸ್.ಎಸ್, ರೋವರ್ಸ್ ಮತ್ತು ರೇಂಜರ್ಸ್ ಘಟಕಗಳ ಜಂಟಿ ಆಶ್ರಯದಲ್ಲಿ ಕುಂದಾಪುರ ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಹಮ್ಮಿಕೊಂಡ 'ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳು ಮತ್ತು ಎನ್‌ಡಿಪಿಎಸ್ ಕಾಯ್ದೆ ಅರಿವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ಉಪವಿಭಾಗದ ಅಬಕಾರಿ ಉಪಾಧೀಕ್ಷಕ ಪ್ರಭುಗೌಡ ಪಾಟೀಲ ಪ್ರಾತ್ಯಕ್ಷಿಕೆಯೊಂದಿಗೆ ಎನ್‌ಡಿಪಿಎಸ್ ಕಾಯ್ದೆಯ ಅರಿವು ಕಾರ್ಯಾಗಾರವನ್ನು ನಡೆಸಿಕೊಟ್ಟರು.

ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ನಾಗರಾಜ ವೈದ್ಯ ಎಂ., ಐಕ್ಯೂಎಸಿ ಸಂಚಾಲಕ ನಾಗರಾಜ ಯು., ಎನ್.ಎಸ್.ಎಸ್. ಸಂಚಾಲಕ ನಿರಂಜನ ಶರ್ಮ, ರೇಂಜರ್ ಲೀಡರ್ ರೋಹಿಣಿ, ಡಾ. ಭಾಗೀರಥಿ ನಾಯ್ಕ, ಡಾ. ಮನೋಹರ ಬಿ. ಉಪಸ್ಥಿತರಿದ್ದರು. ಕಾಲೇಜಿನ ಮಾದಕ ದ್ರವ್ಯ ತಡೆ ಘಟಕದ ಸಂಚಾಲಕ ರಂಜಿತ್ ಪ್ರಸ್ತಾವಿಸಿ ಸ್ವಾಗತಿಸಿದರು. ರಶ್ಮಿ ಉಡುಪ ನಿರೂಪಿಸಿದರು. ಪಾಲ್ಗುಣಿ ವಂದಿಸಿದರು.

## ಶ್ರಮ ಯೋಗಿ ಮಾನ್ ಧನ್ ಯೋಜನೆ ಸದ್ಬಳಕೆಯಾಗಲಿ: ಕೋಟ



**ಕುಂದಾಪುರ:** ಕೇಂದ್ರ ಸರಕಾರದ ಪ್ರಧಾನಮಂತ್ರಿ ಶ್ರಮ ಯೋಗಿ ಮಾನ್ ಧನ್ (ಪಿಎಂಎಸ್ ವೈಎಂ) ಯೋಜನೆಯಡಿ ನೊಂದಾಯಿಸಿಕೊಂಡು ಯೋಜನೆಯ ಸದುಪಯೋಗ ಪಡೆದುಕೊಳ್ಳಿ. ಇನ್ನಷ್ಟು ಹೆಚ್ಚೆಚ್ಚು ಅಸಂಘಟಿತ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಆಶಾ ಕಾರ್ಯಕರ್ತೆಯರು ನೋಂದಣಿ ಮಾಡಿಕೊಳ್ಳುವಂತಾಗಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರರು.

ಕುಂದಾಪುರದ ಜೂನಿಯರ್ ಕಾಲೇಜಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ಪುರಸಭೆ ಕುಂದಾಪುರ, ಕಾರ್ಮಿಕ ಇಲಾಖೆ ಕುಂದಾಪುರದ ಸಹಯೋಗದೊಂದಿಗೆ ಪ್ರಧಾನಮಂತ್ರಿ ಶ್ರಮಯೋಗಿ ಮಾನ್- ಧನ್ (ಪಿ.ಎಂ. - ಎಸ್.ವೈ.ಎ.) ಅಸಂಘಟಿತ ಕಾರ್ಮಿಕರಿಗೆ ಕಾನೂನು ಅರಿವು, ನೋಂದಣಿ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು.

ಕುಂದಾಪುರದ ಕಾರ್ಮಿಕ ನಿರೀಕ್ಷಕ ವಿಜೇಂದ್ರ ಕೆ. ಅವರು, ಪಿಎಂಎಸ್ ವೈಎಂ ಯೋಜನೆ ಸೇರಿದಂತೆ ಕಾರ್ಮಿಕ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಿಎಸ್ ಸಿ ಸಹಯೋಗದೊಂದಿಗೆ ಪಿಎಂಎಸ್ ವೈಎಂ ಯೋಜನೆಯಡಿ ಅಸಂಘಟಿತ ಕಾರ್ಮಿಕರಾದ ಆಶಾ ಕಾರ್ಯಕರ್ತೆಯವರು, ಬೀದಿ ಬದಿ ವ್ಯಾಪಾರಸ್ಥರು ಮತ್ತು ಇತರೆ ಅಸಂಘಟಿತ ಕಾರ್ಮಿಕರನ್ನು ನೋಂದಣಿ ಪ್ರಕ್ರಿಯೆ ನಡೆಯಿತು. ಕುಂದಾಪುರ ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ್, ಪುರಸಭೆ ಮುಖ್ಯಾಧಿಕಾರಿ ಆನಂದ ಜೆ., ಕುಂದಾಪುರ ತಾಲೂಕು ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಸುವಾಸಿನಿ, ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷೆ ಚಿಕ್ಕು ಇದ್ದರು.

ಕುಂದಾಪುರ ಪುರಸಭೆ ಸಿಬಂದಿ ಗಣೇಶ್ ಜನ್ನಾಡಿ ನಿರೂಪಿಸಿದರು.ಓ

## ಜೆಇಇ ಮೈನ್ ಬಿ.ಆರ್ಕ್, ಬಿ.ಪ್ಲಾನಿಂಗ್: ಜ್ಞಾನಸುಧಾ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

**ಕಾರ್ಕಳ:** ಜೆಇಇ ಮೈನ್ ಬಿ.ಆರ್ಕ್ ಮತ್ತು ಬಿ. ಪ್ಲಾನಿಂಗ್‌ನಲ್ಲಿ ಮೊದಲ ಹಂತದ ಪಲಿತಾಂಶ ಜ್ಞಾನಸುಧಾದ 8 ವಿದ್ಯಾರ್ಥಿಗಳಿಗೆ 99ಕ್ಕಿಂತ ಅಧಿಕ ಪರ್ಸಂಟೈಲ್ ಎನ್‌ಟಿಎ ರಾಷ್ಟ್ರಮಟ್ಟದಲ್ಲಿ ನಡೆಸುವ ಜೆಇಇ ಮೈನ್ ಬಿ. ಆರ್ಕ್ ಮತ್ತು ಬಿ.ಪ್ಲಾನಿಂಗ್ 2026ರ ವಿಭಾಗದ ಮೊದಲ ಹಂತದ ಫಲಿತಾಂಶದಲ್ಲಿ ಜ್ಞಾನಸುಧಾದ 8 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ್ದಾರೆ.



ನಿಶಾನ್ ಎನ್. ಸಾಲ್ಯಾನ್ 99.8525917 ಪರ್ಸಂಟೈಲ್ (ಬಿ.ಆರ್ಕ್), ಅನಿರುದ್ಧ್ ಆರ್. ಉಡುಪ 99.7009541 ಪರ್ಸಂಟೈಲ್ (ಬಿ.ಪ್ಲಾನ್) ಹಾಗೂ 99.1045499 ಪರ್ಸಂಟೈಲ್ (ಬಿ.ಆರ್ಕ್), ಇಶಾಂತ್ ಪಾಟೀಲ್‌ಜಿ. ಎಂ99.6629800 ಪರ್ಸಂಟೈಲ್ (ಬಿ.ಪ್ಲಾನ್), ಕನಿಷ್ಕ್ ಎಸ್. ಅಮಿನ್99.6501804 ಪರ್ಸಂಟೈಲ್ (ಬಿ.ಆರ್ಕ್) ಮತ್ತು 99.0553947 ಪರ್ಸಂಟೈಲ್ (ಬಿ.ಪ್ಲಾನ್), ಪ್ರಣವ್ ಪಿ. ಶೆಟ್ಟಿ 99.3164665 ಪರ್ಸಂಟೈಲ್ (ಬಿ.ಪ್ಲಾನ್), ವಿದ್ವತ್ ವಿ. ಕಾಮತ್ 99. 2642521 ಪರ್ಸಂಟೈಲ್ (ಬಿ.ಪ್ಲಾನ್), ಅಶ್ವಿನ್ ವಿ. ಶೆಟ್ಟಿ 99.2215313 (ಬಿ.ಪ್ಲಾನ್) ಹಾಗೂ ಶೋಧನ್ ಆರ್. ಹೆಗ್ಡೆ 99.1218493 ಪರ್ಸಂಟೈಲ್ (ಬಿ.ಪ್ಲಾನ್) ಪಡೆದಿದ್ದಾರೆ. ಬಿ. ಪ್ಲಾನಿಂಗ್‌ನಲ್ಲಿ 7 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲನ್ನು, ಬಿ.ಆರ್ಕ್‌ನಲ್ಲಿ 3 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ್ದಾರೆ. ಈಗಾಗಲೇ ಜೆ.ಇ.ಇ ಮೈನ್ ಬಿ.ಟೆಕ್‌ನಲ್ಲಿ 8 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿದ್ದಾರೆ.

## ಮರಾಠಿ ಸಮುದಾಯದ ವಿಶಿಷ್ಟ ರೀತಿಯ ಹೋಳಿ ಹಬ್ಬ ಆರಂಭ



**ಕುಂದಾಪುರ:** ಕುಂದಾಪುರ, ಬೈಂದೂರಿನ ಎಲ್ಲೆಡೆಗಳಲ್ಲಿ ಮರಾಠಿ ಸಮುದಾಯದವರೆಲ್ಲರೂ ವಿಶಿಷ್ಟ ರೀತಿಯಲ್ಲಿ ಆಚರಿಸುವ ಹೋಳಿ ಹಬ್ಬ ಮಂಗಳವಾರ ಸಂಜೆ ಆರಂಭಗೊಂಡಿತು.

ಒಬ್ಬರು ಗುರಿಕಾರರ ಮನೆಯಲ್ಲಿ ಹೋಳಿ ಕಟ್ಟೆಮಾಡಿ, ಅಲ್ಲಿ ಕಾಯಿಟ್ಟು ಪೂಜೆ ಮಾಡುತ್ತಾರೆ. 20–30 ಜನರ ತಂಡಗಳನ್ನು ರಚಿಸಿಕೊಂಡು, ಅಲ್ಲಿಯೆ ಚಪ್ಪರ ಎಲ್ಲ ಹಾಕಿ, ಅಲ್ಲಿಯೇ ವೇಷವನ್ನು ಧರಿಸಿ, ಬುಧವಾರ ಅಲ್ಲಿಂದ ಗುಮ್ಮಟೆ ನೃತ್ಯ, ಹೋಳಿ ಕುಣಿತ, ಹಾಡಿನೊಂದಿಗೆ ಮನೆ-ಮನೆ ತಿರುಗಾಟ ಶುರುವಾಗಿದ್ದು, ಫೆ. 27ರಂದು ಸಂಪನ್ನಗೊಳ್ಳಲಿದೆ. ಫೆ. 28ರಂದು ಚಪ್ಪರದಲ್ಲಿ ಕುಣಿತ, ಹಾಡಿನೊಂದಿಗೆ ವೇಷ ಕಳಚಿ, ಅರಿಶಿನ ಸ್ನಾನ ನಡೆಯಲಿದೆ. ಮಾ.1ರಂದು ಪೂಜೆಯೊಂದಿಗೆ ಹೋಳಿ ಆಚರಣೆ ಮುಕ್ತಾಯಗೊಳ್ಳುತ್ತದೆ. ಕುಂದಾಪುರ ಹಾಗೂ ಬೈಂದೂರು ವಲಯ ಒಟ್ಟು ಸೇರಿ ಮರಾಠಿ ನಾಯ್ಕ ಸಮುದಾಯದವರ 36 ಕೇರಿಗಳಿವೆ.

## ಕಾಪು: ಶ್ರೀ ಹೊಸ ಮಾರಿಗುಡಿಗೆ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ



**ಕಾಪು:** ಕಾಪು ಶ್ರೀ ಹೊಸ ಮಾರಿಗುಡಿ ದೇವಳದ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ದೇವಿಯ ಸಾನಿಧ್ಯದಲ್ಲಿ ಫೆ. 28ರಿಂದ ಮಾ. 2ರವರೆಗೆ ಜರಗಲಿರುವ ಕಾಪುವಿನ ಅಮ್ಮನ ಪುನರ್ ಪ್ರತಿಷ್ಠಾ ಪ್ರಥಮ ವರ್ಧಂತಿ ಉತ್ಸವ – ಮಾತೃ ವೈಭವಕ್ಕೆ ಪೂರ್ವಭಾವಿಯಾಗಿ ಗುರುವಾರ ಸಂಜೆ ಬೃಹತ್ ಹಸಿರುವಾಣಿ ಹೊರೆ ಕಾಣಿಕೆ ಸಮರ್ಪಣಾ ಶೋಭಾಯಾತ್ರೆ ವೈಭವದಿಂದ ಜರಗಿತು.

ಕಾಪು ಉಳಿಯಾರಗೋಳಿ ದಂಡತೀರ್ಥ ಮಠದ ಬಳಿಯಿಂದ ಬೃಹತ್ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಶ್ರೀಹೊಸಮಾರಿಗುಡಿಅಭಿವೃದ್ಧಿಸಮಿತಿ ಮತ್ತು ಮಾತೃವೈಭವ ಸಮಿತಿ ಅಧ್ಯಕ್ಷ ಕೆ. ವಾಸುದೇವ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯನಿರ್ವಹಣಾಽಕಾರಿ ರವಿಕಿರಣ್, ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಬಾಲಾಜಿ ಯೋಗೀಶ್ ಶೆಟ್ಟಿ, ಪ್ರಭಾಕರ ಪೂಜಾರಿ, ಕಾಪು ದಿವಾಕರ ಶೆಟ್ಟಿ, ಹೊರೆಕಾಣಿಕೆ ಸಮರ್ಪಣಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಇದ್ದರು.

## ಮೂರು ಅನಾಥ ಶವಗಳ ಅಂತ್ಯಕ್ರಿಯೆ

**ಉಡುಪಿ:** ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟ ಹಾಗೂ ಸಂಬಂಧಿಕರು ಪತ್ತೆಯಾಗದ ಮೂವರ ಅಂತ್ಯಕ್ರಿಯೆಯನ್ನು ಬೀಡಿನಗುಡ್ಡೆಯಲ್ಲಿ ನೆರವೇರಿಸಲಾಯಿತು.

ಕುಟ್ಟಮ್ (45) ಹಾಗೂ ಅಪರಿಚಿತ ವ್ಯಕ್ತಿಯೋರ್ವರು (40) ಉಡುಪಿ ಹಾಗೂ ಮಲ್ಪೆ ಠಾಣಾ ವ್ಯಾಪ್ತಿಯಲ್ಲಿ ರಕ್ಷಿಸಲ್ಪಟ್ಟಿದ್ದು, ಮತ್ತೋರ್ವ ಹಿರಿಯ ವ್ಯಕ್ತಿಯೊಬ್ಬರು ಉಡುಪಿಯಿಂದ ರಕ್ಷಿಸಲ್ಪಟ್ಟು, ಹೊಸಬೆಳಕು ಆಶ್ರಮದಲ್ಲಿ ನಿಧನ ಹೊಂದಿದ್ದರು. ಈ ಬಗ್ಗೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿ ಶವವನ್ನು ಸಂಬಂಧಿಕರ ಬರುವಿಕೆಗಾಗಿ ಜಿಲ್ಲಾಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿತ್ತು. ಸಂಬಂಧಿಕರು ಪತ್ತೆಯಾಗದ ಕಾರಣ ವಿಶುಶೆಟ್ಟಿ ಮಲ್ಪೆ ಹಾಗೂ ಉಡುಪಿ ನಗರ ಠಾಣಾ ಪೊಲೀಸರ ಸಹಾಯದಿಂದ ಕಾನೂನು ಪ್ರಕ್ರಿಯೆ ನಡೆಸಿ ಅಂತ್ಯಕ್ರಿಯೆ ನಡೆಸಿದರು.

## ಕೋಟೇಶ್ವರ ಶ್ರೀ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ | ವ್ರತಾಚರಣೆಯ ಬಗ್ಗೆ ಅತುಲ್ ಕುಡ್ವ ಮಾಹಿತಿ

# ಆ.3ರಂದು ಸಂಯಮೀಂದ್ರತೀರ್ಥ ಶ್ರೀಪಾದರಿಂದ ಚಾತುರ್ಮಾಸ್ಯ ವ್ರತ ಸ್ವೀಕಾರ

**ಕುಂದಾಪುರ:** ಶ್ರೀ ಕಾಶೀ ಮಠಾಧೀಶರಾದ ಶ್ರೀಮದ್ ಸಂಯಮೀಂದ್ರ ತೀರ್ಥ ಶ್ರೀಪಾದಂಗಳವರ ಪರಾಭವ ನಾಮ ಸಂವತ್ಸರದ ಚಾತುರ್ಮಾಸ್ಯ ವ್ರತ ಶ್ರೀ ಕ್ಷೇತ್ರ ಕಾಶಿಯ ಮೂಲ ಮಠದಲ್ಲಿ ನಡೆಯಲಿದ್ದು, ಅದರ ಪೂರ್ವಭಾವಿ ಸಭೆ ಕೋಟೇಶ್ವರ ಶ್ರೀ ಪಟ್ಟಾಭಿರಾಮಚಂದ್ರ ದೇವಳದಲ್ಲಿ ಗುರುವಾರ ನಡೆಯಿತು.



ಚಾತುರ್ಮಾಸ್ಯ ವ್ರತಾಚರಣೆಯ ಸಮಯದಲ್ಲಿ ನಡೆಯುವ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮದ ಕುರಿತು ಸಭೆಗೆ ಸವಿವರವಾಗಿ ಮಾಹಿತಿ ನೀಡಿದ ಒಕ್ಕೂಟದ ಅಧ್ಯಕ್ಷ ಅತುಲ್ ಕುಡ್ವ, ಆ. 3ರಂದು ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿ ಅವರು ಚಾತುರ್ಮಾಸ ವ್ರತ ಸ್ವೀಕರಿಸಲಿರುವರು.

ಪ್ರತಿದಿನ ಪಂಚಗವ್ಯ ಪ್ರಾಶನ ಹಾಗೂ ಪಂಚಗವ್ಯ ಹವನ, ಗಂಗಾ ಪೂಜನ, ಶ್ರೀ ಕಾಶಿ ಮೂಲ ಮಠದಲ್ಲಿರುವ ಶ್ರೀ ಬ್ರಹ್ಮೇಶ ದೇವರಿಗೆ ಪ್ರತಿನಿತ್ಯ ರುದ್ರಾಭಿಷೇಕ, ಪ್ರತಿದಿನ ನಾರಿಕೇಳ ಗಣಯಾಗ ಹಾಗೂ ಮೂಲ ಮಂತ್ರ ಹವನ, ಮಧ್ಯಾಹ್ನ ವಿಷ್ಣು ಸಹಸ್ರನಾಮ ಪಾರಾಯಣ, ಅರ್ಚನೆ, ಪಠಣ ನಡೆಯಲಿದೆ. ಸಂಜೆ ಗಂಗಾರತಿ, ನರಸಿಂಹ ಸ್ತುತಿ ನಮಸ್ಕಾರ, ಸುಮಂಗಲಿಯರಿಂದ ದೀಪಾರಾಧನೆ, ಕುಂಕುಮಾರ್ಚನೆ, ಮುಡಿಲು ತುಂಬುವುದು, ಪುಷ್ಪಾಂಜಲಿ ಸೇವೆ, ವೈದಿಕರಿಂದ ಸಪ್ತಶತಿ ಪಾರಾಯಣ ನಡೆಯಲಿದೆ ಎಂದರು.

ಪ್ರತಿ ಚತುರ್ದಶಿಯಂದು ನರಸಿಂಹ ಹವನ, ಪ್ರತಿ ಸೋಮವಾರ ಶ್ರೀ ಬ್ರಹ್ಮೇಶ ದೇವರಿಗೆ ವಿಶೇಷ ಪೂಜೆ ನಡೆಯಲಿದೆ. ಆಷಾಢ ಬಹುಳ ಮಾಸದಲ್ಲಿ ಶ್ರೀರಾಮ ವೈಭವಂ – 9 ದಿನಗಳ ಕಾಲ ರಾಮಾಯಣ ಪಾರಾಯಣ, ಶ್ರೀರಾಮ ಜನ್ಮೋತ್ಸವ, ಶ್ರೀ ರಾಮ ಲಿಲೋತ್ಸವ, ಸೀತಾ ಸ್ವಯಂವರ, ಶ್ರೀರಾಮ ಪಟ್ಟಾಭಿಷೇಕ, ಶ್ರೀ ರಾಮ ಮೂಲ ಮಂತ್ರ ಹವನ, ಸುಂದರಕಾಂಡ ಪಾರಾಯಣ ಹಾಗೂ ಶ್ರೀರಾಮ ಪ್ರವಚನ, ಶ್ರೀರಾಮ ತಾರಕ ಮಂತ್ರ ಪಠಣ ನಡೆಯಲಿದೆ. ಶ್ರಾವಣ ಮಾಸದಲ್ಲಿ ವ್ಯಾಸ ವೈಭವಂ – 7 ದಿನದ ಕಾಲ ಶ್ರೀ ವ್ಯಾಸ ಜನ್ಮೋತ್ಸವ, ಚತುರ್ವೇದ ಪಾರಾಯಣ, ವೇದವ್ಯಾಸ ಪ್ರತಿಪಾದಕರಾದ ಶ್ರೀಮದ್ ಮಧ್ವಾಚಾರ್ಯರು ರಚಿಸಿದ ತಾತ್ಪರ್ಯ ನಿರ್ಣಯಗಳ ಚತುರ್ವೇದ ಪಾರಾಯಣ, ಭದ್ರಪಾ ಮಂಡಳಿ ಪೂಜಾ, ಪಾರಾಯಣ, ಪ್ರವಚನ ನಡೆಯಲಿದೆ ಎಂದು ಹೇಳಿದರು.

ಶ್ರೀ ಪಟ್ಟಾಭಿ ರಾಮಚಂದ್ರ ದೇವಸ್ಥಾನದ ಆಡಳಿತ ಮೊಕ್ತೇಸರ ದಿನೇಶ್ ಕಾಮತ್ ಪ್ರಾಸ್ತಾವಿಕ ಹಾಗೂ ನವೀಕರಣ ಕಾರ್ಯದ ಕುರಿತು ಮಾಹಿತಿ ನೀಡಿದರು. ಶ್ರೀಧರ್ ಕಾಮತ್ ಕಾಶೀ ಮೂಲಮಠದಲ್ಲಿ ಹಿಂದೆ ನಡೆದ ಶ್ರೀಮದ್ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ಚಾತುರ್ಮಾಸ ವ್ರತದ ಸಮಯದಲ್ಲಿ ನಡೆದ ಕಾರ್ಯಕ್ರಮದ ವಿವರ ಹಾಗೂ ಶ್ರೀ ಕ್ಷೇತ್ರದ ಮಾಹಿತಿ ನೀಡಿದರು.

ಜಿ. ಎಸ್. ಬಿ ಸರ್ವ ದೇವಾಲಯಗಳ ಒಕ್ಕೂಟ, ಕುಂದಾಪುರ ವಲಯದ ಎಲ್ಲಾ ದೇವಳದ ಆಡಳಿತ ಮಂಡಳಿ, ಸರ್ವ ಸಂಘದ ಸದಸ್ಯರು ಹಾಗೂ ಭಜನಾ ಮಂಡಳಿ ಪದಾಧಿಕಾರಿಗಳು ಭಾಗವಹಿಸಿದ್ದರು. ಡಿ. ಗೋಪಾಲಕೃಷ್ಣ ಕಾಮತ್ ಸ್ವಾಗತಿಸಿ ವಂದಿಸಿದರು.